- ರಾಜೀವ್ ಗಾಂಧಿ ವಸತಿ ನಿಗಮದಿಂದ ಮುಖ್ಯಮಂತ್ರಿಯವರ ಒಂದು ಲಕ್ಷ ಬಹುಮಹಡಿ ಯೋಜನೆಯಡಿ, ತೇವಣಿ ಮೊತ್ತವನ್ನು ಪಾವತಿಸಿರುವ 12,153 ಫಲಾನುಭವಿಗಳಿಗೆ ಅವರ ವಂತಿಕೆಯ ಮೊತ್ತದಲ್ಲಿ ಒಂದು ಲಕ್ಷ ಕಡಿತಗೊಳಿಸಲು ರಾಜ್ಯ ಸರ್ಕಾರದಿಂದ ₹121 ಕೋಟಿ ಅನುದಾನ
- ವಿದೇಶದಲ್ಲಿ ಉದ್ಯೋಗಾವಕಾಶ ಕಲ್ಪಿಸಲು ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಉದ್ಯೋಗ ಮೇಳ
- ವಿಶ್ವ ಕೌಶಲ ಸ್ಪರ್ಧೆಯ ಪೂರ್ವಸಿದ್ಧತೆಗಾಗಿ ಬೆಂಗಳೂರಿನಲ್ಲಿ ರಾಷ್ಟ್ರೀಯ ಮಟ್ಟದ 'ಇಂಡಿಯಾ ಸ್ಕಿಲ್–2026' ಸ್ಪರ್ಧೆ
- ಬೆಂಗಳೂರಿನ ಕೆಜಿಟಿಟಿಐ ಕೇಂದ್ರಗಳಲ್ಲಿ 'ಇಂಡಸ್ಟ್ರಿ–4.0' ಆಧಾರಿತ ಪಠ್ಯಕ್ರಮದೊಂದಿಗೆ ಪ್ರಯೋಗಾಲಯ ಸ್ಥಾಪನೆ

ಆದಾಯ: ಎಲ್ಲಿಂದ, ಎಷ್ಟು?

(ಕೋಟಿ ₹ಗಳಲ್ಲಿ)



ಯಶವಂತಪುರ: ಪ್ರಾಂಗಣದ ಎಲ್ಲ ರಸ್ತೆಗಳಲ್ಲಿ ಸಂಚಾರ ದಟ್ಟಣೆ, ಎಲ್ಲೆಂದರಲ್ಲಿ ಕಸದ ರಾಶಿ

ಎಪಿಎಂಸಿಗೆ ಮೂಲಸೌಕರ್ಯದ ಬರ

• ಖಲೀಲಅಹ್ಮದ ಶೇಖ

ಬೆಂಗಳೂರು: ರಾಜ್ಯದಲ್ಲಿಯೇ ಅತಿಹೆಚ್ಚು ವ್ಯಾಪಾರ–ವಹಿವಾಟು ನಡೆಯುವ ಹೆಗ್ಗಳಿಕೆ ಹೊಂದಿರುವ ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆ (ಎಪಿಎಂಸಿ) ಮೂಲಸೌಕರ್ಯದ ಕೊರತೆಯಿಂದ ನಲುಗುತ್ತಿದೆ. ಎಪಿಎಂಸಿಯ ಪ್ರಾಂಗಣದಲ್ಲಿ ರಾಶಿ ರಾಶಿ ಕಸ ಬಿದ್ದಿದ್ದು, ಗಬ್ಬೆದ್ದು ನಾರುತ್ತಿದೆ. ಸಮಸ್ಯೆಗಳ ಸರಮಾಲೆಗಳ ಮಧ್ಯೆಯೇ ನಿತ್ಯ ವ್ಯಾಪಾರ–ವಹಿವಾಟು ನಡೆಯುತ್ತಿದೆ.

ಪ್ರಾಂಗಣದ ತುಂಬಾ ಕಸದ ರಾಶಿ, ಗಾಳಿಯಲ್ಲಿ ಹಾರಾಡುವ ಈರುಳ್ಳಿ ಮತ್ತು ಬೆಳ್ಳುಳ್ಳಿ ಸಿಪ್ಪೆ. ವೈಟ್‌ಟಾಪಿಂಗ್ ಹೆಸರಿನಲ್ಲಿ ರಸ್ತೆಯನ್ನು ಕಿತ್ತು ಹಾಕಲಾಗಿದೆ. ಶೌಚಾಲಯಗಳು ಗಬ್ಬೆದ್ದು ನಾರುತ್ತಿವೆ. ಒಳಾಂಗಣ ರಸ್ತೆಗಳಲ್ಲಿ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸಿರುತ್ತಾರೆ. ಪರಿಣಾಮವಾಗಿ ಎಲ್ಲ ರಸ್ತೆಗಳಲ್ಲೂ ಸಂಚಾರ ದಟ್ಟಣೆಯಾಗಿ, ರೈತರು ಮತ್ತು ವರ್ತಕರು ಉತ್ಪನ್ನಗಳನ್ನು ಸಾಗಿಸಲು ಪರದಾಡುತ್ತಾರೆ.

ಈ ಮಾರುಕಟ್ಟೆಗೆ ರಾಜ್ಯವಲ್ಲದೇ ಮಹಾರಾಷ್ಟ್ರದಿಂದಲೂ ಈರುಳ್ಳಿ ಪೂರೈಕೆಯಾಗುತ್ತಿದೆ. ಇದೇ ಮಾರುಕಟ್ಟೆಯಿಂದ ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಉತ್ತರ ಪ್ರದೇಶಕ್ಕೆ ಈರುಳ್ಳಿ ಮತ್ತು ಬೆಳ್ಳುಳ್ಳಿ ಸಾಗಣೆ ಮಾಡಲಾಗುತ್ತದೆ. ಹೀಗಾಗಿ ಪ್ರಾಂಗಣದ ತುಂಬಾ ಹೊರ ರಾಜ್ಯದ ಲಾರಿಗಳು ಸಾಲು ಸಾಲು ನಿಂತಿರುತ್ತವೆ. ದೂಳು, ಕಸದ ರಾಶಿಯ ನಡುವೆ ವ್ಯಾಪಾರಸ್ಥರು ನಿತ್ಯದ ವ್ಯವಹಾರ ನಡೆಸುತ್ತಾರೆ.

ಯಶವಂತಪುರ ಎಪಿಎಂಸಿಯಲ್ಲಿ 1,800ಕ್ಕೂ ಹೆಚ್ಚು ಮಂದಿ ಪರವಾನಗಿ ಪಡೆದ ವರ್ತಕರು ವಹಿವಾಟು ನಡೆಸುತ್ತಿದ್ದಾರೆ. ಸಾವಿರಾರು ಹಮಾಲರು ಕಾರ್ಯನಿರ್ವಹಿಸುತ್ತಾರೆ. ಈ ಶ್ರಮಿಕ ವರ್ಗದವರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಸಾರ್ವಜನಿಕ ಶೌಚಾಲಯಗಳು ಬಳಕೆ ಮಾಡದಂತಹ ಸ್ಥಿತಿಯಲ್ಲಿವೆ.

106 ಎಕರೆ ವಿಸ್ತೀರ್ಣದಲ್ಲಿರುವ ಪ್ರಾಂಗಣಕ್ಕೆ 16ಕ್ಕೂ ಹೆಚ್ಚು ಪ್ರವೇಶದ್ವಾರಗಳಿವೆ. ಕೆಲವು ಗೇಟ್‌ಗಳಲ್ಲಿ ಮಾತ್ರ ಕಾವಲುಗಾರರನ್ನು ನೇಮಿಸಲಾಗಿದೆ. ಉಳಿದೆಡೆ ಕಳ್ಳರು ಸರಾಗವಾಗಿ ಪ್ರಾಂಗಣಕ್ಕೆ ಬಂದು ಕೃಷಿ ಉತ್ಪನ್ನ ಕಳವು ಮಾಡಿದ ಉದಾಹರಣೆಗಳಿವೆ. ಅಲ್ಲಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಇದರಿಂದ ವ್ಯಾಪಾರಿಗಳಿಗೂ ನಷ್ಟವಾಗುತ್ತಿದೆ. ಎಪಿಎಂಸಿ ಪ್ರಾಂಗಣದಿಂದ ಹೊರಗಡೆ ತೆರಳುವ ವಾಹನಗಳಿಂದ ಗೇಟ್‌ಗಳಲ್ಲಿ ಕಾರ್ಯನಿರ್ವಹಿಸುವ ಕಾವಲುಗಾರರು ಹಣ ವಸೂಲಿಗೆ ಇಳಿದಿದ್ದಾರೆ. 'ಒಂದೇ ಸೂರಿನಡಿ ದಿನಸಿ, ಹಣ್ಣು–ತರಕಾರಿ, ತೆಂಗಿನಕಾಯಿ, ಅಕ್ಕಿ, ಬೇಳೆ ಸೇರಿದಂತೆ ಅಗತ್ಯವಿರುವ ಎಲ್ಲ ಪದಾರ್ಥಗಳಿಗೆ ಪ್ರತ್ಯೇಕ ಪ್ರಾಂಗಣದ ವ್ಯವಸ್ಥೆ ಇದೆ. ಆದರೆ ಇಲ್ಲಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಕಿತ್ತು ಹೋಗಿದ್ದು, ವಾಹನ ಸಂಚಾರದಿಂದ ನಿತ್ಯ ದೂಳಿನ ಮಜ್ಜನವಾಗುತ್ತಿದೆ. ವರ್ತಕರು ಹಾಗೂ ರೈತರು ಇದರ ನಡುವೆಯೇ ವ್ಯಾಪಾರ–ವಹಿವಾಟು ನಡೆಸುವ ದುಃಸ್ಥಿತಿ ಎದುರಾಗಿದೆ' ಎಂದು ವ್ಯಾಪಾರಿಗಳು ದೂರಿದರು.

ಮಾರುಕಟ್ಟೆಗೆ ಬರುವ ರೈತರಿಗೆ ರಾತ್ರಿ ವಾಸ್ತವ್ಯಕ್ಕೆ 'ರೈತ ಭವನ' ನಿರ್ಮಿಸಲಾಗಿದ್ದರೂ ನಿರ್ವಹಣೆ ಸಮರ್ಪಕವಾಗಿಲ್ಲ. ಕೆಲವು ಕೊಠಡಿಗಳ ಕಿಟಕಿಯ ಗಾಜುಗಳು ಒಡೆದಿವೆ. ರಸ್ತೆಯ ಬದಿಯಲ್ಲೇ ಇರುವ ಭವನ ಕೊಂಪೆಯಂತೆ ಕಾಣಿಸುತ್ತಿದೆ.

ಯಶವಂತಪುರ ಎಪಿಎಂಸಿ ಆವರಣದ ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸಿರುವ ವಾಹನಗಳ ಸಾಲು (ಎಡಚಿತ್ರ) ಎಪಿಎಂಸಿ ಆವರಣದ ರಸ್ತೆ ಕಿತ್ತು ಹೋಗಿರುವುದು

ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಎಪಿಎಂಸಿ ಆವರಣದಲ್ಲಿ ಹಾಕಿರುವ ಕಸದ ರಾಶಿ

ವರ್ತಕರು ಏನಂತಾರೆ...

ಇತ್ತೀಚಿನ ದಿನಗಳಲ್ಲಿ ಕಸ ವಿಲೇವಾರಿ ಮಾಡುತ್ತಿಲ್ಲ. ವೈಟ್ ಟಾಪಿಂಗ್ ಹೆಸರಿನಲ್ಲಿ ಪ್ರಾಂಗಣದ ಮುಖ್ಯ ರಸ್ತೆಗಳನ್ನು ಅಗೆದು ಹಾಕಿದ್ದು, ವಾಹನಗಳ ಸಂಚಾರಕ್ಕೆ ತೊಂದರೆ ಆಗಿದೆ. ಹೊರ ರಾಜ್ಯದ ವಾಹನಗಳನ್ನು ಎರಡು ಮೂರು ದಿನಗಳವರೆಗೆ ಆವರಣದಲ್ಲಿ ನಿಲ್ಲಿಸುವುದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಈ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಸ್ಪಂದಿಸುತ್ತಿಲ್ಲ. ಭದ್ರತಾ ಸಿಬ್ಬಂದಿಯಿಲ್ಲದ ಪರಿಣಾಮ ಕಳ್ಳರ ಹಾವಳಿ ಹೆಚ್ಚಾಗಿದೆ. ಸಂಜೆ 6 ಗಂಟೆಯ ನಂತರ ಮಾರುಕಟ್ಟೆಗೆ ಬರುವ ರೈತರಿಗೆ ತಂಗಲು ಸರಿಯಾದ ವ್ಯವಸ್ಥೆ ಇಲ್ಲ.

ಸಿ. ಉದಯಶಂಕರ್, ಬೆಂಗಳೂರು ಆಲೂಗಡ್ಡೆ, ಈರುಳ್ಳಿ ವರ್ತಕರ ಸಂಘದ ಅಧ್ಯಕ್ಷ

ಪ್ರಾಂಗಣದಲ್ಲಿ ಈರುಳ್ಳಿ ತ್ಯಾಜ್ಯವನ್ನು ಎಲ್ಲೆಂದರಲ್ಲಿ ರಾಶಿ ಹಾಕಲಾಗಿದೆ. ಅದು ಕೊಳೆತರೂ ವಿಲೇವಾರಿ ಮಾಡುತ್ತಿಲ್ಲ. ಇದು ಕಾಯಿಲೆಗಳಿಗೆ ದಾರಿ ಮಾಡಿಕೊಡುತ್ತಿದೆ. ಈರುಳ್ಳಿ ಸಿಪ್ಪೆಯ ರಾಶಿಗೆ ಕಿಡಿಗೇಡಿಗಳು ಬೆಂಕಿ ಹಾಕುತ್ತಾರೆ. ಇದರಿಂದ ಅನಾಹುತ ಸಂಭವಿಸುವ ಆತಂಕವೂ ಇದೆ. ಆವರಣದಲ್ಲಿ ದೂಳು ಸಮಸ್ಯೆಯಿದೆ. ಕಸ ವಿಲೇವಾರಿ ಆಗುತ್ತಿಲ್ಲ.

ಇರ್ಫಾನ್, ಅಕ್ಕಿ–ಬೇಳೆ ವರ್ತಕ

ಎಪಿಎಂಸಿ ಆವರಣದಲ್ಲಿ ಎಲ್ಲೆಂದರಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ವಾಹನ ನಿಲುಗಡೆ ಮಾಡಲು ನಿರ್ಮಿಸಿರುವ ಕಟ್ಟಡವನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು.

ಮಲ್ಲಿಕಾರ್ಜುನ್, ದ್ವಿಚಕ್ರ ವಾಹನ ಸವಾರ

ಎಪಿಎಂಸಿ ಪ್ರಾಂಗಣಕ್ಕೆ ಸಂಪರ್ಕಿಸುವ ಐದನೇ ಮುಖ್ಯ ರಸ್ತೆಯನ್ನು ವೈಟ್ ಟಾಪಿಂಗ್ ಹೆಸರಿನಲ್ಲಿ ಕಿತ್ತು ಹಾಕಿದ್ದಾರೆ. ಇದು ಕೃಷಿ ಉತ್ಪನ್ನಗಳನ್ನು ಹೊತ್ತು ಬರುವ ವಾಹನಗಳ ಸಂಚಾರಕ್ಕೆ ತೊಂದರೆ ಆಗಿದೆ. ದೂಳಿನ ಮಜ್ಜನದ ನಡುವೆ ವ್ಯಾಪಾರ ಮಾಡುತ್ತಿದ್ದು, ಆರೋಗ್ಯ ಹದಗೆಡುತ್ತಿದೆ. ಇದಕ್ಕೆ ಪರಿಹಾರ ಕಲ್ಪಿಸಬೇಕು.

ಅಬ್ದುಲ್ ಖಾಲೀದ್, ವರ್ತಕ

'ಮೂಲಸೌಕರ್ಯ ಸುಧಾರಣೆಗೆ ಕ್ರಮ'

ಯಶವಂತಪುರ ಎಪಿಎಂಸಿ ಪ್ರಾಂಗಣದಲ್ಲಿ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿಗೆ ವೇಗ ನೀಡಲಾಗುವುದು. ನಿತ್ಯ ಕಸ ವಿಲೇವಾರಿ ಮಾಡಲಾಗುತ್ತಿದೆ. ಸಂಚಾರ ದಟ್ಟಣೆ ಪರಿಹರಿಸಲು ಈರುಳ್ಳಿ, ಆಲೂಗಡ್ಡೆ, ಶುಂಠಿ ಮತ್ತು ಬೆಳ್ಳುಳ್ಳಿ ಉತ್ಪನ್ನಗಳ ವರ್ತಕರನ್ನು ದಾಸನಪುರ ಮಾರುಕಟ್ಟೆಗೆ ಸ್ಥಳಾಂತರಿಸುವ ಪ್ರಕ್ರಿಯೆ ನಡೆಯುತ್ತಿದೆ. ಬಹುಮಹಡಿ ವಾಹನ ನಿಲುಗಡೆ ಮಹಡಿ ಸಾರ್ವಜನಿಕರಿಗೆ ಮುಕ್ತಗೊಳಿಸಲು ಒಂದು ವಾರದಗೊಳಗೆ ಮೂರನೇ ಟೆಂಡರ್ ಆಹ್ವಾನಿಸಲಾಗುವುದು. ಪ್ರಾಂಗಣದ ಸ್ವಚ್ಛತೆಗೆ ಆದ್ಯತೆ ನೀಡಲಾಗುವುದು. ರೈತರಿಗೆ, ವರ್ತಕರಿಗೆ ಎಲ್ಲ ರೀತಿಯ ಮೂಲ ಸೌಕರ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು' ಎಂದು ಯಶವಂತಪುರ ಎಪಿಎಂಸಿ ಕಾರ್ಯದರ್ಶಿ ಕೆ.ಸಿ. ದೊರೆಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

ವಾಹನ ನಿಲುಗಡೆ ಕಟ್ಟಡ ವ್ಯರ್ಥ

ಯಶವಂತಪುರ ಎಪಿಎಂಸಿ ಆವರಣದಲ್ಲಿ ಸುಮಾರು ₹85 ಕೋಟಿ ವೆಚ್ಚದಲ್ಲಿ ನಿರ್ಮಿಸಿದ್ದ ಬಹುಮಹಡಿ ವಾಹನಗಳ ನಿಲುಗಡೆ ಕಟ್ಟಡ ಬಳಕೆಗೆ ಲಭಿಸದೇ ವ್ಯರ್ಥವಾಗುತ್ತಿದೆ.

ಹತ್ತು ಅಂತಸ್ತಿನ ಕಟ್ಟಡದ ಕಾಮಗಾರಿ ಮುಕ್ತಾಯವಾಗಿ ಹಲವಾರು ವರ್ಷ ಕಳೆದಿದ್ದರೂ ಬಳಕೆಗೆ ಇಲ್ಲವಾಗಿದೆ. ಕಟ್ಟಡದ ಮುಖ್ಯದ್ವಾರಕ್ಕೆ ಬೀಗ ಹಾಕಿ, ಬಂದ್ ಮಾಡಲಾಗಿದೆ. 750 ಕಾರುಗಳು ಹಾಗೂ 110 ಬೈಕ್‌ಗಳ ನಿಲುಗಡೆ ಅವಕಾಶವಿದೆ.

ಸುದ್ದಿ 2 ನಿಮಿಷ

ಸಂಧಿವಾತಕ್ಕೆ ಔಷಧ: ವರದಿ ನೀಡಲು ಸಚಿವರ ಸೂಚನೆ

ಬೆಂಗಳೂರು: ಸಂಧಿವಾತಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಹಾಗೂ ಅಗತ್ಯವಿರುವ ಔಷಧಗಳ ಬಗ್ಗೆ ವರದಿ ನೀಡುವಂತೆ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ ಅವರು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ (ಬಿಎಂಸಿಆರ್‌ಐ) ಸೂಚಿಸಿದ್ದಾರೆ.

ಶುಕ್ರವಾರ ಇಲ್ಲಿ ಬಿಎಂಸಿಆರ್‌ಐ ಅಧೀನ ಆಸ್ಪತ್ರೆಗಳ ಆಡಳಿತ ಮಂಡಳಿ ಸಭೆ ನಡೆಸಿದ ಅವರು, ಸಂಧಿವಾತಕ್ಕೆ ಸಂಬಂಧಿಸಿದ ಔಷಧಗಳ ಬಗ್ಗೆ ವೈದ್ಯಾಧಿಕಾರಿಗಳಿಂದ ಮಾಹಿತಿ ಪಡೆದರು. 'ಸಂಧಿವಾತ ಚಿಕಿತ್ಸೆಗೆ ಔಷಧ ಕೊರತೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಶುಕ್ರವಾರ ವಿಶೇಷ ವರದಿಪ್ರಕಟವಾಗಿತ್ತು.

'ಸಂಧಿವಾತಕ್ಕೆ ಸಂಬಂಧಿಸಿದ ಔಷಧಗಳು ದುಬಾರಿಯಾಗಿವೆ. ಆದ್ದರಿಂದ ಕೆಲ ಔಷಧಗಳು ಲಭ್ಯವಿಲ್ಲ' ಎಂದು ಬಿಎಂಸಿಆರ್‌ಐ ವೈದ್ಯಾಧಿಕಾರಿಗಳು ತಿಳಿಸಿದರು. ಅಗತ್ಯ ಔಷಧಗಳನ್ನು ಒದಗಿಸಬೇಕು ಎಂದು ಸೂಚಿಸಿದ ಸಚಿವರು, 'ಈ ಬಗ್ಗೆ ವರದಿ ನೀಡಿ' ಎಂದು ತಿಳಿಸಿದರು.

ಸಂಸ್ಥೆಯಡಿ ಖಾಲಿಯಿರುವ ಶುಶ್ರೂಷಕರ ಹುದ್ದೆಗಳನ್ನು ಭರ್ತಿ ಮಾಡದಿರುವುದಕ್ಕೆ ಸಚಿವರು ಅಸಮಾಧಾನ ವ್ಯಕ್ತಪಡಿಸಿ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. 'ವೈದ್ಯಕೀಯ ಸೇವೆ ವ್ಯತ್ಯಯವಾದಲ್ಲಿ ಸರ್ಕಾರಕ್ಕೆ ಕೆಟ್ಟ ಹೆಸರು ಬರಲಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ವೈದ್ಯಕೀಯ ಸಹಾಯಕರು ಸೇರಿ ಖಾಲಿಯಿರುವ ವಿವಿಧ ಹುದ್ದೆಗಳ ಭರ್ತಿಗೆ ಸೂಚಿಸಿದರು ಎಂದು ಬಿಎಂಸಿಆರ್‌ಐ ಮೂಲಗಳು ತಿಳಿಸಿವೆ.



ಶಾಲಾ ಹಂತದಲ್ಲಿಯೇ ರಸ್ತೆ ಸುರಕ್ಷತೆ ಜಾಗೃತಿ ಮೂಡಿಸಿ

ಕೆ.ಆರ್.ಪುರ: ಮಕ್ಕಳಿಗೆ ಶಾಲಾ ಹಂತದಲ್ಲಿಯೇ ರಸ್ತೆ ಸುರಕ್ಷತೆ ಬಗ್ಗೆ ತಿಳಿಸುವ ಅಗತ್ಯವಿದೆ ಎಂದು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ಗೋವಿಂದಪ್ಪ ಹೇಳಿದರು.

ಕೆ.ಆರ್.ಪುರ ಸಮೀಪದ ಏಕತಾನಗರದ ಎಸ್.ಇ.ಎ ಶಾಲೆಯಲ್ಲಿ ಪ್ರಾದೇಶಿಕ ಸಾರಿಗೆ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ರಸ್ತೆ ಸುರಕ್ಷತೆ ಮಾಸಾಚರಣೆ -2025 ಉದ್ಘಾಟಿಸಿ ಮಾತನಾಡಿದರು.

ಶಾಲಾ ವಾಹನ ನಿರ್ವಹಣೆಯನ್ನು ಕಾಲಕಾಲಕ್ಕೆ ತಪ್ಪದೇ ನವೀಕರಿಸಿಕೊಂಡು ಮಕ್ಕಳ ಸುರಕ್ಷತೆಯನ್ನು ಕಾಪಾಡುವುದು ಎಲ್ಲಾ ಶಾಲಾ ಆಡಳಿತ ಮಂಡಳಿಯವರ ಪ್ರಮುಖ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಉಮೇಶ್.ಪಿ ಮಾತನಾಡಿ, ರಸ್ತೆಯಲ್ಲಿ ಸಂಚರಿಸುವ ಪ್ರತಿಯೊಬ್ಬರು ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸಬೇಕು. ಮಕ್ಕಳನ್ನು ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಹೋಗುವಾಗ ಸುರಕ್ಷತೆ ಮುಖ್ಯ ಎಂದರು.

₹3.44 ಕೋಟಿ ಮೌಲ್ಯದ ಚಿನ್ನ ಅಕ್ರಮ ಸಾಗಾಟ: ಸಿಕ್ಕಿ ಬಿದ್ದ ಪ್ರಯಾಣಿಕ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದುಬೈನಿಂದ ಬಂದಿದ್ದ ಅಂಧ ಪ್ರಯಾಣಿಕರೊಬ್ಬರಿಂದ ₹3.44ಕೋಟಿ ಮೌಲ್ಯದ ಚಿನ್ನ ಜಪ್ತಿ ಮಾಡಲಾಗಿದೆ. ಆರೋಪಿ ಮಾರ್ಚ್ 4ರಂದು 3 ಕೆ.ಜಿ 995 ಗ್ರಾಂ ಚಿನ್ನ ಕಳ್ಳ ಸಾಗಣೆ ಮಾಡುವಾಗ ಸಿಕ್ಕಿ ಬಿದ್ದಿದ್ದಾರೆ ಎಂದು ಕಸ್ಟಮ್ ಅಧಿಕಾರಿಗಳು ತಿಳಿಸಿದ್ದಾರೆ.

ಅಂಧ ಆರೋಪಿಯು, ಅಧಿಕಾರಿಗಳ ಕಣ್ತಪ್ಪಿಸಿ ಚಿನ್ನ ಸಾಗಿಸುವ ಸಂಚು ರೂಪಿಸಿದ್ದರು. ಅವರು ಧರಿಸಿದ್ದ ಅಂಗಿ ಒಳಗೆ ಚಿನ್ನ ಬಚ್ಚಿಟ್ಟುಕೊಂಡು ಸಾಗಣೆಗೆ ಯತ್ನಿಸಿದ್ದರು. ಅನುಮಾನ ಬಂದು ತಪಾಸಣೆ ನಡೆಸಿದಾಗ ದಾಖಲೆ ಇಲ್ಲದೆ ಚಿನ್ನ ಸಾಗಿಸುತ್ತಿರುವುದು ಪತ್ತೆಯಾಗಿದೆ. ಅಕ್ರಮ ಚಿನ್ನ ಸಾಗಣೆ ಆರೋಪದ ಮೇಲೆ ಪ್ರಕರಣ ದಾಖಲಾಗಿದೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಕಸ್ಟಮ್ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ರೇಸ್

'ಸಿಸಿಯಾನ್' ಗೆಲ್ಲುವ ನಿರೀಕ್ಷೆ

ಮೇಜರ್ ಸಿ.ನ್ಯೂಟನ್ ಡೇವಿಸ್ ಮೆಮೋರಿಯಲ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ಸಿಸಿಯಾನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ; 2:00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಜೆರ್ಸಿ ಕಿಂಗ್ 1, ಮೆಟ್‌ಜಿಂಗರ್ 2, ಆಸ್ಪೀಸಿಯಸ್ ಕ್ವೀನ್ 3
2ನೇ ರೇಸ್: ಸೂಪರ್‌ಹೀರೊ 6, ರಾಯಲ್ ವಿಸ್ಪರ್ 3, ಸದರ್ನ್‌ಅರಿಸ್ಟೊಕ್ರಾಟ್ 4
3ನೇ ರೇಸ್: ಡೊಮಿನ 2, ಸ್ಟೆಪ್ ಟು ಡೆಸ್ಟಿನಿ 3, ಎಸ್ಟೆಫಿನ 9
4ನೇ ರೇಸ್: ನಾಟಿ ಪ್ಯಾಟನ್ 6, ಸೂಪರ್ ಮಾರ್ವೆಲ 4, ಲಾಟರ್‌ಬ್ರನ್ನೆನ್ 3
5ನೇ ರೇಸ್: ಸಿಸಿಯಾನ್ 4, ಕಿಸ್ ಆಫ್ ಗ್ರೇ 6, ಮೂನ್ ಸ್ಟಾರ್ 7
6ನೇ ರೇಸ್: ಫ್ಲಿನ್ಲೆ 6, ಪವರ್ ಆಫ್ ಬ್ಯೂಟಿ 2, ಕೊರಿನ್‌ಥಿಯನ್ 3
7ನೇ ರೇಸ್: ಸ್ಮೈಲ್ ಆಫ್ ಬ್ಯೂಟಿ 1, ವಾಯು 2, ಎಬೊಟ್ಸೆ 3
8ನೇ ರೇಸ್: ಲಕ್ಸ್ ಎಟರ್ನ 1, ವೆಸ್ಟ್‌ಲೇಕ್ 4, ಗಿಸ್ಮೊ 11

ಉತ್ತಮ ಬೆಟ್: ಲಕ್ಸ್ ಎಟರ್ನ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

'ಉತ್ತಮ ಆರೋಗ್ಯ ಸೇವೆ ನೀಡಿ'

ಶ್ರೀವಿಶ್ವೇಶ ತೀರ್ಥ ಸ್ಮಾರಕ ಆಸ್ಪತ್ರೆ ಉದ್ಘಾಟಿಸಿದ ಅಮಿತ್ ಶಾ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಶ್ರೀವಿಶ್ವೇಶ ತೀರ್ಥ ಸ್ಮಾರಕ ಆಸ್ಪತ್ರೆಯು ಜನ ಸಮುದಾಯಕ್ಕೆ ವಿಶ್ವ ದರ್ಜೆಯ ಜತೆಗೆ ಕೈಗೆಟುಕುವ ವೈದ್ಯಕೀಯ ಸೇವೆಯನ್ನು ಒದಗಿಸಲಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಮಾರತ್ತಹಳ್ಳಿಯಲ್ಲಿ ಶ್ರೀಕೃಷ್ಣ ಸೇವಾಶ್ರಮ ಟ್ರಸ್ಟ್‌ನಿಂದ ನೂತನವಾಗಿ ನಿರ್ಮಿಸಿರುವ ಶ್ರೀವಿಶ್ವೇಶ ತೀರ್ಥ ಸ್ಮಾರಕ ಆಸ್ಪತ್ರೆಯ ಅತ್ಯಾಧುನಿಕ ಸೌಲಭ್ಯವುಳ್ಳ 150 ಹಾಸಿಗೆಗಳ ಆಸ್ಪತ್ರೆಯನ್ನು ಉದ್ಘಾಟಿಸಿದ ಅವರು ಮಾತನಾಡಿದರು.

ಆಧುನಿಕ ತಂತ್ರಜ್ಞಾನ, ನುರಿತ ವೈದ್ಯಕೀಯ ವೃತ್ತಿಪರರು ಮತ್ತು ರೋಗಿ ಕೇಂದ್ರಿತ ಆರೋಗ್ಯ ಸೇವೆಗೆ ಬದ್ಧತೆ ಹೊಂದಿರುವ ಈ ಆಸ್ಪತ್ರೆಯು ಜನರ ಸೇವೆಯಲ್ಲಿ ದೊಡ್ಡ ಹೆಜ್ಜೆ ಇಟ್ಟಿದ್ದಕ್ಕಾಗಿ ಉಡುಪಿ ಮಠವನ್ನು ಅಭಿನಂದಿಸುತ್ತೇನೆ. ಈ ಆಸ್ಪತ್ರೆಯಲ್ಲಿ ಶೇ60 ರಷ್ಟು ಹಾಸಿಗೆಗಳು ಬಡವರು ಮತ್ತು ನಿರ್ಗತಿಕರಿಗೆ ಮೀಸಲಿಟ್ಟಿರುವುದನ್ನು ಕಂಡು ಸಂತೋಷವಾಗಿದೆ ಎಂದರು.

ಆಸ್ಪತ್ರೆಯು ಒಂದೇ ಸೂರಿನಡಿ ಬಡ ರೋಗಿಗಳಿಗೆ ಅಗತ್ಯವಾದ ಮತ್ತು ಉನ್ನತ ದರ್ಜೆಯ ಆರೋಗ್ಯ ಸೇವೆಗಳನ್ನು ಒದಗಿಸಲಿ. ಶ್ರೀಕೃಷ್ಣ ಸೇವಾಶ್ರಮ ಟ್ರಸ್ಟ್ ಸಮಾಜದ ಸುಧಾರಣೆ ಮತ್ತು ಬಡವರ ಕಲ್ಯಾಣಕ್ಕಾಗಿ ಕೆಲಸ ಮಾಡುವುದನ್ನು ಮುಂದುವರಿಸುತ್ತದೆ ಎಂಬುದು ನನ್ನ ನಂಬಿಕೆ ಎಂದರು.

ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ, ಈ ಆಸ್ಪತ್ರೆ ವೈದ್ಯಕೀಯ ಆರೈಕೆ ಮಾತ್ರವಲ್ಲದೆ ಮಾನವೀಯತೆಯ ಚೈತನ್ಯವನ್ನು ಸಹ ಪೋಷಿಸುತ್ತದೆ. ಈ ಸಂಸ್ಥೆಯು ಅಗತ್ಯವಿರುವವರಿಗೆ ಭರವಸೆಯ ದಾರಿದೀಪವಾಗಲಿ ಮತ್ತು ನಿಜವಾದ ಪ್ರಗತಿ ಪ್ರತಿಯೊಬ್ಬ ವ್ಯಕ್ತಿಯ ಕಲ್ಯಾಣದಲ್ಲಿದೆ ಎಂಬುದನ್ನು ನೆನಪಿಸಲಿ ಎಂದರು.

ಈ ಸಂಧರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಆಸ್ಪತ್ರೆ ಟ್ರಸ್ಟ್ ಅಧ್ಯಕ್ಷ ಕೆ.ಜೈರಾಜ್, ಟ್ರಸ್ಟ್ ಕಾರ್ಯದರ್ಶಿ ಹರಿದಾಸ್ ವಿ.ಕೆ., ವೈದ್ಯಕೀಯ ನಿರ್ದೇಶಕ ಡಾ.ಯು. ವಾಸುದೇವರಾವ್ ಹಾಜರಿದ್ದರು.

ಬೆಂಗಳೂರಿನ ಮಾರತ್‌ಹಳ್ಳಿಯ ಕುಂದಲಹಳ್ಳಿ ಗೇಟ್ ಬಳಿ ಎಸ್‌ವಿಎಂ ಹಾಸ್ಪಿಟಲ್ಸ್‌ನ 'ವಿಶ್ವೇಶತೀರ್ಥರ ಸ್ಮಾರಕ ಆಸ್ಪತ್ರೆ ಉದ್ಘಾಟನೆ ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರಿಗೆ ನಮಸ್ಕರಿಸಿದರು. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಉಪಸ್ಥಿತರಿದ್ದರು

ಕಾರು ಡಿಕ್ಕಿ: ತಾಯಿ, ಮಗಳು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಜಂಕ್ಷನ್‌ನಲ್ಲಿ ಶುಕ್ರವಾರ ಮಧ್ಯಾಹ್ನ ಕಾರು ಡಿಕ್ಕಿಯಾಗಿ ತಾಯಿ ಹಾಗೂ ಮಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ನಾಗಮ್ಮ(46) ಹಾಗೂ ಅವರ ಪುತ್ರಿ ಪ್ರಭಾಕುಮಾರಿ (17) ಮೃತರು. ಚಿತ್ರದುರ್ಗದ ಚಳ್ಳಕೆರೆಯ ನಿವಾಸಿಗಳಾದ ಮೃತರು, ಬ್ಯಾಟರಾಯನಪುರದಲ್ಲಿ ನೆಲಸಿದ್ದರು.

ಶುಕ್ರವಾರ ಮಧ್ಯಾಹ್ನ 12.15ರ ಸುಮಾರಿಗೆ ಪ್ರಭಾಕುಮಾರಿ ಅವರು ಬ್ಯಾಟರಾಯನಪುರ ಜಂಕ್ಷನ್‌ಗೆ ಬಂದಿದ್ದರು. ಅವರನ್ನು ಮನೆಗೆ ಕರೆದೊಯ್ಯುಲು ತಾಯಿ ಬಂದಿದ್ದರು. ಅದೇ ವೇಳೆ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದ್ದು ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

'ಅಂದಾಜು 70 ವರ್ಷದ ಚಾಲಕ ಕಾರನ್ನು ಓಡಿಸುತ್ತಿದ್ದರು. ನಿರ್ಲಕ್ಷ್ಯ ಹಾಗೂ ವೇಗವಾಗಿ ಕಾರು ಚಾಲನೆ ಮಾಡಿದ್ದೇ ಅಪಘಾತಕ್ಕೆ ಕಾರಣವಾಗಿದೆ. ಚಾಲಕನ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಹೆಬ್ಬಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಿರಿಜಾ ಲೋಕೇಶ್, ಗಾಯತ್ರಿಗೆ 'ರಾಜಲಕ್ಷ್ಮಿ ಬರಗೂರು ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಗಿರಿಜಾ ಲೋಕೇಶ್

ಎನ್. ಗಾಯತ್ರಿ

ಬೆಂಗಳೂರು: ನಾಡೋಜ ಡಾ. ಬರಗೂರು ಪ್ರತಿಷ್ಠಾನ ನೀಡುವ 'ರಾಜಲಕ್ಷ್ಮಿ ಬರಗೂರು ಪ್ರಶಸ್ತಿ'ಗೆ ಕಲಾವಿದೆ ಗಿರಿಜಾ ಲೋಕೇಶ್ ಹಾಗೂ ಲೇಖಕಿ ಎನ್. ಗಾಯತ್ರಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ. ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಪತ್ನಿ ದಿವಂಗತ ರಾಜಲಕ್ಷ್ಮಿ ಬರಗೂರು ಅವರ ಹೆಸರಿನಲ್ಲಿ ಪ್ರತಿಷ್ಠಾನವು ಪ್ರತಿ ವರ್ಷ ಇಬ್ಬರು ಮಹಿಳಾ ಸಾಧಕರಿಗೆ ಈ ಪ್ರಶಸ್ತಿಯನ್ನು ನೀಡುತ್ತಿದೆ.

ಇದೇ 12ರಂದು ಸಂಜೆ 5 ಗಂಟೆಗೆ ಇಲ್ಲಿನ ಸರ್ಕಾರಿ ಕಲಾ ಕಾಲೇಜಿನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಲೇಖಕಿ ಸಬಿಹಾ ಭೂಮಿಗೌಡ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಲಾವಿದ ಸುಂದರ್ ರಾಜ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಎ.ವಿ. ಅವರು ತಿಳಿಸಿದ್ದಾರೆ.

ಬೈಕ್ ಡಿಕ್ಕಿ: ನಾಲ್ವರು ಯುವಕರ ಸಾವು

ಸೇಡಂ: ತಾಲ್ಲೂಕಿನ ತೆಲ್ಕೂರ–ಹಾಬಾಳ ಮಾರ್ಗಮಧ್ಯೆ ಶುಕ್ರವಾರ ಎರಡು ಬೈಕ್‌ಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಹಾಬಾಳ(ಟಿ) ಗ್ರಾಮದ ನಾಲ್ವರು ಯುವಕರು ಮೃತಪಟ್ಟಿದ್ದಾರೆ.

ಹಾಬಾಳ(ಟಿ) ಗ್ರಾಮದ ಮಲ್ಲಿಕಾರ್ಜುನ ರೇವಣಸಿದ್ದಪ್ಪ ಪೂಜಾರಿ(20), ಸಿದ್ದಪ್ಪ ಗುಡಿಸಿ (25) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪ್ರಕಾಶ ತಿಪ್ಪಣ್ಣ ಪೂಜಾರಿ(19), ಸುರೇಶ ಪುಂಡರೆಡ್ಡಿ(20) ಅವರು ಕಲಬುರಗಿಯ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾಥಮಿಕ ಚಿಕಿತ್ಸೆಗಾಗಿ ಸೇಡಂ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ.

ವಿಶ್ವಮಹಿಳಾ ದಿನ: ಸೂಕ್ತಿ, ಛಾಯಾಚಿತ್ರ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಬೆಂಗಳೂರು ಜಿಲ್ಲಾ ಘಟಕದಿಂದ ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಶುಕ್ರವಾರ 'ಸೂಕ್ತಿ ಹಾಗೂ ಛಾಯಾಚಿತ್ರ ಪ್ರದರ್ಶನ' ಹಮ್ಮಿಕೊಂಡಿತ್ತು.

'ಮಹಿಳೆಯರ ಮತ್ತು ಮಕ್ಕಳ ಜೀವಿಸುವ ಹಕ್ಕಿಗಾಗಿ ಧ್ವನಿ ಎತ್ತಿ. ಆರೋಗ್ಯ ಶಿಕ್ಷಣ ಸಂರಕ್ಷಣೆ ಮತ್ತು ಆರ್ಥಿಕ ಭದ್ರತೆಯನ್ನು ಖಾತ್ರಿ ಪಡಿಸಿ' ಎಂಬ ಘೋಷವಾಕ್ಯದೊಂದಿಗೆ ಈ ಪ್ರದರ್ಶನವನ್ನು ಆಯೋಜಿಸಲಾಗಿತ್ತು.

1908ರಲ್ಲಿ ಅಮೆರಿಕದಲ್ಲಿ ಮಹಿಳಾ ಕಾರ್ಮಿಕರು ಉತ್ತಮ ದುಡಿಯುವ ಪರಿಸ್ಥಿತಿಗೆ ಒತ್ತಾಯಿಸಿ ಸತತ 13 ವಾರಗಳ ಕಾಲ ಹೋರಾಟ ನಡೆಸಿದರು. ಹಲವರು ಹುತಾತ್ಮರಾದರು. ಸಮಾಜವಾದಿ ನಾಯಕಿಯಾದ ಕ್ಲಾರಾ ಜೆಟ್ಕಿನ್ ಅವರು ಮಾರ್ಚ್ 8 ರಂದು ಮಹಿಳಾ ದಿನವಾಗಿ ಆಚರಿಸಬೇಕೆಂದು ಕರೆ ನೀಡಿದರು.

ಈ ನೈಜ ಹೋರಾಟದ ಇತಿಹಾಸವನ್ನೂ ಮಹಿಳಾ ದಿನ ಪ್ರಾಮುಖ್ಯ ಹಾಗೂ ಈ ದಿನದ ಸಂದೇಶವನ್ನು ಎಲ್ಲೆಡೆ ಪಸರಿಸುವ ಹಿನ್ನೆಲೆಯಲ್ಲಿ ಮಹಿಳಾ ಹೋರಾಟಗಾರ್ತಿಯರ ಸೂಕ್ತಿಗಳು, ಮಹಿಳೆಯರು ಮತ್ತು ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತ ಅಂಕಿ ಅಂಶಗಳನ್ನು ಒಳಗೊಂಡ ಸೂಕ್ತಿಗಳ ಪ್ರದರ್ಶನವನ್ನು ಆಯೋಜಿಸಲಾಗಿದೆ ಎಂದು ಸಂಘಟನೆಯ ಆಯೋಜಕರು ತಿಳಿಸಿದರು.

ವೃತ್ತಿ ನಿರತರು, ವಕೀಲರು, ಸರ್ಕಾರಿ ನೌಕರರು, ವಿದ್ಯಾರ್ಥಿಗಳು ಪೌರಕಾರ್ಮಿಕರು, ವ್ಯಾಪಾರಸ್ಥರು ಪ್ರದರ್ಶನವನ್ನು ವೀಕ್ಷಿಸಿದರು.

ನಗರದಲ್ಲಿ ಎಐಎಂಎಸ್‌ಎಸ್ ಶುಕ್ರವಾರ ಆಯೋಜಿಸಿದ್ದ 'ಸೂಕ್ತಿ ಹಾಗೂ ಛಾಯಾಚಿತ್ರ ಪ್ರದರ್ಶನ'ದಲ್ಲಿ ಸಂಘಟನೆಯ ಸದಸ್ಯೆಯರು ಭಾಗವಹಿಸಿದ್ದರು

ಇಂದು ಕಾರ್ಯಕ್ರಮ

ಮಾ.8ರಂದು ನಗರದ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣದಲ್ಲಿ ಎಐಎಂಎಸ್‌ಎಸ್ ಸಂಘಟನೆಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಚರಣೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಲೇಖಕಿ ಎಂ.ಎಸ್.ಆಶಾದೇವಿ ಹಾಗೂ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ರಾಜ್ಯ ಕಾರ್ಯದರ್ಶಿ ಶೋಭಾ ಅವರು ಭಾಗವಹಿಸಲಿದ್ದಾರೆ ಸಂಘಟನೆಯ ಜಿಲ್ಲಾ ಸೆಕ್ರೆಟರಿಯಲ್ ಸದಸ್ಯೆ ರುಕ್ಮಿಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ವಿಜ್ಞಾನದ ಜಾಡು ಬದಲಿಸಿದ ಜಾಣೆಯರು ಪುಸ್ತಕದ ಪ್ರಸ್ತುತಿ: ದೀಪಾ ಎಂ.ಬಿ., ರಚನೆ: ಸರೋಜಾ ಪ್ರಕಾಶ್, ಅತಿಥಿ: ಡಿ.ವಿ. ಗುರುಪ್ರಸಾದ, ಆಯೋಜನೆ ಮತ್ತು ಸ್ಥಳ: ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ, ಆನಂದ ರಾವ್ ವೃತ್ತ, ಬೆಳಿಗ್ಗೆ 10

ಆಯೋಜನೆ: ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಅತಿಥಿಗಳು: ಎಂ.ಎಸ್. ಆಶಾದೇವಿ, ಶೋಭ ಎಸ್., ಹೇಮಾವತಿ ಕೆ., ಅಧ್ಯಕ್ಷತೆ: ನಿರ್ಮಲಾ ಎಚ್.ಎಲ್., ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣ, ಮಹಾರಾಣಿ ವಿಜ್ಞಾನ ಕಾಲೇಜಿನ ಬಳಿ, ಬೆಳಿಗ್ಗೆ 10.30

ಸಾಹಿತ್ಯ ವೇದಿಕೆ: ಅತಿಥಿಗಳು: ಬಿ.ಯು. ಸುಮಾ, ಮೈಥಿಲಿ ಪಿ. ರಾವ್, ಸೋನಿಯಾ ಚೆರಿಯನ್, ಆರ್. ದೇವಿ, ದವಾಕರ್ಲ ರಾಜೇಶ್ವರಿ, ಆಯೋಜನೆ ಮತ್ತು ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 11

ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಉದ್ಘಾಟನೆ: ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ: ಬಿ.ಟಿ. ಲಲಿತಾನಾಯಕ್, ಮುಖ್ಯಭಾಷಣ: ನಾಗರತ್ನ, ಸನ್ಮಾನಿತರು: ಎ. ಸರೋಜದೇವಿ, ಸ್ಥಳ: ಹೋಟೆಲ್ ಕಾನಿಷ್ಕ ಸಭಾಂಗಣ, ಗಾಂಧಿನಗರ, ಬೆಳಿಗ್ಗೆ 11.30

ಆಯೋಜನೆ: ಅಲ್–ಅಮೀನ್ ಎಜುಕೇಷನಲ್ ಸೊಸೈಟಿ, ಅತಿಥಿಗಳು: ಸಾರಾ ಫಾತೀಮಾ, ನಹಿದಾ ಜಮ್ ಜಮ್, ಶಬೀನಾ ಸುಲ್ತಾನ, ಡಾ. ಅಸಿಮಾ ಬಾನು, ಅಧ್ಯಕ್ಷತೆ: ಉಮರ್ ಇಸ್ಮಾಯಿಲ್ ಖಾನ್, ಸ್ಥಳ: ಅಲ್–ಅಮೀನ್ ಕಾಲೇಜು, ಹೊಸೂರು ರಸ್ತೆ, ಮಧ್ಯಾಹ್ನ 12

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ವಿಶೇಷ

'ಉನ್ನತ ನ್ಯಾಯಾಂಗದಲ್ಲಿ ಮಹಿಳೆಯರ ಸಮಾನ ಅವಕಾಶ' ಸಂವಾದ: ಇಂದಿರಾ ಬ್ಯಾನರ್ಜಿ, ಜಯ್ನಾ ಕೊಠಾರಿ, ಆಯೋಜನೆ: ಸೆಂಟರ್ ಫಾರ್ ಲಾ ಆ್ಯಂಡ್ ಪಾಲಿಸಿ ರಿಸರ್ಚ್, ಸ್ಥಳ: ಸಭಾ ಬಿಎಲ್‌ಆರ್, ಕಾಮರಾಜ ರಸ್ತೆ, ಭಾರತಿನಗರ, ಶಿವಾಜಿನಗರ, ಸಂಜೆ 5

ಕರ್ನಾಟಕ ಶಾಸ್ತ್ರೀಯ ಸಂಗೀತದ ವಿಶಿಷ್ಟ ಸಂಗೀತ ಸಂಜೆ: ಗಾಯನ: ಅರ್ಚನಾ, ಸಮನ್ವಿ, ಮೃದಂಗ: ದೀಪಿಕಾ ಶ್ರೀನಿವಾಸನ್, ಪಿಟೀಲು: ಸಿ.ವಿ. ಶ್ರುತಿ, ಅತಿಥಿ: ಮಾಲತಿ ಸಿಂಗಲಾಚಾರ್, ಆಯೋಜನೆ: ಕಲಾ ಪ್ರೇಮಿ ಫೌಂಡೇಶನ್, ಸ್ಥಳ: ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಸಂಜೆ 6.45

ಇತರೆ ಕಾರ್ಯಕ್ರಮಗಳು

ಗಂಗಮ್ಮ ಹೊಂಬೇಗೌಡ ಬಾಲಕಿಯರ ಪ್ರೌಢಶಾಲೆಯ ನವೀಕರಣಗೊಂಡ ಕಟ್ಟಡದ ಉದ್ಘಾಟನೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಮಧು ಬಂಗಾರಪ್ಪ, ಉದಯ್ ಬಿ. ಗರುಡಾಚಾರ್, ಸೌಮ್ಯ ರೆಡ್ಡಿ, ಪುಟ್ಟಣ್ಣ, ರಾಮೋಜಿಗೌಡ, ಅಧ್ಯಕ್ಷತೆ: ಎಚ್. ಶರತ್‌ಚಂದ್ರ, ಉಪಸ್ಥಿತಿ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ, ಹೊಂಬೇಗೌಡನಗರ, ಬೆಳಿಗ್ಗೆ 10

ಆರ್ಯ ಈಡಿಗ, ಬಿಲ್ಲವ, ನಾಮಧಾರಿ, ದೀವರು ಇತ್ಯಾದಿ 26 ಉಪಪಂಗಡಗಳನ್ನು ಒಳಗೊಂಡ 'ಈಡಿಗ ಜನಾಂಗದ ಇತಿಹಾಸ–ಅಭಿವೃದ್ಧಿಯ ಬಗ್ಗೆ ಒಂದು ಅವಲೋಕನ' ಚಿಂತನ–ಮಂಥನ ಸಭೆ: ವಿಖ್ಯಾತಾನಂದ ಸ್ವಾಮೀಜಿ, ಅರುಣಾನಂದ ಸ್ವಾಮೀಜಿ, ಪ್ರಣವಾನಂದ ಸ್ವಾಮೀಜಿ, ಯೋಗೇಂದ್ರ ಸ್ವಾಮೀಜಿ ಹಾಗೂ ಈಡಿಗ, ಬಿಲ್ಲವ, ನಾಮಧಾರಿ, ದೀವರು ಸೇರಿದಂತೆ 28 ಉಪ ಪಂಗಡಗಳ ವಿವಿಧ ಪಕ್ಷಗಳ ಪ್ರಮುಖರು, ಸ್ಥಳ: ಗೇಟ್–3 ಗಾರ್ಡನಿಯಾ, ಅರಮನೆ ಮೈದಾನ, ಬೆಳಿಗ್ಗೆ 10.30



ರಾಷ್ಟ್ರೀಯ ವೈಜ್ಞಾನಿಕ ಸಮಾವೇಶ ಮತ್ತು 22ನೇ ರಾಷ್ಟ್ರೀಯ ಪಶು ವೈದ್ಯಕೀಯ ವಿಜ್ಞಾನ ವಿದ್ವನ್ಮಂಡಲಿ ಸಮಾರಂಭ, 'ಅತ್ಯುತ್ತಮ ಜಾನುವಾರು, ಕೋಳಿ ಸಾಕಾಣೆ, ಆರೋಗ್ಯ ರಕ್ಷಣೆ ಮತ್ತು ಉತ್ಪಾದನೆಗೆ ಹಾಗೂ ಸಾಕುಪ್ರಾಣಿಗಳ ಪೋಷಣೆಗೆ ಸವಾಲುಗಳು ಮತ್ತು ಆದ್ಯತೆಗಳು'

ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಕೆ. ವೆಂಕಟೇಶ್, ಕೆ.ಸಿ. ವೀರಣ್ಣ, ರಾಘವೇಂದ್ರ ಭಟ್ಟ, ಉಮೇಶ್ ಚಂದ್ರ ಶರ್ಮ, ಕೆ.ಎಂ. ಬುಜರ್ಬರುವಾ, ಡಿ.ವಿ.ಆರ್. ಪ್ರಕಾಶ್ ರಾವ್, ಸ್ಥಳ: ಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನ ಸಭಾಂಗಣ, ಹೆಬ್ಬಾಳ, ಬೆಳಿಗ್ಗೆ 10.30

10ನೇ ವರ್ಷದ ವಾರ್ಷಿಕೋತ್ಸವ: ಅತಿಥಿಗಳು: ಡಿ. ವೀರೇಂದ್ರ ಹೆಗ್ಗಡೆ, ಕೆ. ಗೋಪಾಲಯ್ಯ, ಡಾ.ಸಿ.ಎನ್. ಮಂಜುನಾಥ್, ಎಂ.ಟಿ.ಬಿ. ನಾಗರಾಜ್, ನೆ.ಲ. ನರೇಂದ್ರ ಬಾಬು, ಅಚ್ಯುತ್ ಗೌಡ, ನಾಗವೇಣಿ ವೈ., ಸಿಂಗಾರೆವ್ವ ವೈ.ವಿ., ಬಿ. ಗುಣರಂಜನ್ ಶೆಟ್ಟಿ, ಕೃಷ್ಣ ದೊರೈ, ಲಕ್ಷ್ಮಣ್ ಜೆ., ಆಯೋಜನೆ: ಕಲ್ಪವೃಕ್ಷ ಎಜುಕೇಷನಲ್ ಮತ್ತು ಚಾರಿಟಬಲ್ ಟ್ರಸ್ಟ್, ಸ್ಥಳ: ಡಾ. ರಾಜ್‌ಕುಮಾರ್ ಕ್ರೀಡಾಂಗಣ, ಮಹಾಲಕ್ಷ್ಮೀ ಲೇಔಟ್, ಮಧ್ಯಾಹ್ನ 3

ತ್ಯಾಗರಾಜ ಸ್ವಾಮಿ, ಪುರಂದರ ದಾಸರ ಆರಾಧನಾ ಮಹೋತ್ಸವ: ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಉಪನ್ಯಾಸ: ಅಶೋಕ್ ಹಾರನಹಳ್ಳಿ, ಅಧ್ಯಕ್ಷತೆ: ಪಾವಗಡ ಪ್ರಕಾಶ್ ರಾವ್, ಅತಿಥಿಗಳು: ಶೋಭಾ ಕರಂದ್ಲಾಜೆ, ಚಿಂತಲಪಲ್ಲಿ ವಿ. ಶ್ರೀನಿವಾಸ್, ಆಯೋಜನೆ: ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮಾನುಜ ಸಂಸ್ಕೃತಿ ಭವನ, ಯದುಗಿರಿ ಯತಿರಾಜ ಮಠದ ಆವರಣ, ಮಲ್ಲೇಶ್ವರ, ಸಂಜೆ 4

ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ

ಭಾರತೀಯ ಸಂಸ್ಕೃತಿಯ ದರ್ಶನ, ಎಲ್. ಮುತ್ತೈಯ್ಯ ಭಾಗವತರ್ ಚಾಮುಂಡೇಶ್ವರಿ ಅಷ್ಟೋತ್ತರ ಶತನಾಮ ಕೃತಿಗಳ ಹಾಡುಗಾರಿಕೆ ಮತ್ತು ಧ್ವನಿ ಮುದ್ರಣ ಬಿಡುಗಡೆ: ಅತಿಥಿಗಳು: ಕಾಮಾಕ್ಷಿ ದೇವಿ ಒಡೆಯರ್, ಇಂದ್ರಾಕ್ಷಿ ದೇವಿ ಒಡೆಯರ್, ರಾಜಾಚಂದ್ರ, ಎಂ. ಸೂರ್ಯಪ್ರಸಾದ್, ಆಯೋಜನೆ: ವನಮಾಲ ಸೆಂಟರ್ ಫಾರ್ ಆರ್ಟ್ ಆ್ಯಂಡ್ ಕಲ್ಚರ್ ಟ್ರಸ್ಟ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.15

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಗ್ಯಾಲರಿಯಲ್ಲಿ ಘೋಷಣೆ: ಏಳು ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಸಭೆಯಲ್ಲಿ ಶುಕ್ರವಾರ ಬಜೆಟ್ ಮಂಡಿಸುತ್ತಿದ್ದ ಸಂದರ್ಭದಲ್ಲಿ ಒಳ ಮೀಸಲಾತಿ ಅನುಷ್ಠಾನಕ್ಕೆ ಆಗ್ರಹಿಸಿ ಘೋಷಣೆ ಕೂಗಿದ್ದ ಏಳು ಮಂದಿಯನ್ನು ವಿಧಾನಸೌಧ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಎಚ್‌.ಎಸ್‌.ಆರ್ ಲೇಔಟ್ ನಿವಾಸಿ ಎ.ವಿಜಯಕುಮಾರ್, ಸರ್ಜಾಪುರದ ಎಸ್.ವಿ.ಸುರೇಶ್, ಚೊಕ್ಕಸಂದ್ರದ ಎನ್. ವೇಣುಗೋಪಾಲ್, ಆನೇಕಲ್‌ನ ಎಸ್. ಎಸ್.ವಿಜಯಶೇಖರ್, ಸರ್ಜಾಪುರ ಅಂಬೇಡ್ಕರ್ ಕಾಲೊನಿಯ ಎಸ್. ವಿ.ಶ್ರೀನಿವಾಸ್, ಎಚ್‌.ಎಸ್‌.ಆರ್. ಲೇಔಟ್ ಹೊಸಪಾಳ್ಯ ಮುಖ್ಯರಸ್ತೆಯ ಸತ್ಯೇಂದ್ರಕುಮಾರ್, ಜಾಂಬವನಗರದ ಎಂ.ರಾಜರತ್ನಂ ಬಂಧಿತರು.

ವಿಧಾನಸಭೆಯ ದಂಡನಾಯಕ ಎಚ್.ಎಸ್.ಜಯಕೃಷ್ಣ ಅವರು ಏಳು ಮಂದಿಯ ವಿಚಾರಣೆ ನಡೆಸಿ, ವಿಧಾನಸೌಧ ಠಾಣೆ ಪೊಲೀಸರ ವಶಕ್ಕೆ ನೀಡಿದ್ದು, ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಸಾರ್ವಜನಿಕರ ಗ್ಯಾಲರಿ ಹಾಗೂ ಸಭಾಧ್ಯಕ್ಷರ ಗ್ಯಾಲರಿಯಲ್ಲಿ ಏಳು ಮಂದಿ ಬಜೆಟ್ ಅಧಿವೇಶನದ ವೀಕ್ಷಣೆ ಮಾಡುತ್ತಿದ್ದರು. ಅಲ್ಲಿಂದ ಹೊರಡುವ ವೇಳೆ 'ಸದಾಶಿವ ಆಯೋಗದ ವರದಿ ಜಾರಿಗೊಳಿಸಿ, ಒಳ ಮೀಸಲಾತಿ ಜಾರಿ ಮಾಡಿ' ಎಂಬುದಾಗಿ ಘೋಷಣೆ ಕೂಗಿದ್ದರು. ಅವರನ್ನು ಮಾರ್ಷಲ್‌ಗಳು ವಶಕ್ಕೆ ಪಡೆದುಕೊಂಡರು.

ಸದನದ ನಿಯಮಾವಳಿಗೆಯನ್ನು ಉಲ್ಲಂಘನೆ ಮಾಡುವುದರ ಜತೆಗೆ ಮಾರ್ಷಲ್ ಅಧಿಕಾರಿ ಹಾಗೂ ಸಿಬ್ಬಂದಿಯ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದಾರೆ ಎಂದು ದೂರು ನೀಡಲಾಗಿದೆ.

'ರಾಜರತ್ನಂ ಸೇರಿದಂತೆ ಇಬ್ಬರು ಮಂಜುನಾಥ್ ಎಂಬುವವರ ಹೆಸರಿನಲ್ಲಿ ಪಾಸ್ ಪಡೆದು ವಿಧಾನಸೌಧದ ಗ್ಯಾಲರಿಗೆ ಬಂದಿದ್ದರು. ಉಳಿದ ಐವರು ಯಾರ ಹೆಸರಿನಲ್ಲಿ ಪಾಸ್ ಪಡೆದು ಒಳಕ್ಕೆ ಬಂದಿದ್ದರು ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಬೆಂಗಳೂರಿನಾಚೆ ಚಿತ್ತ

ಕೈಗಾರಿಕೆಗಳು ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದ ಉದ್ದಿಮೆಗಳನ್ನು ಬೆಂಗಳೂರಿನಾಚೆಯ ಎರಡನೇ ಹಂತದ ನಗರಗಳಿಗೆ ಸೆಳೆಯುವ ಯೋಜನೆಗಳೂ ಬಜೆಟ್‌ನಲ್ಲಿವೆ.

ಟೀಕೆ ಹಿಮ್ಮೆಟ್ಟಿಸಲು ಯೋಜನೆ

'ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ' ಎಂಬ ಟೀಕೆಗಳನ್ನು ಬದಿಗೆ ಸರಿಸಲು ಬಜೆಟ್‌ನಲ್ಲಿ ಬಲವಾದ ಪ್ರಯತ್ನ ಮಾಡಿರುವ ಸಿದ್ದರಾಮಯ್ಯ, ₹8,000 ಕೋಟಿ ವೆಚ್ಚದ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯೂ ಸೇರಿದಂತೆ ಹತ್ತು ಹಲವು ಹೊಸ ಯೋಜನೆಗಳನ್ನು ಘೋಷಿಸಿದ್ದಾರೆ. ನಗರಾಭಿವೃದ್ಧಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ಸಂಬಂಧಿಸಿದಂತೆಯೂ ಭರಪೂರ ಘೋಷಣೆಗಳೂ ಇವೆ.

ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳಿಗೆ ಅನುದಾನ ಬಿಡುಗಡೆ ಆಗದಿರುವುದು, ತೆರಿಗೆ ಪಾಲಿನ ಹಂಚಿಕೆಯಲ್ಲಿ ಅನ್ಯಾಯ, ತೆರಿಗೆ ಪಾಲು ನೀಡುವಲ್ಲಿನ ತಾರತಮ್ಯದ ಕುರಿತು ಈ ಬಜೆಟ್‌ನಲ್ಲೂ ಮುಖ್ಯಮಂತ್ರಿಯವರು ಧ್ವನಿ ಎತ್ತಿದ್ದಾರೆ. ಜಲ ಜೀವನ್ ಮಿಷನ್ ಯೋಜನೆಗೆ ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡದಿರುವುದನ್ನು ಪ್ರಸ್ತಾಪಿಸಿದ್ದು, 2025–26ನೇ ಆರ್ಥಿಕ ವರ್ಷದಲ್ಲಿ ಈ ಯೋಜನೆಗೆ ₹6,050 ಕೋಟಿ ಅನುದಾನ ಘೋಷಿಸಿದ್ದಾರೆ. ಆ ಮೂಲಕ ಕೇಂದ್ರ ಸರ್ಕಾರದ ಅಸಹಕಾರದ ಮಧ್ಯೆಯೂ ರಾಜ್ಯ ಸ್ವತಂತ್ರವಾಗಿ ಅಭಿವೃದ್ಧಿ ಯೋಜನೆಗಳನ್ನು ಮುನ್ನಡೆಸಬಲ್ಲುದು ಎಂಬ ಸಂದೇಶ ರವಾನಿಸಲು ಯತ್ನಿಸಿದ್ದಾರೆ.

ಲೋಕೋಪಯೋಗಿ ಇಲಾಖೆಯಿಂದ ವಿವಿಧ ಹಂತದ 6,600 ಕಿ.ಮೀ.ಗೂ ಹೆಚ್ಚು ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಘೋಷಣೆಗಳು ಬಜೆಟ್‌ನಲ್ಲಿವೆ. ಜಲ ಸಂಪನ್ಮೂಲ ಮತ್ತು ಸಣ್ಣ ನೀರಾವರಿ ಇಲಾಖೆಗಳಲ್ಲಿ ಚಾಲ್ತಿಯಲ್ಲಿರುವ 48 ನೀರಾವರಿ ಯೋಜನೆಗಳನ್ನು ಪ್ರಸಕ್ತ ವರ್ಷ ಪೂರ್ಣಗೊಳಿಸುವ ವಾಗ್ದಾನವನ್ನೂ ಮಾಡಲಾಗಿದೆ. ಬೆಂಗಳೂರು ನಗರವೂ ಸೇರಿದಂತೆ ನಗರ ಪ್ರದೇಶಗಳ ಅಭಿವೃದ್ಧಿಗೆ ಹಿಂದಿನ ವರ್ಷಗಳಿಗೆ ಹೋಲಿಸಿದರೆ ದುಪ್ಪಟ್ಟು ಅನುದಾನ ಘೋಷಿಸಲಾಗಿದೆ.

ತಾಯಿ ಮತ್ತು ಶಿಶುಗಳ ಮರಣ ತಗ್ಗಿಸುವುದು, ಮಕ್ಕಳಲ್ಲಿನ ಚಯಾಪಚಯ ಕಾಯಿಲೆಗಳನ್ನು ಪತ್ತೆಹಚ್ಚುವುದು ಸೇರಿದಂತೆ ಹಲವು ಸಮಸ್ಯೆಗಳನ್ನು ಕೇಂದ್ರೀಕರಿಸಿ ಆರೋಗ್ಯ ಇಲಾಖೆಗೆ ಅನುದಾನ ಒದಗಿಸಿದೆ. ಕೆಳಹಂತದಲ್ಲಿ ಆರೋಗ್ಯ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವ ಸಿಬ್ಬಂದಿ ಹಾಗೂ ಅವರ ಅವಲಂಬಿತರಿಗೆ ₹5 ಲಕ್ಷದವರೆಗೆ ನಗದುರಹಿತ ಉಚಿತ ಚಿಕಿತ್ಸೆಗೆ ಪ್ರಕಟಿಸಿರುವ ಯೋಜನೆಯು, ದೊಡ್ಡ ಸಮೂಹಕ್ಕೆ ನೆರವಾಗಲಿದೆ.

ಪ್ರಗತಿಗೆ ಷಟ್ಪಥ: 'ಗ್ಯಾರಂಟಿ'ಯೂ ನಿಶ್ಚಿತ

ಒಂದನೇ ಪುಟದಿಂದ...

ಅದಕ್ಕಾಗಿಯೇ, ರಾಜ್ಯದ ಅಭಿವೃದ್ಧಿಗೆ ಆರು ದಾರಿಗಳನ್ನು ಗುರುತಿಸಿದ್ದು, ಹಾದಿ ಸಾಗುವ ಗುರಿಯನ್ನೂ ತೋರಿಸಿದ್ದಾರೆ.

ಬಹು ಆಯಾಮದ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನೇ ಕೇಂದ್ರೀಕರಿಸುವ ಬಜೆಟ್ ಮಂಡಿಸಿರುವ ಅವರು, 'ಪ್ರಗತಿಯ ಪಥ'ದತ್ತ ನಾಡನ್ನು ಕರೆದೊಯ್ಯುವ ಸಂಕಲ್ಪ ಮಾಡಿದಂತಿದ್ದಾರೆ. ಮೀನುಗಾರಿಕಾ ದೋಣಿಗಳ ಉದ್ದದ ವಿಷಯದಲ್ಲಿ ಇರುವ ನಿರ್ಬಂಧವನ್ನು ಸಡಿಲಿಸುವುದಾಗಿ ಘೋಷಿಸಿರುವುದು ಬಜೆಟ್‌ನ ಆಶಯದ ರೂಪಕದಂತೆ ಭಾಸವಾಗುತ್ತದೆ. ವಿಶಾಲ ಸಮುದ್ರದಲ್ಲಿ ಬದುಕಿನ ಬಂಡಿಯನ್ನು ವಿಸ್ತರಿಸಿಕೊಂಡು ಹೋಗಲು ಅವಕಾಶ ಕಲ್ಪಿಸುವ ದೋಣಿಯಂತೆ, ತಮ್ಮ ಬಜೆಟ್ ಕೂಡ ಸರ್ವರಿಗೂ ಭವಿಷ್ಯ ಕಟ್ಟಿಕೊಳ್ಳುವ ಅವಕಾಶದ ವಿಸ್ತರಣೆಯಂತಿದೆ ಎಂದು ಪ್ರತಿಪಾದಿಸಿದಂತಿದೆ.

ನೂರಾರು ವಸತಿ ಶಾಲೆಗಳ ಕಟ್ಟಡ ನಿರ್ಮಾಣ, ವಸತಿಯುತ ಪಿಯು ಕಾಲೇಜುಗಳ ಆರಂಭ, ದೇಶ ಮತ್ತು ವಿದೇಶಗಳ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುವವರಿಗೆ ಆರ್ಥಿಕ ನೆರವು, ಕೃತಕ ಬುದ್ಧಿಮತ್ತೆ, ಕೋಡಿಂಗ್‌ನಂತಹ ತಂತ್ರಜ್ಞಾನಗಳ ಕಲಿಕೆಗೆ ಪ್ರಾಥಮಿಕ ಶಿಕ್ಷಣದ ಹಂತದಲ್ಲೇ ವಿದ್ಯಾರ್ಥಿಗಳನ್ನು ತಯಾರು ಮಾಡುವಂತಹ ಯೋಜನೆಗಳು ಇಡೀ ಬಜೆಟ್‌ನ ಗುರಿ ಗುಣಮಟ್ಟದ ಮಾನವ ಸಂಪನ್ಮೂಲ ಸೃಷ್ಟಿಯೆಡೆಗೆ ನೆಟ್ಟಿದೆ ಎಂಬುದನ್ನು ಸೂಚಿಸುವಂತಿವೆ.

ಐದು ಗ್ಯಾರಂಟಿ ಯೋಜನೆಗಳ ಆರ್ಥಿಕ ಭಾರ ಹಿಂದಿನ ಎರಡು ವರ್ಷಗಳಿಗಿಂತಲೂ ಹೆಚ್ಚಾಗಬಹುದು ಎಂಬ ನಿರೀಕ್ಷೆ ಇತ್ತು. ಆದರೆ, ಗ್ಯಾರಂಟಿಗಳ ಒಟ್ಟು ವೆಚ್ಚವನ್ನು ₹51,034 ಕೋಟಿಗಳಿಗೆ ನಿರ್ಬಂಧಿಸಿದ್ದು, ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ₹975 ಕೋಟಿ ಉಳಿತಾಯವಾಗಲಿದೆ. ಈ ಬಾರಿಯ ಬಜೆಟ್ ಗಾತ್ರ ₹4.09 ಲಕ್ಷ ಕೋಟಿಯಷ್ಟಿದ್ದು, ₹19,262 ಕೋಟಿ ರಾಜಸ್ವ ಕೊರತೆ ಮತ್ತು ₹90,428 ಕೋಟಿ ವಿತ್ತೀಯ ಕೊರತೆ ಇದೆ. ಇದನ್ನು ಭರಿಸಲು ₹1.16 ಲಕ್ಷ ಕೋಟಿಯಷ್ಟು ಸಾಲ ಪಡೆಯುವ ಪ್ರಸ್ತಾವವನ್ನು ಮಾಡಿದ್ದು, ಇದರೊಂದಿಗೆ ರಾಜ್ಯದ ಒಟ್ಟು ಸಾಲದ ಮೊತ್ತ ₹7.64 ಲಕ್ಷ ಕೋಟಿಗೆ ತಲುಪಲಿದೆ.

ಎಸ್‌ಸಿಎಸ್‌ಪಿ ಯೋಜನೆಗೆ ಒಟ್ಟು ₹42,018 ಕೋಟಿ ಒದಗಿಸಲಾಗಿದೆ. ಉಳಿದಂತೆ ಎಲ್ಲ ಸಮುದಾಯಗಳಿಗೂ ಬಜೆಟ್‌ನಲ್ಲಿ ಪಾಲು ದೊರಕಿಸುವ ಪ್ರಯತ್ನ ಮಾಡಲಾಗಿದೆ. ಜಾತಿವಾರು ಮಠ– ಮಂದಿರಗಳಿಗೆ ಈ ಬಾರಿ ಅನುದಾನ ಘೋಷಿಸಿಲ್ಲ.

ಹಿಂದುಳಿದವರು, ಅಲ್ಪಸಂಖ್ಯಾತರಿಗೆ ಬಲ

ಕೆಐಎಡಿಬಿ ನಿರ್ಮಿಸುವ ಕೈಗಾರಿಕಾ ಬಡಾವಣೆಗಳಲ್ಲಿ ಶೇಕಡ 20ರಷ್ಟು ನಿವೇಶನಗಳನ್ನು ಹಿಂದುಳಿದ ವರ್ಗಗಳ ಪ್ರವರ್ಗ–1, ಪ್ರವರ್ಗ–2 ಮತ್ತು ಅಲ್ಪಸಂಖ್ಯಾತರಿಗೆ (ಪ್ರವರ್ಗ 2–ಬಿ) ಮೀಸಲಿಡುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಈವರೆಗೆ ಕೈಗಾರಿಕಾ ನಿವೇಶನಗಳ ಹಂಚಿಕೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮಾತ್ರ ಮೀಸಲಾತಿ ಇತ್ತು. ಸರ್ಕಾರದ ವಿವಿಧ ಇಲಾಖೆಗಳ ಕಾಮಗಾರಿಗಳ ಗುತ್ತಿಗೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರಿಗೆ ಮೀಸಲಾತಿ ಒದಗಿಸುವುದಾಗಿ ಘೋಷಿಸಲಾಗಿದೆ. ಗುತ್ತಿಗೆಯಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಾತಿ ಒದಗಿಸುವ ಘೋಷಣೆಯನ್ನು ಬಜೆಟ್‌ನಲ್ಲೇ ಮಾಡಿದ್ದು, ಮೀಸಲು ಒದಗಿಸುವ ಕಾಮಗಾರಿಗಳ ವೆಚ್ಚದ ಮಿತಿಯನ್ನು ₹1 ಕೋಟಿಯಿಂದ ₹2 ಕೋಟಿಗೆ ಹೆಚ್ಚಿಸಲಾಗಿದೆ. ₹1 ಕೋಟಿವರೆಗಿನ ಸರಕು ಮತ್ತು ಸಂಗ್ರಹಣೆಗಳ ಟೆಂಡರ್ ಪ್ರಕ್ರಿಯೆಗೂ ಈ ಮೀಸಲಾತಿಯನ್ನು ಅನ್ವಯಿಸಲಾಗಿದೆ.

ಸಿದ್ಧಲಿಂಗ ಪಟ್ಟಣಶೆಟ್ಟಿಗೆ ಅನುವಾದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ ಅನುವಾದ ಪ್ರಶಸ್ತಿಗೆ ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ 'ವಿದಿಶಾ ಪ್ರಹಸನ' ಕೃತಿ ಆಯ್ಕೆಯಾಗಿದೆ.

ಈ ಕೃತಿಯು ಕಾಳಿದಾಸನ 'ಮಾಲವಿಕಾಗ್ನಿಮಿತ್ರಮ್'ನ ರಂಗಾನುವಾದ. ಅಕಾಡೆಮಿ ಅಧ್ಯಕ್ಷ ಮಾಧವ ಕೌಶಿಕ್ ನೇತೃತ್ವದ ಕಾರ್ಯಕಾರಿ ಸಮಿತಿಯು ಶುಕ್ರವಾರ ಸಭೆ ಸೇರಿ 2024ನೇ ಸಾಲಿನ ಅನುವಾದ ಪ್ರಶಸ್ತಿ ಪಟ್ಟಿಗೆ ಅನುಮೋದನೆ ನೀಡಿತು. 21 ಭಾಷೆಗಳ ಲೇಖಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕನ್ನಡ ವಿಭಾಗದಲ್ಲಿ ಲೇಖಕರಾದ ಡಾ.ಧರಣೇಂದ್ರ ಕುರಕುರಿ, ಎಚ್.ಎಲ್. ಪುಷ್ಪಾ ಹಾಗೂ ಡಾ.ನಾ.ದಾಮೋದರ ಶೆಟ್ಟಿ ತೀರ್ಪುಗಾರರಾಗಿದ್ದರು.

ಪ್ರಶಸ್ತಿಯು ₹50 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ. ಈ ವರ್ಷಾಂತ್ಯದೊಳಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅಕಾಡೆಮಿ ಪ್ರಕಟಣೆ ತಿಳಿಸಿದೆ.

ಹಿರಿಯ ಸಾಹಿತಿ ಡಾ.ಎಸ್.ಎಲ್. ಭೈರಪ್ಪ ಅವರ 'ಯಾನ' ಕಾದಂಬರಿಯನ್ನು ಅನುವಾದಿಸಿದ ಕೆ.ವಿ.ಕುಮಾರನ್ ಅವರಿಗೆ ಮಲಯಾಳ ವಿಭಾಗದಲ್ಲಿ, ಲೇಖಕಿ ಸುಧಾಮೂರ್ತಿ ಅವರ 'ಡಾಲರ್ ಬಹು' ಹಿಂದಿ ಕಾದಂಬರಿಯನ್ನು ಭಾಷಾಂತರಿಸಿದ ಲೇಖಕಿ ಶೋಭಾ ಲಾಲ್‌ಚಂದಾನಿ ಅವರಿಗೆ ಸಿಂಧಿ ಭಾಷಾ ವಿಭಾಗದಲ್ಲಿ ಪ್ರಶಸ್ತಿಗಳು ದೊರಕಿವೆ.

ತುಂಬಾ ಮುಂಚೆಯೇ ಪ್ರಶಸ್ತಿ ಬರಬೇಕಿತ್ತು: ಪಟ್ಟಣಶೆಟ್ಟಿ

ಧಾರವಾಡ: 'ಪ್ರಶಸ್ತಿ ಸಂದಿದ್ದು ಸಂತಸ ತಂದಿದೆ. ತುಂಬಾ ಮುಂಚೆಯೇ ಪ್ರಶಸ್ತಿ ಬರಬೇಕಿತ್ತು. ಬರುವುದೇನುಂಟು ಬರುವ ಕಾಲಕ್ಕೆ ಬಹುದು ಎಂದು ಕೆಲಸ ಮಾಡುತ್ತೇನೆ. ಪ್ರತಿಫಲ ಅಪೇಕ್ಷೆ ಇಲ್ಲ' ಎಂದು ಸಿದ್ಧಲಿಂಗ ಪಟ್ಟಣಶೆಟ್ಟಿ ತಿಳಿಸಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ ಅನುವಾದ ಪ್ರಶಸ್ತಿ ಸಂದಿರುವ ಹಿನ್ನೆಲೆಯಲ್ಲಿ 'ಪ್ರಜಾವಾಣಿ' ಯೊಂದಿಗೆ ಮಾತನಾಡಿದ ಅವರು, 'ಕೃತಿ ಯಲ್ಲಿ ಹಾಡುಗಳನ್ನು ಸ್ವತಃ ಬರೆದಿದ್ದೇನೆ. ರಂಗಕರ್ಮಿ ಚಿದಂಬರ ರಾವ್ ಜಂಬೆ ಅವರ ನಿರ್ದೇಶನದಲ್ಲಿ ಈ ನಾಟಕ ಪ್ರದರ್ಶನವಾಗಿತ್ತು. ರಂಗಾಯಣದ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ್ದರು. ಧಾರವಾಡದಲ್ಲಿ ಎರಡು, ಬೆಂಗಳೂರಿನಲ್ಲಿ ಒಮ್ಮೆ ಪ್ರದರ್ಶನ ನಡೆದಿತ್ತು. ಕನ್ನಡ ಗೊತ್ತಿಲ್ಲದ ಕಲಾವಿದರಿಗೆ ಬೆಂಗಳೂರಿನಲ್ಲಿ ಕನ್ನಡ ಕಲಿಸಿ ಪಾತ್ರ ಮಾಡಿಸಿದ್ದರು' ಎಂದರು.

ಯಾವ ಕೃತಿಯನ್ನೂ ಅನಗತ್ಯವಾಗಿ ಬರೆದಿಲ್ಲ, ಅನುವಾದಿಸಿಲ್ಲ. ಎಲ್ಲ ಕೃತಿಗಳನ್ನು ಪ್ರೀತಿಯಿಂದಲೇ ರಚಿಸಿದ್ದೇನೆ. ಬರವಣಿಗೆ ಖುಷಿ ನೀಡುತ್ತದೆ

ಸಿದ್ಧಲಿಂಗ ಪಟ್ಟಣಶೆಟ್ಟಿ, ಸಾಹಿತಿ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002.
ದೂರವಾಣಿ : 080–26700810, ಟೆಲಿ ಫ್ಯಾಕ್ಸ್: 080–26704342 ಇ–ಮೇಲ್: director_bmcri@yahoo.co.in

ಸಂಖ್ಯೆ: ಬೆಂವೈವಿಸಂಸಂ/ಕಟ್ಟಡ/69/2024–25 ದಿನಾಂಕ: 06–03–2025

ಇ–ಟೆಂಡರ್ ಅಧಿಸೂಚನೆ

ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಕಾಯಿದೆ 1999 ರ ಪ್ರಕಾರ **ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಅಧೀನದಲ್ಲಿ ಬರುವ ಆಸ್ಪತ್ರೆಗಳು ಹಾಗೂ ಗ್ರಂಥಾಲಯ ಕಟ್ಟಡಗಳಲ್ಲಿ ಕೀಟನಾಶಕ ಸಿಂಪಡಣೆ (ಪೆಸ್ಟ್ ಕಂಟ್ರೋಲ್) ಸೇವೆಗಳನ್ನು ಪಡೆಯಲು** ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **10–03–2025** ರಿಂದ ಡೌನ್‌ಲೋಡ್ ಮಾಡಬಹುದು ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **24–03–2025 ರಂದು ಸಂಜೆ 5.00 ಗಂಟೆಯವರೆಗೆ.** ಇ.ಎಂ.ಡಿ ಯೊಂದಿಗೆ ಸಲ್ಲಿಸದ ಟೆಂಡರ್‌ಗಳನ್ನು ತಿರಸ್ಕರಿಸಲಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ **ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು** ಇವರನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು ಹಾಗೂ ಡೀನ್,
ಬೆಂವೈವಿಸಂಸಂ, ಬೆಂಗಳೂರು.

ವಾಸಾಸಂಇ/ವಾ.ಪ್ರ/5514/ಅಡ್ವರ್ಟೋರ್/2024–25

ಪಟ್ಟಣ ಪಂಚಾಯತ ಕಾರ್ಯಾಲಯ, ಯಕ್ಸಂಬಾ
TOWN PANCHAYAT, EXAMBA
Tal : CHOKODI Dist: BELGAVI
Website : www.exambatown.gov.in E-mail: itstaff_ulb_examba@yahoo.com

ಕ್ರಮ: ಪ.ಪಂಯ/ಎಸ್.ಎಫ್.ಸಿ.ವಿ–3/2024–25/ ದಿನಾಂಕ: 03–03–2025

ಟೆಂಡರ ಪ್ರಕಟಣೆ

ಯಕ್ಸಂಬಾ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಪಟ್ಟಣ ಪಂಚಾಯತಿ ಎಸ್.ಎಫ್.ಸಿ ವಿಶೇಷ ಅನುದಾನ ಅಡಿಯಲ್ಲಿ ಈ ಕೆಳಗೆ ವಿವರಿಸಿದ ಕಾಮಗಾರಿಗಳಿಗೆ ಲೋಕೋಪಯೋಗಿ/ ಪಂಚಾಯತರಾಜ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಡಬ್ಲ್ಯೂ–2, ಕೆಡಬ್ಲ್ಯೂ–3 ಮತ್ತು ಕೆಡಬ್ಲ್ಯೂ–4 ರ ಪ್ರಕಾರ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ಅಂದಾಜು ಮೊತ್ತ ರೂ. 50.0 ಇರುತ್ತದೆ.

ಭರ್ತಿ ಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 10/03/2025 ಸಾಯಂಕಾಲ 4.00 ಘಂಟೆಯವರೆಗೆ.

ತಾಂತ್ರಿಕ ಟೆಂಡರ ಬಿಡ್‌ಗಳನ್ನು ತೆರೆಯುವ ದಿನಾಂಕ: 12/03/2025 ರಂದು ಮಧ್ಯಾಹ್ನ 11.00 ನಂತರ ತೆರೆಯಲಾಗುವುದು.

ಆರ್ಥಿಕ ಟೆಂಡರ ಬಿಡ್‌ಗಳನ್ನು ತೆರೆಯುವ ದಿನಾಂಕ: 13/03/2025 ರಂದು ಮಧ್ಯಾಹ್ನ 11.00 ನಂತರ ತೆರೆಯಲಾಗುವುದು.

ಹೆಚ್ಚಿನ ಮಾಹಿತಿ ಕುರಿತು ಇ–ಪ್ರೊಕ್ಯೂರಮೆಂಟ್ ವೆಬ್‌ಸೈಟ್ https://www.eproc.karnataka.gov.in ಲಾಗಿನ್ ಆಗಿ, ಕಚೇರಿ ವೆಬ್‌ಸೈಟ್ www.exambatown.mrc.gov.in ನಲ್ಲಿ ಅಥವಾ ಪಟ್ಟಣ ಪಂಚಾಯತ ಕಾರ್ಯಾಲಯವನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ, ಯಕ್ಸಂಬಾ
ಸಹಿ/– ಅಧ್ಯಕ್ಷರು, ಪಟ್ಟಣ ಪಂಚಾಯತ, ಯಕ್ಸಂಬಾ

dipo/ro no-1842/2024-25

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಮಂಡ್ಯ

ಸಂಖ್ಯೆ:ಆಡಳಿತ:ಸಿಬ್ಬಂದಿ:ನೇಮಕಾತಿ:72:2024–25 ದಿನಾಂಕ : 07–03–2025

ಪ್ರಕಟಣೆ

ಬ್ಯಾಂಕಿನಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳನ್ನು ನೇಮಕಾತಿ ಮಾಡುವ ಸಂಬಂಧ ನಡೆಸಲಾಗಿದ್ದ ಲಿಖಿತ ಪರೀಕ್ಷೆಯ ತಾತ್ಕಾಲಿಕ ಫಲಿತಾಂಶವನ್ನು ಹುದ್ದೆವಾರು ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ www.mandyadccbank.com ರಲ್ಲಿ ಭೇಟಿ ನೀಡಿ ತಾತ್ಕಾಲಿಕ ಫಲಿತಾಂಶದ ಹೆಚ್ಚಿನ ವಿವರವನ್ನು ಪಡೆದುಕೊಳ್ಳಲು ಪ್ರಕಟಿಸಲಾಗಿರುತ್ತದೆ.

ಸಹಿ/– ಮುಖ್ಯಕಾರ್ಯನಿರ್ವಹಣಾಧಿಕಾರಿ

ಭಾರತ ಸರ್ಕಾರ
ಸಂವಹನ ಸಚಿವಾಲಯ
ದೂರಸಂಪರ್ಕ ಇಲಾಖೆ
ಸಂವಹನ ಖಾತೆಗಳ ನಿಯಂತ್ರಕ ಕಚೇರಿ
ಕರ್ನಾಟಕ ವೃತ್ತ, ಅರಮನೆ ರಸ್ತೆ, ಬೆಂಗಳೂರು

ನಿವೃತ್ತಿ ವೇತನದಾರರ ಪಿಂಚಣಿ ಆದಾಲತ್ ನಡೆಸುವ ಸಂಬಂಧ ಪ್ರಕಟಣೆ
(ಬಿಎಸ್‌ಎನ್‌ಎಲ್/ಟೆಲಿಕಾಂ ಪಿಂಚಣಿದಾರರ ಗಮನಕ್ಕೆ)

39ನೇ ಪಿಂಚಣಿ ಅದಾಲತ್‌ಅನ್ನು ಕರ್ನಾಟಕ ವಲಯದ ದೂರಸಂಪರ್ಕ ಇಲಾಖೆ ಅಥವಾ ಬಿಎಸ್‌ಎನ್‌ಎಲ್ ನಿಂದ ನಿವೃತ್ತಿಯಾದವರಿಗೆ ಮಾರ್ಚ್–2025 ರಂದು ನಡೆಸಲು ಉದ್ದೇಶಿಸಲಾಗಿದೆ. ಸಂಬಂಧ ಪಟ್ಟಂತಹ ನಿವೃತ್ತಿದಾರರು/ ಕುಟುಂಬ ಪಿಂಚಣಿದಾರರು ತಮ್ಮ ಅಹವಾಲುಗಳನ್ನು ತಮ್ಮ PPO ವಿವರಗಳೊಂದಿಗೆ ಅಂಚೆ ಅಥವಾ ಇ–ಮೇಲ್ ಮೂಲಕ (jtcca1.ka-dot@gov.in) ದಿನಾಂಕ 14/03/2025ರ ಒಳಗೆ ಸಲ್ಲಿಸಬಹುದು. ನ್ಯಾಯಾಲಯಕ್ಕೆ ಸಂಬಂಧಿಸಿದ ಹಾಗೂ ಉತ್ತರಾಧಿಕಾರಿ ಸಂಬಂಧಿತ ಅಥವಾ ನೀತಿ/ ನಿಯಮಾವಳಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–ಜಂಟಿ ದೂರಸಂಪರ್ಕ ಲೆಕ್ಕ ನಿಯಂತ್ರಕರು

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) AL_DOST_GOODS
YOM – -
Reg No – KA07B7593
2) CB_TATA 3118_T_LPT_CHASSIS
YOM – 2018
Reg No – KA634554
3) CB_EXCAVATOR_HYUN_R85A_HYUNDAI
YOM – 2024
Engine No 4H22982420011
4) CB_BOLERO PICK UP Refrigerated
YOM – 2022
Reg No – KA50B1842
5) CB_MAH_JEETO
YOM – 2023
Reg No – KA21C6026
6) CB_TATA 3118_T_LPT_CHASSIS
YOM – 2015
Reg No – KA23A7964
7) CB_Tata SFC 407 Fully Built
YOM – 2022
Reg No – KA03AK1380
8) CB_TATALPT_4225_CHASIS_GOODS
YOM – 2024
Reg No – KA30A6118
9) CB_BOLERO PIK UP all Varients
YOM – 2023
Reg No – KA05AM7920
10) CB_EICHER_PRO_2110_E_BS_6_CAB_CHASSIS
YOM – 2024
Reg No – KA05AN9648
11) CB_BACKHOE_LOADER_SD76_BHL_BULL
YOM – 2024
Reg No – KA51MX6508
12) CB_EICHER_PRO_2110_E_BS_6_CAB_CHASSIS
YOM – 2022
Reg No – KA52B6037
13) CB_Mahindra Maxximo Goods
YOM – 2023
Reg No – KA16AA7525
14) CB_TATA INTRA V30_COMMERCIAL VEHICLE
YOM – 2023
Reg No – KA52C3076
15) AL_DOST_GOODS
YOM – 2024
Reg No – KA07B9358
16) CB_ASHOK_LEYLAND_DOST_PLUS_LS_CABIN_CHASSIS
YOM – 2023
Reg No – KA54A0020
17) CB_EXCAVATOR_LIU_908_LIUGONG
YOM – 2023
Chassis No 908L23JR00868
Engine No 95322A
18) CB_CASE 770 BACKHOE LOADER
YOM – 2020
Reg No – KA43N1654
19) CB_AL_4825_CHASSIS
YOM – -
Reg No – KA16AB1989
20) CB_JS205
YOM – 2024
Chassis No PUNJD20AVR3272957
Engine No 84560121
21) CB_KOMATSU_HYDRAULIC_EXCAVATOR_MODEL_PC_130_7
YOM – 2019
Engine No N521819
22) Excavator - KOBELCO - CB_SK380_EXC
YOM – 2019
CHASSIS - J08ETM32521
Engine No J08ETM32521
(As is where is condition)
Reserve price 23,75,784.99

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"
INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 08.03.2025
(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249

ಕರ್ನಾಟಕ ಸರ್ಕಾರ
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ–ಮೇಲ್: directorgimsgulbarga@gmail.com ದೂ.08472–260252

ಸಂಖ್ಯೆ: GIMS/KLB/Tender/OS-1/CR/178/2024-25/2564 ದಿನಾಂಕ:–05/03/2025

:: ಟೆಂಡರ ಪ್ರಕಟಣೆ ::

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಗೆ 2025–26 ನೇ ಸಾಲಿಗೆ ಅವಶ್ಯಕವಿರುವ ವಿವಿಧ 222 ಗ್ರೂಪ್–ಸಿ ಹುದ್ದೆಗಳನ್ನು ಹೊರಮಾನವ ಸಂಪನ್ಮೂಲ ಸಂಸ್ಥೆಯಿಂದ ಸೇವೆಯನ್ನು ಪಡೆಯಲು ಒಂದು ವರ್ಷಧ ಅವಧಿಗೆ ಅಧಿಕೃತ ಏಜೆನ್ಸಿ (ಸಂಸ್ಥೆ) ಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: No. GIMS/KLB/Tender/OS-1/CR/178/2024-25, Date: 05/03/2025, DME/2024-25/SE0419. 2) ಆನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು ಇ–Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **04–04–2025 ಸಾಯಂಕಾಲ 4:30ಕ್ಕೆ.** 3) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **17–03–2025 ಸಾಯಂಕಾಲ 5.00 ಗಂಟೆಯವರೆಗೆ,** 4) ಟೆಂಡರ ಪೂರ್ವಭಾವಿ ಸಭೆ: **ದಿನಾಂಕ: 19–03–2025 ಮಧ್ಯಾಹ್ನ 12:30ಕ್ಕೆ,** 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **05–04–2025 ಸಾಯಂಕಾಲ 5:00ಕ್ಕೆ,** 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: **07–04–2025 11:30ಕ್ಕೆ,** 7) ಟೆಂಡರನ ಮೊತ್ತ: ರೂ. **4,69,70,381/-,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: **ರೂ. 9,40,000/–,** 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472–260252, Office Email: directorgimsgulbarga@gmail.com Cell:+91 9482093568 Tender Section Email: gimstenderklb22@gmail.com Cell:+91 9972688602

ಸಹಿ/– ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/1056/ಕೆ.ಎಸ್.ಎಂ.ಸಿ.&ಎ/2024–25

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
ಬಿಎಂಸಿ&ಆರ್‌ಐ (ಹಳೇ ಕಟ್ಟಡ), 1ನೇ ಮಹಡಿ, ಫೋರ್ಟ್, ಕೆ.ಆರ್. ರಸ್ತೆ, ಬೆಂಗಳೂರು – 560002. ಫೋನ್: 080–22870060, ಫ್ಯಾಕ್ಸ್: 080–22875798
ಇ–ಮೇಲ್: dmekarnataka@yahoo.com

No: ME/Tender/10/2024-25 Date: 06-03-2025

ಅಲ್ಪಾವಧಿ ಮರು ಇ–ಟೆಂಡರ್ ಅಧಿಸೂಚನೆ – (ಎರಡು ಕವರ್ ಪದ್ಧತಿ)
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಟ್ರಾಮಾಕೇರ್ ಸೆಂಟರ್ ಬಿಎಂಸಿಆರ್‌ಐ, ಬೆಂಗಳೂರು ಸಂಸ್ಥೆಗೆ ಅಗತ್ಯವಿರುವ MRI ಉಪಕರಣವನ್ನು ಖರೀದಿಸುವ ಸಲುವಾಗಿ ಪ್ರತಿಷ್ಠಿತ ತಯಾರಕರು / ಅಧಿಕೃತ ಪ್ರತಿನಿಧಿಗಳಿಂದ ಅಲ್ಪಾವಧಿ ಮರು ಟೆಂಡರ್‌ನ್ನು ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್ ಫಾರಂ, ಇಎಂಡಿ ಮತ್ತು ಷರತ್ತು ಮುಂತಾದ ವಿವರಗಳನ್ನು ವೆಬ್‌ಸೈಟ್: **https://www.kppp.karnataka.gov.in** ನಲ್ಲಿ ವೀಕ್ಷಿಸಿ, ಡೌನ್‌ಲೋಡ್ ಮಾಡಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬಹುದಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು.

ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 07–03–2025.	
ಪೂರ್ವಭಾವಿ ಸಮಿತಿ ಸಭೆ ದಿನಾಂಕ: 11–03–2025 ಅಪರಾಹ್ನ 3.00 ಗಂಟೆಗೆ.	
ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 14–03–2025 ಅಪರಾಹ್ನ 4.30 ಗಂಟೆಗಿಂತಲೂ ಮುಂಚಿತವಾಗಿ.	
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 17–03–2025 ಪೂರ್ವಾಹ್ನ 11.30 ಗಂಟೆಗೆ.	

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿಎಂಸಿ&ಆರ್‌ಐ (ಹಳೇ ಕಟ್ಟಡ), 1ನೇ ಮಹಡಿ, ಫೋರ್ಟ್, ಕೆ.ಆರ್. ರಸ್ತೆ, ಬೆಂಗಳೂರು – 560002 ಇವರನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

ವಾಸಾಸಂಇ/ವಾ.ಪ್ರ/5521/ಅಡ್ವರ್ಟೋರ್/2024–25

EMPLOYEES' PROVIDENT FUND ORGANIZATION
(Ministry of Labour & Employment, Govt. of India)
Regional Office, Rajarajeshwari Nagar
570, R.R. Regency, 26th Cross, Ideal Homes Layout, R.R. Nagar, Bangalore - 560 098. Tel: 080-28603108/125,
E-mail: ro.rrnagar@epfindia.gov.in, Website: www.epfindia.gov.in

No. BG/MRD/COMP/2024-25 Dated: 04.03.2025

SUBSTITUTED SUMMONS

In the matter of proceedings under section 7A/14B/7Q of the Employees' Provident Fund and Miscellaneous Provision Act, 1952. Whereas an enquiry against the following establishments under section 7A/14B/7Q (as the case may be) of the Act for non-payment of statutory dues was initiated.

And whereas, the Department has sent the notices to the establishments as well as to the employer's residential address, however the notices got undelivered. Now, therefore notice is hereby given to the employers in relation to the below mentioned establishments and are directed to appear before the Assessing Officer on 21.03.2025 at the address mentioned above.

SL. NO.	ESTABLISHMENT CODE	ESTABLISHMENT NAME	INQUIRY UNDER SECTION
1	BGMRD2708720000	SRI SAI ENTERPRISES	7A
2	BGMRD1380066000	SAMSKY CONFECTIONERIES INDIA PVT LTD	14B
3	BGMRD1827256000	PANCHAMUKHI TOURS & TRAVELS	14B
4	BGMRD1603169000	INDIAN FINISHING TECHNOLOGIES	14B

Any person who has information about the whereabouts of the establishment and/or employer of the establishments mentioned above may send the information by post or in person to the Employees' Provident Fund Organization at the address mentioned above, on or before 21.03.2025.

In case, In the event of nonappearance on the said date, proceedings would be concluded on exparte basis.

(RAJESH CHANDRA BODDEDA)
Regional PF Commissioner-I
Assessing Officer
RO, Rajarajeshwari Nagar

ಅರಣ್ಯ ಇಲಾಖೆ
ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ (ಸಾಮಾಜಿಕ ಅರಣ್ಯ & ಯೋಜನೆಗಳು),
5ನೇ ಮಹಡಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003

No.KFD-SFAP/A1(BGT)/6/2025-Projects-KFD/E-1695953 Date: 07.03.2025

ಜಾಹೀರಾತು

ಕೃಷಿ ಹಾಗೂ ರೈತರ ಕಲ್ಯಾಣ, ಕೃಷಿ ಇಲಾಖೆ, ಸಹಕಾರ & ರೈತರ ಕಲ್ಯಾಣ ಸಚಿವಾಲಯ, ಕೃಷಿ ಭವನ, ನವದೆಹಲಿ ಇವರ ಅಡಿಯಲ್ಲಿ ಕರ್ನಾಟಕ ರಾಜ್ಯದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಕೃಷಿ ಅರಣ್ಯ (Agroforestry) ಯೋಜನೆಯ ಅಂಗದ 2025–26ನೇ ಸಾಲಿಗೆ ಗುತ್ತಿಗೆ ಆಧಾರದ ಮೇಲೆ ರಾಜ್ಯ ಮಟ್ಟದ ಸಲಹಾಗಾರ / ತಾಂತ್ರಿಕ ಸಮಾಲೋಚಕರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆ	ವಿದ್ಯಾರ್ಹತೆ, ಅನುಭವ ಹಾಗೂ ಅಗತ್ಯತೆಗಳು	ಸೂಚಿತ ಮಾಸಿಕ ದರ
1	ರಾಜ್ಯ ಮಟ್ಟದ ಸಲಹಾಗಾರರು / ತಾಂತ್ರಿಕ ಸಮಾಲೋಚಕರ	ಎಂ.ಎಸ್.ಸಿ. (ಫಾರೆಸ್ಟ್ರಿ) ಕೃಷಿ ಅರಣ್ಯ (Agroforestry) ಚಟುವಟಿಕೆಗಳಲ್ಲಿ ಕನಿಷ್ಠ 5 ವರ್ಷಗಳ ಅನುಭವವಿರಬೇಕು ಅಥವಾ ನಿವೃತ್ತ ಅರಣ್ಯಾಧಿಕಾರಿಗಳು ಕರ್ನಾಟಕ ಅರಣ್ಯ ಇಲಾಖೆಯಲ್ಲಿ ರಾಜ್ಯದ ಕೃಷಿ ಅರಣ್ಯ (Agroforestry) ಚಟುವಟಿಕೆಗಳಲ್ಲಿ ಉತ್ತಮ ಅನುಭವವುಳ್ಳವರು ಜೊತೆಗೆ ವಿಜ್ಞಾನ ಸ್ನಾತಕೋತ್ತರ ಪದವಿಯ ಕನಿಷ್ಠ ವಿದ್ಯಾರ್ಹತೆ ಹೊಂದಿರಬೇಕು ಮತ್ತು 30 ವರ್ಷಗಳ ಸೇವೆ ಸಲ್ಲಿಸಿರಬೇಕು. **ಅಗತ್ಯತೆಗಳು:** ➤ ಸಮಾಲೋಚಕರು / ಸಲಹಾಗಾರರನ್ನು ಆರಂಭಿಕ 1 ವರ್ಷಕ್ಕೆ ನೇಮಿಸಲಾಗುವುದು. ಇವರ ಸಾಧನೆಯನ್ನು ಪರಿಗಣಿಸಿ, ಅವಧಿಯನ್ನು ವಾರ್ಷಿಕ ಆಧಾರದ ಮೇಲೆ ವಿಸ್ತರಿಸಲಾಗುವುದು. ➤ ಆಡಳಿತ / ಕ್ಷೇತ್ರ ಜ್ಞಾನದ ಬಗ್ಗೆ ಪರಿಣಿತಿ ಹೊಂದಿರಬೇಕು ➤ ಬೆಂಗಳೂರು ಮೂಲದವರಾಗಿರಬೇಕು ➤ ಬೆಂಗಳೂರಿನ ಪ್ರಧಾನ ಕಛೇರಿಯಲ್ಲಿ ಕಾರ್ಯನಿರ್ವಹಿಸಬೇಕು	ರೂ.65,000/– ಪ್ರತಿ ತಿಂಗಳಿಗೆ ಅಥವಾ ಭಾರತ ಸರ್ಕಾರದ ಕೃಷಿ ವಿಕಾಸ ಯೋಜನೆಯ ನಿಯಮಾನುಸಾರ

ಅರ್ಹ ಅಭ್ಯರ್ಥಿಗಳು ರೆಸ್ಯೂಮ್ (ವಿವರಗಳನ್ನು) ಭಾವಚಿತ್ರದೊಂದಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ ಯೋಜನೆಗಳು) ಇವರಿಗೆ ಇ–ಮೇಲ್ apccfsf@gmail.com ಮೂಲಕ 24ನೇ ಮಾರ್ಚ್ 2025 ರಂದು ಅಥವಾ ಮುಂಚಿತವಾಗಿ ತಲುಪಿಸಬೇಕು.

ಸಹಿ/– ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
(ಸಾಮಾಜಿಕ ಅರಣ್ಯ & ಯೋಜನೆಗಳು), ಬೆಂಗಳೂರು

ವಾಸಾಸಂಇ/ವಾಪ್ರ/5532/ಅಕಾರ್/2024–25

ಕರ್ನಾಟಕ ಸರ್ಕಾರ
ಕರ್ನಾಟಕ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
ನಂ. 32, 1ನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಕರ್ನಾಟಕ ಸಹಕಾರ ಮಂಡಳಿ ಭವನ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 29901993 ಇ–ಮೇಲ್: mdkmvstdc@gmail.com ವೆಬ್‌ಸೈಟ್: https//kmvstdcl.karnataka.gov.in

ಸಂಖ್ಯೆ : ಕಮವಾಪಪಂಅನಿನಿ/ಸಿ&ಆ/ಸಿಆರ್–05/2023–24 ದಿನಾಂಕ : 07.03.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಜಾಲಕ ಮುಖಾಂತರ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ರವರು ನಿಗಮದ ಕೇಂದ್ರ ಹಾಗೂ ಜಿಲ್ಲಾ ಕಛೇರಿಗಳಲ್ಲಿ ಕಾರ್ಯನಿರ್ವಹಿಸಲು ಗ್ರೂಪ್ "ಸಿ" ಮತ್ತು "ಡಿ" ವೃಂದದ ಹುದ್ದೆಗಳಿಗೆ ಹೊರಸಂಪನ್ಮೂಲ ನೋಂದಾಯಿತ ಸಂಸ್ಥೆಗಳಿಂದ ಮಾನವ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ಕಾಯ್ದೆ 2000ರ ನಿಯಮಗಳ ಪ್ರಕಾರ **http:kppp.karnataka.gov.in.,** ಜಾಲತಾಣದಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ನೋಂದಾಯಿತ ಸಂಸ್ಥೆಗಳು "ಸಿ" ಮತ್ತು "ಡಿ" ವೃಂದದ ಹುದ್ದೆಗಳಿಗೆ ಸಿಬ್ಬಂದಿ ಸೇವೆ ಒದಗಿಸಲು ಅರ್ಜಿ ಸಲ್ಲಿಸಲು ಕೋರಿದೆ.

ಟೆಂಡರ್ ವಿವರ : 1) ಟೆಂಡರ್ ಅಂದಾಜು ಮೌಲ್ಯ : ರೂ. 1,20,00,000.00/–, 2) ಟೆಂಡರ್‌ದಾರರ ಅರ್ಹತೆ : As Per Tender Document, 3) ಟೆಂಡರ್ ಅರ್ಜಿಯ ಬೆಲೆ : As per http:kppp.karnataka.gov.in., 4) ಇ.ಎಂ.ಡಿ. : ರೂ.1,20,000.00, 5) ಟೆಂಡರ್ ಪ್ರಕಟಣೆ ದಿನಾಂಕ : 07.03.2025, 6) ಟೆಂಡರ್ ಕೊನೆಯ ದಿನಾಂಕ : 21.03.2025 ಸಂಜೆ 17.00 ಗಂಟೆಗೆ, 7) ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ : 17.03.2025 ಬೆಳಿಗ್ಗೆ 11.00 ಗಂಟೆಗೆ, 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 24.03.2025 ಬೆಳಿಗ್ಗೆ 11.00 ಗಂಟೆಗೆ, 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : 26.03.2025 ಬೆಳಿಗ್ಗೆ 11.00 ಗಂಟೆಗೆ.

ಆಸಕ್ತ ಟೆಂಡರ್ ದಾಖಲಾತಿಗಳನ್ನು ಜಾಲತಾಣ **http:kppp.karnataka.gov.in.** ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ವಿವರಗಳು ಕೆಳಕಂಡಂತಿರುತ್ತದೆ.

1. ಹೆಚ್ಚಿನ ಮಾಹಿತಿಗಳನ್ನು **http:kppp.karnataka.gov.in.,** ಜಾಲತಾಣದ ಮುಖಾಂತರ ಪಡೆದುಕೊಳ್ಳಬಹುದಾಗಿದೆ ಹಾಗೂ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.
2. ಟೆಂಡರ್‌ಗೆ ಸಂಬಂಧಿಸಿದಂತೆ ಮುಂದೂಡಿಕೆ/ತಿದ್ದುಪಡಿಗಳು ಏನಾದರು ಇದ್ದಲ್ಲಿ **http:kppp.karnataka.gov.in.,** ಜಾಲತಾಣದಲ್ಲಿ ಪ್ರಕಟಿಸಲಾಗುವುದು.
3. ಷರತ್ತು ಬದ್ಧ ಟೆಂಡರ್‌ಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕ.ಮ.ವಾ.ಪ.ಪಂ.ಅನಿನಿ, ಬೆಂಗಳೂರು

DIPR/CP/5512/Zenkar/2024-25

Infosys®
Navigate your next

Infosys Limited
CIN : L85110KA1981PLC013115
44, Infosys Avenue, Electronics City, Hosur Road, Bengaluru - 560 100
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE OF LOSS OF SHARE CERTIFICATES

Notice is hereby given that the following share certificate(s) issued by the Company are stated to have been lost or misplaced and the registered share holder(s) thereof have applied for issue of duplicate share certificate(s).

Notice is hereby given that the Company will proceed to **issue letter of confirmation in lieu of duplicate share certificate(s)** unless a valid objection is received by the Company within 15 days from the date of publication of this notice. No claims will be entertained by the Company with respect to the original share certificate(s) subsequent to the issue of duplicates thereof.

Name of Shareholder	Folio No.	Certificate No.	Distinctive Nos.		No. of Shares
			From	To	
RAJEEV AGARWAL	ITL001348	146553	1411191	1412790	1600

Any person who has/have a claim in respect of the said certificate(s) should lodge his/her/their claim with all supporting documents with the Company at its registered office. If no valid and legitimate claim is received within 15 days from the date of publication of this notice, the Company will proceed to issue **Letter of Confirmation in lieu of duplicate share certificate(s)** to the person listed above and no further claim would be entertained from any other person(s).

Registered Office:
Electronics City, Hosur Road,
Bengaluru - 560 100

March 07, 2025
Bengaluru, India

For **Infosys Limited**
Sd/-
A.G.S. Manikantha
Company Secretary
Membership No. A21918

ಶಾರೀರಿಕ ಆರೋಗ್ಯದಂತೆಯೇ, ಮಾನಸಿಕ ಆರೋಗ್ಯವೂ ನಿರಂತರ ಶ್ರದ್ಧೆ ಮತ್ತು ಪೋಷಣೆಯ ಅಗತ್ಯವಿರುವ ವಿಷಯ. 'ಇದು ತಾನೇ ಸರಿಯಾಗುತ್ತದೆ' ಎಂದು ಬಿಟ್ಟುಬಿಡುವುದು ಅಪಾಯಕಾರಿ.

ಉತ್ಸಾಹದ ಬುಗ್ಗೆ ಆಗುವ ಬಗೆ

ಡಾ. ಬ್ರಹ್ಮಾನಂದ ನಾಯಕ್

ಅವಳು ನಿಟ್ಟುಸಿರು ಬಿಟ್ಟಳು. ಗಾಢವಾದ ಆ ಭಾವನೆ ಮತ್ತೆ ಮುಸುಕಿತು. ಬೆಳಿಗ್ಗೆ ಎದ್ದು, ಮೈಮುರಿದು ಹಾಸಿಗೆಯನ್ನು ತೊರೆದವಳೇ ಚಹಾ ಮಾಡುವಷ್ಟರಲ್ಲಿ ಅವಳ ದೇಹ ಸೋತಂತಾಯಿತು. ಮತ್ತೊಂದು ನಿರಾಸೆಯ ದಿನದ ಆರಂಭ.

'ಇಂದು ಏನೂ ಮಾಡಲು ಮನಸ್ಸಿಲ್ಲ' ಎಂದುಕೊಂಡರೂ, ಬೆಲೆಯಿಲ್ಲದ ಜವಾಬ್ದಾರಿಗಳ ಸಾಲು ಅವಳನ್ನು ಕಾಯುತ್ತಿತ್ತು.

ನಿಮಗೂ ಈ ಅನುಭವ ಪರಿಚಿತವೇ?

ಅನೇಕ ಮಹಿಳೆಯರು ಅನುಭವಿಸುವ ಈ ಸ್ಥಿತಿಯು, ಕೇವಲ ಸಾಮಾನ್ಯ ಆಯಾಸವಲ್ಲ. ಇದು ಅವರ ಜೀವನವನ್ನು ಕತ್ತಲೆಯಂತೆ ಆವರಿಸಿಕೊಳ್ಳುವ ನಿರಂತರ ದಣಿವು ಮತ್ತು ಜೀವನದಲ್ಲಿ ಉತ್ಸಾಹದ ಕೊರತೆಯ ಗಂಭೀರ ಸೂಚನೆಯಾಗಿದೆ.

ಉತ್ಸಾಹಹೀನತೆ ಹಲವು ಕಾರಣಗಳಿಂದ ಉಂಟಾಗಬಹುದು. ಹಾರ್ಮೋನ್‌ಗಳ ಏರುಪೇರು, ನಿದ್ರಾಹೀನತೆ, ನಿರಂತರ ಒತ್ತಡ, ಅಸಮತೋಲಿತ ಆಹಾರ, ಶಾರೀರಿಕ ಚಟುವಟಿಕೆಯ ಕೊರತೆ, ವಿಟಮಿನ್ 'ಡಿ' ಕೊರತೆ ಮತ್ತು ಸಾಮಾಜಿಕ ಸಂಪರ್ಕಗಳ ಕೊರತೆ ಪ್ರಮುಖವಾಗಿವೆ. ಸಂಶೋಧನೆಯು ಅನಿದ್ರೆ ಮತ್ತು ಉತ್ಸಾಹಹೀನತೆಯ ನಡುವೆ ಅವಿಭಾಜ್ಯ ಸಂಬಂಧವನ್ನು ಸ್ಪಷ್ಟವಾಗಿ ದೃಢಪಡಿಸಿದೆ - ಒಂದರ ಅಸಮತೋಲನ ಇನ್ನೊಂದರ ಮೇಲೆ ಪ್ರಬಲ ಪರಿಣಾಮ ಬೀರುತ್ತದೆ. ಅಧ್ಯಯನದ ಪ್ರಕಾರ, ನಮ್ಮ ದೇಹದಲ್ಲಿನ ನರಸಂವಹನಕಾರಿಗಳಾದ ಸೆರೊಟೊನಿನ್, ಡೋಪಮೈನ್, ಆಕ್ಸಿಟೋಸಿನ್, ಮತ್ತು ಎಂಡಾರ್ಫಿನ್‌ಗಳು ನಮ್ಮ ಮನಸ್ಥಿತಿಯನ್ನು ನಿಯಂತ್ರಿಸುತ್ತವೆ. 'ಡಾಕ್ಟರ್, ಯಾವಾಗಲೂ ನಮ್ಮ ಅಶುಭ ವಿಚಾರಗಳನ್ನೇ ಯೋಚಿಸುತ್ತೇನೆ' ಎಂದು ಶರ್ಮಿಳಾ ಹೇಳಿದಳು.

'ನಿಮ್ಮ ಆಹಾರ ಕ್ರಮವನ್ನು ತಿಳಿಸಿ' ಎಂದು ಕೇಳಿದಾಗ, ಅವಳು ಮಧ್ಯಾಹ್ನದ ಊಟವನ್ನು ಸಂಪೂರ್ಣ ಬಿಟ್ಟಿರುವುದು ತಿಳಿಯಿತು.

ಶರ್ಮಿಳಾ, ಮಧ್ಯಾಹ್ನದ ಊಟ ಬಿಟ್ಟಿರುವುದರಿಂದ ರಕ್ತದ ಸಕ್ಕರೆಮಟ್ಟದಲ್ಲಿ ಏರುಪೇರಾಗುತ್ತಿದೆ. ಇದು ನಿಮ್ಮ ಮನಸ್ಥಿತಿಯ ಮೇಲೆ ಪರಿಣಾಮ ಬೀರಿ, ನಕಾರಾತ್ಮಕ ಯೋಚನೆಗಳಿಗೆ ಕಾರಣವಾಗುತ್ತಿದೆ. ದಯವಿಟ್ಟು ನಿಯಮಿತವಾಗಿ ಮಧ್ಯಾಹ್ನದ ಊಟ ಮಾಡಿ ಎಂದು ಸಲಹೆ ನೀಡಿದೆ ಆಹಾರ ಮತ್ತು ಮನಸ್ಥಿತಿಯ ನಡುವಿನ ಸಂಬಂಧ ಅತ್ಯಂತ ಶಕ್ತಿಶಾಲಿ ಮತ್ತು ಗಹನವಾದುದು. ಒಮೇಗಾ-3 ಫ್ಯಾಟಿ ಆಮ್ಲಗಳು, ವಿಟಮಿನ್ ಬಿ12, ಮ್ಯಾಗ್ನೀಸಿಯಮ್, ಮತ್ತು ಟ್ರಿಪ್ಟೋಫಾನ್ ಗಳನ್ನು ಹೊಂದಿರುವ ಆಹಾರಗಳು ಮನಸ್ಥಿತಿಯನ್ನು ಉತ್ತಮಗೊಳಿಸುತ್ತವೆ ಮತ್ತು ಮಾನಸಿಕ ಆರೋಗ್ಯವನ್ನು ವೃದ್ಧಿಸುತ್ತವೆ. ಸಮುದ್ರದ ಮೀನು, ಬಾದಾಮಿ, ಅಕ್ಕಿ, ಬಾಳೆಹಣ್ಣು, ಕಾಳುಮೆಣಸು, ಬೀಜಗಳು, ಅಡಿಕೆ, ಮಜ್ಜಿಗೆ, ಹಸಿ ತರಕಾರಿಗಳು, ಡಾರ್ಕ್ ಚಾಕ್ಲೇಟ್, ಮತ್ತು ಶುಂಠಿಯ ಜೊತೆಗೆ, ಅವಕಾಡೊ, ಪಾಲಕ್, ರಾಗಿ, ಜೇನುತುಪ್ಪ, ಗ್ರೀನ್ ಟೀ, ಮತ್ತು ದಾಳಿಂಬೆ ಹಣ್ಣುಗಳು ಸಹ ಮನಸ್ಥಿತಿಯನ್ನು ಹೆಚ್ಚಿಸುವ ಅಮೂಲ್ಯ ಆಹಾರಗಳಾಗಿವೆ. ಈ ಪೌಷ್ಟಿಕಾಂಶ-ಸಮೃದ್ಧ ಆಹಾರಗಳು ಮಿದುಳಿನಲ್ಲಿ ಸೆರೊಟೊನಿನ್ ಮತ್ತು ಡೋಪಮೈನ್ ಮಟ್ಟವನ್ನು ಹೆಚ್ಚಿಸಿ, ಒತ್ತಡವನ್ನು ಕಡಿಮೆ ಮಾಡಿ, ಉತ್ತಮ ನಿದ್ರೆಯನ್ನು ಉತ್ತೇಜಿಸಿ, ನಮ್ಮ ದೈನಂದಿನ ಜೀವನದಲ್ಲಿ ಸಕಾರಾತ್ಮಕ ಭಾವನೆಗಳನ್ನು ವೃದ್ಧಿಸುತ್ತವೆ. ಕೇವಲ ಆಹಾರವಷ್ಟೇ ಅಲ್ಲ, ಆಯುರ್ವೇದವು ಸೂಚಿಸುವ ದಿನಚರಿಗಳೂ ಉತ್ಸಾಹವನ್ನು ಹೆಚ್ಚಿಸುತ್ತವೆ. 'ನಾನು ತಿಳಿಬೆಳಗಿನಲ್ಲಿ ಕೊಳದಲ್ಲಿ ತೇಲುವ ತಾವರೆಯಂತೆ ಇರುತ್ತೇನೆ, ಆದರೆ ಸಂಜೆಯಾಗುತ್ತಿದ್ದಂತೆ ಮನಸ್ಸು ಸೋತುಹೋಗುತ್ತದೆ' ಎನ್ನುವ ವಿಜಯಾಗೆ ಬೆಳಗಿನಲ್ಲಿ ಅಭ್ಯಂಗ (ತೈಲಾಭ್ಯಂಗ), ನಂತರ ಬೆಚ್ಚಗಿನ ನೀರಿನಿಂದ ಸ್ನಾನ, ಸೂರ್ಯನಮಸ್ಕಾರ, ಮತ್ತು ಅನುಲೋಮ-ವಿಲೋಮ ಪ್ರಾಣಾಯಾಮವನ್ನು ಸೂಚಿಸಿದೆ. ಮೂರು ತಿಂಗಳುಗಳಲ್ಲಿ, ಆಕೆಯ ಉತ್ಸಾಹ ಮತ್ತು ಶಕ್ತಿಯಲ್ಲಿ ಗಮನಾರ್ಹ ಸುಧಾರಣೆ ಕಂಡುಬಂತು. ನಮ್ಮ ದೇಹದ ಇನ್ನೊಂದು ಮುಖ್ಯವಾದ ಭಾಗವೆಂದರೆ ಸೂಕ್ಷ್ಮಜೀವಿಗಳು ತುಂಬಿರುವ ಕರುಳಾಗಿದೆ. ಹಲ್ಲಿನಲ್ಲಿರುವಂತೆಯೇ, ಕರುಳಿನಲ್ಲೂ ಸಹ ಹಲವಾರು ಸಂಪರ್ಕಗಳನ್ನು ಹೊಂದಿರುವ ಜಟಿಲ ನರಮಂಡಲವಿದೆ. ಈ ನರಮಂಡಲವನ್ನು 'ಎರಡನೇ ಮಿದುಳು' ಎಂದು ಕರೆಯಲಾಗುತ್ತದೆ.

ಇತ್ತೀಚಿನ ಸಂಶೋಧನೆಯ ಪ್ರಕಾರ, ಕರುಳಿನಲ್ಲಿರುವ ಸೂಕ್ಷ್ಮಜೀವಿಗಳು ಮನಸ್ಥಿತಿಯನ್ನು ನಿಯಂತ್ರಿಸುವ ನರಸಂವಹನಕಾರಿಗಳನ್ನು ಉತ್ಪಾದಿಸುತ್ತವೆ. ಪ್ರೋಬಯೋಟಿಕ್ ಆಹಾರಗಳಾದ ಮಜ್ಜಿಗೆ, ಗಂಜಿ, ಕಾಂಜಿ, ಮತ್ತು ಇಡ್ಲಿ-ದೋಸೆ ಹಿಟ್ಟಿನಂತಹ ನೈಸರ್ಗಿಕವಾಗಿ ಹುಳಿಮಾಡಿದ ಆಹಾರಗಳು ಕರುಳಿನ ಆರೋಗ್ಯಕ್ಕೆ ಉತ್ತಮವಾಗಿವೆ.

ಒತ್ತಡ ಮತ್ತು ಭಾವನಾತ್ಮಕ ಅಡೆತಡೆಗಳನ್ನು ನಿರ್ವಹಿಸುವುದು ಉತ್ಸಾಹವನ್ನು ಉಳಿಸಿಕೊಳ್ಳಲು ಅತ್ಯಂತ ಮಹತ್ವದ್ದಾಗಿದೆ. 'ಡಾಕ್ಟರ್, ನಾನು ಎಷ್ಟೇ ಪ್ರಯತ್ನಿಸಿದರೂ, ನನ್ನ ಮನಸ್ಸು ಸುಮ್ಮನಿರುವುದಿಲ್ಲ' ಎಂದು ಹೇಳಿದ ನಿಯತಿಗೆ ನಾನು ಧ್ಯಾನದ ಸರಳ ವಿಧಾನವನ್ನು ಕಲಿಸಿದೆ. ದಿನಕ್ಕೆ ಕೇವಲ ಇಪ್ಪತ್ತು ನಿಮಿಷಗಳ ಧ್ಯಾನವು ಆಕೆಯ ಒತ್ತಡವನ್ನು ಕಡಿಮೆ ಮಾಡಿತು. ನಕಾರಾತ್ಮಕ ಭಾವನೆಗಳು ನಮ್ಮ ಮನಸ್ಸಿನಲ್ಲಿ ಬರುವುದು ಸಹಜ, ಆದರೆ ಯಾವ ವಿಚಾರಗಳಿಗೆ ಗಮನ ನೀಡಬೇಕು ಎಂಬುದರಲ್ಲೇ ನಮ್ಮ ಶಕ್ತಿ ಅಡಗಿದೆ.

'ಪ್ರತಿದಿನ ರಾತ್ರಿ ಮಲಗುವ ಮುನ್ನ ನನಗೆ ಕೃತಜ್ಞತಾ ಪಟ್ಟಿಯನ್ನು ಬರೆಯಲು ಕಲಿಸಿದ್ದಕ್ಕೆ ಧನ್ಯವಾದಗಳು. ನನ್ನ ಜೀವನದಲ್ಲಿನ ಸಣ್ಣಪುಟ್ಟ ಆಶೀರ್ವಾದಗಳನ್ನು ನೋಡಲು ಅದು ನನಗೆ ಸಹಾಯ ಮಾಡಿದೆ' ಎಂದು ಅನುಪಮಾ ಹೇಳಿದಳು. ಕೃತಜ್ಞತೆಯು ಸಕಾರಾತ್ಮಕತೆಯನ್ನು ಹೆಚ್ಚಿಸುವುದು ಮಾತ್ರವಲ್ಲದೆ, ಮೂಲಭೂತವಾಗಿ ಮಿದುಳಿನ ರಾಸಾಯನಿಕತೆಯನ್ನು ಬದಲಾಯಿಸುತ್ತದೆ. ಜೀವನದ ನದಿಯಲ್ಲಿ ಕೇವಲ ತೇಲುತ್ತಿರುವುದು ಮತ್ತು ಇತರರನ್ನು ದಡ ಸೇರಿಸುವುದು ಮಾತ್ರ ಸಾಲದು. ನಿಮ್ಮ ಸ್ವಂತ ಪಯಣದಲ್ಲಿ, ಪ್ರವಾಹಗಳನ್ನು ಎದುರಿಸಲು ಮತ್ತು ಪ್ರತಿಕೂಲ ಪರಿಸ್ಥಿತಿಗಳ ವಿರುದ್ಧ ಈಜಲು ಧೈರ್ಯ ಬೇಕು. ನದಿಯ ಪ್ರವಾಹವು ಎಷ್ಟೇ ಭೀಕರವಾಗಿದ್ದರೂ, ಅದರ ಪ್ರವಾಹದ ವಿರುದ್ಧ ನಿಲ್ಲುವ ಶಕ್ತಿ ಪ್ರತಿ ಮಹಿಳೆಯಲ್ಲೂ ಅಡಗಿದೆ. ಸಕಾರಾತ್ಮಕ ಬದಲಾವಣೆಯ ಶಕ್ತಿ ನಿಮ್ಮಲ್ಲಿದೆ. ನಿಮ್ಮೊಳಗಿನ ಉತ್ಸಾಹವನ್ನು ಹುಡುಕಿ, ಇಂದಿನಿಂದಲೇ ಕ್ರಿಯಾಶೀಲರಾಗಿ. ಜೀವನದ ಸವಾಲುಗಳನ್ನು ಮೀರಿ ನಿಲ್ಲಿ, ನಿಮ್ಮ ಅಂತರಂಗದ ಜ್ಯೋತಿಯನ್ನು ಬೆಳಗಿಸಿ. ಜ್ಯೋತಿ ಬೆಳಗಿದಾಗ, ಕತ್ತಲು ಕೂಡ ದಾರಿಯಾಗುತ್ತದೆ. ❖

ಒತ್ತಡ ಕಡಿಮೆಯಾಗಲು..

- **ಹಸಿರು ಔಷಧಿ:** ಪ್ರತಿದಿನ 20 ನಿಮಿಷಗಳನ್ನು ಪ್ರಕೃತಿಯಲ್ಲಿ ಕಳೆಯಿರಿ - ಇದು ಒತ್ತಡದ ಹಾರ್ಮೋನ್ ಕಾರ್ಟಿಸೋಲ್ ಮಟ್ಟವನ್ನು ಶೇ 15 ರಷ್ಟು ಕಡಿಮೆಗೊಳಿಸುತ್ತದೆ.
- **ಸಂಪರ್ಕದ ಶಕ್ತಿ:** ನಿಮ್ಮ ಪ್ರೀತಿಪಾತ್ರರಿಗೆ ಫೋನ್ ಮಾಡಲು 5 ನಿಮಿಷಗಳನ್ನು ಮೀಸಲಿಡಿ - ಸಾಮಾಜಿಕ ಸಂಪರ್ಕವು ಆನಂದದ ಹಾರ್ಮೋನ್‌ಗಳನ್ನು ತಕ್ಷಣ ಬಿಡುಗಡೆ ಮಾಡುತ್ತದೆ.
- **ನಗೆ ಯೋಗ:** ಪ್ರತಿದಿನ ಬೆಳಿಗ್ಗೆ ಕೃತಕವಾಗಿ ನಗಲು ಪ್ರಾರಂಭಿಸಿ - ಇದು ಕೆಲವೇ ನಿಮಿಷಗಳಲ್ಲಿ ನೈಜ ನಗುವಾಗಿ ಪರಿವರ್ತನೆಯಾಗಿ ಎಂಡಾರ್ಫಿನ್ ಮಟ್ಟವನ್ನು ಹೆಚ್ಚಿಸುತ್ತದೆ.

ಉತ್ಸಾಹ ಹೆಚ್ಚಿಸುವ ತಂತ್ರಗಳು

- **'4-7-8 ಉಸಿರಾಟ ತಂತ್ರ'** – ನಾಲ್ಕು ಎಣಿಕೆಗೆ ಉಸಿರೆಳೆದುಕೊಳ್ಳಿ, ಏಳು ಎಣಿಕೆಗೆ ಉಸಿರನ್ನು ಹಿಡಿದುಕೊಳ್ಳಿ, ಮತ್ತು ಎಂಟು ಎಣಿಕೆಗೆ ಉಸಿರನ್ನು ಬಿಡಿ. ಇದು ತಕ್ಷಣ ಒತ್ತಡವನ್ನು ಕಡಿಮೆಗೊಳಿಸುತ್ತದೆ.
- **'20-20-20 ನಿಯಮ'** – ಪ್ರತಿ 20 ನಿಮಿಷಕ್ಕೊಮ್ಮೆ, 20 ಸೆಕೆಂಡುಗಳ ಕಾಲ, 20 ಅಡಿ ದೂರದಲ್ಲಿರುವ ಯಾವುದನ್ನಾದರೂ ನೋಡಿ. ಇದು ಸ್ಕ್ರೀನ್ ಒತ್ತಡವನ್ನು ಕಡಿಮೆಗೊಳಿಸುತ್ತದೆ.
- **'ಬ್ರೈನ್ ಡಂಪ್'** – ಮಲಗುವ ಮುನ್ನ ನಿಮ್ಮ ತಲೆಯಲ್ಲಿರುವ ಎಲ್ಲಾ ವಿಚಾರಗಳನ್ನು ಹಾಳೆಯ ಮೇಲೆ ಬರೆಯಿರಿ. ಇದು ನಿದ್ರೆಯನ್ನು ಸುಧಾರಿಸುತ್ತದೆ.
- **'ಕ್ಯಾಫೀನ್ ಕಟ್-ಆಫ್'** – ಮಧ್ಯಾಹ್ನ 2 ಗಂಟೆಯ ನಂತರ ಕಾಫಿ, ಚಹಾ ಕುಡಿಯುವುದನ್ನು ತಪ್ಪಿಸಿ. ಇದು ರಾತ್ರಿಯ ನಿದ್ರೆಯನ್ನು ಸುಧಾರಿಸುತ್ತದೆ.
- **'3-3-3 ತಂತ್ರ'** – ನೀವು ಆತಂಕಗೊಂಡಾಗ, ಮೂರು ವಸ್ತುಗಳನ್ನು ನೋಡಿ, ಮೂರು ಶಬ್ದಗಳನ್ನು ಕೇಳಿ, ಚಲಿಸಿ. ಇದು ನಿಮ್ಮನ್ನು ತಕ್ಷಣವೇ ವರ್ತಮಾನಕ್ಕೆ ತರುತ್ತದೆ.

ಅಮ್ಮ–ಮಗಳ ರಂಗಪ್ರವೇಶ

ಇಷ್ಟಪಟ್ಟು ಮಾಡಿದರೆ ಕಷ್ಟವೊಂದಿಷ್ಟಿರದು. ಮನಸ್ಸು ಮಾಡಿದರೆ ಸಾಧನೆ ಸುಲಭ ಎಂಬ ಮಾತಿಗೆ ಚೈತನ್ಯಾ ಉಪಾಧ್ಯಾಯರು ಉದಾಹರಣೆಯಾಗುತ್ತಾರೆ. ಮಗಳು ಸನ್ನಿಧಿ ಜೊತೆಗೆ ರಂಗಪ್ರವೇಶವನ್ನೂ ಮಾಡಿ ಭೇಷ್ ಎನಿಸಿಕೊಂಡರು

ಕೃಷ್ಣಿ ಶಿರೂರ

ಕೋವಿಡ್ ಸಮಯದಲ್ಲಿ ಮಗಳು ಮನೆಯಲ್ಲೇ ಇದ್ದು ಸ್ವಲ್ಪ ಆಲಸಿಯಾಗಿದ್ಲು. ಕೋವಿಡ್ ತಿಳಿಯಾದ ನಂತ್ರ ಅವಳನ್ನ ಭರತನಾಟ್ಯ ಕ್ಲಾಸಿಗೆ ಸೇರಿಸಿದೆ. ಸೇರಿಸಿದ ಮೇಲೆ ಕರ್ಕೊಂಡು ಹೋಗಿ, ಬರೋದು ನಾನೇ. ಬ್ಯಾಂಕ್ ಕೆಲಸ ಮುಗಿಸಿ ಸಂಜೆ ಮನೆಗೆ ಬಂದ ಮೇಲೆ ಮಗಳನ್ನ ಭರತನಾಟ್ಯ ಕಲಿಕೆಗಾಗಿ ಕಲಾಸುಜಯಕ್ಕೆ ಕರೆದೊಯ್ಯುತ್ತಿದ್ದೆ. ಅಲ್ಲಿ ಮಕ್ಕಳು ಪ್ರಾಕ್ಟೀಸ್ ಮಾಡೋದನ್ನೇ ನೋಡ್ತಾನೋಡ್ತಾ ನನ್ನ ಪಾದಗಳು ನಿಂತಲ್ಲಿ ನಿಲ್ಲದಾದವು.

ಬಾಲ್ಯದಲ್ಲಿ ಅಕ್ಕನ ಜೊತೆ ಕಲಿತು ಬಿಟ್ಟ ಭರತನಾಟ್ಯದ ಹೆಜ್ಜೆಗಳು ಮನದಲ್ಲಿ ಮೂಡಿ ನನ್ನನ್ನೂ ಗೆಜ್ಜೆ ಕಟ್ಟಿ ಹೆಜ್ಜೆ ಇಡಲು ಪ್ರೇರೇಪಿಸಿತು. ಇಷ್ಟಾದ ನಂತರ ನೀವೇ ನೋಡಿದಿರಲ್ಲ..? ಮಗಳು ನಾನೂ ಒಂದೇ ವೇದಿಕೆಯಲ್ಲಿ ರಂಗಪ್ರವೇಶವನ್ನೂ ಮಾಡಿದೆವು....

ಹೀಗೆಂದು ಹೇಳುವಾಗ ಬ್ಯಾಂಕ್ ಉದ್ಯೋಗಿ ಚೈತನ್ಯಾ ಉಪಾಧ್ಯಾಯ ಅವರ ಮೊಗದಲ್ಲಿ ಏನೋ ಸಾಧಿಸಿದ ಸಂತೃಪ್ತಭಾವ ಮೂಡಿತ್ತು. ಆತ್ಮವಿಶ್ವಾಸ ತೋರುತ್ತಿತ್ತು. ಪಕ್ಕದಲ್ಲಿದ್ದ ಮಗಳ ಸನ್ನಿಧಿ ಅಮ್ಮನ ಮುಖ ನೋಡಿ ನಸುನಕ್ಕಳು.

ಒಂದೇ ವೇದಿಕೆಯಲ್ಲಿ ಅಮ್ಮ-ಮಗಳು ಭರತನಾಟ್ಯ ರಂಗಪ್ರವೇಶ ಮಾಡಿದ್ದು ವಿರಳ. ಆದರೆ ಮಗಳಿಗೆ ಕ್ಲಾಸಿಗೆ ಸೇರಿಸಿ, ನಂತರದಲ್ಲಿ ತಾನೂ ಸೇರಿ ಕಲಿತು ಚೈತನ್ಯಾ ಉಪಾಧ್ಯಾಯ ಹಾಗೂ ಮಗಳು ಸನ್ನಿಧಿ ಪಿ.ರಾವ್ ರಂಗಪ್ರವೇಶ ಮಾಡಿದ್ದು ಹುಬ್ಬಳ್ಳಿಯ ಸವಾಯಿ ಗಂಧರ್ವ ಸಭಾಂಗಣದಲ್ಲಿ ಇತ್ತೀಚೆಗಷ್ಟೆ. ವಯಸ್ಸಿನ ಅಡ್ಡಿ ಆತಂಕವನ್ನು ಮೀರಿ, ಅನಾರೋಗ್ಯವನ್ನೂ ಮೆಟ್ಟಿನಿಂತು ಮಗಳೊಂದಿಗೆ ಸರಿಸಮಾನವಾಗಿ ಹೆಜ್ಜೆ ಇಟ್ಟು ಸೈ ಎನಿಸಿಕೊಂಡರು ಚೈತನ್ಯಾ. ಅದಕ್ಕಿಂತ ಹೆಚ್ಚಾಗಿ ಭರತನಾಟ್ಯಕ್ಕೆಂದು ಸಮಯವನ್ನು ಹೊಂದಿಸಿಕೊಂಡಿದ್ದು ದೊಡ್ಡ ವಿಷಯವೇ ಸರಿ.

'ಪತಿ, ಕಾಲೇಜಿಗೆ ಹೋಗುವ ಮಗ, ಪ್ರೈಮರಿ ಸ್ಕೂಲ್‌ಗೆ ಹೋಗುವ ಮಗಳು, ಅತ್ತೆ ಇವರೆಲ್ಲರಿಗೂ ಬೆಳಗಿನ ನಾಸ್ತಾ, ಅಡುಗೆ ಸಿದ್ಧಪಡಿಸಿಟ್ಟು ಬ್ಯಾಂಕಿಗೆ ಹೊರಟರೆ ಬ್ಯಾಂಕ್‌ನಲ್ಲಿ ಕೆಲಸ ಮುಗಿಸಿ ವಾಪಸ್ ಹೊರಡುವುದು 5.30ರ ನಂತರ. ಬ್ಯಾಂಕಿನಿಂದಲೇ ನೇರವಾಗಿ ಭರತನಾಟ್ಯ ತರಗತಿಗೆ ಹೋಗಿ ಪ್ರಾಕ್ಟೀಸ್ ಮುಗಿಸಿ ಮನೆ ಸೇರೋದು ರಾತ್ರಿ 9.30ಕ್ಕೆ. ಗಂಡ, ಅತ್ತೆ, ಅಮ್ಮ, ಮಗ, ಮಗಳ ಪ್ರೋತ್ಸಾಹ ಸಹಕಾರದಿಂದ ಇದೆಲ್ಲ ಸಾಧ್ಯವಾಗಿದ್ದು. ಅದರಲ್ಲೂ ರಂಗಪ್ರವೇಶಕ್ಕಾಗಿ ಹೆಚ್ಚಿನ ಸಮಯವನ್ನು ನೀಡಲೇ ಬೇಕಿತ್ತು. ಕಳೆದ ಜನವರಿಯಿಂದ ಈ ಜನವರಿವರೆಗೆ ನನ್ನ ಪಾಲಿನ ಸಂಕ್ರಮಣಕಾಲವೇನಿಸಿದ್ದು ಸುಳ್ಳಲ್ಲ. ಗುರು ಸುಜಯ ಶಾನಭಾಗ ಅವರ ಪ್ರೋತ್ಸಾಹ, ಸಹಕಾರ ಅಪಾರ. ವಯಸ್ಸಿನ ಕಾರಣಕ್ಕೆ ನೆನಪಿನಿಂದ ಮರೆಯಾಗುವ ಹೆಜ್ಜೆಗಳನ್ನು ನೆನಪಿಸುತ್ತ ಮಗಳೂ ಗುರುವಾದಳು..' ಹೀಗೆನ್ನುವಾಗ ಚೈತನ್ಯಾ ಅವರ ಮೊಗದಲ್ಲಿ ಮಂದಹಾಸ ಮನೆಮಾಡಿತ್ತು.

'ಒಮ್ಮೊಮ್ಮೆ ಮನಸ್ಸು ಖಾಲಿ ಆಗ್ತಿತ್ತು. ಆಗ ಅನ್ನಿಸೋದು.. ಇದೆಲ್ಲ ಈ ವಯಸ್ಸಲ್ಲಿ ಬೇಕಿತ್ತ ಅಂತಾ. ರಣರಂಗದಲ್ಲಿ ಯುದ್ಧ ಬೇಕಿತ್ತಾ ಎಂದು ಅರ್ಜುನನಿಗೆ ಅನ್ನಿಸಿದಂತೆ. ಅಂಥ ಸಂದರ್ಭಗಳಲ್ಲಿ ಅಮ್ಮ, ಅತ್ತೆ ನನಗೆ ಪ್ರೇರೆಪಿಸುತ್ತಿದ್ದರು. ಮತ್ತೆ ಮುನ್ನುಗ್ಗುತ್ತಿದ್ದೆ. ಈಗ ಭರತನಾಟ್ಯದಲ್ಲಿ ಎಂ.ಎ ಮಾಡುತ್ತಿದ್ದೇನೆ. ಅದಕ್ಕಾಗಿ ಗುರುಕುಲದಲ್ಲಿ ಬೆಳಗಿನ ಸಮಯ ಹೊಂದಿಸಿಕೊಂಡಿದ್ದೇನೆ' ಎಂದು ಚೈತನ್ಯಾ ಹೇಳಿದರು.

ಭರತನಾಟ್ಯದ ಕಲಿಕೆ ನಂತರ ಚೈತನ್ಯಾ ಹೊಸ ಚೈತನ್ಯವನ್ನೇ ಹುಟ್ಟುಹಾಕಿದೆ. ಅವರಲ್ಲಿ ಆರೋಗ್ಯ ಇನ್ನಷ್ಟು ವೃದ್ಧಿಸಿದೆ. ಕುತ್ತಿಗೆ ನೋವು, ಋತುಬಂಧದ ಸಮಸ್ಯೆಗಳು ಗೌಣವೆನಿಸಿದವು. ವೇದಿಕೆಯ ಭಯ ಮರೆಯಾಗಿದೆ. ಆತ್ಮವಿಶ್ವಾಸ ಮೂಡಿದೆ. ಮಗಳು ಸನ್ನಿಧಿ ಕೂಡ ಕಲಿಕೆಯಲ್ಲಿ ಮೊದಲ ರ್‍ಯಾಂಕ್ ಬಿಟ್ಟುಕೊಟ್ಟಿಲ್ಲ. ❖

ರಂಗಪ್ರವೇಶದಲ್ಲಿ ಚೈತನ್ಯಾ ಉಪಾಧ್ಯಾಯ–ಸನ್ನಿಧಿ ರಾವ್

ಗುರು ಮಾತು

'ಭರತನಾಟ್ಯವನ್ನು ಎಲ್ಲ ವಯಸ್ಸಿನವರೂ ಕಲಿಯಬಹುದು. ಆದರೆ ಕೆಲವು ವಿಚಾರದಲ್ಲಿ ಕಲಿಕೆ ವೇಳೆ ಮಧ್ಯ ವಯಸ್ಸು ಅಡ್ಡಿಯನ್ನುಂಟು ಮಾಡಲಿದೆ. ದೇಹ ಸುಲಭವಾಗಿ ಬಾಗದು. ನೆನಪಿನ ಕೊರತೆ, ಎಲುಬಿನ ಸಾಂದ್ರತೆ ಕಡಿಮೆಯಾಗಿ ನಿರಂತರ ನೃತ್ಯಕ್ಕೆ ಸುಸ್ತು ಕಾಡಲಿದೆ. ರಂಗಪ್ರವೇಶದಲ್ಲಿ ಎರಡೂವರೆ ತಾಸು ಕಾಲ ನೃತ್ಯ ಮಾಡಬೇಕಿರುವುದರಿಂದ ದೇಹ ಕೂಡ ಅದಕ್ಕೆ ಸಹಕರಿಸಬೇಕು. ಅದರಲ್ಲೂ ಇಲ್ಲಿ ಮಗಳ ನೃತ್ಯಕ್ಕೆ ಸರಿಸಮಾನವಾಗಿ ಅಮ್ಮನ ಹಾವಭಾವವೂ ಜೊತೆಯಾಗಬೇಕು. ಅದಕ್ಕಾಗಿ ಅಷ್ಟೇ ಕಠಿಣ ಪ್ರಾಕ್ಟೀಸ್ ಮಾಡುವುದು ತೀರಾ ಅಗತ್ಯ. ಅದನ್ನು ಸವಾಲಾಗಿ ಸ್ವೀಕರಿಸಿ ಚೈತನ್ಯಾ ಉಪಾಧ್ಯಾಯ ಅವರು ಯಶಸ್ಸು ಕಂಡಿದ್ದಾರೆ'

ಸುಜಯ್ ಶಾನಭಾಗ,
ಕಲಾಸುಜಯದ ನೃತ್ಯಗುರು

ಅವಳ ಸಾಧನೆ ಸಂಭ್ರಮಿಸೋಣ

ನಮ್ಮ ಜಗವ ಬೆಳಗೋಣ...

ಪ್ರಜಾವಾಣಿ ಸಾಧಕಿಯರು 2025

ಈ ವರ್ಷದ ಸಾಧಕಿಯರು ಇವರು. ಕಸ ಆಯ್ದು ಸ್ವಚ್ಛ ಗ್ರಾಮವಾಗಿಸಿರುವ ಮಹಿಳೆಯಿಂದ ಖಗೋಲ ವಿಜ್ಞಾನಿಯವರೆಗೂ ಸಾಮಾಜಿಕ ಬದಲಾವಣೆಯಲ್ಲಿ ಗುರುತರ ಪಾತ್ರವಹಿಸಿರುವ ಈ ಮಹಿಳೆಯರ ಸಾಧನೆಯನ್ನು ಸಂಭ್ರಮಿಸುತ್ತಿದ್ದೇವೆ.

ಸಮಾಧಾನದ ಜಗತ್ತಿಗಾಗಿ ಸವಾಲುಗಳನ್ನೆದುರಿಸುತ್ತಲೇ ಉಳಿದವರ ಬದುಕನ್ನು ಸಲೀಸುಗೊಳಿಸಿದವರು. ಯಾರ ಮೆಚ್ಚುಗೆಯ ಹಂಗಿಲ್ಲದೇ ಸಾಧನೆ ಮಾಡಿದವರು.

ಹೆಚ್ಚಿನ ಮಾಹಿತಿಗಾಗಿ

ಸಮಾಜದ ಸುಧಾರಣೆಗಾಗಿ ಒಳಿತಿಗಾಗಿ ಶ್ರಮಿಸುವ ಎಲೆಮರೆಕಾಯಿಯಂತೆ ದುಡಿಯುತ್ತಿರುವವರಿಗೆ ಕಳೆದೊಂದು ವರ್ಷದಿಂದ 'ಪ್ರಜಾವಾಣಿ ಸಾಧಕಿಯರು' ಪ್ರಶಸ್ತಿ ನೀಡುತ್ತಲಿದೆ.

ಕಳೆದ ವರ್ಷ ಸಾಧಕಿಯರ ಸಾಲಿನಲ್ಲಿದ್ದ ಡಾ.ವಿಜಯಲಕ್ಷ್ಮಿ ದೇಶಮಾನೆ ಅವರು ಈ ವರ್ಷ ಪದ್ಮಪ್ರಶಸ್ತಿಗೆ ಭಾಜನರಾದರು.

ಕ್ರೀಡೆಯನ್ನೂ ಸೇರಿದಂತೆ ಸ್ವಸ್ಥ ಸಮಾಜ ನಿರ್ಮಾಣದಲ್ಲಿ ತೊಡಗಿಕೊಂಡಿರುವ ಸೇವಾಭಾವಿ ಜೀವಗಳನ್ನು ಈ ವರ್ಷವೂ ಗುರುತಿಸಲಾಗಿದೆ. ಎಲ್ಲ ಅಡೆತಡೆಗಳನ್ನು ಮೀರಿ, ಮುಂದಿನ ತಲೆಮಾರಿಗಾಗಿ ಚಂದದ ಜಗತ್ತು ರೂಪಿಸುವಲ್ಲಿ ತೊಡಗಿಸಿಕೊಂಡಿರುವ ಇವರೆಲ್ಲರೂ ಅಭಿನಂದನಾರ್ಹರು.

ನಫೀಸಾ ಪೆರುವಾಯಿ

ಮನೆ- ಮನೆ ಕಸ ಸಂಗ್ರಹಿಸುವ 'ಸ್ವಚ್ಛ ವಾಹಿನಿ'ಯ ಸಾರಥಿ. ಕಸಮುಕ್ತ ಗ್ರಾಮಕ್ಕೆ ಶ್ರಮಿಸುತ್ತಿರುವವರು

ರಕ್ಷಿತಾ ರಾಜು

ಪ್ಯಾರಾಲಿಂಪಿಕ್ಸ್‌ನಲ್ಲಿ 1,500 ಮೀಟರ್ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಅಂತರರಾಷ್ಟ್ರೀಯ ಅಂಧ ಕ್ರೀಡಾಪಟು

ಜಲಜಾಕ್ಷಿ ಕೆ.ಡಿ

ಶಾಲಾ ವಾಹನ ಚಲಾಯಿಸಿ ಮಕ್ಕಳು-ಶಾಲೆಯ ಅಭಿವೃದ್ಧಿಗೆ ಶ್ರಮಿಸುತ್ತಿರುವ, ಮುಟ್ಟಿನ ಕಪ್‌ನ 'ರಾಯಭಾರಿ' ಟೀಚರ್

ಸಬಿತಾ ಗುಂಡ್ಮಿ

ಕೊರಗ ಸಮುದಾಯದ ಮೊದಲ ಸಾಧಕಿ. ಕೊರಗ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಉಪನ್ಯಾಸಕಿ

ಪ್ರಾಪ್ತಿ ಮೆಂಡನ್

ಪುರುಷರಂತೆಯೇ ಕಡಲಿನಲ್ಲಿ ನಾಡದೋಣಿ ಮೀನುಗಾರಿಕೆ ನಡೆಸುವ ಸಾಹಸಿ. ಮೀನುಗಾರಿಕೆ ವಿಷಯದಲ್ಲಿ ಎಂಎಫ್‌ಎಸ್‌ಸಿ ಪದವೀಧರೆ

ಜಯಶ್ರೀ ಗುಳಗಣ್ಣನವರ

ಸಮಸ್ಯೆಗಳಿಗೇ ಸವಾಲೊಡ್ಡುವ ರೀತಿಯಲ್ಲಿ ಸ್ವಾವಲಂಬಿ ಬದುಕು ರೂಪಿಸಿಕೊಂಡು, ಕ್ರೀಡೆಯಲ್ಲಿಯೂ ಸೈ ಎನಿಸಿಕೊಂಡ ದಿಟ್ಟ ಮಹಿಳೆ

ಸಂಗಮ್ಮ ಸಾಣಕ

ವ್ಯಸನಮುಕ್ತ ಸಮಾಜ ನಿರ್ಮಾಣ ಸಮಿತಿ ಕಟ್ಟಿಕೊಂಡು ತಮ್ಮ ಊರನ್ನು ಸರಾಯಿ ಮುಕ್ತ ಗ್ರಾಮವನ್ನಾಗಿ ರೂಪಿಸಿದ ಗಟ್ಟಿಗಿತ್ತಿ

ಲಲಿತಾ ರಘುನಾಥ್

ಪುರುಷರಿಗೆ ಸೀಮಿತವಾದ ಬಡಗಿ ಕೆಲಸದಲ್ಲಿ ಕೈಚಳಕ ತೋರುತ್ತಾ, ಶಾಲಾ ಮಕ್ಕಳ ಅಪೌಷ್ಟಿಕತೆ ದೂರ ಮಾಡಲು ಶ್ರಮಿಸುತ್ತಿರುವ ಸಾಧಕಿ

ರೂಪಾ ಎಂ.ವಿ

ಉಪಗ್ರಹಗಳ ಕಾರ್ಯಾಚರಣೆ ಮತ್ತು ಸ್ವಾಸ್ಥ್ಯ ವಿಶ್ಲೇಷಣಾ ಕ್ಷೇತ್ರದಲ್ಲಿ ಸಾಧನೆ ಮೆರೆದು ಚಂದ್ರಯಾನ ಯೋಜನೆಯ ರೂವಾರಿಗಳಲ್ಲಿ ಒಬ್ಬರಾದವರು

ದಿವ್ಯಾ ಎಸ್.ಆರ್.

'ಪಣಿಯನ್' ಬುಡಕಟ್ಟು ಸಮುದಾಯದಲ್ಲಿ ಶೈಕ್ಷಣಿಕ ಸಂಚಲನ ಮೂಡಿಸಿದ ಸಾಧಕಿ

Special Partner BHIMA
Fashion Partner BSC
Associate Sponsors Muthoot Finance VIPS V.G.PAREKH & CO.
TV Partner R.ಕನ್ನಡ

ದೃಢೀಕೃತ ಟಿಕೆಟ್ ಇದ್ದರೆ ಮಾತ್ರ ಪ್ಲಾಟ್‌ಫಾರ್ಮ್‌ಗೆ ಪ್ರವೇಶ: ರೈಲ್ವೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರೈಲ್ವೆ ಪ್ಲಾಟ್‌ಫಾರ್ಮ್‌ಗಳಲ್ಲಿ ಜನದಟ್ಟಣೆ ನಿಯಂತ್ರಿಸಲು ಬೆಂಗಳೂರು ಸೇರಿ ಜನನಿಬಿಡ 60 ನಿಲ್ದಾಣಗಳಲ್ಲಿ ದೃಢೀಕೃತ ಟಿಕೆಟ್ ಹೊಂದಿರುವ ಪ್ರಯಾಣಿಕರಿಗೆ ಮಾತ್ರ ಪ್ಲಾಟ್‌ಫಾರ್ಮ್‌ಗಳಿಗೆ ಪ್ರವೇಶಿಸಲು ಅವಕಾಶ ನೀಡಲು ಭಾರತೀಯ ರೈಲ್ವೆ ನಿರ್ಧರಿಸಿದೆ.

ಶುಕ್ರವಾರ ಇಲ್ಲಿ ರೈಲ್ವೆ ಉನ್ನತ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಭಾರಿ ಜನದಟ್ಟಣೆ ಇರುವ ದೇಶದ ಪ್ರಮುಖ ನಿಲ್ದಾಣಗಳಲ್ಲಿ ಜನಸಂದಣಿ ನಿಯಂತ್ರಣ ಕ್ರಮಗಳನ್ನು ಜಾರಿಗೆ ತರಲಾಗುವುದು ಎಂದು ಘೋಷಿಸಿದರು.

ನವದೆಹಲಿ, ಆನಂದ್ ವಿಹಾರ್, ವಾರಾಣಸಿ, ಅಯೋಧ್ಯೆ ಮತ್ತು ಪಟ್ನಾ ನಿಲ್ದಾಣಗಳಲ್ಲಿ ಪ್ರವೇಶ ನಿಯಂತ್ರಣದ ಪ್ರಾಯೋಗಿಕ ಯೋಜನೆಗಳು ಪ್ರಾರಂಭವಾಗಿವೆ. 60 ನಿಲ್ದಾಣಗಳಲ್ಲಿ ಸಂಪೂರ್ಣ ಪ್ರವೇಶ ನಿಯಂತ್ರಣವನ್ನು ಪ್ರಾರಂಭಿಸಲಾಗುವುದು. ದೃಢೀಕೃತ ಟಿಕೆಟ್ ಹೊಂದಿರುವ ಪ್ರಯಾಣಿಕರಿಗೆ ಪ್ಲಾಟ್‌ಫಾರ್ಮ್‌ಗಳಿಗೆ ನೇರ ಪ್ರವೇಶ ನೀಡಲಾಗುವುದು. ಟಿಕೆಟ್ ಇಲ್ಲದವರು ಅಥವಾ ಕಾಯುವ ಪಟ್ಟಿ ಟಿಕೆಟ್ ಹೊಂದಿರುವವರು ಹೊರಗಿನ ಕಾಯುವ ಪ್ರದೇಶದಲ್ಲಿ ಕಾಯಬೇಕು. ನಿಲ್ದಾಣಗಳಲ್ಲಿನ ಎಲ್ಲ ಅನಧಿಕೃತ ಪ್ರವೇಶ ದ್ವಾರಗಳನ್ನು ಮುಚ್ಚಲಾಗುತ್ತದೆ' ಎಂದು ತಿಳಿಸಿದ್ದಾರೆ.

ಸಂಭಲ್: ಎಸ್‌ಡಿಎಂ ಕಚೇರಿ ಎದುರು 'ಹವನ', ಪ್ರತಿಭಟನೆ

ಸಂಭಲ್ (ಉತ್ತರ ಪ್ರದೇಶ) (ಪಿಟಿಐ): ಶಾಹಿ ಜಾಮಾ ಮಸೀದಿಯ ಆವರಣದಲ್ಲಿ ಪ್ರಾರ್ಥನೆ ಮಾಡಲು ಅವಕಾಶ ನೀಡಲಿಲ್ಲ ಎಂದು ಸಂಭಲ್‌ನ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ (ಎಸ್‌ಡಿಎಂ) ಕಚೇರಿ ಎದುರು ಹಿಂದೂ ಮಹಾಸಭಾ ಸದಸ್ಯರು ಶುಕ್ರವಾರ ಹವನ ಮಾಡಿ, ಪ್ರತಿಭಟನೆ ವ್ಯಕ್ತಪಡಿಸಿದರು.

ಮಾರ್ಚ್ 14ರಂದು ಹೋಳಿ ಹಬ್ಬವಿದೆ. ಅದೇ ದಿನ ಮುಸ್ಲಿಮರು ರಂಜಾನ್ ಹಬ್ಬದ ಮೊದಲ ಪ್ರಾರ್ಥನೆಯನ್ನು ಸಲ್ಲಿಸುವರು. ಅಂದು ಮಧ್ಯಾಹ್ನ 2.30ರವರೆಗೆ ಹಿಂದೂಗಳು ಹೋಳಿ ಆಚರಿಸಬೇಕು. ಆನಂತರ ಮುಸ್ಲಿಮರು ಜುಮ್ಮಾ ನಮಾಜ್ ಮಾಡಬೇಕು ಎಂದು ಶುಕ್ರವಾರ ಸ್ಥಳೀಯ ಆಡಳಿತವು ಆದೇಶಿಸಿದೆ.

'ದೆಹಲಿಯಿಂದ ಬಂದ ಹಿಂದೂ ಮಹಾಸಭಾದ ಕೆಲವರು ಮಸೀದಿಯ ಆವರಣದಲ್ಲಿ ಹವನ, ಪೂಜೆ, ಅರ್ಚನೆ ಮಾಡಲು ಅನುಮತಿ ಕೋರಿದರು. ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿರುವುದರಿಂದ ಅನುಮತಿ ನೀಡಲು ಸಾಧ್ಯವಿಲ್ಲ' ಎಂದು ಎಸ್‌ಡಿಎಂ ವಂದನಾ ಮಿಶ್ರಾ ಹೇಳಿದರು.

ಅನುಮತಿ ನಿರಾಕರಿಸಿದ್ದರಿಂದ ಹಿಂದೂ ಮಹಾಸಭಾದವರು ಎಸ್‌ಡಿಎಂ ಕಚೇರಿ ಎದುರು ಹವನ ಮಾಡಿ, ಅದನ್ನು 'ದೇವಭೂಮಿ'ಯೆಂದು ಕರೆದಿದ್ದಾರೆ.

NAVODAYA VIDYALAYA SAMITI,
Regional Office,Hyderabad
Notification-01/2025-26

Online applications are invited for ENGAGEMENT OF TEACHERS ON CONTRACT BASIS IN JNVs OF HYDERABAD REGION FOR THE ACADEMIC YEAR 2025-26

For Detailed Notification, Guidelines and Eligibility Criteria, please visit our Website
https://navodaya.gov.in/nvs/ro/Hyderabad/en/home/

Links for Online submission of application
For TGTs - https://forms.gle/Cowc4mNgyPryY13F7
For PGTs - https://forms.gle/dE6LNukVZVbCnJAe6

Links for Submission of Online Application Forms will open from 08/03/2025 at 09:00 AM To - 18/03/2025 at 09:00 PM

Tentative Dates for Physical Interview (offline) 07th to 09th April 2025

Note: Candidates must ascertain their eligibility for the post applied before filling up the application form.

UNIVERSITY OF AGRICULTURAL SCIENCES, DHARWAD
Office of the Registrar, Krishinagar, Dharwad - 580 005.
Karnataka Ph.: 0836-2214203, E-mail : registrar@uasd.in

No. : R/Acad/Affiliation/BoM-78/2024-25 Date : 04-03-2025

NOTIFICATION

The University of Agricultural Sciences, Dharwad invites applications for affiliation to **Start New College in the field of Agriculture / Agribusiness Management / Forestry / Community Science from eligible institutions,** as per the guidelines provided in Annexure-1 in the prescribed proforma provided in Annexure-2. The University guidelines, application proforma, UAS Act, 2009 and ICAR Model Act (Revised 2023) are uploaded on the **University Website : www.uasd.edu** for reference.

The Last Date for Submission of Filled-in Applications is : 26-03-2025.

The Registrar, UAS, Dharwad, E-mail : registrar@uasd.in, Phone : 0836 - 2214203 may be contacted for further details.

DIPR/Dharwad/1059/Manipal/2024-25 Sd/- Registrar.

ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-2, ನಂ.642, 2ನೇ ಮಹಡಿ,
ಪಯೋನೀರ್ ಪ್ಲಾಜಾ, ಕೆಂಚೇನಹಳ್ಳಿ ಮುಖ್ಯ ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098.
ದೂರವಾಣಿ: 080-26994402 jcctdgsto2.bng@ctd.ka.gov.in

ಸಂಖ್ಯೆ: ವಾತೆಜಂಆ(ಆ)ವಿಸ&ಸೇತೆಕ-2/ಡಿಇಓ/ಇ-ಪ್ರೊ/ಸಿಆರ್-5/2024-25 ದಿನಾಂಕ: 05.03.2025

ಹೊರಗುತ್ತಿಗೆ ಆಧಾರದ ಮೇಲೆ ತಾಂತ್ರಿಕ ವಿಶ್ಲೇಷಕರ (Technical Analyst) ಸೇವೆಯನ್ನು ಒದಗಿಸಲು ಇ-ಟೆಂಡರ್ ಅಧಿಸೂಚನೆ

ಈ ಕಛೇರಿಗೆ 18 ತಾಂತ್ರಿಕ ವಿಶ್ಲೇಷಕರ (Technical Analyst) ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.

1) ಆಕ್ಷೇಪಣೆ/ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 10.03.2025. 2) ಬಿಡ್‌ನ ಪೂರ್ವಭಾವಿ ಸಭೆ ದಿನಾಂಕ : 12.03.2025. 3) ಆಕ್ಷೇಪಣೆ/ ಪ್ರಶ್ನೆಗಳಿಗೆ ಉತ್ತರ ನೀಡುವ ಕಡೆಯ ದಿನಾಂಕ : 14.03.2025. 4) ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 17.03.2025. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 19.03.2025. 6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ; 21.03.2025.

ನಿಗದಿತ ಟೆಂಡರ್ ನಮೂನೆ ಹಾಗೂ ಟೆಂಡರ್ ಷರತ್ತುಗಳ ವಿವರಗಳಿಗೆ ಕರ್ನಾಟಕ ಸರ್ಕಾರದ ವೆಬ್‌ಸೈಟ್ https://kppp.karnataka.gov.in ಅಥವಾ ವಾಣಿಜ್ಯ ತೆರಿಗೆ ಇಲಾಖೆಯ https://ctax.kar.nic.in ಗಳನ್ನು ಸಂಪರ್ಕಿಸಿ.

ಸಹಿ/-
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ-2, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/5531/ಆಕಾರ್/2024-25

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979 &Endst. No.MCI-37(1)(Recog.-18)(UG)/2017-Med./109629,Dt: 06/05/2019
DIRECTOR: 8147796529 PRINCIPAL :8147796527
CAO:8147796526 PA : 8147796539. e-mail-ids:directorbmcrcballari@gmail.com, website :https://bmcrcballari.karnataka.gov.in principal: bmcrcballari@gmail.com

No:BMCRC/SUP/TEND/FURNITURS/16/2024-25/304
Date: 05.03.2025

ಇ-ಟೆಂಡರ್ ಅಧಿಸೂಚನೆ

ಬಿಎಂಸಿಆರ್ ಸಿ, ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಪೀಠೋಪಕರಣಗಳನ್ನು ಪೂರೈಸಲು ಕೆ.ಟಿ.ಪಿ.ಪಿ ಅಧಿನಿಯಮ-1999-2000ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ-ಪೋರ್ಟಲ್ **https://kppp.karnataka.gov.in** ಮೂಲಕ ಇ-ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರನ್ನು **ದಿನಾಂಕ: 04.04.2025** ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ ರೂ.960.00 ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ **https://bmcrcballari.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/- ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/998/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆ ಇಲಾಖೆ)
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6, ಕೆ.ಐ.ಎ.ಡಿ.ಬಿ.ಕಟ್ಟಡ, 'ಬಿ' ಬ್ಲಾಕ್, 3ನೇ ಮಹಡಿ, 14ನೇ ಅಡ್ಡರಸ್ತೆ, 4ನೇ ಫೇಸ್, ಪೀಣ್ಯ 2ನೇ ಹಂತ, ಬೆಂಗಳೂರು-560058, ದೂರವಾಣಿ ಸಂಖ್ಯೆ: 080-28363927.

ಸಂಖ್ಯೆ: ವಾತೆಜಂಆ(ಆ)/ವಿಸ&ಸೇತೆಕ-6/ಟಿ.ಎ/ಸಿ.ಆರ್-18/2024-25 ದಿನಾಂಕ.06-03-2025

ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6, ಕೆ.ಐ.ಎ.ಡಿ.ಬಿ.ಕಟ್ಟಡ, ಬಿ' ಬ್ಲಾಕ್, 3ನೇ ಮಹಡಿ, 14 ನೇ ಅಡ್ಡ ರಸ್ತೆ, 4 ನೇ ಹಂತ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು-560058 ಇಲ್ಲಿಗೆ **01 (ಒಂದು) ವರ್ಷದ ಅವಧಿಗೆ ಅಥವಾ ವಾಣಿಜ್ಯ ತೆರಿಗೆ ಪರಿವೀಕ್ಷಕರುಗಳ ಹುದ್ದೆಗಳು ನೇರ ನೇಮಕಾತಿಯಿಂದ ಭರ್ತಿಯಾಗುವವರೆಗೆ** ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಅವಶ್ಯಕವಿರುವ 21 ಜನ **ತಾಂತ್ರಿಕ ವಿಶ್ಲೇಷಕರ ಸೇವೆಯನ್ನು ಪಡೆಯಲು** ಪ್ರತಿಷ್ಠಿತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿನಾಂಕ: 06-03-2025** ರಂದು 1999ರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಇ-ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಲಾಗಿದೆ.

ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15-03-2025 ಸಂಜೆ: 4.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗೆ ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು ಗಮನಿಸಿ: **http://kppp.karnataka.gov.in,https://gst.kar.nic.in/**

ಸಹಿ/- ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6. ಬೆಂಗಳೂರು.

DIPR/CP/RO/5536/2024-25

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು-560052. ಫೋನ್: 080-22268677/78/79, ಫ್ಯಾಕ್ಸ್: 080-22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಎಸ್/ಎಫ್-34/ವಾ-16/1607 ದಿನಾಂಕ: 06.03.2025

ಪ್ರಕಟಣೆ

ವಿಷಯ: **ಚರ್ಚಾಪತ್ರ ಕುರಿತಂತೆ ಸಾರ್ವಜನಿಕರಿಂದ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ಆಹ್ವಾನಿಸುವ ಬಗ್ಗೆ.**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು **"ನಿಯಂತ್ರಣ ಅವಧಿ 2026ಕ್ಕೆ ಮುನಿಸಿಪಲ್ ಘನ ತ್ಯಾಜ್ಯ ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳಿಂದ ವಿದ್ಯುತ್ ಖರೀದಿಗಾಗಿ ಮಾನದಂಡನಗಳ ನಿರ್ಧರಣೆ ಹಾಗೂ ದರ ಪರಿಷ್ಕರಣೆ"** ಬಗ್ಗೆ ಚರ್ಚಾಪತ್ರವನ್ನು ಹೊರಡಿಸಿದೆ ಹಾಗೂ ಈ ಚರ್ಚಾಪತ್ರ ಕುರಿತಂತೆ ಸಾರ್ವಜನಿಕರು / ಆಸಕ್ತರಿಂದ ಆಕ್ಷೇಪಣೆ / ಅಭಿಪ್ರಾಯ ಹಾಗೂ ಸಲಹೆಗಳನ್ನು ಆಯೋಗವು ಆಹ್ವಾನಿಸುತ್ತದೆ.

ಸದರಿ ಚರ್ಚಾ ಪತ್ರವನ್ನು ಆಯೋಗದ ಅಂತರ್ಜಾಲ ತಾಣ **https://kerc.karnataka.gov.in** ಯಲ್ಲಿ ಪ್ರಕಟಿಸಲಾಗಿದೆ. ಆಸಕ್ತರು / ಸಾರ್ವಜನಿಕರು ತಮ್ಮ ಆಕ್ಷೇಪಣೆ / ಅಭಿಪ್ರಾಯ ಹಾಗೂ ಸಲಹೆಗಳಿದ್ದಲ್ಲಿ **ದಿನಾಂಕ: 26.03.2025 ರೊಳಗೆ ಅಥವಾ ಅದಕ್ಕೂ ಮುಂಚಿತವಾಗಿ** ಲಿಖಿತ ರೂಪದಲ್ಲಿ ಆಯೋಗದ ಕಾರ್ಯದರ್ಶಿಯವರಿಗೆ ಸಲ್ಲಿಸಬಹುದಾಗಿದೆ.

ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

DIPR/CP/5527/2024-25

ನಗರಸಭಾ ಕಾರ್ಯಾಲಯ, ದಾಂಡೇಲಿ
ಕಛೇರಿ ವಿಳಾಸ: ಸಿವಿಕ್ ಸೆಂಟರ್ ಏರಿಯಾ, ಜೆ.ಎನ್ ರಸ್ತೆ, ದಾಂಡೇಲಿ-581325
ಕಛೇರಿ ಫೋನ ನಂ: 08284-231482 E-mail id: ka.dandeli.cmc@gmail.com
www.dandelicity.gov.in

ನಂ:ನಸದಾಂ:ತಾಂತ್ರಿಕ/ಟೆಂಡರ:ವಿವ ದಿನಾಂಕ: 25-02-2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ. ಪಿ. ಪಿ. ಪೋರ್ಟಲ್ ಮುಖಾಂತರ ಮಾತ್ರ)

ದಾಂಡೇಲಿ ನಗರಸಭೆಗೆ ಸ್ವಚ್ಛ ಭಾರತ ಮಿಷನ 1.0 ಯೋಜನೆ ಉಳಿತಾಯ ಮೊತ್ತ 2019-20, 2020-21, 2022-23ನೇ ಸಾಲಿನ ಎಸ್.ಎಫ್.ಸಿ ಉಳಿತಾಯ ಮೊತ್ತ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಬಿಡುಗಡೆಯಾದ ಅನುದಾನದಲ್ಲಿ ಉಳಿತಾಯ ಮೊತ್ತದ ಅನುದಾ, 2020-21 ಹಾಗೂ 2021-22ನೇ ಸಾಲಿನ ಎಸ್.ಎಫ್.ಸಿ ಯೋಜನೆಯಡಿಯಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಉಳಿತಾಯ ಮೊತ್ತ ಅನುದಾನದಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆ ಹಾಗೂ ನಿಯಮಾವಳಿ-2000 KPPP Portal ಮೂಲಕ ದ್ವೀ-ಲಕೋಟೆ ಪದ್ಧತಿಯಲ್ಲಿ ಐಟಂವಾರು KG-2 ಬಿಡ್ ಕರಾರಿನಂತೆ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಟೆಂಡರನ್ನು ಇಂಡೆಂಟ್ ಸಂಖ್ಯೆ: 1) DMA/2024-25/IND 4364 (ಇತರೆ) 2)DMA/202425/IND4367(ಇತರೆ), 3) DMA/2024-25/BR/WORK_INDENT 36714 (ಇತರೆ) ಆಹ್ವಾನಿಸಲಾಗಿದೆ. www.kppp.karnataka.gov.in ಮೂಲಕ ಟೆಂಡರ್ ಫಾರ್ಮಗಳನ್ನು ಭರ್ತಿ ಮಾಡಿ ಅರ್ಜಿಗಳನ್ನು ಸಲ್ಲಿಸುವುದು. ಹೆಚ್ಚಿನ ಮಾಹಿತಿಯನ್ನು ನಗರಸಭೆಯ ವೆಬ್ ಸೈಟ್ www.dandelicity.mrc.gov.in ನಲ್ಲಿ ಪಡೆಯಬಹುದು.

ಟೆಂಡರು ವಿವರ: (1) ಟೆಂಡರ ಕುರಿತು ವಿಚಾರಣೆಗಾಗಿ ದಿನಾಂಕ: 14-03-2025 (2) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 15-03-2025 ಗಂಟೆಗೆ: 16:30 (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17-03-2025 ಗಂಟೆಗೆ: 16:30 (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 19-03-2025 ಗಂಟೆಗೆ: 17:00

ಸಹಿ/-(ಶ್ರೀ ವಿವೇಕ ಬನ್ನೆ)KMAS ಪೌರಾಯುಕ್ತರು, ನಗರಸಭೆ, ದಾಂಡೇಲಿ
ಸಹಿ/- (ಶ್ರೀ ಅಷ್ಫಾಕ್ ಶೇಖ) ಅಧ್ಯಕ್ಷರು, ನಗರಸಭೆ, ದಾಂಡೇಲಿ

DIPR/ADK/KSMCA/960/24-25 dt.07.03.2025

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)
ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ
ಬಾಗಲಕೋಟ ರಸ್ತೆ, ಜಲನಗರ-586109
ದೂರವಾಣಿ : 08352-278536, ಸಹಾಯವಾಣಿ: 08352-222474
ಫ್ಯಾಕ್ಸ್:08352-278532,
Website: www.bijapurcity.gov.in

ನಂ:ಮನಪಾವಿ/ಕಂ.ವಿ/2024-25/6597 ದಿನಾಂಕ:06.03.2025

ಪತ್ರಿಕಾ ಪ್ರಕಟಣೆ

ವಿಜಯಪುರ ನಗರದ ಸಾರ್ವಜನಿಕರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ, ಸನ್ 2025-26ನೇ ಸಾಲಿನ ವಿಜಯಪುರ ಮಹಾನಗರ ಪಾಲಿಕೆ, ಒಡೆತನದಲ್ಲಿ ಬರುವ (01) ದೈನಂದಿನ ಹಾಗೂ ಸಂತೆ ದಿನಗಳಂದು ನಡೆಯುತ್ತಿರುವ ಸಂತೆ ಬಜಾರ, ಸಂಡೆ ಬಜಾರ, ಉಪ್ಪಲಿ ಬುರುಜ ಹತ್ತಿರ ಇರುವ ಸಂತೆ ಬಜಾರಿನ ರಸ್ತೆ ಅಕ್ಕ ಪಕ್ಕ ಬೀದಿಯಲ್ಲಿ ಕಾಯಿಪಲ್ಲೆ ಮತ್ತು ಇನ್ನಿತರೆ ವ್ಯಾಪಾರ ಮಾಡುವ ವ್ಯಾಪಾರಸ್ಥರಿಂದ ಫೀ ವಸೂಲಿ ಮಾಡುವದು. ಮತ್ತು (02) ಕೋಳಿ ಬಜಾರಿನ ರಸ್ತೆ ಅಕ್ಕ ಪಕ್ಕ ಬೀದಿಯಲ್ಲಿ ಕೋಳಿ ವ್ಯಾಪಾರ ಮಾಡುವ ವ್ಯಾಪಾರಸ್ಥರಿಂದ ಫೀ ವಸೂಲಿ ಮಾಡುವ ಬಗ್ಗೆ, ದಿನಾಂಕ: **27-03-2025** ರಂದು ಮಹಾನಗರಪಾಲಿಕೆ ಕಛೇರಿ, ಜಲನಗರ ಸಭಾ ಭವನದಲ್ಲಿ ಗುತ್ತಿಗೆ (ಟೆಂಡರ್) ನೀಡುವ ಬಗ್ಗೆ, ಬಹಿರಂಗ ಲಿಲಾವ ಕರೆಯಲಾಗಿದೆ. ಲಿಲಾವಿನಲ್ಲಿ ಭಾಗವಹಿಸುವವರು ಡಿ.ಡಿ ಹಾಗೂ ಜಿ.ಎಸ್.ಟಿ ನಂ. ಇದಲ್ಲಿ ಅರ್ಜಿಯೊಂದಿಗೆ ದಿ: **25-03-2025 ರವರೆಗೆ** ಸಾಯಂಕಾಲ 05.30 ಘಂಟೆ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ. ಸದರ ಹಾರಾಜಿನ ಷರತ್ತು ಮತ್ತು ಹೆಚ್ಚಿನ ಮಾಹಿತಿಯನ್ನು ಪಾಲಿಕೆಯ ಕಛೇರಿ ನೋಟಿಸ ಬೋರ್ಡಿಗೆ ಪ್ರಚ್ಯೂರಪಡಿಸಲಾಗಿದೆ, ಹಾಗೂ ಪಾಲಿಕೆ ಅಂತರ್ಜಾಲ (website) www.vijayapuracity.mrc.gov.in ಮತ್ತು ಕಂದಾಯ ವಿಭಾಗದಲ್ಲಿ ವಿಷಯ ನಿರ್ವಾಹಕರಿಂದ ಮಾಹಿತಿ ಪಡೆಯಬಹುದಾಗಿದೆ.

ಸಹಿ/- ಆಯುಕ್ತರು, ಮಹಾನಗರ ಪಾಲಿಕೆ, ವಿಜಯಪುರ
ಸಹಿ/- ಮಹಾಪೌರರು ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/ಕೆಎಸ್‌ಎಂಸಿಎ/756/2024-25

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-2/ಟೆಂಡರ/2024-25/5907 ದಿನಾಂಕ: 07/03/2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024-25 ನೇ ಸಾಲಿನ ಲೆಕ್ಕ ಶೀರ್ಷಿಕೆ 5054-ಜಿಮುರ ಸುಧಾರಣೆ ಅಡಿ 3 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಮೊತ್ತ ಪ್ರತಿ ಕಾಮಗಾರಿಗೆ ರೂ. 80.00 ಲಕ್ಷ ಇರುವ ಕಾಮಗಾರಿಗಳಿಗೆ ಮರುಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು 1)ಆಕ್ಷೇಪಣೆ -ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 21-03-2025 (ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:25-03-2025 (ಸಾಯಂಕಾಲ 5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):27-03-2025 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 5)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1857/KSMCA/2024-25

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ,
ಇಂದಿರಾನಗರ 2ನೇ ಹಂತ, ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು-560 038.
ಇ-ಮೇಲ್ ವಿಳಾಸ: info@kuidfc.com ಅಂತರ್ಜಾಲ ವಿಳಾಸ: www.kuidfc.com

ಸಂಖ್ಯೆ: KUIDFC:Admn/Rent Vehicle/Tender/CR-254/2025-26 ದಿನಾಂಕ: 07.03.2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ- 2ನೇ ಕರೆ

ಕೆಯುಐಡಿಎಫ್‌ಸಿ, ಬೆಂಗಳೂರು, ಇವರು **ಒಂದು ವರ್ಷದ ಅವಧಿಗೆ ಮಾಸಿಕ ಆಧಾರದ ಮೇಲೆ ಲಘು ವಾಣಿಜ್ಯ ಪ್ರಯಾಣಿಕ ವಾಹನಗಳ (ಹಳದಿ ಬೋರ್ಡ್) ಬಾಡಿಗೆಗೆ** ಅಧಿಕೃತ ಸೇವಾ ಪೂರೈಕೆದಾರರಿಂದ ಟೆಂಡರ್‌ನ್ನು ಆಹ್ವಾನಿಸುತ್ತದೆ. ಟೆಂಡರ್ ದಾಖಲೆಗಳು **ದಿನಾಂಕ: 10-03-2025ರಿಂದ 19-03-2025 ರ ಸಂಜೆ 5.30 ಗಂಟೆವರೆಗೆ** ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಲಭ್ಯವಿರುತ್ತದೆ. ಬಿಡ್ಡುದಾರರು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ವೀಕ್ಷಿಸಬಹುದು, ಡೌನ್‌ಲೋಡ್ ಹಾಗೂ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಬಹುದು. ಯಾವುದೇ ಇನ್ನಿತರ ಹೆಚ್ಚಿನ ಪ್ರಕಟಣೆಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನೋಡಬಹುದು.

ಸಹಿ/-
ಪ್ರಧಾನ ವ್ಯವಸ್ಥಾಪಕರು (ಆಡಳಿತ)

ವಾಸಾಸಂಇ/ವಾಪ್ರ/5525/ಎಂಎಎ/2024-25

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್,
ಬೆಂಗಳೂರು-560010. ಟೆಲಿಫ್ಯಾಕ್ಸ್: 080-22024000
ಇ-ಮೇಲ್: mdkrdcl@gmail.com, cekrdcl@gmail.com ವೆಬ್‌ಸೈಟ್: http://www.krdcl.in

ಸಂಖ್ಯೆ: ಕರಅನಿನಿ/ಐಎಫ್‌ಬಿ/2024-25/32 ದಿನಾಂಕ: 07-03-2025

ರಸ್ತೆ ಬಳಕೆದಾರರ ಶುಲ್ಕ ಸಂಗ್ರಹಣೆಗಾಗಿ ಬಿಡ್‌ಗಳ ಆಹ್ವಾನ

(ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) **"ಕರ್ನಾಟಕದ ದಾವಣಗೆರೆ-ಸಂತೆಬೆನ್ನೂರು-ಚೆನ್ನಗಿರಿ-ಬಿರೂರು ರಸ್ತೆಯಲ್ಲಿನ ಕುರ್ಕಿ ಗ್ರಾಮ ಮತ್ತು ಹನ್ನೆ (ಜವೂರು) ಗ್ರಾಮದ ಹತ್ತಿರವಿರುವ ಟೋಲ್ ಪ್ಲಾಜಾಗಳಿಂದ ರಸ್ತೆ ಬಳಕೆದಾರರ ಶುಲ್ಕ ಸಂಗ್ರಹಣೆಗಾಗಿ"** ಪ್ರಸಿದ್ಧ ಏಜೆನ್ಸಿಗಳಿಂದ ಬಿಡ್‌ಗಳನ್ನು ಆಹ್ವಾನಿಸಿದೆ. ಹೆದ್ದಾರಿ ಸಂಖ್ಯೆ: **ರಾಜ್ಯ ಹೆದ್ದಾರಿ-76.** ಉದ್ದ (ಕಿಮೀಗಳಲ್ಲಿ) : **105.63.** ಅಂದಾಜು ವಾರ್ಷಿಕ ಸಂದಾಯ (ರೂ. ಲಕ್ಷಗಳಲ್ಲಿ) : **900.00.** ಇಎಂಡಿ (ಲಕ್ಷಗಳಲ್ಲಿ) : **13.50.**

ಆಸಕ್ತ ಬಿಡ್‌ದಾರರು ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ **www.kppp.karnataka.gov.in** ಮುಖಾಂತರ ಬಿಡ್ಡಿಂಗ್ ದಾಖಲೆಗಳನ್ನು ವೀಕ್ಷಿಸಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. (ಎ) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **19.03.2025ರಂದು ಸಂಜೆ 5.30 ಗಂಟೆವರೆಗೆ.** (ಬಿ) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **21.03.2025ರಂದು ಬೆಳಿಗ್ಗೆ 11.00 ಗಂಟೆಗೆ ಕೆಆರ್‌ಡಿಸಿಎಲ್ ಕೇಂದ್ರ ಕಛೇರಿಯಲ್ಲಿ.**

ಗಮನಿಸಿ: ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಆದರೆ ಮುಂದಿನ ಬದಲಾವಣೆಗಳನ್ನು ಕೇವಲ ಕೆಪಿಪಿ ಪೋರ್ಟಲ್/ ಕರಅನಿನಿ ವೆಬ್‌ಸೈಟ್ **https://www.krdcl.in** ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/- ಮುಖ್ಯ ಅಭಿಯಂತರರು,
ಕರಅನಿನಿ ಬೆಂಗಳೂರು

DIPR/CP/YC/5535/2024-25

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
"ಸಂಪರ್ಕ ಸೌಧ", ನಂ.8, ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್,
ಬೆಂಗಳೂರು-560010. ಟೆಲಿಫ್ಯಾಕ್ಸ್: 080-22024000
ಇಮೇಲ್ : mdkrdcl@gmail.com cekrdcl@gmail.com

ಸಂ. ಕರಅನಿನಿ/ಐಎಫ್‌ಬಿ/2024-25/31 ದಿನಾಂಕ : 07-03-2025

ರಸ್ತೆ ಬಳಕೆದಾರರ ಶುಲ್ಕ ಸಂಗ್ರಹಣೆಗಾಗಿ ಬಿಡ್‌ಗಳ ಆಹ್ವಾನ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆಆರ್‌ಡಿಸಿಎಲ್) ಕೆಳಕಂಡ ರಸ್ತೆಗಳಲ್ಲಿ ರಸ್ತೆ ಬಳಕೆದಾರರ ಶುಲ್ಕ ಸಂಗ್ರಹಣೆಗಾಗಿ ಹೆಸರಾಂತ ಏಜೆನ್ಸಿಗಳಿಂದ ಬಿಡ್‌ಗಳನ್ನು ಆಹ್ವಾನಿಸಲು ಉದ್ದೇಶಿಸಿದೆ.

1) ರಸ್ತೆಯ ಹೆಸರು : ಕರ್ನಾಟಕ ರಾಜ್ಯದ ಹಿರೇಕೆರೂರು – ರಾಣಿಬೆನ್ನೂರು ರಸ್ತೆಯ ಹಂಸಭಾವಿ ಮತ್ತು ಹೆಡಿಯಾಲ ಗ್ರಾಮಗಳ ಬಳಿ 55.69 ಕಿ.ಮೀ. ಅಂತರದಲ್ಲಿನ ಟೋಲ್ ಪ್ಲಾಜಾಗಳಿಂದ ಬಳಕೆದಾರ ಶುಲ್ಕದ ಸಂಗ್ರಹಣೆ. **ರಾ.ಹೆ. ಸಂ.:** ರಾಹೆ-62 & ರಾಹೆ-76. **ಉದ್ದ ಕಿ.ಮೀ.ಗಳಲ್ಲಿ :** 55.7 **ಅಂದಾಜು ವಾರ್ಷಿಕ ಸಂಗ್ರಹಣೆ (ಲಕ್ಷಗಳಲ್ಲಿ) ಇಎಆರ್ :** ರೂ. 139.00 **ಇಎಂಡಿ ಲಕ್ಷಗಳಲ್ಲಿ :** ರೂ. 2.00

2) ರಸ್ತೆಯ ಹೆಸರು : ಕರ್ನಾಟಕ ರಾಜ್ಯದ ಹುನಗುಂದ – ಮುದ್ದೆಬಿಹಾಳ – ತಾಳಿಕೋಟೆ (ರಾ.ಹೆ.41 ಮತ್ತು ರಾ.ಹೆ.60) ರಸ್ತೆಯ ಧನೂರು ಮತ್ತು ದೇವರಹೊಳಬಾಗಿಲು ಗ್ರಾಮದ ಬಳಿ 64.90 ಕಿ.ಮೀ. ಅಂತರದಲ್ಲಿನ ಟೋಲ್ ಪ್ಲಾಜಾಗಳಿಂದ ಬಳಕೆದಾರ ಶುಲ್ಕದ ಸಂಗ್ರಹಣೆ. **ರಾ.ಹೆ. ಸಂ.:** ರಾಹೆ-41 & ರಾಹೆ-60. **ಉದ್ದ ಕಿ.ಮೀ.ಗಳಲ್ಲಿ :** 64.90 **ಅಂದಾಜು ವಾರ್ಷಿಕ ಸಂಗ್ರಹಣೆ (ಲಕ್ಷಗಳಲ್ಲಿ) ಇಎಆರ್ :** ರೂ. 277.00 **ಇಎಂಡಿ ಲಕ್ಷಗಳಲ್ಲಿ :** ರೂ. 4.20

ಆಸಕ್ತ ಬಿಡ್ಡುದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿ ಪೋರ್ಟಲ್) **http://kppp.karnataka.gov.in** ನಲ್ಲಿ ದಾಖಲೆಗಳನ್ನು ಪಡೆಯಬಹುದು ಮತ್ತು ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಬಹುದು.

ವೇಳಾಪಟ್ಟಿಯು ಕೆಳಕಂಡಂತಿದೆ :

(1) ಬಿಡ್-ಪೂರ್ವ ಸಭೆಯನ್ನು ದಿ : **24-03-2025 ರಂದು 15:00 ಗಂಟೆಗೆ** ಕರಅನಿನಿ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿ ನಡೆಸಲಾಗುವುದು ಮತ್ತು ಈ ಸಮಯಕ್ಕೆ ಮುಂಚಿತವಾಗಿ ಬಿಡ್-ಪೂರ್ವ ವಿಚಾರಣೆಗಳನ್ನು ಸಲ್ಲಿಸಬೇಕು. (2) ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **07-04-2025 ರಂದು 17:00 ಗಂಟೆಯವರೆಗೆ** (3)ತಾಂತ್ರಿಕ ಬಿಡ್‌ಗಳನ್ನು ಕರಅನಿನಿ ಕೇಂದ್ರ ಕಛೇರಿಯಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : **08-04-2025 ರಂದು 17:30 ಗಂಟೆಗೆ.**

ಗಮನಿಸಿ, ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಆದರೆ ಮುಂದಿನ ಬದಲಾವಣೆಗಳನ್ನು ಕೇವಲ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ / ಕರಅನಿನಿ ವೆಬ್‌ಸೈಟ್ **http://www.krdcl.in** ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/- ಮುಖ್ಯ ಅಭಿಯಂತರರು,
ಕರಅನಿನಿ, ಬೆಂಗಳೂರು.

ವಾಸಾಸಂಇ/ವಾ.ಪ್ರ/5550/ಶ್ರೇಪ್ರ/2024-25

ಕರ್ನಾಟಕ ಸರ್ಕಾರ
ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು, ಸಿವಿಲ್ ವಿಭಾಗ, ಸಯ್ಯಾಜಿ ರಾವ್ ರಸ್ತೆ, ಮೈಸೂರು.

ಸಂಖ್ಯೆ: ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ-17/2024-25 ದಿನಾಂಕ: 03.03.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಸಿವಿಲ್ : 1) ಟೆಂಡರ್ ಪ್ರಕಟಣೆ ಸಂಖ್ಯೆ.: ಟಿಎನ್-69/2024-25, ದಿನಾಂಕ: 03.03.2025. ಒಟ್ಟು ಕಾಮಗಾರಿಗಳು: 03. ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ): 61.56. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ **ದಿನಾಂಕ: 04.03.2025 ಬೆಳಗ್ಗೆ 11.00 ರ ನಂತರ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 19.03.2025 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 20.03.2025 ಸಂಜೆ 5.30 ಗಂಟೆಗೆ.**

EOI : 2) ಟೆಂಡರ್ ಪ್ರಕಟಣೆ ಸಂಖ್ಯೆ: MCC/H1/SWM/92/2024-25, ದಿನಾಂಕ: 03.03.2025. ಒಟ್ಟು ಕಾಮಗಾರಿಗಳು: 01. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ **ದಿನಾಂಕ: 07.03.2025 ಬೆಳಗ್ಗೆ 11.00 ರ ನಂತರ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 24.03.2025 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 25.03.2025 ಸಂಜೆ 5.30 ಗಂಟೆಗೆ.**

3) ಟೆಂಡರ್ ಪ್ರಕಟಣೆ ಸಂಖ್ಯೆ: MCC/H1/SWM/95/2024-25, ದಿನಾಂಕ: 10.03.2025. ಒಟ್ಟು ಕಾಮಗಾರಿಗಳು: 01. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ **ದಿನಾಂಕ: 10.03.2025 ಬೆಳಗ್ಗೆ 11.00 ರ ನಂತರ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 26.03.2025 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 27.03.2025 ಸಂಜೆ 5.30 ಗಂಟೆಗೆ.**

4) ಟೆಂಡರ್ ಪ್ರಕಟಣೆ ಸಂಖ್ಯೆ.: ಹೆಚ್/ಪವಿ/101/2024-25. ಒಟ್ಟು ಕಾಮಗಾರಿಗಳು: 05. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ **ದಿನಾಂಕ: 10.03.2025 ಬೆಳಗ್ಗೆ 11.00 ರ ನಂತರ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 17.03.2025 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 18.03.2025 ಸಂಜೆ 5.30 ಗಂಟೆಗೆ.**

5) ಟೆಂಡರ್ ಪ್ರಕಟಣೆ ಸಂಖ್ಯೆ.: ಹೆಚ್/ಪವಿ/101/2024-25. ಒಟ್ಟು ಕಾಮಗಾರಿಗಳು: 05. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ **ದಿನಾಂಕ: 10.03.2025 ಬೆಳಗ್ಗೆ 11.00 ರ ನಂತರ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 17.03.2025 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 18.03.2025 ಸಂಜೆ 5.30 ಗಂಟೆಗೆ.**

Goods Tender: 6) ಹೆಚ್1/ಪವಿ/101/2024-25. ಒಟ್ಟು ಕಾಮಗಾರಿಗಳು: 01. ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ): 30.84. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ **ದಿನಾಂಕ: 10.03.2025 ಬೆಳಗ್ಗೆ 11.00 ರ ನಂತರ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 25.03.2025 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 26.03.2025 ಸಂಜೆ 5.30 ಗಂಟೆಗೆ.**

ಅರ್ಹ ಗುತ್ತಿಗೆದಾರರು **(https://kppp.karnataka.gov.in)** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ (ಪೂರ್ವ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ **(https://kppp.karnataka.gov.in)** ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು (ಪೂರ್ವ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

DIPR/MYS/RO1405/2024-25

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹೊಸಕೋಟೆ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಸಂಖ್ಯೆ: ತಾಸಾಆ/ಹೊಕೋ/ಆಡಳಿತ/ಇ-ಟೆಂಡರ್/06/2024-25 ದಿನಾಂಕ: 07.03.2025

ಇ-ಟೆಂಡರ್ ಪ್ರಕಟಣೆ

2025-26ನೇ ಸಾಲಿಗೆ 100 ಹಾಸಿಗೆಗಳ ಸಾಮರ್ಥ್ಯವುಳ್ಳ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹೊಸಕೋಟೆ ಇಲ್ಲಿಗೆ **13 ಗ್ರೂಪ್-ಡಿ ಮತ್ತು 09 ನಾನ್ ಕ್ಲಿನಿಕಲ್ ಸೇವೆಗಳ ಕೆಲಸದ ನಿರ್ವಹಣೆಗಾಗಿ** ಮಾನವ ಸೇವೆಯನ್ನು ನೊಂದಾಯಿತ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಪಡೆಯಲು ಇ-ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಏಜೆನ್ಸಿಯವರು ಅಗತ್ಯ ದಾಖಲಾತಿಗಳೊಂದಿಗೆ ಇ-procurement ಮೂಲಕ ಇ-ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. "E-Tender upload through this website: **http://kppp.karnataka.gov.in"**

1) ಟೆಂಡರ್ ಪ್ರಾರಂಭಿಸುವ ದಿನಾಂಕ: **10.03.2025.** 2) ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ: **24.03.2025ರ ಸಂಜೆ 5.30 ಗಂಟೆಯವರೆಗೆ. 3)** ಇ.ಎಂ.ಡಿ. ಮೊತ್ತ: ರೂ. 1,00,000/- + ಪ್ರಕ್ಯೂರ್‌ಮೆಂಟ್ ಶುಲ್ಕ. **4)** ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **26.03.2025 ಬೆಳಿಗ್ಗೆ 11.00 ಗಂಟೆಗೆ. 5)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ನಂತರ ತಿಳಿಸಲಾಗುವುದು. **6) ಸ್ಥಳ :** ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಹಿ/- **ಆಡಳಿತ ವೈದ್ಯಾಧಿಕಾರಿಗಳು**
ಸಾರ್ವಜನಿಕ ಆಸ್ಪತ್ರೆ, ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ

DIPR/CP/BCPL/5539/2024-25

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)
ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯ -ಮಂಡ್ಯ
ಜಿಲ್ಲಾಧಿಕಾರಿಗಳ ಆವರಣ, ದೂ : 08232-225073/228808
ಫ್ಯಾಕ್ಸ್ : 08232-223033 Email:jdamandya@yahoo.com
ಸಂಖ್ಯೆ: ಜಂಕೃನಿಮಂ/ಸಿ-1/ಹೊರಗುತ್ತಿಗೆ/ಸಿಬ್ಬಂದಿ/2024-25
ದಿ : 06.03.2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕೃಷಿ ಇಲಾಖೆ, ಮಂಡ್ಯ ಜಿಲ್ಲೆಯ ವಿವಿಧ ಕಛೇರಿಗಳಿಗೆ ವಿವಿಧ ಯೋಜನೆಗಳಡಿ 2024-25ನೇ ಸಾಲಿಗೆ ಅವಶ್ಯಕವಾಗಿರುವ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಸುವ ಸಂಬಂಧ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು KPPP ತಂತ್ರಾಂಶದ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಹೊರಗುತ್ತಿಗೆ ಸೇವೆ ಸರಬರಾಜು ಸಂಸ್ಥೆಯವರು KPPP ತಂತ್ರಾಂಶದ ಮುಖಾಂತರ ದಿನಾಂಕ:06.03.2025 ರಿಂದ ದಿನಾಂಕ:20.03.2025 ರವರೆಗೆ ಆನ್‌ಲೈನ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in ಅನ್ನು ವೀಕ್ಷಿಸಬಹುದಾಗಿದೆ.

ಸಹಿ/-ಜಂಟಿ ಕೃಷಿ ನಿರ್ದೇಶಕರು,
ಮಂಡ್ಯ ಜಿಲ್ಲೆ, ಮಂಡ್ಯ

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿಎ/747/2024-25

(ಕರ್ನಾಟಕ ಸರ್ಕಾರ)
ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ, (ವಿಭಾಗೀಯ ಮಟ್ಟದ 150 ಹಾಸಿಗೆಗಳ ಆಸ್ಪತ್ರೆ)
email:crawfordhospital@gmail.com phone:08173-243098
ಸಂ.ಕ್ರಾ.ಸಾ.ಆ.ಸ/ಪಥ್ಯಾಹಾರ/220/2024-25 ದಿನಾಂಕ:04.03.2025

ಇ-ಪ್ರಕ್ಯೂರ್‌ಮೆಂಟ್, ಟೆಂಡರ್ ಪ್ರಕಟಣೆ

ಸಕಲೇಶಪುರ ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆಯ ಒಳರೋಗಿಗಳಿಗೆ 2025-26 ನೇ ಸಾಲಿಗೆ ಸಿದ್ದಪಡಿಸಿದ (ಪಥ್ಯಾಹಾರ) ಊಟ, ಮತ್ತು ಪ್ರಥಮ ದರ್ಜೆ ಬ್ರೇಡ್ ಸರಬರಾಜಿಗಾಗಿ ಟೆಂಡ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:/21/03/2025 ರ ಸಂಜೆ 4.30 ಗಂಟೆ ಟೆಂಡರ್ ತೆರೆಯುವ ದಿನಾಂಕ:24/03/2025 ರಂದು ಬೆಳಗ್ಗೆ 11.00ಗಂಟೆಗೆ ಸಿದ್ದಪಡಿಸಿದ (ಪಥ್ಯಾಹಾರ)ಊಟ ಟೆಂಡರ್ ಅಂದಾಜು ಮೊತ್ತ: 82.80.000/- ಇ.ಎಂ.ಡಿ.ರೂ 207000/- ಪ್ರಥಮ ದರ್ಜೆ ಬ್ರೆಡ್ ಅಂದಾಜು ಮೊತ್ತ: 3.00,000/- ಇ.ಎಂ.ಡಿ.ರೂ 7500-00 ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ಹಾಗೂ ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್ ನಲ್ಲಿ (https://kppp.karnataka.gov.in ಪಡೆಯಬಹುದು.

ಸಹಿ/-ಆಡಳಿತ ವೈದ್ಯಾಧಿಕಾರಿಗಳು, ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ,

ವಾಸಾಸಂಇ/ಹಿಸನಿ/ಹಾಸನ/1033/ಕೆಎಸ್‌ಎಂಸಿಎ/2024-25

ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ-1, ಮಹಾಕವಿ ಕಾಳಿದಾಸ ರಸ್ತೆ,
ಗಾಂಧಿನಗರ, ಬೆಂಗಳೂರು-560 009. ದೂರವಾಣಿ ಸಂಖ್ಯೆ: 080-22205239.

ಸಂಖ್ಯೆ: ವಾತೆಜಂಆ/ಮಾಸಂಅ/ಸಿಆರ್-12/2024-25 ದಿನಾಂಕ: 28-02-2025

ಪ್ರಕಟಣೆ

ವಾಣಿಜ್ಯ ತೆರಿಗೆಗಳ ಇಲಾಖೆಯು GST AMNESTY SCHEME (ಜಿಎಸ್‌ಟಿ ಕ್ಷಮಾದಾನ ಯೋಜನೆ) ಕಾಯ್ದೆಯಲ್ಲಿನ ವಿಷಯವನ್ನು ವರ್ತಕ ಸಮುದಾಯಕ್ಕೆ ಸಾಮಾಜಿಕ ಜಾಲತಾಣಗಳ ಮೂಲಕ ಜಾಗೃತಿ ಮೂಡಿಸಲು 5 ವಿಡಿಯೋ ತುಣುಕುಗಳನ್ನು ಬಿಡುಗಡೆ ಮಾಡಿದ್ದು, ಈ ಯೋಜನೆಯ ಸದುಪಯೋಗ ಪಡೆಯಲು ತೆರಿಗೆ ಪಾವತಿದಾರರು 2017-18, 2018-2019 ಮತ್ತು 2019-2020ರ ತೆರಿಗೆ ಬಾಕಿ ಇರುವ ಆರ್ಥಿಕ ವರ್ಷಗಳಿಗೆ ವರ್ಷವಾರು ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. ಬಾಕಿ ಇರುವ ಪೂರ್ಣ ತೆರಿಗೆಯನ್ನು **31.03.2025ರೊಳಗೆ** ಪಾವತಿಸಿದ ನಂತರ, ನಿಗದಿತ ನಮೂನೆಯಲ್ಲಿ **GST Online Portal ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.06.2025,** ತದನಂತರ ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಲಾಗುವುದು ಎಂಬುದರ ಕುರಿತು ವಿಡಿಯೋ ತುಣುಕುಗಳನ್ನು You-tube CTD Karnataka ಹಾಗೂ ಇಲಾಖಾ ಜಾಲತಾಣ gst.kar.nic.in ನಲ್ಲಿ ವೀಕ್ಷಿಸಿ ವರ್ತಕ ಸಮುದಾಯದವರು GST AMNESTY SCHEMEನ್ನು ಸದುಪಯೋಗಪಡಿಸಿಕೊಳ್ಳಲು ಸೂಚಿಸಿದೆ.

ಸಹಿ/-
ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು

ವಾಸಾಸಂಇ/ವಾ.ಪ್ರ/5405/ಎಂಎಎ/2024-25

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ,
ಕೋಲಾರ-563101. e-mail: eepwdkolar07@gmail.com, website: www.kpwd.gov.in, e-portal : http://kppp.karnataka.gov.in
ದೂರವಾಣಿ ಸಂಖ್ಯೆ: 08152-222022

ಟೆಂಡರ್ ಪ್ರಕಟಣೆ ಸಂಖ್ಯೆ-44/2024-25 ದಿನಾಂಕ: 05.03.2025

ಕರ್ನಾಟಕ ರಾಜ್ಯಪಾಲರ ಪರವಾಗಿ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಅವರು ಈ ಕೆಳಗಿನ ಎರಡು ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ನಿರ್ಮಾಣ ಕಂಪನಿ/ಸಂಸ್ಥೆ/ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಆಸಕ್ತಿಯನ್ನು ಆಹ್ವಾನಿಸಿದ್ದಾರೆ. **(1) The Development of Road joining Andhra Pradesh Border from Malur via Bangarpete & KGF In Kolar District under Design, Build, Operate, Finance, and Transfer (DBOFT) Model. (2) The Development of Road from Srinivaspura to Bangarapete under Design, Build, Operate, Finance, and Transfer (DBOFT) Model. EOI** ಸಲ್ಲಿಸಲು **ಕಡೆಯ ದಿನಾಂಕ ಮತ್ತು ಸಮಯ: 05.03.2025** ರಿಂದ **05.04.2025 ರ 17.30 ಗಂಟೆಗಳವರೆಗೆ. ಮೇಲಿನವುಗಳಿಗಾಗಿ ಪೂರ್ವ-ಬಿಡ್ ಸಭೆಯು 19.03.2025 ರಂದು ಬೆಳಿಗ್ಗೆ 11.00 ಗಂಟೆಗೆ** ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು(ದಕ್ಷಿಣ) ಅವರ ಕಛೇರಿಯಲ್ಲಿ ನಡೆಯಲಿದೆ. ಇದಲ್ಲದೆ EOI ಪ್ರಕ್ರಿಯೆಯಗಾಗಿ ಅರ್ಜಿದಾರರು **50,000-00 ರೂಪಾಯಿಗಳ ಮರುಪಾವತಿಸಲಾಗದ ಮೊತ್ತವನ್ನು (ಪ್ರತಿ ಕೆಲಸಕ್ಕೆ) ರಾಷ್ಟ್ರೀಯ ಬ್ಯಾಂಕಿನ ಪರವಾಗಿ (ಡಿಮಾಂಡ್/ಡಿಡಿಎಸ್) ಕರಡು ರೂಪದಲ್ಲಿ ಕಾರ್ಯಪಾಲಕ ಇಂಜಿನಿಯರ್, ಲೋ.ಇ, ಕೋಲಾರ ವಿಭಾಗ ರವರ ಹೆಸರಿನಲ್ಲಿ ಪಾವತಿಸಬೇಕು.** ವಿವರವಾದ ನಿಯಮಗಳು ಮತ್ತು ಷರತ್ತುಗಳು EOI ಬಿಡ್ ಡಾಕ್ಯುಮೆಂಟ್‌ನಲ್ಲಿ ಲಭ್ಯವಿರುತ್ತದೆ.

ಹೆಚ್ಚಿನ ವಿವರಗಳನ್ನು, ಕಛೇರಿ ಸಮಯದಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯಿಂದ ಪಡೆಯಬಹುದು. ಟೆಂಡರ್ ಅಧಿಸೂಚನೆಯಲ್ಲಿನ ಯಾವುದೇ ತಿದ್ದುಪಡಿಗಳು ಅಥವಾ ಮಾರ್ಪಾಡುಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪ್ರಕಟಿಸಲಾಗುತ್ತದೆ **(https://kppp.karnataka.gov.in)**

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:508/ಕೆಎಸ್‌ಎಂಸಿಎ/2024-25

ಸುಭಾಷಿತ

ಒಬ್ಬ ವ್ಯಕ್ತಿಗೆ ಅಹಂಕಾರ ಎಷ್ಟಿದೆ ಎಂದು ತಿಳಿಯಲು ಅವನ ಕೈಗೆ ಅಧಿಕಾರ ಕೊಟ್ಟು ನೋಡಬೇಕು.

-ಚಾಣಕ್ಯ

ಬಂಡವಾಳ ವೆಚ್ಚಕ್ಕೆ ಗಣನೀಯ ಮೊತ್ತ ಮೂಲಸೌಕರ್ಯಕ್ಕೆ ಸಿಕ್ಕಿದೆ ಆದ್ಯತೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ₹ 4.09 ಲಕ್ಷ ಕೋಟಿ ಗಾತ್ರದ 2025–26ನೇ ಸಾಲಿನ ರಾಜ್ಯ ಬಜೆಟ್ ಅನ್ನು ಶುಕ್ರವಾರ ಮಂಡಿಸಿದ್ದಾರೆ. ಹದಿನಾರನೇ ಬಾರಿಗೆ ಬಜೆಟ್ ಮಂಡಿಸಿರುವ ಅವರು, ಈ ಸಲದ ಆಯ-ವ್ಯಯ ಸಿದ್ಧಪಡಿಸುವಾಗ ತಮ್ಮ ಅನುಭವವನ್ನೆಲ್ಲ ಧಾರೆ ಎರೆದಿರುವುದು ಎದ್ದು ಕಾಣುತ್ತದೆ. 'ಗ್ಯಾರಂಟಿ'ಗಳ ಭಾರದಿಂದ ಅಭಿವೃದ್ಧಿಯ ವೇಗ ಕುಗ್ಗಿದೆ' ಎಂಬ ಹಣೆಪಟ್ಟಿಯನ್ನು ಕಳಚಿಹಾಕಲು ಸನ್ನದ್ಧರಾದಂತೆ ಅವರು ಮೈಕೊಡವಿ ಎದ್ದು ನಿಂತಿದ್ದಾರೆ. ರಾಜ್ಯದ ರಸ್ತೆ ಮತ್ತು ಮೂಲಸೌಕರ್ಯದ ಅಭಿವೃದ್ಧಿಗಾಗಿ 'ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ' ರೂಪಿಸಿರುವ ಅವರು, ₹ 8,000 ಕೋಟಿಯನ್ನು ಈ ಉದ್ದೇಶಕ್ಕಾಗಿ ಎತ್ತಿಟ್ಟಿದ್ದಾರೆ. 'ಅಹಿಂದ' ವರ್ಗದ ಮೇಲಿನ ತಮ್ಮ ಪ್ರೇಮವನ್ನು ಮತ್ತೆ ಪ್ರಕಟಪಡಿಸುವ ಹತ್ತು-ಹಲವು ಯೋಜನೆಗಳ ಮೂಲಕ ಇತರ ಎಲ್ಲ ಸಮುದಾಯಗಳನ್ನೂ ಒಂದಿಲ್ಲೊಂದು ರೀತಿ ತಲುಪುವ ಪ್ರಯತ್ನ ಮಾಡಿದ್ದಾರೆ. ತೆಕ್ಕೆಯಲ್ಲಿರುವ ತೆರಿಗೆ ಮೂಲಗಳನ್ನು ಕೇಂದ್ರವಾಗಿಟ್ಟುಕೊಂಡು ಒಟ್ಟು ಸಮಾಜದ ಏಳಿಗೆಗಾಗಿ ಅವರು ನಡೆಸಿದ ಕಸರತ್ತು ಕುತೂಹಲಕಾರಿ. ಕಲ್ಯಾಣ ಕಾರ್ಯಕ್ರಮಗಳಿಗೆ ಯಥಾಪ್ರಕಾರ ಸಿಂಹಪಾಲನ್ನು ಮೀಸಲಿಟ್ಟರೂ ಅಭಿವೃದ್ಧಿಯ ಚಹರೆ ಬಜೆಟ್‌ನಲ್ಲಿ ಎದ್ದು ಕಾಣುವಂತೆ ನೋಡಿಕೊಳ್ಳಲಾಗಿದೆ. ಅವರ ಅನುಭವ ಹಾಕಿದ್ದಾರೆ. 'ನಾಡು ಕಟ್ಟುವ ಪ್ರಕ್ರಿಯೆಯಲ್ಲಿ ಸುಸ್ಥಿರ ಅಭಿವೃದ್ಧಿಯ ಇಟ್ಟಿಗೆಗಳನ್ನು ಸುವ್ಯವಸ್ಥಿತವಾಗಿ ಜೋಡಿಸಬೇಕಿದೆ' ಎಂಬ ಆಶಯವನ್ನು ವ್ಯಕ್ತಪಡಿಸಿರುವ ಮುಖ್ಯಮಂತ್ರಿ, ಆ ದಿಸೆಯಲ್ಲಿ ಅಭಿವೃದ್ಧಿಯ ಆರು ಆಯಾಮಗಳನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಕಲ್ಯಾಣ ಕಾರ್ಯಕ್ರಮಗಳು, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ, ಮೂಲಸೌಕರ್ಯ ಅಭಿವೃದ್ಧಿ, ನಗರಾಭಿವೃದ್ಧಿ, ಹೂಡಿಕೆ ಮತ್ತು ಉದ್ಯೋಗ ಸೃಷ್ಟಿ ಹಾಗೂ ಆಡಳಿತ ಸುಧಾರಣೆ– ಇವೇ ಆ ಆರು ಆಯಾಮಗಳು. 'ಗ್ಯಾರಂಟಿ' ಯೋಜನೆಗಳನ್ನು ಉಳಿಸಿಕೊಳ್ಳುವುದರ ಜತೆಯಲ್ಲೇ ಮೂಲಸೌಕರ್ಯ ಯೋಜನೆಗಳಿಗೆ ದೊಡ್ಡ ಮೊತ್ತವನ್ನು ವಿನಿಯೋಗಿಸುವುದಾಗಿ ಘೋಷಿಸುವ ಮೂಲಕ ಅವರು ಸಮತೋಲನದ ಹಾದಿಯೊಂದನ್ನು ಕಂಡುಕೊಂಡಿದ್ದಾರೆ. ಹಾಗೆಯೇ, ಶಿಕ್ಷಣ, ತರಬೇತಿ, ಉದ್ಯೋಗದ ಮೂಲಕ ಸಮಾಜದ ಅಭಿವೃದ್ಧಿ ಎಂಬ ವಿಶಿಷ್ಟ ಕಾರ್ಯತಂತ್ರವನ್ನೂ ಅಳವಡಿಸಿಕೊಂಡಿದ್ದಾರೆ.

ಕಲ್ಯಾಣ ಕಾರ್ಯಕ್ರಮಗಳಿಗೆ ಸಿಂಹಪಾಲನ್ನು ಮೀಸಲಿಟ್ಟರೂ ಅಭಿವೃದ್ಧಿಯ ಚಹರೆ ಬಜೆಟ್‌ನಲ್ಲಿ ಎದ್ದು ಕಾಣುವಂತೆ ನೋಡಿಕೊಳ್ಳಲಾಗಿದೆ

ಮೈಕ್ರೊ ಫೈನಾನ್ಸ್ ಸಮಸ್ಯೆಗಳಿಗೂ ಪರಿಹಾರ ಹುಡುಕುವ ಇರಾದೆ ಬಜೆಟ್‌ನಲ್ಲಿದೆ. ಅಕ್ಕ ಕೋ-ಆಪರೇಟಿವ್ ಸೊಸೈಟಿ ಸ್ಥಾಪಿಸುವ ಮೂಲಕ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಯರನ್ನು ಸದಸ್ಯರನ್ನಾಗಿಸುವ ಉದ್ದೇಶ ಅರ್ಥಪೂರ್ಣ. ಬಹುತೇಕ ಮಾಸಾಶನ-ಗೌರವಧನಗಳ ಮೊತ್ತದಲ್ಲಿ ಏರಿಕೆ ಮಾಡಲಾಗಿದೆ. ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಬಳಸುವ, ಡಿಜಿಟಲೀಕರಣದ ಮೂಲಕ ಕೃಷಿ ಆದಾಯ ಹೆಚ್ಚಿಸುವ ಮಾತುಗಳು ಕೃಷಿಕರಿಗೆ ಆಶಾದ ಉಂಟುಮಾಡುವಂತಿವೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇಕಡ 4ರ ಪ್ರಗತಿ ಸಾಧಿಸಿರುವ ಕೃಷಿ ಕ್ಷೇತ್ರಕ್ಕೆ ತಕ್ಕ ಉತ್ತೇಜನ ನೀಡಲು ಹೊರಟಿರುವ ಕ್ರಮ ಸಮಯೋಚಿತ. ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು ಎಂಬುದನ್ನು ಅನುಬಂಧದಲ್ಲಿ ನೀಡುವ ಮೂಲಕ ಕಾಲಮಿತಿಯಲ್ಲಿ ಅವುಗಳನ್ನು ಪೂರ್ಣಗೊಳಿಸುವ ಇರಾದೆಯನ್ನೂ ಪ್ರದರ್ಶಿಸಲಾಗಿದೆ. ಕಾಲದ ತುರ್ತನ್ನು ಮನಗಂಡಂತೆ ತಂತ್ರಜ್ಞಾನದ ಜಪ ಬಜೆಟ್‌ನ ಉದ್ದಕ್ಕೂ ಹರಿದಿದೆ. ಬೆಂಗಳೂರಿನ ಅಭಿವೃದ್ಧಿಗೂ ಮುಖ್ಯಮಂತ್ರಿ ಗಮನ ಹರಿಸಿದ್ದು, ₹ 7,000 ಕೋಟಿಯಷ್ಟು ದೊಡ್ಡ ಮೊತ್ತವನ್ನು ಎತ್ತಿಟ್ಟಿದ್ದಾರೆ. ತವರು ಜಿಲ್ಲೆ ಮೈಸೂರಿಗೂ ಹಲವು ಯೋಜನೆಗಳನ್ನು ಕೊಡುಗೆಯಾಗಿ ಕೊಟ್ಟಿದ್ದಾರೆ. ಬಂಡವಾಳ ವೆಚ್ಚವನ್ನು ಕಳೆದ ವರ್ಷಕ್ಕೆ ಹೋಲಿಸಿದರೆ ಶೇಕಡ 47.3ರಷ್ಟು ಹೆಚ್ಚಿಸಿರುವುದು ಬಜೆಟ್‌ನ ಹೆಗ್ಗುರುತುಗಳಲ್ಲಿ ಒಂದು. ಒಟ್ಟಾರೆ ₹ 71,336 ಕೋಟಿ ಹಣವನ್ನು ಈ ಉದ್ದೇಶಕ್ಕೆ ಎತ್ತಿಡಲಾಗಿದೆ. ಬಜೆಟ್‌ನ ಗಾತ್ರವನ್ನು ಹಿಗ್ಗಿಸಿದ್ದರಿಂದ ಎಲ್ಲ ಅಭಿವೃದ್ಧಿ ಇಲಾಖೆಗಳ 'ಹೊರೆ'ಗಳ ನಡುವೆಯೂ ಅಭಿವೃದ್ಧಿ ಕಾರ್ಯಗಳಿಗೆ ಗಣನೀಯ ಮೊತ್ತ ಸಿಗಲಿದೆ. ಅಂದರೆ, ಆರ್ಥಿಕತೆಗೆ ಚೈತನ್ಯ ತುಂಬುವಂತಹ ಸಾಮರ್ಥ್ಯವಿರುವ ಸೇವಾ ವಲಯಕ್ಕೆ ಇನ್ನಷ್ಟು ಬಲ ತುಂಬುವ ಕೆಲಸ ಆಗಬೇಕಿತ್ತು. 2004–05ರಲ್ಲಿ ಮಿಗತೆ ಬಜೆಟ್ ಮಂಡಿಸಿ, ದೇಶದ ಗಮನ ಸೆಳೆದಿದ್ದ ಸಿದ್ದರಾಮಯ್ಯನವರು ಕಳೆದ ಬಾರಿಯಂತೆ ಈ ಸಲವೂ ಕೊರತೆಯ ಬಜೆಟ್ ಕೊಟ್ಟಿದ್ದಾರೆ. 2025–26ರ ಆರ್ಥಿಕ ವರ್ಷದ ಅಂತ್ಯದಲ್ಲಿ ರಾಜ್ಯದ ಮೇಲಿನ ಒಟ್ಟು ಸಾಲದ ಹೊರೆ ₹ 7.64 ಲಕ್ಷ ಕೋಟಿಗೆ ಹೆಚ್ಚಲಿದೆ ಎಂದು ಅಂದಾಜಿಸಲಾಗಿದೆ. ವಿತ್ತೀಯ ಕೊರತೆಯು ಮಿತಿಯೊಳಗೆ ಇದೆ ಎಂದು ಮುಖ್ಯಮಂತ್ರಿ ಸಮಾಧಾನ ವ್ಯಕ್ತಪಡಿಸಿದರೂ ಆ ಮಿತಿ ಅಂಚಿಗೆ ತಲುಪಿದೆ ಎಂಬುದನ್ನು ಮರೆಯುವಂತಿಲ್ಲ. ವರ್ಷದಿಂದ ವರ್ಷಕ್ಕೆ ಸಾಲದ ಹೊರೆ ಹೆಚ್ಚುತ್ತಿರುವುದು ಕಳವಳಕಾರಿ. ಸಾಲದ ಹೊರೆ ಇಳಿಸಿಕೊಳ್ಳುವ ಮಾರ್ಗೋಪಾಯಗಳು ಬಜೆಟ್‌ನಲ್ಲಿ ಇಲ್ಲ.

ದಿನದ ಟ್ವೀಟ್

ಮರುನಾಮಕರಣ: ಮರುಪರಿಶೀಲಿಸಿ

ಬೆಂಗಳೂರು ವಿಶ್ವವಿದ್ಯಾಲಯ ಮತ್ತು ನ್ಯಾಷನಲ್ ಕಾಲೇಜು ಮೆಟ್ರೊ ನಿಲ್ದಾಣ– ಈ ಎರಡಕ್ಕೂ ಡಾ. ಎಚ್.ನರಸಿಂಹಯ್ಯ ಅವರ ಹೆಸರಿಡಬೇಕು.

ಎಂ.ಎಸ್.ಶ್ರೀಹರ್ಷ

ಕಿಡಿನುಡಿ

ಐ.ಟಿ. ಕಂಪನಿ, ಫಾರ್ಮಾ ಕಂಪನಿ, ಇತರೆ ಖಾಸಗಿ ವಲಯದಲ್ಲಿ ಕೆಲಸ ಮಾಡುವವರಿಗೆ, ತಮ್ಮದೇ ಬ್ಯುಸಿನೆಸ್ ನಡೆಸುವವರಿಗೆ ಈ ಬಜೆಟ್‌ನಿಂದ ಏನಾದರೂ ಉಪಯೋಗ ಇದೆಯೇ?... ಒಟ್ಟಾರೆ, ಚೆನ್ನಾಗಿ ದುಡಿಯುವ ಅವಕಾಶ ಇರುವವರ ಬಗ್ಗೆ ಸರ್ಕಾರ ಗಮನ ಕೊಡಲ್ಲ. ಅದು ತಪ್ಪು ಕೂಡ ಅಲ್ಲ. ಸರ್ಕಾರದ ಜವಾಬ್ದಾರಿ ಬಡವರನ್ನು, ಕಷ್ಟದಲ್ಲಿರುವವರನ್ನು ನೋಡಿಕೊಳ್ಳುವುದು. ಬಾಟಮ್‌ಲೈನ್ ಏನೆಂದರೆ, ದುಡಿಯುವ ವರ್ಗಕ್ಕೆ ಸರ್ಕಾರಗಳಿಂದ ಸಿಗುವ ಸೌಲಭ್ಯಗಳು ನೆಗ್ಲಿಜಿಬಲ್... ಎಲ್ಲದಕ್ಕೂ ನಾವೇ ಜವಾಬ್ದಾರರು.

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ

25 ವರ್ಷಗಳ ಹಿಂದೆ

ಬುಧವಾರ, 8-3-2000

● **'ನೆಲದಾಳ ಸೇರಿದ ಕರಿಯಪ್ಪ ಕೊನೆಗೂ ಬದುಕಿ ಬರಲಿಲ್ಲ'**

ದಾವಣಗೆರೆ, ಮಾರ್ಚ್ 7– ನೆಲದಾಳಕ್ಕೆ ಸಿಕ್ಕಿ ನರಳಿದ ಕರಿಯಪ್ಪ ಕೊನೆಗೂ ಉಳಿಯಲಿಲ್ಲ; ಅವನ ಉಸಿರು ಉಳಿಸಲು ನಡೆಸಿದ ಶತ ಪ್ರಯತ್ನ ಫಲಿಸದೇ ಕರಿಯಪ್ಪ ಕೊನೆಗೂ ಮರಳಿ ಮಣ್ಣಿಗೆ ಸೇರಿದ...

ಇಲ್ಲಿನ ನಿಜಲಿಂಗಪ್ಪ ಬಡಾವಣೆಯಲ್ಲಿ ಸೋಮವಾರ ಬೆಳಿಗ್ಗೆ 9.30ರ ಹೊತ್ತಿಗೆ ಕೊಳವೆಬಾವಿಗೆ ಆಕಸ್ಮಿಕವಾಗಿ ಜಾರಿಬಿದ್ದ ಬಾಲಕ ಕರಿಯಪ್ಪ (6) ಸಾವಿರಾರು ಹೃದಯಗಳನ್ನು ಕಲಕಿ ಮಣ್ಣಲ್ಲಿ ಬೆರೆತುಹೋಗಿ ಈಗ ಕೇವಲ ಕಥೆಯಾಗಿ ಉಳಿದುಹೋದ.

ಈ ಚಿಣ್ಣನ ದೇಹವನ್ನು ಇಂದು ಮಧ್ಯಾಹ್ನ 2 ಗಂಟೆಗೆ ಭಾರಿ ಪ್ರಯಾಸದೊಂದಿಗೆ ಹೊರತೆಗೆಯಲಾಯಿತು. ಸುಮಾರು 28 ಅಡಿಗಳಷ್ಟು ಆಳದಲ್ಲಿ ಸಿಕ್ಕಿಹಾಕಿಕೊಂಡಿದ್ದ ಅವನನ್ನು ಬದುಕಿಸಲು ನಡೆಸಿದ ಪ್ರಯತ್ನಗಳು ಫಲಿಸಲಿಲ್ಲ.

ಈ ಮಗುವಿನ ಉಳಿವಿಗಾಗಿ ರಾಜ್ಯದ ಎಲ್ಲೆಡೆ ಪ್ರಾರ್ಥಿಸಿದ ಹೃದಯಗಳು ಸಾವಿರಾರು. ಜಿಲ್ಲೆಯ ಇಡೀ ಆಡಳಿತ ವ್ಯವಸ್ಥೆ ಈ ಮಗುವಿನ ಜೀವ ಉಳಿಸಲು ಪಣ ತೊಟ್ಟಿತ್ತು. ಆದರೆ, ವಿಧಿಯ ಆಟವನ್ನು ಯಾರು ತಾನೆ ನಿಲ್ಲಿಸಿಯಾರು? ವ್ಯವಸ್ಥೆ ಕೊನೆಗೂ ಸೋತಿತು. ಸಾವು ಗೆದ್ದಿತು.

50 ವರ್ಷಗಳ ಹಿಂದೆ

ಶನಿವಾರ, 8-3-1975

● **ಮಕ್ಕಳಿಗೆ ಹೊರೆಯಾದ ಅಭಿನಂದನಾ ಗ್ರಂಥ!**

ಬೆಂಗಳೂರು, ಮಾರ್ಚ್ 7– ಮಾಜಿ ಶಿಕ್ಷಣ ಸಚಿವರ ಫೋಟೊ ಇರುವ ಪುಸ್ತಕವೊಂದರ ಬೆಲೆ 30 ರೂಪಾಯಿ. ಎಲ್ಲ ಶಾಲೆಗಳವರು ಅದನ್ನು ಕೊಳ್ಳಬೇಕೆಂದು ಒತ್ತಾಯ ಇದೆಯಂತೆ. ಈ ವಿಚಾರ ಇಂದು ವಿಧಾನಸಭೆಯಲ್ಲಿ ಹೇಳಿ, ಆ ಅಭಿನಂದನಾ ಗ್ರಂಥವನ್ನು ಹಾಜರು ಪಡಿಸಿದವರು ಕಾಂಗ್ರೆಸ್ ಸದಸ್ಯ ಹಮೀದ್ ಷಾ.

ತಾವು ಶಾಲೆಯಿಂದ ತಂದಿದ್ದ ಪುಸ್ತಕವನ್ನು ಉಪಾಧ್ಯಕ್ಷರ ಮೂಲಕ ಶಿಕ್ಷಣ ಸಚಿವರಿಗೆ ಕಳುಹಿಸಿ, 30 ಮಂದಿ ಶಿಕ್ಷಣ ಇಲಾಖೆಯವರೇ ಲೇಖನ ಬರೆದಿರುವರೆಂದರು.

● **'ಸಂತಸದ' ಸುದ್ದಿಗಳು**

ಬೆಂಗಳೂರು, ಮಾರ್ಚ್ 7– ಹರಿಜನರೊಬ್ಬರಿಗೆ 'ಮುಖ್ಯಮಂತ್ರಿ' ಪಟ್ಟ, ದೇವರಾಜ ಅರಸು ಅವರಿಗೆ 'ಬಡ್ತಿ', ಉಪಸಭಾಪತಿಗೆ 'ಸಚಿವ' ಪದವಿ ಇವೆಲ್ಲಾ ಮೇಲ್ಮನೆಯಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸಭೆಯಲ್ಲಿ ನೀಡಿದ 'ಸಂತಸದ ಸುದ್ದಿಗಳು'.

ತಮ್ಮ ಪಕ್ಷದ ಬಗ್ಗೆ ಇಷ್ಟು ಕುತೂಹಲ ತೋರಿದ ವಿರೋಧ ಪಕ್ಷದ ಸದಸ್ಯರಿಗೆ 'ನಮ್ಮ ಮೇಲೆ ಅಭಿಮಾನವೋ ದುರಭಿಮಾನವೋ' ಅನ್ನುವುದೇ ಕಾಂಗ್ರೆಸ್‌ನ ಹುಚ್ಚಮಾಸ್ತಿ ಗೌಡರಿಗೆ ಅನುಮಾನ.

ಸಂಸ್ಥಾ ಕಾಂಗ್ರೆಸ್‌ನ ಮತ್ತೊಬ್ಬ ಸದಸ್ಯ ಒಡೆಯರಾಜ್ ಅನೇಕ 'ಸಂತೋಷದ ವಿಚಾರಗಳನ್ನು' ಸಭೆಗೆ ತಿಳಿಸಿದರು.

'ಹರಿಜನರೊಬ್ಬರನ್ನು ಮುಖ್ಯಮಂತ್ರಿ ಮಾಡಲಾಗುತ್ತದೆ. ಎನ್.ರಾಚಯ್ಯ ಮುಖ್ಯಮಂತ್ರಿ ಆಗುತ್ತಾರೆ. ಉಪಸಭಾಪತಿ ಟಿ.ಎನ್.ನರಸಿಂಹಮೂರ್ತಿ ಅವರು ಸಚಿವರಾಗುತ್ತಾರೆ'.

ಜನಸಂಘದ ಮಳ್ಳೂರು ಆನಂದ ರಾಯರು 'ಸರ್ಕಾರಕ್ಕೆ ಸಂತೋಷ ಆಗುವ' ಮತ್ತೊಂದು ವಿಚಾರ ತಿಳಿಸಿದರು. 'ಮುಖ್ಯಮಂತ್ರಿಗಳಿಗೆ ಬಡ್ತಿ ಕೊಟ್ಟು ಕೇಂದ್ರದಲ್ಲಿ ಮಂತ್ರಿ ಮಾಡಲಾಗುವುದು, ಇಲ್ಲವೇ ರಾಜ್ಯಪಾಲರನ್ನಾಗಿ ನೇಮಿಸಲಾಗುವುದು' ಎಂದರು.

ಹಗ್ಗದ ಒಂದು ತುದಿಗೆ ಹತ್ತಿದ ಉರಿಯು ಇನ್ನೊಂದು ತುದಿಯನ್ನೂ ಸುಡಲಾರಂಭಿಸಿದೆ

ಸಾವಿತ್ರಿ ಮಾತ್ರವಲ್ಲ, ರುರುವೂ ಇದ್ದಾನೆ

ವಿಶ್ಲೇಷಣೆ

ಸಬಿತಾ ಬನ್ನಾಡಿ

ಹೌದು, ಆದರೆ ನಮಗೆ ಅವನ ಪರಿಚಯವೇ ಇಲ್ಲ. ಎಲ್ಲೋ ಕೆಲವರನ್ನುಳಿದು ಹೆಚ್ಚಿನವರಿಗೆ ಅವನ ಹೆಸರೇ ಗೊತ್ತಿಲ್ಲ. ಇದನ್ನೇ ಸಾಂಸ್ಕೃತಿಕ ರಾಜಕಾರಣ ಎನ್ನುವುದು. ಸಾವಿತ್ರಿಯ ಕತೆ ಇಡೀ ದೇಶದ ಹಳ್ಳಿ ಹಳ್ಳಿಯಲ್ಲಿ ಪುಣ್ಯಕತೆಗಳಾಗಿ ಮಕ್ಕಳ ತಲೆಯೊಳಗೇ ಅದನ್ನು ಭದ್ರವಾಗಿಸಿ ಅದೊಂದು ಆದರ್ಶವೆಂದೂ ಸಾವಿತ್ರಿಯನ್ನು ಪತಿವ್ರತೆಯರ ಮಾದರಿಯೆಂದೂ ಪ್ರಚುರ ಪಡಿಸಲಾಯಿತು. ಆದರೆ ಇದನ್ನಷ್ಟೇ ಯಾಕೆ ಮುನ್ನೆಲೆಗೆ ತರಲಾಯಿತು. ಪುರುಷನೊಬ್ಬನ ಇಂಥದೇ ಕತೆಯನ್ನು ಪುರುಷರೇ ಯಾಕೆ ಮುನ್ನೆಲೆಗೆ ತರಲಿಲ್ಲ? ಹಾಡಿ ಹೊಗಳಲಿಲ್ಲ? ಅದರ ಹಿಂದೆ ಇದ್ದ ಭಯ ಯಾವುದು?

ಹಗ್ಗದ ಒಂದು ತುದಿಗೆ ಬೆಂಕಿ ಹಚ್ಚಿ ಚಂದ ನೋಡುತ್ತಾ ಕುಳಿತರೆ ಅಥವಾ ಇನ್ನೊಂದು ತುದಿಗೆ ಅದು ಹಬ್ಬುವುದಕ್ಕೆ ನಾವು ಬಿಡುವುದಿಲ್ಲ ಎಂದು ಭಂಡತನದಿಂದ ಕುಳಿತರೆ ಅದು ನಿಜವಾಗುವುದಿಲ್ಲ. ಯಾಕೆಂದರೆ, ಸುಡುವುದು ಬೆಂಕಿಯ ಗುಣ ಮತ್ತು ಸುಡಿಸಿಕೊಳ್ಳುವುದು ಹಗ್ಗದ ಗುಣ. ಇಂದು ಅಲ್ಲಲ್ಲಿ ಕುಟುಂಬದ ದೌರ್ಜನ್ಯದಿಂದಲೋ ಒತ್ತಡದಿಂದಲೋ ಪತ್ರ ಬರೆದು ಪುರುಷರು ಆತ್ಮಹತ್ಯೆ ಮಾಡಿಕೊಳ್ಳುವ ಒಂದೆರಡು ವರದಿಗಳು ಹಲವರನ್ನು ಬೆಚ್ಚಿ ಬೀಳಿಸುತ್ತಿವೆ. ಅಷ್ಟೇ ಅಲ್ಲ, ಚಿಕ್ಕ ಹುಡುಗರ ಮೇಲೆ ಲೈಂಗಿಕ ದೌರ್ಜನ್ಯದ ಪ್ರಕರಣಗಳು ಹೆಚ್ಚುತ್ತಿವೆ. ಹುಡುಗಿಯರಂತೆಯೇ ಹುಡುಗರು ಕೂಡಾ ಇದನ್ನು ಯಾರಿಗೂ ಹೇಳದೆ ಒಳಗೊಳಗೇ ನಲುಗುತ್ತಿದ್ದಾರೆ. ಮಾನಸಿಕವಾಗಿ ಕ್ಷೋಭೆಗೆ ಒಳಗಾಗುತ್ತಿದ್ದಾರೆ. ವರದಕ್ಷಿಣೆ ಹತ್ಯೆಗಳು, ಹೆಣ್ಣಿನ ಮೇಲಿನ ಆಕ್ರಮಣಗಳು, ಅತ್ಯಾಚಾರಗಳು ದಿನ ದಿನದ ಸುದ್ದಿಗಳಾಗಿ ಮಾರ್ಪಟ್ಟರೂ ತಲೆಕೆಡಿಸಿಕೊಳ್ಳದ ವ್ಯವಸ್ಥೆ ಅದೆಲ್ಲಕ್ಕೂ ಹೆಣ್ಣೇ ಕಾರಣ ಎಂದು ತಿಪ್ಪೆ ಸಾರಿಸಿದ್ದೇ ಹೆಚ್ಚು. ಅವಳಿಗೇ ಉಪದೇಶ ಕೊಡುತ್ತಾ ದೂಷಿಸುತ್ತಾ ಕರಾಟೆ ಕಲಿತುಕೋ ಎಂದು ಅವಳ ಮೇಲೇ ಹೊರೆ ಹೊರಿಸುತ್ತಾ ಪ್ರವಚನ ಮಾಡುವವರಿಗೇನೂ ಕೊರತೆಯಿಲ್ಲ.

ಎಲ್ಲೋ ಒಂದು ಸಲ ನಿದ್ದೆಯಿಂದ ಎಚ್ಚೆತ್ತುಕೊಂಡು, ಅತ್ಯಾಚಾರಿಗಳನ್ನು ಗಲ್ಲಿಗೇರಿಸಿ ಎಂದು ಅರಚಿದರೆ ಆಗುವುದಿಲ್ಲ. ಮೊದಲು ನಾವು ನಮ್ಮ ನಮ್ಮ ಪ್ರಜ್ಞೆಯನ್ನು ಎಚ್ಚರಿಸಿಕೊಳ್ಳಬೇಕಾಗಿದೆ ಮತ್ತು ಆ ಪ್ರಜ್ಞೆಯನ್ನು ಎಚ್ಚರಿಸಲು ಬೇಕಾದ ಪರಿಸರವನ್ನು ಸೃಷ್ಟಿಸಿಕೊಳ್ಳಬೇಕಾಗಿದೆ.

ಪರಿಸರ ರೂಪಿಸುವುದೇಕೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುವೆ. ಇತ್ತೀಚೆಗೆ ಒಂದು ಅಧ್ಯಯನ ಶಿಬಿರದಲ್ಲಿ ಎಲ್ಲ ವಲಯದ ಮಹಿಳೆಯರು ಸೇರಿದ್ದರು. ಒಂದು ಆಪ್ತ ಸೆಷನ್‌ನಲ್ಲಿ ಅವರೆಲ್ಲರೂ ಕುಟುಂಬವೆಂದರೇನು ಎಂಬ ಬಗೆಗೆ ತಮ್ಮ ತಮ್ಮ ಅನುಭವದ ಹಿನ್ನೆಲೆಯಲ್ಲಿ ಮಾತಾಡಿದರು. ಅದರಲ್ಲಿ ಉಪನ್ಯಾಸಕಿ, ಸಿಂಗಲ್ ಪೇರೆಂಟ್, ದೇವದಾಸಿ, ಲಾಯರ್, ಸರ್ಕಾರಿ ನೌಕರಳು, ಎನ್‌ಜಿಒದಲ್ಲಿ ಕೆಲಸ ಮಾಡುವಾಕೆ ಹೀಗೆ ಎಲ್ಲ ಜಾತಿ, ವೃತ್ತಿ, ವರ್ಗದ ಸ್ತ್ರೀಯರೂ ಇದ್ದರು. ಅವರ ಸಂಗಾತಿಗಳು, ಒಡಹುಟ್ಟಿದವರಲ್ಲಿ ಕೂಡ ಹೀಗೆ ಎಲ್ಲಾ ರೀತಿಯ ವೃತ್ತಿ ಹಿನ್ನೆಲೆಯವರಿದ್ದರು. ಆದರೆ ಅವರೆಲ್ಲರ ಅನುಭವಗಳಲ್ಲಿ ಒಂದು ಸಾಮಾನ್ಯ ಅಂಶ ಇತ್ತು. ಎಲ್ಲರಿಗೂ ಪುರುಷ ಸಂಗಾತಿಗಳಿಂದ ಮತ್ತು ಒಡಹುಟ್ಟಿದವರಿಂದ ದೈಹಿಕ ಮತ್ತು ಮಾನಸಿಕ ಹಲ್ಲೆಯಾಗಿದೆ. ತಮ್ಮ ಚಾರಿತ್ರ್ಯವನ್ನು ಅನುಮಾನಿಸುವ ಹಿಂಸೆ ಎಲ್ಲರ ಸಾಮಾನ್ಯ ಅನುಭವವಾಗಿತ್ತು.

ಹಾಗೆ ನೋಡಿದರೆ ದೇವದಾಸಿಯ ಪೋಷಕ ಬಹಳ ಚೆನ್ನಾಗಿ ನೋಡಿಕೊಂಡಿದ್ದ. ಆದರೆ ಅವಳು ಮದುವೆ ಮಾಡಿಕೊಟ್ಟ ಅವಳ ಮಗಳ ಗಂಡ ಇತರ ಗಂಡಸರಂತೆಯೇ ವರ್ತಿಸಿದ್ದಾನೆ. ಈ ಅನುಭವಗಳು ಅವರಲ್ಲಿ ಹುಟ್ಟಿಸಿದ ಭೀತಿ, ಅಸಹಾಯಕತೆ, ಅಭದ್ರತೆಯನ್ನು ಹೇಳುತ್ತಾ, ಕಾಲಾಂತರದಲ್ಲಿ ತಾವು ಅದನ್ನು ಮೆಟ್ಟಿ ನಿಂತು ತಮ್ಮ ಬದುಕನ್ನು ಆ ವ್ಯವಸ್ಥೆಯೊಳಗಿದ್ದೇ ನಿಭಾಯಿಸುವುದು ಮತ್ತು ತಮ್ಮ ಕ್ಷೇತ್ರಗಳಲ್ಲಿ ಸಾಧನೆಯನ್ನು ಮುಂದುವರಿಸಿರುವುದನ್ನು ಹೇಳಿದರು. 'ಈಗ ನಾವು ಅವರನ್ನೆಲ್ಲಾ ನಿರ್ಲಕ್ಷಿಸುವುದನ್ನು ಕಲಿತಿದ್ದೇವೆ. ಆದರೆ ನಮ್ಮ ಕನಸಿನ ಸಾಂಗತ್ಯ ನಮಗೆ ಸಿಗಲಿಲ್ಲ' ಎಂಬ ವಿಷಾದವೂ ಅವರಿಗಿದೆ. ಇಲ್ಲಿನ ಎಲ್ಲ ವಲಯದ ಪುರುಷರೂ ಮನೆಯೊಳಗೆ ಒಂದೇ ರೀತಿಯ ವರ್ತನೆಯನ್ನು ಹೆಂಗಸರೆಡೆಗೆ ತೋರಿದ್ದಾರೆ. ಅವರಿಗೆ ಸಿಕ್ಕಿದ ಶಿಕ್ಷಣ ಅವರೊಳಗೆ ಅಂತಹ ವ್ಯತ್ಯಾಸವನ್ನೇನೂ ಮಾಡಿಲ್ಲ. ಅವರು ಮನೆಯ ಹೊರಗೆ ಕೆಲವು ಸಭ್ಯತೆಗಳನ್ನು ಅನಿವಾರ್ಯವಾಗಿ ಪಾಲಿಸುತ್ತಿರಬಹುದು. ಆದರೆ ಹೆಂಡತಿ, ಸೋದರಿಯರ ಜೊತೆಗೆ ಅವರೇಕೆ ಯಜಮಾನಿಕೆಯನ್ನು ಹೀಗೆ ತೋರ್ಪಡಿಸುತ್ತಾರೆ? ಮುಖ್ಯವಾಗಿ ಸಾಮಾಜಿಕವಾದ ತರಬೇತಿಯು ಈ ವರ್ತನೆಗೆ ಸಮ್ಮತಿಯನ್ನು ನೀಡಿದೆ. ಹೆಣ್ಣನ್ನು ಆಳಬೇಕು ಎಂಬುದು ಮೌಲ್ಯವಾಗಿದೆಯೇ ವಿನಾ ಹೆಣ್ಣಿನೊಂದಿಗೆ ಪ್ರೀತಿ ಹಂಚಿಕೊಳ್ಳಬೇಕು, ಗೌರವಿಸಬೇಕು ಎಂಬುದು ತರಬೇತಿಯಿಂದಾಗಲೀ ಶಿಕ್ಷೆಯಿಂದಾಗಲೀ ತಿಳಿವಳಿಕೆಯಾಗಿ ದಾಟಿಲ್ಲ.

ಈಗ ಹೆಣ್ಣುಮಕ್ಕಳೂ ಕೆಲವರು ಗಂಡಿನೊಂದಿಗೆ ಹೀಗೇ ವರ್ತಿಸುತ್ತಿರಬಹುದು. ಆದರೆ ಅದು ಕೂಡಾ ಈಗಾಗಲೇ ಹೆಣ್ಣಿನೊಂದಿಗೆ ಗಂಡು ವರ್ತಿಸುತ್ತಿರುವುದರ ಅನುಕರಣೆಯೇ ಆಗಿದೆ ಎಂಬುದನ್ನು ಒಪ್ಪಲು ಮನಸ್ಸು ಸಿದ್ಧಗೊಂಡಿಲ್ಲ. ಅಂದರೆ, ಗಂಡಸು ಮಾಡಿದರೆ ಸರಿ, ಹೆಂಗಸು ಮಾಡಿದರೆ ತಪ್ಪು ಎಂಬ ಧೋರಣೆಯನ್ನು ಬದಲಿಸದೇ, ಹೆಂಗಸರು ಮಾತ್ರ ಹಾಗೆ ವರ್ತಿಸಬಾರದು ಎಂದರೆ ಅದು ಕಾರ್ಯಸಾಧ್ಯವಾಗದು.



ಚೀನಾದಲ್ಲಿ ಹತ್ತು ವರ್ಷಗಳಿಂದ ವಾಸಿಸುತ್ತಿರುವ ಹೆಣ್ಣುಮಗಳೊಬ್ಬಳು ಮಾಡಿರುವ 'ವೈ ಐ ಲೆಫ್ಟ್ ಇಂಡಿಯಾ ಫಾರ್ ಚೀನಾ' ಎಂಬ ವಿಡಿಯೊ ಗಮನ ಸೆಳೆಯುವಂತಿದೆ. ಅದರಲ್ಲಿ ಆಕೆ 'ನಾನು ಮರಳಿ ಭಾರತಕ್ಕೆ ಬರಲು ಇಷ್ಟಪಡುವುದಿಲ್ಲ' ಎನ್ನುತ್ತಿದ್ದಳು. ಅದಕ್ಕೆ ಆಕೆ ಕೊಟ್ಟ ಕಾರಣಗಳಲ್ಲಿ ಎರಡು ಸಂಗತಿಗಳನ್ನು ನಾವು ಗಂಭೀರವಾಗಿ ಸ್ವೀಕರಿಸಬೇಕಾಗಿದೆ. 'ಒಂದು: ಇಲ್ಲಿ ಮದುವೆ, ಮಕ್ಕಳಿಂದ ಮಾತ್ರ ನಮ್ಮನ್ನು ಅಳೆಯುವುದಿಲ್ಲ. ಎರಡು: ನಡುರಾತ್ರಿಯಲ್ಲಿ ಕೂಡಾ ಹೆಣ್ಣುಮಕ್ಕಳು ಒಬ್ಬೊಬ್ಬರೇ ಬೀದಿಯಲ್ಲಿ ತಿರುಗಾಡುತ್ತಿದ್ದರೂ ಯಾವೊಬ್ಬ ಗಂಡಸೂ ನಮ್ಮೆಡೆಗೆ ತಿರುಗಿ ನೋಡುವುದಿಲ್ಲ. ನಮಗೆ ಎಂದೂ ನಮ್ಮನ್ನು ಯಾರೋ ಹಿಂಬಾಲಿಸುತ್ತಿದ್ದಾರೆ, ನಮ್ಮ ಮೇಲೆ ಅತ್ಯಾಚಾರವಾದರೆ ಎಂಬ ಭಯ ಕಾಡುವುದೇ ಇಲ್ಲ. ಬಹಳ ನಿರುಮ್ಮಳವಾಗಿ ತಿರುಗಾಡಬಹುದು. ಅಷ್ಟು ಬಿಗಿಯಾದ ಸುರಕ್ಷತಾ ವ್ಯವಸ್ಥೆ ಇದೆ'. ಇಲ್ಲಿ ಗಮನಿಸಬೇಕಾದದ್ದು, ಈ ವ್ಯವಸ್ಥೆಯೇ ಅಲ್ಲಿನ ಗಂಡಸರಿಗೆ ತಮ್ಮ ನಡೆಯನ್ನು ರೂಪಿಸಿಕೊಳ್ಳಲು ತರಬೇತಿ ನೀಡಿದೆ. ಅಷ್ಟೇ ಅಲ್ಲ, ಇಲ್ಲಿ ತನ್ನ ಸುರಕ್ಷತೆಗಾಗಿ ಹೆಂಗಸು ಏನೇನನ್ನೋ ಹೊದ್ದುಕೊಳ್ಳಬೇಕಾಗಿಲ್ಲ. ಅವಳು ಹೇಗೇ ಉಡುಗೆ ತೊಟ್ಟಿದ್ದರೂ ಅವಳ ಮೇಲೆ ಆಕ್ರಮಣ ಮಾಡುವುದಕ್ಕೆ ಅದು ನೆಪವಾಗುವುದಿಲ್ಲ. ಇಂತಹ ಪರಿಸರವೊಂದು ಮಾತ್ರ ಪ್ರಜ್ಞೆಯನ್ನು ರೂಪಿಸಬಲ್ಲದು.

ಆದರೆ ನಮ್ಮ ದುರ್ದೈವ ನೋಡಿ. ಗಂಡನೊಬ್ಬ ಹೆಂಡತಿಯೊಂದಿಗೆ ಅನೈಸರ್ಗಿಕವಾಗಿ ವರ್ತಿಸಿ, ಅದರ ಪರಿಣಾಮವಾಗಿ ಅವಳು ಸತ್ತರೆ 'ವಿವಾಹದೊಳಗೆ ಗಂಡನ ಯಾವ ವರ್ತನೆಯೂ ಅಪರಾಧ ಅಲ್ಲ' ಎನ್ನುವವರಿದ್ದಾರೆ. 'ಮೂರೂವರೆ ವರ್ಷದ ಬಾಲಕಿಯ ವರ್ತನೆಯೇ ಲೈಂಗಿಕ ದೌರ್ಜನ್ಯಕ್ಕೆ ಕಾರಣ' ಎಂದು ತಮಿಳುನಾಡಿನಲ್ಲಿ ಜಿಲ್ಲಾಧಿಕಾರಿಯೊಬ್ಬರು ಹೇಳಿದ್ದಾಗಿ ವರದಿಯಾಗಿದೆ. ನಾವು ಯಾವ ಪರಿಸರ, ಶಿಕ್ಷಣದ ಬಗೆಗೆ ಮಾತಾಡೋಣ?

ನಾವು ಎಂತಹವರು ಎಂದರೆ, ಮಹಾಭಾರತದ ಆದಿಪರ್ವದ ರುರುವಿನ ಕತೆಯನ್ನು ಮುಚ್ಚಿಟ್ಟದ್ದೇವೆ. ಸಾವಿತ್ರಿ ತನ್ನ ಗಂಡನನ್ನು ಬದುಕಿಸಿಕೊಳ್ಳಲು ತನ್ನ ಅರ್ಧ ಆಯಸ್ಸನ್ನು ಧಾರೆ ಎರೆದಳು. ಅದೇ ರೀತಿಯಲ್ಲಿ ರುರು ಎಂಬ ಋಷಿಯು ತನ್ನ ಪತ್ನಿ ಪ್ರಮದ್ವರೆಯು ಹಾವು ಕಚ್ಚಿ ಸತ್ತಾಗ ಅಪಾರವಾಗಿ ರೋದಿಸುತ್ತಾನೆ. 'ಈ ವಿಶಾಲ ವಿಶ್ವದನಂತ ಚೆಲುವು ತೆರೆದ ಹಾದಿಯಲ್ಲವೆ, ನಿನ್ನಂಥ ಪುರುಷೋತ್ತಮನಿಗೆ ಸಾವಿರ ಪ್ರಮದೆಯರಿದ್ದಾರೆ ನೀನೊಲಿದರೆ' ಎಂಬ ಲೋಕದ ಅದೇ ಮಾತುಗಳಿಗೆ 'ಮಿಡಿಯಲಿಲ್ಲ ರುರು ಜಗದನಂತ ಚೆಲುವಿಗೆ ಪ್ರಮದೆಯೊಬ್ಬಳೆ ನನ್ನೊಲವಿಗೆ' (ಕವಿತೆ: ರುರು ಪ್ರಮದಾ ಪ್ರೀತಿ: ಸ.ಉಷಾ) ಎಂದು ಶೋಕಿಸಿದಾಗ ಅಶರೀರವಾಣಿ 'ನಿನ್ನ ಅರ್ಧ ಆಯಸ್ಸು ಧಾರೆ ಎರೆದರೆ ಅವಳು ಬದುಕುತ್ತಾಳೆ' ಎಂದಾಗ ಕ್ಷಣವೂ ಯೋಚಿಸದೆ ಅಸ್ತು ಎನ್ನುತ್ತಾನೆ. ಬದುಕುಳಿದ ಅವಳ ಜೊತೆಗೆ ಆಯಸ್ಸಿಡೀ ಸಂತಸದಿಂದ ಬದುಕುತ್ತಾನೆ. ಸಾವಿತ್ರಿ, ರುರು ಇಬ್ಬರನ್ನೂ ಒಂದೇ ತಕ್ಕಡಿಯಲ್ಲಿ ಇಡಬೇಕಾದ್ದೇ ನಮ್ಮ ಮುಂದಿರುವ ದಾರಿ. ಗಂಡು– ಹೆಣ್ಣು ಇಬ್ಬರೂ ದೌರ್ಜನ್ಯದಿಂದ ಬಳಲದೆ ನವಪ್ರಜ್ಞೆಯೊಂದಿಗೆ ಪ್ರಜ್ಞಾವಂತ ಸಮಾಜಕ್ಕೆ ಮುನ್ನುಡಿ ಬರೆಯಲಿ.

ಚುರುಮುರಿ



ರಾಹು(ಲ್) ಕಾಲ!

● ಚಂದ್ರಕಾಂತ ವಡ್ಡು

ಬೈಟು ಕಾಫಿ ಬಳಗದ ಸದಸ್ಯರೆಲ್ಲಾ ಫಾರ್ವರ್ಡ್ ವಿ.ವಿ. ಸ್ನಾತಕೋತ್ತರ ಪದವೀಧರರು. ಬಜೆಟ್ ಡಿಬೇಟ್ ನಡೆಸಿದ್ದರು.

'ನಮ್ಮ ಸಿದ್ರಾಮಣ್ಣ ನಿಜವಾಗ್ಲೂ ಜನನಾಯಕ ಕಣ್ರೀ... ಎಲ್ಲ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ 8,000 ಕೋಟಿ ರೂಪಾಯಿ ತೆಗೆದಿರಿಸಿದ್ದಾರೆ'.

'ಹಾಗಾಗಿಯೇ ಪಕ್ಷಭೇದವಿಲ್ಲದೆ ಸಕಲ ಶಾಸಕರೂ ದಿಲ್ ಖುಷ್ ಆಗಿದ್ದಾರೆ'.

'ಅರೇ... ಕ್ಷೇತ್ರದ ಅಭಿವೃದ್ಧಿಗೆ ಹಣ ಬಂದರೆ ಮತದಾರರು ಪಟಾಕಿ ಹೊಡೆಯಬೇಕು. ಶಾಸಕರೇಕೆ ಹಲಗಿ ಹೊಡಿಯೋದು?'

'ನಿನಗೆ ಅಭಿವೃದ್ಧಿ ಆಯಾಮಗಳು ಗೊತ್ತಿಲ್ಲ. ಮುಖ್ಯಮಂತ್ರಿಗಳು ಅಭಿವೃದ್ಧಿಯ ಆರು ಆಯಾಮಗಳನ್ನಷ್ಟೇ ಬಹಿರಂಗವಾಗಿ ಹೇಳಿದ್ದಾರೆ. ಏಳನೇ ಆಯಾಮದ ಅನುದಾನ ಗುಪ್ತಗಾಮಿನಿ! ಅದರ ಹರಿವನ್ನು ಸಂಗಮದಲ್ಲಿ ಮುಳುಗುವವರೂ ಅರಿಯರು. ನಾಲಗೆ ಒಣಗಿಸಿಕೊಂಡ ಶಾಸಕರಿಗೆ ಬೇಸಿಗೆಯಲ್ಲಿ ತಣ್ಣೀರು ಸಿಕ್ಕಂತಾಗಿದೆ'.

'ಸರ್ವ ಜನಾಂಗದ ಶಾಂತಿಯ ತೋಟದ ಸರ್ವ ಗಿಡಗಳಿಗೂ ನೀರು ಹರಿಸಲು ಮರೆತಿಲ್ಲ ನಮ್ಮ ಸಿಎಮ್ಮು'.

'ಮುಸ್ಲಿಂ ಗುತ್ತಿಗೆದಾರರು, ಹಿಂದೂ ಅರ್ಚಕರು, ಕುರಿ ಸಾಕುವವರು, ರೈತರು, ಪತ್ರಕರ್ತರು, ಆಶಾ ಕಾರ್ಯಕರ್ತೆಯರು... ಯಾರನ್ನೂ ಮರೆತಿಲ್ಲ, ಯಾರನ್ನೂ ಕಡೆಗಣಿಸಿಲ್ಲ'.

'ಆದರೂ ಸಿದ್ರಾಮಣ್ಣ ಈ ಬಜೆಟ್ ಯಶಸ್ಸಿಗೆ ಕಾರಣವಾದ ಬಹುಮುಖ್ಯ ವೃತ್ತಿಯನ್ನು ಮರೆತಿದ್ದಾರೆ' ಬದ್ರಿ ಬಾಯಿಹಾಕಿದ.

'ಯಾವುದು, ಯಾವ ವೃತ್ತಿ?' ಎಲ್ಲ ನಿವೃತ್ತರು ಏಕಕಾಲಕ್ಕೆ ಕಾಫಿ ಗುಟುಕರಿಸಿದರು.

'ಕೇವಲ ಹದಿನೈದು ನಿಮಿಷಗಳ ಅಂತರದಿಂದ ಸಿಎಮ್ಮು, ಸರ್ಕಾರ, ಕನ್ನಡ ನಾಡನ್ನು ಗಂಡಾಂತರದಿಂದ ಪಾರು ಮಾಡಿದ್ದು ಸಾಮಾನ್ಯವಲ್ಲ. 10.30ಕ್ಕೆ ಬಜೆಟ್ ನುಂಗಲು ಕಾದು ಕುಳಿತಿದ್ದ ರಾಹುವನ್ನು ಯಾಮಾರಿಸಿ 10.15ರ ಮುಹೂರ್ತ ಕೊಟ್ಟ ಪಂಡಿತರನ್ನು ಮರೆಯಬಾರದಿತ್ತು'.

'ಕೇಂದ್ರದಲ್ಲಿ ರಾಹು(ಲ್) ಕಾಲ ಬಂದರೆ ಅವರಿಗೂ ಒಂದು ಸ್ಕೀಂ ಕೊಡ್ತಾರೆ ಬಿಡಿ!' ತಿಂಗಳೇಶ ಡಿಬೇಟ್ ಮುಗಿಸಿದ.

ಸಂಗತ

ಅಂತ್ಯಸಂಸ್ಕಾರ: ಬೇಡ ತಾರತಮ್ಯ

ಸ್ತ್ರೀಯರು ಅಂತ್ಯಸಂಸ್ಕಾರ ಮಾಡಬಾರದೆಂಬ ವಾದದ ಹಿನ್ನೆಲೆ ಏನಿರಬಹುದು?

● ಪ್ರೀತಿ ಟಿ.ಎಸ್.

'ಅಪ್ಪ, ನಿನ್ನ ಎದೆ ಮೇಲೆ ಒಮ್ಮೆ ಒರಗಿಕೊಳ್ಳಲೇ?' ಎಂದು ಕೇಳಬೇಕೆಂದುಕೊಂಡ ಮಾತು ಗಂಟಲಲ್ಲೇ ಉಳಿಯಿತು. ಎದೆಗೆ ಒರಗಿದಾಗ ತಲೆ ನೇವರಿಸುತ್ತಾ ಪ್ರೀತಿ ಸೂಸುತ್ತಿದ್ದ ಆ ಜೀವ ಶಾಶ್ವತವಾಗಿ ಮೌನವಾಗಿತ್ತು. ಇತ್ತ, ಉಮ್ಮಳಿಸಿ ಬರುತ್ತಿದ್ದ ದುಃಖದಿಂದ ನನ್ನ ಕಣ್ಣೀರಿನ ಕೋಡಿ ಹರಿಯುತ್ತಿದ್ದರೆ, ಅತ್ತ, ಅಪ್ಪನ ಹೆಣ್ಣುಮಕ್ಕಳ ಇರವೆಯ ಪರಿವೆಯೇ ಇಲ್ಲದಂತೆ, ಅಪ್ಪನಿಗೆ ಕೊಳ್ಳಿ ಇಡಲು ಇನ್ನ್ಯಾರನ್ನೋ ಕರೆಸುವ ಮಾತುಕತೆ ನಡೆಯುತ್ತಿತ್ತು!

ಹೌದು! ಅಪ್ಪನ ಅಂತ್ಯಸಂಸ್ಕಾರದ 'ವ್ಯವಹಾರ' ಕುದುರಿಸಲು ನೆಂಟರಿಷ್ಟರು ಸಜ್ಜಾಗಿದ್ದರು. ಆ ಕಾರ್ಯ ನೆರವೇರಿಸಿದ ನೆಪದಲ್ಲಿ ಅಪ್ಪನ ಆಸ್ತಿಗೆ ಬೇಡಿಕೆ ಇಡಲು ನಡೆಯುತ್ತಿದ್ದ ಪಿತೂರಿಯನ್ನು ಕಂಡು ತಬ್ಬಿಬ್ಬಾದೆ. ದುಃಖದ ಮಡುವಿನಲ್ಲೂ ನನ್ನೊಳಗೆ ಪ್ರಶ್ನೆಗಳು ಒತ್ತೊತ್ತಿ ಬರುತ್ತಿದ್ದವು. ಮಗಳಾಗಿ ನಾನಿರುವಾಗ ನನ್ನಪ್ಪನ ಅಂತ್ಯಸಂಸ್ಕಾರ ಬೇರೆಯವರು ಮಾಡುವುದೇಕೆ? ಪ್ರೀತಿಪಾತ್ರ ಅಪ್ಪನನ್ನು ಕಡೆಗಾಲದಲ್ಲಿ ಘನತೆಯಿಂದ ಕಳಿಸಿಕೊಡುವ ಹಕ್ಕೂ ನನಗಿಲ್ಲವೇ? ಕಷ್ಟ-ಸುಖಕ್ಕೆಲ್ಲ ಹೆಣ್ಣುಮಕ್ಕಳು ಬೇಕು, ಅಂತ್ಯಸಂಸ್ಕಾರಕ್ಕೆ ಮಾತ್ರ ಯಾಕೆ ಬೇಡ? ಇಂತಹದ್ದೊಂದು ಕಟ್ಟುಪಾಡು ಬಂದದ್ದಾದರೂ ಯಾಕೆ? ಆಸ್ತಿಗಾಗಿ ಹೊಂಚು ಹಾಕುವವರಿಂದ ಕೊಳ್ಳಿ ಇಡಿಸಿದರೆ ಅಪ್ಪನ ಆತ್ಮಕ್ಕೆ ನಿಜಕ್ಕೂ ಶಾಂತಿ ಸಿಕ್ಕೀತೇ? ನುಗ್ಗಿಬರುತ್ತಿದ್ದ ಆಲೋಚನೆಗಳು ನನ್ನನ್ನು ಪ್ರೇರೇಪಿಸತೊಡಗಿದವು. ಮನಸ್ಸಿನಲ್ಲಿ ನಿರ್ಧಾರವೊಂದು ಗಟ್ಟಿಯಾಗತೊಡಗಿತು.

ಕಡೆಗೂ ಕುಟುಂಬಸ್ಥರ ಮುಂದೆ ಹೋಗಿ 'ನನ್ನ ಅಪ್ಪಯ್ಯನ ಅಂತ್ಯಸಂಸ್ಕಾರ ನಾನೇ ಮಾಡುತ್ತೇನೆ' ಎಂದು ಒಂದೇ ಉಸಿರಿಗೆ ಹೇಳಿ ಮುಗಿಸಿ ನಿರಾಳವಾಗಿದ್ದೆ. ಸಹಜವಾಗಿಯೇ ವ್ಯಕ್ತವಾದ ವಿರೋಧದಿಂದ ಒಮ್ಮೆ ಹಿಮ್ಮೆಟ್ಟಿದರೂ ಗೋಗರೆದು, ಟೀಕೆಗಳನ್ನೆಲ್ಲ ಮೆಟ್ಟಿ ನಿಂತು ಕಡೆಗೂ ಎಲ್ಲರೂ ಒಪ್ಪುವಂತೆ ಮಾಡಿ, ಅಂತ್ಯಸಂಸ್ಕಾರ ನೆರವೇರಿಸಿದ್ದೆ.

ನಾನು ಹತ್ತನೇ ತರಗತಿ ಓದುವಾಗಲೇ ಅಪ್ಪ ಹೃದ್ರೋಗದಿಂದ ಮನೆಯಲ್ಲೇ ಉಳಿಯುವಂತಾಗಿತ್ತು. ಅಂದಿನಿಂದ ನಮ್ಮಿಬ್ಬರು ಹೆಣ್ಣುಮಕ್ಕಳ ಆರೈಕೆಯೆಲ್ಲ ಅಮ್ಮನದೇ ಆದರೂ ಅಪ್ಪನ ಪ್ರೀತಿಗೆ ಮಾತ್ರ ಯಾವುದೇ ಕೊರತೆ ಇರಲಿಲ್ಲ. ಪ್ರತಿ ಹಂತದಲ್ಲೂ ನಮಗೆ ಸ್ವಾಭಿಮಾನದ ಬದುಕನ್ನು ಕಟ್ಟಿಕೊಟ್ಟ ಅಪ್ಪ, ಗಂಡುಮಕ್ಕಳು ಇಲ್ಲವೆಂಬ ಕೊರತೆಯೇ ಇಲ್ಲದಂತೆ ನಮ್ಮನ್ನು ಬೆಳೆಸಿದರು. ಬಹುಶಃ ಅದೇ ಪ್ರೇರಣೆಯಿಂದಲೇ ಇರಬೇಕು ನನ್ನ ಅಪ್ಪನಿಗೆ ಕೊಳ್ಳಿ ಇಡುವ ಧೈರ್ಯ ನನ್ನೊಳಗೆ ಇಮ್ಮಡಿಯಾದದ್ದು.

ಗಂಡುಮಕ್ಕಳೇ ಅಂತ್ಯಸಂಸ್ಕಾರ ಮಾಡಬೇಕೆಂಬ ಸಂಪ್ರದಾಯ ಶತಮಾನಗಳಿಂದ ವಿವಾದಗ್ರಸ್ತ ವಿಷಯವಾಗಿಯೇ ಮುಂದುವರಿದಿದೆ. ಪಿಂಡ ಇಡುವುದಕ್ಕಾದರೂ ಗಂಡುಮಗು ಬೇಕು ಅನ್ನುವ ಕಾರಣದಿಂದಲೇ ಎಷ್ಟೋ ಹೆಣ್ಣುಭ್ರೂಣ ಹತ್ಯೆಗಳು ನಡೆದುಹೋಗಿವೆ. ದಂಪತಿಗೆ ಹೆಣ್ಣುಮಕ್ಕಳು ಮಾತ್ರ ಇದ್ದಾಗ, ಹತ್ತಿರದ ಗಂಡು ಸಂಬಂಧಿ ಅಂತ್ಯಸಂಸ್ಕಾರ ಮಾಡುವುದೇ ಹೆಚ್ಚು. ಇನ್ನು ಗಂಡುಮಕ್ಕಳು ಇದ್ದರಂತೂ ಹೆಣ್ಣುಮಕ್ಕಳಿಂದ ಆ ಕಾರ್ಯ ಮಾಡಿಸುವ ಪ್ರಶ್ನೆಯೇ ಉದ್ಭವಿಸದು. ಇಂತಹ ಪದ್ಧತಿ ಹಿಂದೆಲ್ಲ ಹೆಣ್ಣುಮಕ್ಕಳು ಪಿತ್ರಾರ್ಜಿತ ಸ್ವತ್ತಿನಿಂದ ವಂಚಿತರಾಗಲು ಪ್ರಮುಖ ಕಾರಣವಾಗುತ್ತಿತ್ತು. ಈಗ ಹೆಣ್ಣುಮಕ್ಕಳಿಗೂ ಆಸ್ತಿಯಲ್ಲಿ ಹಕ್ಕು ಕೊಡುವ ಕಾನೂನು ಬಂದಿರುವುದು ಒಂದು ಕ್ರಾಂತಿಕಾರಿ ಬೆಳವಣಿಗೆಯೇ ಸರಿ.

ಅಷ್ಟಕ್ಕೂ ಸ್ತ್ರೀಯರು ಅಂತ್ಯಸಂಸ್ಕಾರ ಮಾಡಬಾರದೆಂಬ ವಾದದ ನಿಜವಾದ ಹಿನ್ನೆಲೆ ಏನಿರಬಹುದು? ಇದರ ಹಿಂದೆ ಸಮಂಜಸ ಎನಿಸುವ ಅರ್ಥ ಇರಲೂಬಹುದು ಮತ್ತು ಕೆಲವು ಮುಖ್ಯ ವಿಷಯಗಳಿಂದ ಮಹಿಳೆಯರನ್ನು ಹಿಂದೆ ಸರಿಸುವ ಉದ್ದೇಶ ಸಹ ಅಡಗಿರಬಹುದು. ಮೃದು ಹೃದಯಿಗಳಾದ ಹೆಣ್ಣುಮಕ್ಕಳು ಭಾವನಾತ್ಮಕವಾಗಿ ದಿಢೀರ್ ಸ್ಪಂದನಶೀಲರಾಗುತ್ತಾರೆ. ಅಂತ್ಯಸಂಸ್ಕಾರದ ವೇಳೆ ಮಿತಿಮೀರಿದ ದುಃಖಾವೇಶದಿಂದ ಕ್ರಿಯೆಗಳನ್ನು ಪೂರ್ಣಗೊಳಿಸುವುದು ಕಷ್ಟವಾಗಬಹುದೆಂಬ ಕಾರಣವೂ ಇರಬಹುದು. ಗರ್ಭಿಣಿಯಾಗಿರುವುದು, ಮಾಸಿಕ ಋತುಚಕ್ರ ಸಹ ಅಂತ್ಯಸಂಸ್ಕಾರ ಕ್ರಿಯೆಗೆ ಅಡ್ಡಿಯಾಗುವ ಕಾರಣಗಳು ಎನ್ನುತ್ತಾರೆ. ಸ್ತ್ರೀ ವಿವಾಹದ ನಂತರ ಗಂಡನ ಕುಟುಂಬಕ್ಕೆ ಸೇರಿದವಳಾಗುತ್ತಾಳೆ, ಹಾಗಾಗಿ ಆಕೆ ತಂದೆ-ತಾಯಿಯ ಅಂತ್ಯಸಂಸ್ಕಾರ ಮಾಡಬರುವುದಿಲ್ಲ. ಅವಿವಾಹಿತೆ ಈ ಕ್ರಿಯೆ ನಡೆಸಲು ಅಡ್ಡಿಯಿಲ್ಲವೆಂಬ ವಾದವೂ ಇದೆ. ಆದರೆ ಆರೋಗ್ಯದ ಕಾರಣ ಹೊರತುಪಡಿಸಿ ಉಳಿದ ಕಾರಣಗಳು ಸಮರ್ಥನೀಯ ಎನ್ನಿಸದು.

ನನ್ನಪ್ಪನ ಅಂತ್ಯಸಂಸ್ಕಾರದ ಪ್ರತಿ ಶಾಸ್ತ್ರವೂ ತಿಂಗಳುಗಳು ಕಳೆದ ಬಳಿಕವೂ ನನ್ನನ್ನು ಕಾಡುತ್ತದೆ. ಅಪ್ಪನನ್ನು ತಬ್ಬಿ ಮಲಗುತ್ತಿದ್ದ ಕೈಗಳಿಂದ ಅವರ ದೇಹಕ್ಕೆ ಕೊಳ್ಳಿ ಇಟ್ಟ ಸಂದರ್ಭವಂತೂ ಇಂದಿಗೂ ಅದೆಷ್ಟೋ ರಾತ್ರಿಗಳ ನಿದ್ದೆಗೆಡಿಸುತ್ತದೆ. ಅದೆಲ್ಲದರ ನಡುವೆಯೂ ಮಗಳ ಕೈಯಲ್ಲಿ ಕೊಳ್ಳಿ ಇಡಿಸಿಕೊಂಡ ಕಾರಣಕ್ಕೆ ನನ್ನಪ್ಪನ ಆತ್ಮಕ್ಕೆ ಶಾಂತಿ ಸಿಕ್ಕಿರಬಹುದು ಎಂಬ ಸಣ್ಣ ನಂಬಿಕೆಯೇ ಮನಸ್ಸಿಗೆ ಎಷ್ಟೋ ಸಮಾಧಾನ ತರುತ್ತದೆ!

ಸಂಪ್ರದಾಯವಾದಿಗಳು, ಸುಧಾರಣಾವಾದಿಗಳು, ಆಸ್ತಿಕರು, ನಾಸ್ತಿಕರು... ಹೀಗೆ ಹಲವು ಭಿನ್ನ ಮನೋಭಾವದವರನ್ನೆಲ್ಲ ಒಪ್ಪಿಕೊಂಡು, ಹೊಂದಿಕೊಂಡು (ಕೆಲವು ಅಪವಾದ ಹೊರತುಪಡಿಸಿ) ಸಾಗುತ್ತಿರುವ ಧರ್ಮವೆಂದರೆ ಬಹುಶಃ ಹಿಂದೂ ಧರ್ಮವೊಂದೇ! ಈ ಧರ್ಮದಲ್ಲಿನ ಹಲವು ಸಂಪ್ರದಾಯಗಳನ್ನು ಸಮಾಜವು ಕಾಲೋಚಿತವಾಗಿ ಕೈಬಿಟ್ಟಿದೆ. ಅಂತ್ಯಸಂಸ್ಕಾರ ಮಾಡಲು ಸ್ತ್ರೀಯರಿಗೆ ಅವಕಾಶ ಕಲ್ಪಿಸುವುದನ್ನೂ ಇಂತಹುದೇ ವಿಶಾಲ ಮನೋಭಾವದಿಂದ ನೋಡಬೇಕಾದ ಕಾಲ ಈಗ ಬಂದಿದೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಬರೀ ಆಚರಣೆಯಾಗಿ ಉಳಿಯದಿರಲಿ. ಹೊಸ ದಿಟ್ಟ ಹೆಜ್ಜೆಗಳಿಗೆ ಮುನ್ನುಡಿ ಬರೆಯಲಿ.

ವಾಚಕರ ವಾಣಿ

ಮನಮೋಹನ್ ಹೆಸರಿನಲ್ಲಿ ವಾಣಿಜ್ಯ ವಿ.ವಿ. ತೆರೆಯಲಿ

ಬೆಂಗಳೂರು ವಿಶ್ವವಿದ್ಯಾಲಯದ ಹೆಸರನ್ನು ಡಾ. ಮನಮೋಹನ್ ಸಿಂಗ್ ವಿಶ್ವವಿದ್ಯಾಲಯ ಎಂದು ಮರುನಾಮಕರಣ ಮಾಡಲು ಹೊರಟಿರುವ ರಾಜ್ಯ ಸರ್ಕಾರದ ನಿರ್ಧಾರ ಸರಿಯಲ್ಲ. ಭಾರತದ ಆಧುನಿಕ ಆರ್ಥಿಕತೆಯ ರೂವಾರಿಗಳಲ್ಲಿ ಒಬ್ಬರೆಂದು ಪರಿಗಣಿಸಲಾಗಿರುವ ಮನಮೋಹನ್ ಸಿಂಗ್ ಅವರ ಗೌರವಸೂಚಕವಾಗಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ ನಮ್ಮ ಬೆಂಗಳೂರು ಈಗ ಬ್ರ್ಯಾಂಡ್ ಬೆಂಗಳೂರಾಗಿದ್ದು, ನಮ್ಮ ಹೆಮ್ಮೆಯಾಗಿದೆ. ಅನೇಕ ಘಟಾನುಘಟಿ ಸಾಹಿತಿಗಳು, ಪ್ರಾಧ್ಯಾಪಕರು ಬೆಂಗಳೂರು ವಿಶ್ವವಿದ್ಯಾಲಯವನ್ನು ಕಟ್ಟಿ ಬೆಳೆಸಿದ್ದಾರೆ. ಕನ್ನಡಿಗರ, ಕರ್ನಾಟಕದ ಅಸ್ಮಿತೆಯನ್ನು ಸಾರುವ ಬೆಂಗಳೂರಿನ ಹೆಸರನ್ನು ವಿಶ್ವವಿದ್ಯಾಲಯಕ್ಕೆ ಇಟ್ಟಿರುವುದು ಸರಿಯಾಗಿದೆ.

ಮನಮೋಹನ್ ಸಿಂಗ್ ಅವರು ದೇಶದ ಹೆಮ್ಮೆಯ ಅರ್ಥಶಾಸ್ತ್ರಜ್ಞ ಅನ್ನುವುದರಲ್ಲಿ ಎರಡು ಮಾತಿಲ್ಲ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಹೊಸದಾಗಿ ವಾಣಿಜ್ಯ ಕಾಲೇಜುಗಳನ್ನು ತೆರೆದು, ಮನಮೋಹನ್ ಸಿಂಗ್ ಅವರ ಹೆಸರಿನಲ್ಲಿ ವಾಣಿಜ್ಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಿ. ಅದಕ್ಕೆ ಯಾರ ಆಕ್ಷೇಪವೂ ಇರಲಾರದು. ಆದರೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅವರ ಹೆಸರಿಡುವುದು ಸಮಂಜಸವಲ್ಲ.

ಭವ್ಯ ಶ್ರೀವತ್ಸ, ನಂಜನಗೂಡು

ಪ್ಲಾಸ್ಟಿಕ್ ತಟ್ಟೆ, ಲೋಟವನ್ನೂ ನಿರ್ಬಂಧಿಸಿ

ಪ್ಲಾಸ್ಟಿಕ್ ಹಾಳೆಗಳನ್ನು ಬಳಸಿ ಇಡ್ಲಿ ಬೇಯಿಸುವುದು ಕ್ಯಾನ್ಸರ್‌ಕಾರಕವಾಗಿದ್ದು, ಅದರಿಂದ ಸಾರ್ವಜನಿಕರ ಆರೋಗ್ಯ ಹಾಳಾಗುತ್ತದೆ ಎಂಬ ವಿಚಾರದ ಬಗ್ಗೆ ಇಷ್ಟು ವರ್ಷಗಳ ನಂತರವಾದರೂ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಅರಿವು ಮೂಡಿರುವುದು ನಿಜಕ್ಕೂ ಸಂತೋಷದಾಯಕ. ತಪ್ಪಿತಸ್ಥ ಹೋಟೆಲ್ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ನಿರ್ಧರಿಸಿರುವುದೂ ಶ್ಲಾಘನೀಯ. ಆದರೆ ಇದರೊಡನೆ ಮತ್ತೊಂದು ಮುಖ್ಯ ಕಾರ್ಯವನ್ನೂ ಇಲಾಖೆ ಮಾಡಬೇಕಾಗಿದೆ. ಅದೇನೆಂದರೆ, ರಸ್ತೆ ಬದಿಯ ಹೋಟೆಲ್‌ನವರು ಮತ್ತು ಮಧ್ಯಮ ಶ್ರೇಣಿಯ ಕೆಲವು ಹೋಟೆಲ್‌ಗಳು ಕಡಿಮೆ ವೆಚ್ಚ ಹಾಗೂ ಸುಲಭ ನಿರ್ವಹಣೆಯ ಕಾರಣಕ್ಕೆ ಪ್ಲಾಸ್ಟಿಕ್ ತಟ್ಟೆಗಳಲ್ಲಿ ಪ್ಲಾಸ್ಟಿಕ್ ಹಾಳೆಗಳನ್ನು ಹಾಸಿ ಬಿಸಿ ಪದಾರ್ಥಗಳನ್ನು ಬಡಿಸುತ್ತಾರೆ. ಪಾರ್ಸೆಲ್ ನೀಡುವಾಗ ಪ್ಲಾಸ್ಟಿಕ್ ಹಾಳೆಗಳು, ಡಬ್ಬಿಗಳನ್ನು ಉಪಯೋಗಿಸುತ್ತಾರೆ. ಇದು ಸಹ ಅನಾರೋಗ್ಯಕರ. ಹಾಗಾಗಿ, ಈ ಪದ್ಧತಿಯನ್ನು ನಿಷೇಧಿಸಿ, ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ನಿರ್ಧಾರ ಮಾಡಬೇಕು. ಇಲ್ಲವಾದಲ್ಲಿ ಅನಾರೋಗ್ಯಕರ ಪದ್ಧತಿಗಳ ವಿರುದ್ಧದ ಕಾರ್ಯಾಚರಣೆ ಅಪೂರ್ಣ ಎನಿಸುತ್ತದೆ.

ಎಸ್.ರವಿ, ಮೈಸೂರು

ಕಾಫಿ ನಾಡಿನ ಸಂಕಷ್ಟ ಅರಿಯಿರಿ

ಕಾಫಿಪುಡಿಗೂ ತಗಲಿತು ಬೆಲೆ ಏರಿಕೆಯ ಬಿಸಿ ಎಂದಿರುವ ಪತ್ತಂಗಿ ಎಸ್. ಮುರಳಿ (ವಾ.ವಾ., ಏ. 7), ಕಾಫಿ ಬೀಜದ ರಫ್ತು ನಿಲ್ಲಿಸಿದರೆ ಆಗ ಅದರ ಬೆಲೆ ಇಳಿದು ಗ್ರಾಹಕರಿಗೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಕಾಫಿ ಬೆಳೆ ಬೆಳೆಯುವ ಪ್ರದೇಶಕ್ಕೆ ಖುದ್ದಾಗಿ ಭೇಟಿ ನೀಡಿದರೆ ಕಾಫಿ ಕೃಷಿಕರ ಸಂಕಷ್ಟ ಅರ್ಥವಾಗುತ್ತದೆ. ಬಹುತೇಕ ಬೆಂಗಳೂರಿನಂತಹ ದೂರದ ಊರುಗಳ ನಗರ ಸಂಸ್ಕೃತಿಯವರು ಕಾಫಿ ನಾಡಾದ ಚಿಕ್ಕಮಗಳೂರು, ಕೊಡಗು, ಸಕಲೇಶಪುರ, ಹಾಸನ ಭಾಗದ ಜನ ಶ್ರೀಮಂತರು ಎಂದು ಭಾವಿಸಿದ್ದಾರೆ. ಆದರೆ ಇಲ್ಲಿ ಆರ್ಥಿಕವಾಗಿ ಮಧ್ಯಮ ವರ್ಗದವರಾಗಿರುವ ಜನ ಹಿಂದಿನ ದಶಕದಿಂದಲೂ ಅತಿವೃಷ್ಟಿ, ಅನಾವೃಷ್ಟಿ, ಪ್ರಾಕೃತಿಕ ವಿಕೋಪ, ಕಾಡುಪ್ರಾಣಿಗಳ ಜೊತೆಗಿನ ಸಂಘರ್ಷ, ನುರಿತ ಕೆಲಸಗಾರರ ಕೊರತೆ, ದಿಢೀರನೆ ಕುಸಿತ ಕಾಣುವ ಮಾರುಕಟ್ಟೆ ದರ, ಕೃಷಿಸಾಲದಂತಹವುಗಳ ಚಕ್ರವ್ಯೂಹದಲ್ಲಿ ಸಿಲುಕಿ ಸಂಕಷ್ಟ ಅನುಭವಿಸುತ್ತಾ ಬರುತ್ತಿದ್ದಾರೆ.

ಈ ವರ್ಷದ ಕಾಫಿಬೀಜದ ದರವು ಬೆಳೆಗಾರರು ಒಂದಷ್ಟು ಚೇತರಿಸಿಕೊಂಡು ಮುನ್ನಡೆಯಲು ಸಹಾಯಕವಾಗಿದೆಯೇನೋ ನಿಜ. ಆದರೆ ಇಲ್ಲೂ ಬೆಲೆ ಏರಿಳಿತ ಕಂಡುಬರುವ ಸಾಧ್ಯತೆಗಳು ಇರುತ್ತವೆ. ಇಂಥದ್ದರಲ್ಲಿ ಕಾಫಿಬೀಜದ ಬೆಲೆ ಇಳಿಸಬೇಕು ಎನ್ನುವ ಅಭಿಪ್ರಾಯ ಸರಿಕಾಣದು. ಉದಾಹರಣೆಗೆ, ಹಾಲಿನ ದರ ಹೆಚ್ಚಾದಾಗಲೂ ಇಂತಹುದೇ ಅನಿಸಿಕೆಗಳನ್ನು ಗಮನಿಸಿರುತ್ತೇವೆ. ಆದರೆ ಉತ್ಪಾದನಾ ಕ್ಷೇತ್ರದ ಸಂಕಷ್ಟಗಳನ್ನು ಯಾರೂ ಅಷ್ಟೊಂದು ಗಣನೆಗೆ ತೆಗೆದುಕೊಳ್ಳದಿರುವುದು ವಿಪರ್ಯಾಸ.

ಸಂಪತ್ ಬೆಟ್ಟಗೆರೆ, ಮೂಡಿಗೆರೆ

ಬಜೆಟ್: ಎಟಿಆರ್ ಮಂಡಿಸುವುದಿಲ್ಲವೇಕೆ?

ಪ್ರತಿವರ್ಷ ಬಜೆಟ್ ಮಂಡನೆಯು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಕ್ಕೆ ಒಂದು ಸಾಂಪ್ರದಾಯಿಕ ಆಚರಣೆಯಾಗಿದೆ. ಆದರೆ ಅದರ ಅನುಷ್ಠಾನದ ಕಾರ್ಯಪಾಲನಾ ವರದಿಯನ್ನು (ಎಟಿಆರ್) ಯಾಕೆ ಮಂಡಿಸುವುದಿಲ್ಲ? ಬಜೆಟ್ ಮಂಡಿಸುವ ಒಂದು ವಾರದ ಮೊದಲು ಎಟಿಆರ್ ಮಂಡಿಸುವಂತೆ ಆಗಲಿ.

ಟಿ.ವಿ.ಬಿ. ರಾಜನ್, ಬೆಂಗಳೂರು

ಶಕ್ತಿಸೌಧದ ಪ್ರವೇಶಕ್ಕೆ ಇರಲಿ ಮುಕ್ತ ಅವಕಾಶ

ವಿಧಾನಸೌಧದಲ್ಲಿ ಇತ್ತೀಚೆಗೆ ನಡೆದ ಪುಸ್ತಕ ಮೇಳಕ್ಕೆ ಅಪಾರ ಸಂಖ್ಯೆಯಲ್ಲಿ ಭೇಟಿ ಇತ್ತ ಜನರಲ್ಲಿ ಪುಸ್ತಕ ಕೊಳ್ಳದಿದ್ದವರೂ ಇದ್ದುದಾಗಿ ವರದಿಯಾಗಿದೆ. ಅಷ್ಟೊಂದು ಸಂಖ್ಯೆಯಲ್ಲಿ ಜನ ಭೇಟಿ ಇತ್ತದ್ದು ಬಹುಶಃ ಅಲ್ಲಿಗೆ ದೊರೆತ ಮುಕ್ತ ಪ್ರವೇಶದ ಕಾರಣದಿಂದ ಇರಬಹುದು. ಏಕೆಂದರೆ ಯಾವಾಗಲೂ ಸರ್ಪಗಾವಲಿರುವ ವಿಧಾನಸೌಧಕ್ಕೆ ಶಾಸಕರ ಅನುಮತಿ ಪತ್ರ ಅಥವಾ ಐ.ಡಿ. ಕಾರ್ಡ್ ಇಲ್ಲದೆ ಪ್ರವೇಶ ಸಾಧ್ಯವಿಲ್ಲ. ಆದರೆ ತೀವ್ರ ಭದ್ರತೆ ಇರುವ, ಅಮೆರಿಕದ ವಾಷಿಂಗ್ಟನ್‌ನಲ್ಲಿರುವ ಸಂಸತ್ ಭವನದ ಒಳಗೆ ವಿದೇಶಿಯರು ಕೂಡ ಸಲೀಸಾಗಿ ಹೋಗಿ, ಕಾಲಿನ ಮೇಲೆ ಕಾಲು ಹಾಕಿಕೊಂಡು ಕುಳಿತರೂ ಯಾರೂ ಆಕ್ಷೇಪಿಸುವುದಿಲ್ಲ, ಕಟ್ಟುನಿಟ್ಟಿನ ಭದ್ರತಾ ತಪಾಸಣೆ ಇದ್ದರೂ ಕಿರಿಕಿರಿ ಅನ್ನಿಸುವುದಿಲ್ಲ ಎಂಬುದು ಎ.ಎಸ್. ನಾರಾಯಣರಾವ್ ಅವರ ಲೇಖನದಿಂದ (ಪ್ರ.ವಾ., ಭಾನುವಾರದ ಪುರವಣಿ, ಫೆ. 23) ತಿಳಿಯುತ್ತದೆ. ಇದು ನಿಜಕ್ಕೂ ಖುಷಿಯ ವಿಷಯ. ನಮ್ಮ ಸರ್ಕಾರವೂ ವಿಧಾನಸೌಧದ ಜನಸಾಮಾನ್ಯರ ಪ್ರವೇಶಕ್ಕೆ ಇದೇ ಮಾದರಿಯನ್ನು ಅನುಸರಿಸಬೇಕು. ಭದ್ರತಾ ತಪಾಸಣೆಗೆ ಒಳಪಡಿಸಿ ವಿಧಾನಸೌಧದ ವೀಕ್ಷಣೆಗೆ ಅನುವು ಮಾಡಿ, ಶಕ್ತಿಸೌಧದ ಸೌಂದರ್ಯ ಸವಿಯಲು ಅವಕಾಶ ಮಾಡಿಕೊಡಬೇಕು.

ಮುಳ್ಳೂರು ಪ್ರಕಾಶ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯ ಬಜೆಟ್



ಜಿಲ್ಲೆಗಳಿಗೆ ಸಿಕ್ಕಿದ್ದೇನು?



ವಿಜಯಪುರ
- ಮುದ್ದೇಬಿಹಾಳದಲ್ಲಿ ಕೃಷಿ ಸಂಶೋಧನಾ ಕೇಂದ್ರ
- ₹ 348 ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣ ಕಾರ್ಯಾಚರಣೆ ಆರಂಭ
- ತಿಡಗುಂಡಿಯಲ್ಲಿ ಪ್ಲಗ್ ಆ್ಯಂಡ್ ಪ್ಲೇ ಸೌಲಭ್ಯದ ಪ್ಲಾಟ್ ಫ್ಯಾಕ್ಟರಿ

ಬಾಗಲಕೋಟೆ
- ಮುಧೋಳ ಮತ್ತು ಹುನಗುಂದದಲ್ಲಿ ತಾಯಿ ಮಕ್ಕಳ ಆಸ್ಪತ್ರೆ
- ಆರೋಗ್ಯ ವಿವಿಯ ಘಟಕ ವೈದ್ಯಕೀಯ ಕಾಲೇಜು
- ಬಾದಾಮಿಯಲ್ಲಿ ಸುಸಜ್ಜಿತ ಟ್ರಾಮಾ ಕೇರ್ ಕೇಂದ್ರ

ಬೆಳಗಾವಿ
- ಅಥಣಿಯಲ್ಲಿ ಹೊಸ ಕೃಷಿ ಕಾಲೇಜು ಸ್ಥಾಪನೆಗೆ ಕಾರ್ಯಸಾಧ್ಯತಾ ವರದಿ
- ಅಥಣಿಯಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ
- ವಿಶೇಷ ಮಕ್ಕಳ ಸರ್ಕಾರಿ ವಸತಿಯುತ ಶಾಲೆಗಳ ಉನ್ನತೀಕರಣ
- ಬೈಲಹೊಂಗಲ, ಖಾನಾಪುರದ ನಂದಗಡದಲ್ಲಿ ₹28 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ
- ಸವದತ್ತಿ ರೇಣುಕಾ ಯಲ್ಲಮ್ಮ ಕ್ಷೇತ್ರ ಅಭಿವೃದ್ಧಿ

ಧಾರವಾಡ
- ಹುಬ್ಬಳ್ಳಿಯ ದೃಷ್ಟಿ ದೋಷದ ಮಕ್ಕಳ ಶಾಲೆ ಪ್ರೌಢ ಶಾಲೆಯಾಗಿ ಮೇಲ್ದರ್ಜೆಗೆ
- ಗ್ಲೋಬಲ್ ಇನ್ನೊವೇಷನ್ ಡಿಸ್ಟ್ರಿಕ್ಟ್ ಅಭಿವೃದ್ಧಿ

ಉತ್ತರ ಕನ್ನಡ
- ಕಾರವಾರ ನೌಕಾನೆಲೆ ವಿಮಾನ ನಿಲ್ದಾಣ ಕಾಮಗಾರಿಗೆ ಅನುದಾನ
- ಕಡಲ್ಕೊರೆತ ತಡೆಯಲು ವಿಸ್ತೃತ ಯೋಜನಾ ವರದಿ ಮತ್ತು ಕಡಲ ತೀರ ಅಭಿವೃದ್ಧಿ
- ಪ್ರಥಮ ಸಾವಯವ ತಾಲ್ಲೂಕು ಆಗಿ ಜೋಯಿಡಾ ಪರಿವರ್ತನೆ,

ದಾವಣಗೆರೆ
- ಸೂರಗೊಂಡನ ಕೊಪ್ಪದಲ್ಲಿ ಕ್ರೈಸ್ ವತಿಯಿಂದ ವಸತಿ ಶಾಲೆ
- ಲಂಬಾಣಿ ಜನಾಂಗದ ಕೌಶಲ ತರಬೇತಿ ಕೇಂದ್ರ
- ಕೊಂಡಜ್ಜಿ ಬೆಟ್ಟದ ಪರಿಸರದಲ್ಲಿ ರಂಗಾಯಣದಲ್ಲಿ ಮೂಲಸೌಕರ್ಯ

ಶಿವಮೊಗ್ಗ
- ಸೊರಬದ ಚಂದ್ರಗುತ್ತಿ ಗ್ರಾಮ ಧಾರ್ಮಿಕ, ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿ

ಉಡುಪಿ
- ಕಡಲ್ಕೊರೆತ ತಡೆಯಲು ವಿಸ್ತೃತ ಯೋಜನೆ
- ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಮಲ್ಟಿ ಲೆವೆಲ್ ಪಾರ್ಕಿಂಗ್ ವ್ಯವಸ್ಥೆ, ಬೀಚ್ ಅಭಿವೃದ್ಧಿ

ದಕ್ಷಿಣ ಕನ್ನಡ
- ಪುತ್ತೂರಿನಲ್ಲಿ ಹೊಸ ವೈದ್ಯಕೀಯ ಕಾಲೇಜು
- ಪಿಲಿಕುಳದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಂತರರಾಷ್ಟ್ರೀಯ ಯುವಕರ ತರಬೇತಿ ಕೇಂದ್ರ
- ಉಳ್ಳಾಲದಲ್ಲಿ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರಿಗಾಗಿ ವಸತಿ ಸಹಿತ ಪಿ.ಯು ಕಾಲೇಜು
- ಕಡಲ್ಕೊರೆತ ತಡೆಯಲು ವಿಸ್ತೃತ ಯೋಜನಾ ವರದಿ ಮತ್ತು ಕಡಲ ತೀರ ಅಭಿವೃದ್ಧಿ
- ಮಂಗಳೂರಿನಲ್ಲಿ ಪಿಪಿಪಿ ಮಾದರಿಯಲ್ಲಿ ಜಲಸಾರಿಗೆ ಸಂಗ್ರಹಾಲಯ ಮತ್ತು ಅನುಭವ ಕೇಂದ್ರ
- ಉಳ್ಳಾಲಕ್ಕೆ ಕುಡಿಯುವ ನೀರಿನ ಯೋಜನೆ

ಕೊಡಗು
- ಪೊನ್ನಂಪೇಟೆಯಲ್ಲಿ ಸಮುದಾಯ ಆರೋಗ್ಯ ಕೇಂದ್ರ
- ವಿರಾಜಪೇಟೆಯಲ್ಲಿ 400 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ
- ವಿರಾಜಪೇಟೆ– ಪೊನ್ನಂಪೇಟೆ, ಮಡಿಕೇರಿ ತಾಲ್ಲೂಕಿನಲ್ಲಿ ₹200 ಕೋಟಿ ವೆಚ್ಚದಲ್ಲಿ ರಸ್ತೆ, ಸೇತುವೆ ಮರು ನಿರ್ಮಾಣ

ಮೈಸೂರು
- ರೇಷ್ಮೆಗೂಡಿನ ಮಾರುಕಟ್ಟೆ ಸ್ಥಾಪನೆ
- ಹೈ–ಟೆಕ್ ಮತ್ಸ್ಯದರ್ಶಿನಿ
- ಮೈಸೂರು ವಿವಿಯಲ್ಲಿ ಪ್ರೊ.ನಂಜುಂಡ ಸ್ವಾಮಿ ಪೀಠ
- ತಗಡೂರು ಸಿಎಚ್‌ಸಿ 100 ಹಾಸಿಗೆ ಆಸ್ಪತ್ರೆ
- ನಿಮ್ಹಾನ್ಸ್ ಮಾದರಿಯ ಸಂಸ್ಥೆ ಸ್ಥಾಪನೆ
- ವಿಶೇಷ ಮಕ್ಕಳ ಸರ್ಕಾರಿ ವಸತಿಯುತ ಶಾಲೆ ಉನ್ನತೀಕರಣ
- ಐದು ವಸತಿ ಶಾಲೆಗಳು 12 ತರಗತಿವರೆಗೆ ಮೇಲ್ದರ್ಜೆಗೆ
- ಬುಡಕಟ್ಟು ವಸ್ತು ಸಂಗ್ರಹಾಲಯ
- ರಂಗಾಯಣ ಚಟುವಟಿಕೆಗೆ ₹2 ಕೋಟಿ
- ₹3 ಕೋಟಿ ವೆಚ್ಚದಲ್ಲಿ ಹೊಸ ಅಗ್ನಿಶಾಮಕ ಠಾಣೆ

ಬೀದರ್
- ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಕ್ಯಾನ್ಸರ್ ಪತ್ತೆ ವಿಭಾಗ
- ಲಂಬಾಣಿ ಜನಾಂಗದ ಕೌಶಲ ತರಬೇತಿ ಕೇಂದ್ರ

ಕಲಬುರಗಿ
- ಹೊಸ ಮೆಗಾ ಡೇರಿ ಆರಂಭಿಸಲು ₹ 50 ಕೋಟಿ
- ಪ್ರಾದೇಶಿಕ ಸಹಕಾರ ಭವನಕ್ಕೆ ₹ 10 ಕೋಟಿ
- ನಿಮ್ಹಾನ್ಸ್ ಮಾದರಿಯ ಸಂಸ್ಥೆ ಸ್ಥಾಪನೆ
- ಜೇವರ್ಗಿಯಲ್ಲಿ ₹ 6 ಕೋಟಿ ವೆಚ್ಚದಲ್ಲಿ ನರ್ಸಿಂಗ್ ಕಾಲೇಜು
- ಸನ್ನತಿ ಅಭಿವೃದ್ಧಿ ಪ್ರಾಧಿಕಾರ ರಚನೆ
- ಸೇಡಂನಲ್ಲಿ ₹ 25 ಕೋಟಿಯಲ್ಲಿ ಸರ್ಕಾರಿ ಐಟಿಐ ಉನ್ನತೀಕರಣ

ಯಾದಗಿರಿ
- ಕೆಕೆಆರ್‌ಡಿಬಿ ಅನುದಾನದಲ್ಲಿ ₹ 6 ಕೋಟಿ ವೆಚ್ಚದಲ್ಲಿ ಹೊಸ ನರ್ಸಿಂಗ್ ಕಾಲೇಜು

ರಾಯಚೂರು
- ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆವರಣದಲ್ಲಿ ₹ 50 ಕೋಟಿ ವೆಚ್ಚದಲ್ಲಿ ಕಿದ್ವಾಯಿ ಪೆರಿಫೆರಲ್ ಕ್ಯಾನ್ಸರ್ ಚಿಕಿತ್ಸಾ ಘಟಕ
- ಜಿಟಿಟಿಸಿ ಸ್ಥಾಪನೆ

ಕೊಪ್ಪಳ
- ₹100 ಕೋಟಿ ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
- ಬೂದುಗುಂಪದಲ್ಲಿ ₹ 25 ಕೋಟಿಯಲ್ಲಿ ಕುರಿ -ಮೇಕೆ ಮಾರುಕಟ್ಟೆ
- ಯಲಬುರ್ಗದಲ್ಲಿ ₹ 6 ಕೋಟಿ ವೆಚ್ಚದಲ್ಲಿ ನರ್ಸಿಂಗ್ ಕಾಲೇಜು
- ಕುಕನೂರು, ಕಾರಟಗಿಯಲ್ಲಿ ಜೆಎಂಎಫ್‌ಸಿ ನ್ಯಾಯಾಲಯ

ಗದಗ

ಡಂಬಳದಲ್ಲಿ ತೋಟಗಾರಿಕಾ ಕಾಲೇಜು ಸ್ಥಾಪಿಸಲು ಕಾರ್ಯಸಾಧ್ಯತಾ ವರದಿ

ಬಳ್ಳಾರಿ
- ಸರ್ಕಾರಿ ಶ್ರವಣದೋಷವುಳ್ಳ ಮಕ್ಕಳ ಶಾಲೆ ಪ್ರೌಢ ಶಾಲೆಯಾಗಿ ಮೇಲ್ದರ್ಜೆಗೆ
- ಜಿಟಿಟಿಸಿ ಸ್ಥಾಪನೆ

ವಿಜಯನಗರ
- ಹೊಸ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ

ಚಿತ್ರದುರ್ಗ
- ಮೊಳಕಾಲ್ಮೂರಿನಲ್ಲಿ 200 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ
- ಸುಜ್ಜಿತ ಟ್ರಾಮಾ ಕೇರ್ ಕೇಂದ್ರ
- ಹೊಸ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ

ತುಮಕೂರು
- ಜಿಟಿಟಿಸಿ ಸ್ಥಾಪನೆ
- ವಸಂತನರಸಾಪುರದಲ್ಲಿ ₹ 20 ಕೋಟಿಯಲ್ಲಿ ಮಹಿಳಾ ವಸತಿ ನಿಲಯ

ಚಿಕ್ಕಬಳ್ಳಾಪುರ
- ಶಿಡ್ಲಘಟ್ಟ ಹೈ–ಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಯ 2ನೇ ಹಂತದ ಕಾಮಗಾರಿಗೆ ಅನುದಾನ
- ಹೈಟೆಕ್ ಹೂವಿನ ಮಾರುಕಟ್ಟೆ
- ಚಿಂತಾಮಣಿಯಲ್ಲಿ ₹150 ಕೋಟಿ ವೆಚ್ಚದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಘಟಕ ಕಾಲೇಜು

ಹಾಸನ
- ಬೇಲೂರು, ಹಳೆಬೀಡು ಸೋಮನಾಥಪುರ ಪ್ರವಾಸಿ ತಾಣಗಳಲ್ಲಿ ಮೂಲಸೌಲಭ್ಯ ಅಭಿವೃದ್ಧಿ

ರಾಮನಗರ
- ರಾಮನಗರ ಹೈ–ಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಯ 2ನೇ ಹಂತದ ಕಾಮಗಾರಿಗೆ ಅನುದಾನ
- ರಾಮನಗರಕ್ಕೆ ಕುಡಿಯುವ ನೀರಿನ ಯೋಜನೆ

ಚಾಮರಾಜನಗರ
- ಐದು ವಸತಿ ಶಾಲೆಗಳು 12 ತರಗತಿವರೆಗೆ ಮೇಲ್ದರ್ಜೆಗೆ
- 2 ಕೋಟಿ ರೂ. ವೆಚ್ಚದಲ್ಲಿ ಒಲಿಂಪಿಕ್ ಮಾದರಿಯ (50 ಮೀಟರ್) ಈಜುಕೊಳ

ಮಂಡ್ಯ
- ಕೃಷಿ ವಿಶ್ವವಿದ್ಯಾಲಯಕ್ಕೆ ಮೂಲಸೌಕರ್ಯ ಕಲ್ಪಿಸಲು ₹ 25 ಕೋಟಿ

ಕೋಲಾರ
- ರೈತ ಉತ್ಪನ್ನಗಳಿಗೆ ಆಧುನಿಕ ಮಾರುಕಟ್ಟೆ
- ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜು
- ನರಸಾಪುರದಲ್ಲಿ 6 ಸಾವಿರ ಸಾಮರ್ಥ್ಯದ ಮಹಿಳಾ ವಸತಿ ನಿಲಯ
- ಶಿವಾರಪಟ್ಟಣದ ಕೈಗಾರಿಕಾ ಪ್ರದೇಶದಲ್ಲಿ ಮಲ್ಟಿ ಸೆಕ್ಟರ್ ನೆಟ್ ಝೀರೊ ಸಸ್ಟೈನಿಬಿಲಿಟಿ ಇಂಡಸ್ಟ್ರಿಯಲ್ ಪಾರ್ಕ್ ಸ್ಥಾಪನೆ
- ಹೊಸ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ
- ಕೆಜಿಎಫ್‌ನಲ್ಲಿ ಭಾರತೀಯ ಮೀಸಲು ಪೊಲೀಸ್ ಪಡೆ

ಚಿಕ್ಕಮಗಳೂರು • ಮಾನವ-ಆನೆ ಸಂಘರ್ಷ ತಪ್ಪಿಸಲು ಭದ್ರಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಾಡಾನೆ ಸಾಫ್ಟ್ ರಿಲೀಸ್ ಕೇಂದ್ರಕ್ಕೆ ₹20 ಕೋಟಿ

ಬೆಂಗಳೂರು
- ಹೊರವಲಯದಲ್ಲಿ ಹೊಸ ಸೆಟಲೈಟ್ ಮಾರ್ಕೆಟ್ ಸ್ಥಾಪನೆ
- ಸುಸಜ್ಜಿತ ಕುರಿ ಮತ್ತು ಮೇಕೆ ಮಾರುಕಟ್ಟೆ
- 100 ಹಾಸಿಗೆ ಸಾಮರ್ಥ್ಯದ ಕ್ರಿಟಿಕಲ್ ಕೇರ್ ಬ್ಲಾಕ್ ಕಟ್ಟಡ
- ಉತ್ತರ ತಾಲ್ಲೂಕಿನಲ್ಲಿ ₹ 150 ಕೋಟಿ ವೆಚ್ಚದಲ್ಲಿ 200 ಹಾಸಿಗೆಯ ಆಸ್ಪತ್ರೆ
- ಬೌರಿಂಗ್, ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ₹297 ಕೋಟಿ ವೆಚ್ಚದಲ್ಲಿ 500 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ
- ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಐಎಎಸ್, ಐಪಿಎಸ್, ಕೆಎಎಸ್, ಕೆಎಸ್‌ಪಿಎಸ್ ಪರೀಕ್ಷೆಗಳಿಗೆ ವಸತಿಸಹಿತ ಎರಡು ಸುಸಜ್ಜಿತ ವಸತಿ ನಿಲಯ
- ಹಜ್ ಭವನದಲ್ಲಿ ಮುಕ್ತ ವಿವಿ ಪ್ರಾದೇಶಿಕ ಕೇಂದ್ರ
- ಬೌದ್ಧ ಅಧ್ಯಯನ ಅಕಾಡೆಮಿ ಸ್ಥಾಪನೆ
- ದೇವಿಕಾರಾಣಿ ರೋರಿಚ್ ಎಸ್ಟೇಟ್ ಅಭಿವೃದ್ಧಿ

ಬೆಂಗಳೂರು ಗ್ರಾಮಾಂತರ
- ದೇವನಹಳ್ಳಿಯಲ್ಲಿ ಬೆಂಗಳೂರು ಸಿಗ್ನೇಚರ್ ಬಿಸಿನೆಸ್ ಪಾರ್ಕ್

ಬಜೆಟ್‌ನಲ್ಲಿ ಉಲ್ಲೇಖಿಸಿದ ಹೇಳಿಕೆ

ಸಮಾಜವು ತನ್ನ ಅಸಹಾಯಕ ಸದಸ್ಯರ ಕುರಿತು ತೋರುವ ಕಾಳಜಿಯು ಆ ನಾಗರಿಕತೆಯ ಪ್ರಬುದ್ಧತೆಯನ್ನು ತೋರಿಸುತ್ತದೆ

ಡಾ.ರಾಮಮನೋಹರ ಲೋಹಿಯಾ

ಕಲೆ: ಗುರು ನಾವಳ್ಳಿ

₹1.16 ಲಕ್ಷ ಕೋಟಿ
ರಾಜ್ಯ ಸರ್ಕಾರ ಈ ವರ್ಷ ಮಾಡಲು ಉದ್ದೇಶಿಸಿರುವ ಒಟ್ಟು ಸಾಲ

₹15.04 ಲಕ್ಷ ಕೋಟಿ
ಕೇಂದ್ರ ಸರ್ಕಾರ ಈ ವರ್ಷ ಮಾಡುತ್ತಿರುವ ಸಾಲ

ಅಪಪ್ರಚಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ

ಕೇಂದ್ರ ಸರ್ಕಾರದ ಸಾಲ ಬಿಜೆಪಿಯ ಮೌನ ಏಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಸಾಲವನ್ನು ಟೀಕಿಸುವ ಬಿಜೆಪಿ ಮುಖಂಡರು ಪ್ರಧಾನಿ ನರೇಂದ್ರ ಮೋದಿ ನೇತೃತ್ವ ಕೇಂದ್ರ ಸರ್ಕಾರ 2025–26ನೇ ಸಾಲಿನಲ್ಲಿ ಮಾಡುತ್ತಿರುವ ₹15.04 ಲಕ್ಷ ಕೋಟಿ ಸಾಲದ ಬಗ್ಗೆಯೂ ಏಕೆ ಧ್ವನಿ ಎತ್ತುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘ರಾಜ್ಯ ಸರ್ಕಾರ ಈ ವರ್ಷ ಉದ್ದೇಶಿಸಿರುವ ಒಟ್ಟು ಸಾಲ ₹1.16 ಲಕ್ಷ ಕೋಟಿ. ಇದು ಕೇಂದ್ರ ಸರ್ಕಾರ ಹಾಗೂ ಆರ್‌ಬಿಐ ರೂಪಿಸಿದ ನಿಯಮಕ್ಕೆ ಅನುಗುಣವಾಗಿಯೇ ಇದೆ. ನಿಯಮದಂತೆ ಬಜೆಟ್ ಗಾತ್ರದ ಶೇ 25 ಮೀರಬಾರದು. ರಾಜ್ಯದ ಸಾಲ ಶೇ 24.95 ಇದೆ. ಕಳೆದ ಸಾಲಿಗೆ ಹೋಲಿಸಿದರೆ ₹10 ಸಾವಿರ ಕೋಟಿಯಷ್ಟೇ ಹೆಚ್ಚುವರಿ ಸಾಲ ಮಾಡಲಾಗುತ್ತಿದೆ’ ಎಂದರು.

‘2025-26ನೇ ಸಾಲಿನ ಕೇಂದ್ರ ಬಜೆಟ್ ಗಾತ್ರ ₹50.65 ಲಕ್ಷ ಕೋಟಿ. ಇದೇ ಬಜೆಟ್‌ನಲ್ಲಿ ತೋರಿಸಿರುವ ಸಾಲ ಹಾಗೂ ಕೇಂದ್ರದ ಒಟ್ಟು ಸಾಲ ಶೇ 56 ದಾಟುತ್ತದೆ. ರಾಜಕೀಯ ಕಾರಣಗಳಿಗಾಗಿ ಟೀಕಿಸುವ ಬದಲು ವಿರೋಧ ಪಕ್ಷದ ನಾಯಕರು ವಸ್ತುಸ್ಥಿತಿಯತ್ತ ಗಮನಹರಿಸಬೇಕು’ ಎಂದರು.

‘ಈ ಬಾರಿ ವಿತ್ತೀಯ ಶಿಸ್ತು ಪಾಲಿಸಲಾಗಿದೆ ಬಡವರ, ಮಹಿಳೆಯರ, ಶೋಷಿತರ, ದುರ್ಬಲ ವರ್ಗದವರ ಅಭಿವೃದ್ಧಿಗೆ ಜನಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಕಡಿಮೆ ತೆರಿಗೆಯ ಮಿತಿಯಲ್ಲೇ ಎಲ್ಲ ವರ್ಗದ ಜನರ ಹಿತಾಸಕ್ತಿಗೆ ಆದ್ಯತೆ ನೀಡಲಾಗಿದೆ’ ಎಂದರು.

‘ಸರ್ಕಾರ ದಿವಾಳಿಯಾಗಿದೆ ಗ್ಯಾರಂಟಿಗಳಿಗೆ ಹಣವಿಲ್ಲ ಎಂಬ ಅಪಪ್ರಚಾರಕ್ಕೆ ತಲೆ ಕೆಡಿಸಿಕೊಳ್ಳದೆ ಇರುವ ಸಂಪನ್ಮೂಲಗಳ ಇತಿಮಿತಿಯಲ್ಲೇ ಬಜೆಟ್ ಮಂಡಿಸಲಾಗಿದೆ. ಸಾಮಾನ್ಯ ಜನರ ನೆಮ್ಮದಿಯ ಬದುಕಿಗೆ ಗ್ಯಾರಂಟಿ ನೆಮ್ಮದಿ ಮೂಡಿಸಿದೆ’ ಎಂದರು.

ಕುಸ್ತಿ, ವಾಲಿಬಾಲ್, ಕೊಕ್ಕೊ ಅಕಾಡೆಮಿಗಳ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನಲ್ಲಿ ₹ 2 ಕೋಟಿ ಅನುದಾನದಲ್ಲಿ ಕುಸ್ತಿ, ವಾಲಿಬಾಲ್, ಕೊಕ್ಕೊ ಅಕಾಡೆಮಿಗಳ ಸ್ಥಾಪನೆ, 2028ರ ಒಲಿಂಪಿಕ್ಸ್‌ಗೆ ಸಜ್ಜಾಗುತ್ತಿರುವ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆಧುನಿಕ ಸೈಕ್ಲಿಂಗ್ ವೆಲೋಡ್ರೋಮ್ ನಿರ್ಮಾಣ ಸೇರಿದಂತೆ ಯುವ ಸಬಲೀಕರಣ ಮತ್ತು ಕ್ರೀಡೆಗೆ ಸಂಬಂಧಿಸಿದಂತೆ ಹಲವು ಯೋಜನೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯ ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ.

ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕ ವಿಜೇತ ಕ್ರೀಡಾಪಟುಗಳಿಗೆ ಶೇ 5ರಷ್ಟು ಕೃಪಾಂಕವನ್ನು ವೃತ್ತಿಪರ, ಪದವಿ ಮತ್ತು ಉನ್ನತ ಶಿಕ್ಷಣದ ಪ್ರವೇಶದಲ್ಲಿ ನೀಡುವ ಘೋಷಣೆಯೂ ಬಜೆಟ್‌ನಲ್ಲಿದೆ. ಪ್ರಮುಖ ಅಂಶಗಳು ಇಲ್ಲಿವೆ...

- 2028ರ ಒಲಿಂಪಿಕ್ಸ್‌ಗೆ ತಯಾರಿ ಕೈಗೊಳ್ಳಲು ‘ಒಲಿಂಪಿಕ್ ಪದಕ ಯೋಜನೆ’ಯಡಿ ರಾಜ್ಯದ ಅತ್ಯಂತ ಪ್ರತಿಭಾನ್ವಿತ 60 ಕ್ರೀಡಾಪಟುಗಳಿಗೆ ವಾರ್ಷಿಕ ತಲಾ ₹10 ಲಕ್ಷದಂತೆ ಪ್ರೋತ್ಸಾಹಧನ ಮೂರು ವರ್ಷ ನೀಡಲಾಗುವುದು.
- ಕೂಡಿಗೆ ಕ್ರೀಡಾ ಶಾಲೆಯ ಸೌಲಭ್ಯಗಳ ಉನ್ನತೀಕರಣಕ್ಕಾಗಿ ₹ 3 ಕೋಟಿ ಅನುದಾನ. ಯಾದಗಿರಿಯ ಶಹಾಪುರದಲ್ಲಿ ಕ್ರೀಡಾ ವಸತಿ ಶಾಲೆ ₹10 ಕೋಟಿ ವೆಚ್ಚದಲ್ಲಿ ಆರಂಭ
- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆದಿನಾರಾಯಣ ಹೊಸಹಳ್ಳಿಯಲ್ಲಿರುವ 20 ಎಕರೆ ನಿವೇಶನದಲ್ಲಿ ಜಿಲ್ಲಾ ಕ್ರೀಡಾಂಗಣ ನಿರ್ಮಾಣ ಹಾಗೂ ಸೈಕ್ಲಿಂಗ್ ಕ್ರೀಡೆಗೆ ಉತ್ತೇಜನ ನೀಡಲು ₹ 5 ಕೋಟಿ ವೆಚ್ಚದಲ್ಲಿ ಆಧುನಿಕ ಸೈಕ್ಲಿಂಗ್ ವೆಲೋಡ್ರೋಮ್
- ಯಲಬುರ್ಗಾದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ತಾಲ್ಲೂಕು ಕ್ರೀಡಾಂಗಣ ಹಾಗೂ ಟಿ.ನರಸೀಪುರ ತಾಲ್ಲೂಕು ಕ್ರೀಡಾಂಗಣವನ್ನು ₹6 ಕೋಟಿ ಅನುದಾನದಲ್ಲಿ ಅಭಿವೃದ್ಧಿ
- ರಾಜ್ಯದ ನಾಲ್ಕು ವಿಭಾಗಗಳಲ್ಲಿ ತಲಾ ಒಂದರಂತೆ ಜಿಲ್ಲಾ ಕ್ರೀಡಾಂಗಣಗಳಲ್ಲಿ ಶೂಟಿಂಗ್ ರೇಂಜ್‌ಗಳನ್ನು ಒಟ್ಟು ₹3 ಕೋಟಿ ವೆಚ್ಚದಲ್ಲಿ ನಿರ್ಮಾಣ
- ಮೈಸೂರು ಮತ್ತು ಬೆಳಗಾವಿಯಲ್ಲಿ ಹೊಸದಾಗಿ ಕ್ರೀಡಾ ವಿಜ್ಞಾನ ಕೇಂದ್ರ ₹7 ಕೋಟಿ ವೆಚ್ಚದಲ್ಲಿ ಸ್ಥಾಪನೆ

- ಬೆಂಗಳೂರಿನ ವಿದ್ಯಾನಗರದಲ್ಲಿರುವ ಈಜುಕೊಳವನ್ನು ಹೀಟಿಂಗ್ ಮತ್ತು ಡೈವಿಂಗ್ ಪೂಲ್ ವ್ಯವಸ್ಥೆಗಳನ್ನೊಳಗೊಂಡು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಕೆ. ಚಾಮರಾಜನಗರದಲ್ಲಿ ₹2 ಕೋಟಿ ವೆಚ್ಚದಲ್ಲಿ ಒಲಿಂಪಿಕ್ಸ್ ಮಾದರಿಯ (50 ಮೀ.) ಈಜುಕೊಳ ನಿರ್ಮಾಣ
- ನಿವೃತ್ತಿ ಹೊಂದಿದ ಕುಸ್ತಿಪಟುಗಳ ಮಾಶಾಸನ ಹೆಚ್ಚಳ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿದವರಿಗೆ ₹6,000, ರಾಷ್ಟ್ರಮಟ್ಟದಲ್ಲಿ ಸ್ಪರ್ಧಿಸಿದವರಿಗೆ ₹5,000 ಹಾಗೂ ರಾಜ್ಯಮಟ್ಟದಲ್ಲಿ ಸ್ಪರ್ಧಿಸಿದವರಿಗೆ ₹4,500ಕ್ಕೆ ಹೆಚ್ಚಳ

ಮುಸ್ಲಿಮರ ಓಟಿನ ಋಣ ತೀರಿಸಲು ಬಜೆಟ್: ಅಶೋಕ

ಬೆಂಗಳೂರು: ‘ಇದು ಕೇವಲ ಮುಸ್ಲಿಮರ ಬಜೆಟ್. ಮುಸ್ಲಿಮರ ಓಟಿನ ಋಣ ತೀರಿಸಲು ಬಜೆಟ್ ಮಂಡಿಸಿದ್ದಾರೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು.

‘ಇತಿಹಾಸದಲ್ಲಿ ಮೊದಲ ಬಾರಿಗೆ ₹1.16 ಲಕ್ಷ ಕೋಟಿ ಸಾಲ ಮಾಡಲು ಮುಂದಾಗಿದ್ದಾರೆ. ಅತಿ ಹೆಚ್ಚು ಸಾಲ ಮಾಡುವ ಮೂಲಕ ಸಿದ್ದರಾಮಯ್ಯ ದಾಖಲೆ ಸೃಷ್ಟಿಸಿದ್ದಾರೆ. ಇದರಿಂದ ರಾಜ್ಯದ ಒಟ್ಟು ಸಾಲದ ಪ್ರಮಾಣ ₹7,81,095 ಕೋಟಿಗೆ ಏರಿದೆ’ ಎಂದು ಅವರು ಬಜೆಟ್ ಪ್ರತಿಕ್ರಿಯೆ ನೀಡಿದ್ದಾರೆ.

‘ಅಬಕಾರಿ ಇಲಾಖೆಗೆ ₹60 ಸಾವಿರ ಕೋಟಿ ಸಂಗ್ರಹದ ಗುರಿ ನೀಡಿ, ಹೊಸ ಬಾರ್‌ಗಳನ್ನು ಘೋಷಿಸಲಾಗಿದೆ. ಇದನ್ನು ಕಾಂಗ್ರೆಸ್ ಶಾಸಕರ ಬಾಯಿ ಮುಚ್ಚಿಸಲು ಮಾಡಲಾಗಿದೆ. ಇದರಿಂದ ಸುಮಾರು ₹40 ಸಾವಿರ ಕೋಟಿ ಬರಲಿದೆ’ ಎಂದರು.

‘ಕಳೆದ ಬಜೆಟ್‌ನಲ್ಲಿ ಯಾವುದೇ ತೆರಿಗೆ ಘೋಷಣೆ ಮಾಡಿರಲಿಲ್ಲ. ಬಳಿಕ ತೆರಿಗೆಗಳನ್ನು ಹೆಚ್ಚಿಸಲಾಯಿತು. ಈ ಬಾರಿಯೂ ಬಜೆಟ್ ನಂತರ ತೆರಿಗೆ ಏರಿಕೆ ಮಾಡಲಾಗುತ್ತದೆ’ ಎಂದು ವಿವರಿಸಿದರು.

‘ಮುಸ್ಲಿಮರ ಜಟಕಾ ಗಾಡಿ ಏರಿಕೊಂಡು ಸಿದ್ದರಾಮಯ್ಯ ಪ್ರಯಾಣ ಮಾಡಿದ್ದಾರೆ. ಮುಸ್ಲಿಮರ ಕಾಲೋನಿ ಅಭಿವೃದ್ಧಿಗೆ ₹1,000 ಕೋಟಿ ನೀಡಲಾಗಿದೆ. ವಕ್ಫ್ ಬೋರ್ಡ್ ಮುಚ್ಚಿ ಎಂದರೆ, ಅದಕ್ಕೆ ₹150 ಕೋಟಿ ನೀಡಿದ್ದಾರೆ. ಮುಸ್ಲಿಮ್ ವಿದ್ಯಾರ್ಥಿಗಳ ವಿದೇಶ ವಿದ್ಯಾಭ್ಯಾಸಕ್ಕೆ ₹30 ಲಕ್ಷ ನೀಡಲಾಗುತ್ತದೆ’ ಎಂದು ಅವರು ಹೇಳಿದರು.

ಪದಬಂಧ 5975

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅವನು ಇಳಿಯುವುದು (4)
3.ಪ್ರತೀ ಸಲ ಹೂಡುವ ಯುಕ್ತಿ! (4)
5.ತುತ್ತು ತಿರುವುಮುರುವಾಗಿಬಿಟ್ಟಿದೆಯಲ್ಲಾ! (3)
6.ತಡವಾಗಿ ಪ್ರಾರಂಭವಾದ ತಬ್ಬಿಬ್ಬು! (4)
7.ಕೊನೆಗೆ ಪತಿಯೊಡನಿರುವ ಸೇನಾನಾಯಕ (4)
9.ಏರ್ಪಾಟು ಈ ತರ ಬಂದಿದೆಯಲ್ಲಾ! (4)
11.ಮೂರ್ಛಾ ರೋಗವಿದು (4)
13.ಕೈ ಕೊನೆಗಿಟ್ಟಿರುವ ಆಳು (3)
15.ಕೊಬ್ಬಿದ ಆನೆಯಿದು (4)
16.ಸೂಕ್ಷ್ಮವಾಗಿ ನೋಡುವವನು (4)

ಮೇಲಿಂದ ಕೆಳಕ್ಕೆ

1.ತಲೆಯಿಲ್ಲದ ದೇಹ (2)
2.ಬಯಕೆಗೊಂದು ಪರ್ಯಾಯ ಪದ (4)
3.ಹೂವಿನಲ್ಲಿಯ ಸಿಹಿರಸ (4)
4.ಆಸ್ತಿಯಿಲ್ಲಿ ಉಲ್ಟಾಪಲ್ಟಾ ಕಾಣುತ್ತಿದೆ (2)
6.ಬಾಳಿಕೆಯನ್ನು ಹೀಗೆನ್ನಿ (3)
8.ತೀರದ ಹತ್ತಿರ ಅಂಧಕಾರ ಕವಿದಿದೆ (3)
10.ದೂರಿದರೂ ಪ್ರಯೋಜನವಿಲ್ಲ! ಈತ ಕೆಟ್ಟ ನಡತೆಯವನು (4)
11.ಜಾಸ್ತಿ ರಸ ಎನ್ನುವ ಭಕ್ಷ್ಯ! (4)
12.ಹೊಗೆ ಇಲ್ಲಿ ಆವರಿಸಿದೆ (2)
14.ನಾಲ್ಕು ಮೂಲೆಗಳುಳ್ಳದ್ದು (2)



5974ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಆಮೆ 3.ಸರ್ವನಾಶ
5.ಸಮಯ 6.ವರ್ತಮಾನ
8.ಯಮಭಾರ 12.ಅಂತರಿಕ್ಷ
14.ಅನುರಾಗ 15.ಪಗಾರ
16.ಸಭಾತ್ಯಾಗ 17.ಜಾಣೆ

ಮೇಲಿಂದ ಕೆಳಕ್ಕೆ:
1.ಅಸಭ್ಯತನ 2.ಆಯವ್ಯಯ
3.ಸರೋವರ 4.ಶಮನ
7.ಮಾಫಿ 9.ಭಾರತ
10.ಗೊಡ್ಡುಹರಟೆ
11.ಜೇನು 12.ಅಂಗರಾಗ
13.ಕ್ಷಮಾಪಣೆ 14.ಅಗಸ

ಸುಡೊಕು 6360

	7			3		1		6
4		9						
	1		7		2		5	4
		3	5		6	4		
	4						6	7
		5	1		7	3		
	8		6		5	2		3
2		6						
	3	4		7		6	1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6359 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಮಾರ್ಚ್ 8, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ನವಮಿ ಗಂ. 08-17 ನಕ್ಷತ್ರ: ಆರ್ದ್ರಾ ಗಂ. 23-29 ಯೋಗ: ಆಯುಷ್ಮಾನ್ ಗಂ. 16-24 ಕರಣ: ಕೌಲವ ಗಂ. 08-17, ಕುಂಭ ಮಾಸದ 24 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 2.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-46 ಸೂರ್ಯಾಸ್ತ : 06-37
ಮುಸ್ಲಿಂ ದಿನಾಂಕ : 07 ರಂಜಾನ್
ಅದೃಷ್ಟ ಸಂಖ್ಯೆ : 8, 12

ಮೇಷ: ಸಲಹೆ ಸೂಚನೆಗಳನ್ನು ಮೇಲಧಿಕಾರಿಗಳು ಮಾನ್ಯ ಮಾಡಿದ್ದಕ್ಕೆ ಸಂತೋಷವಾಗಲಿದೆ. ಎಂಜಿನಿಯರ್ ಕೆಲಸದ ಸಮಯದಲ್ಲಿ ಬದಲಾವಣೆಯಾಗಬಹುದು. ಸಮಸ್ಯೆಗಳು ತನ್ನಂತಾನೆ ಬಗೆಹರಿಯಲಿವೆ.

ವೃಷಭ: ಅಧಿಕಾರಿಗಳ ಮನಸ್ಥಿತಿಯನ್ನು ಅರಿತು ಬೇಡಿಕೆಯನ್ನು ನೆರವೇರಿಸಿಕೊಳ್ಳುವ ಪ್ರಯತ್ನ ಮಾಡಿ. ಸತ್ಯಾಸತ್ಯತೆಯನ್ನು ತಿಳಿದು ಕಾರ್ಯ ಮುಂದುವರಿಸಿ. ಅಗತ್ಯಕ್ಕೆ ತಕ್ಕಂತೆ ಹಿರಿಯರ ಆಸ್ತಿ ಲಭಿಸಲಿದೆ.

ಮಿಥುನ: ಮಾನಸಿಕ ಧೈರ್ಯ ವೃದ್ಧಿ. ಹೊರದೇಶದಲ್ಲಿರುವ ಮಕ್ಕಳು ಮನೆಗೆ ಬರುವಂಥ ಸಂತಸದ ಸುದ್ದಿ ಕೇಳಿ ಬರುತ್ತದೆ. ಮಕ್ಕಳ ಮದುವೆ ವಿಚಾರವಾಗಿ ಅಂದುಕೊಂಡಷ್ಟು ಮಕ್ಕಳು ಸಹಕರಿಸುವುದಿಲ್ಲ.

ಕರ್ಕಾಟಕ: ಒಡಹುಟ್ಟಿದವರಲ್ಲಿ ಒಡೆದು ಹೋದಂಥ ಭಾವನಾತ್ಮಕ ಸಂಬಂಧಗಳನ್ನು ಮತ್ತೆ ಬೆಳೆಸಲು ಇದು ಸೂಕ್ತ ಕಾಲ. ಉದ್ಯೋಗದ ನಿಮಿತ್ತ ವಿದೇಶಕ್ಕೆ ಹೋಗುವ ಕನಸು ಇಂದು ಚಿಗುರೊಡೆಯಲಿದೆ.

ಸಿಂಹ: ಉದ್ಯೋಗ ಸಿಗುವ ಸಮಯದಲ್ಲೇ ವೇತನದ ಬಗ್ಗೆ ಗಮನ ನೀಡುವುದು ಸರಿಯಲ್ಲ. ವಿದ್ಯಾರ್ಥಿಗಳಿಗೆ ಹಿನ್ನಡೆ ಉಂಟಾಗಿ ಸ್ವಾಭಿಮಾನಕ್ಕೆ ಧಕ್ಕೆ ಬರುವಂತಾಗುವುದು. ವೈಯಕ್ತಿಕ ವಿಷಯಗಳ ಬಗ್ಗೆ ನಿಗಾ ವಹಿಸಿ.

ಕನ್ಯಾ: ಧನಾಗಮನಕ್ಕೆ ಹಲವು ರೀತಿಯ ಅವಕಾಶಗಳು ಇದ್ದರೂ, ಕಠಿಣ ಪರಿಶ್ರಮ ಮತ್ತು ಆತ್ಮವಿಶ್ವಾಸವೂ ಅಷ್ಟೇ ಅಗತ್ಯವಿರುತ್ತದೆ. ಸಂಜೆಯ ಸಮಯದಲ್ಲಿ ಬೆಲೆ ಬಾಳುವ ವಸ್ತು ಕಾಣೆಯಾಗುವ ಸಂಭವವಿದೆ. ಜಾಗ್ರತೆವಹಿಸಿ.

ತುಲಾ: ಹೊಸ ಕಾರ್ಯದಿಂದ ಹೆಜ್ಜೆ ಹೆಜ್ಜೆಗೂ ಸಮಸ್ಯೆಗಳು ಎದುರಾಗುವುದು. ಯಾವುದೇ ಹೊಸ ನಿರ್ಧಾರವನ್ನು ತೆಗೆದುಕೊಳ್ಳಬೇಡಿ. ಅನಿರೀಕ್ಷಿತ ಧನಲಾಭ ಉಂಟಾಗುವುದು.

ವೃಶ್ಚಿಕ: ಹಲವು ಬಗೆಯ ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಸಮಸ್ಯೆಯ ಸರಮಾಲೆ ಬಗೆಹರಿಸಲು ಜಾಣತನ ತೋರುವಿರಿ. ಕಿರಿಯರಿಗೆ ಮಾರ್ಗದರ್ಶನದ ಅವಶ್ಯಕತೆ ಇದೆ.

ಧನು: ದೇಹದಲ್ಲಿ ಉಷ್ಣಾಂಶ ಅಧಿಕವಾಗುವುದರಿಂದ ಸಣ್ಣ-ಪುಟ್ಟ ಅನಾರೋಗ್ಯ ಎದುರಾಗಬಹುದು. ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ.

ಮಕರ: ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಿರಿ. ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕಾಗಿ ಹೆಚ್ಚು ಓಡಾಡುವ ಸಂದರ್ಭ ಬರುವುದು. ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುದು.

ಕುಂಭ: ಲಾಭದಾಯಕ ಎನಿಸುವ ಕೆಲಸ ಅಥವಾ ವ್ಯಕ್ತಿಗಳೊಂದಿಗೆ ಮಾತ್ರ ವ್ಯವಹರಿಸಿದ ಪರಿಣಾಮ ಪಶ್ಚಾತಾಪ ಪಡುವಂತಾಗುವುದು. ನೌಕರ ವರ್ಗದವರ ಕಠಿಣ ದುಡಿಮೆಗೆ ಸೂಕ್ತ ಪ್ರತಿಫಲ ದೊರೆಯುವುದು.

ಮೀನ: ಸಂಬಂಧವಿಲ್ಲದ ವಿಚಾರಗಳಿಂದ, ವಿವಾದಗಳಿಂದ ದೂರ ಉಳಿಯುವುದು ಶೋಭೆ ತರಲಿದೆ. ಹೊಸ ಅನುಭವವನ್ನು ಎದುರು ನೋಡುವಂತಾಗುತ್ತದೆ. ವಿದ್ಯಾರ್ಥಿಗಳ ಮನೋಕಾಮನೆಗಳು ಪೂರ್ಣಗೊಳ್ಳಲಿವೆ.

ಆದಿಚುಂಚನಗಿರಿ ಜಾತ್ರೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಐತಿಹಾಸಿಕ ಆದಿ ಚುಂಚನಗಿರಿ ಜಾತ್ರೆಗೆ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರು ಶುಕ್ರವಾರ ಧರ್ಮಧ್ವಜಾರೋಹಣ ಮತ್ತು ನಾಂದಿ ಪೂಜೆಗಳನ್ನು ನೆರವೇರಿಸಿ ಚಾಲನೆ ನೀಡಿದರು.

ಜಾತ್ರಾ ಮಹೋತ್ಸವದ ಪ್ರಯುಕ್ತ, ಮಠದ ಬಿ.ಜಿ.ಎಸ್ ಕ್ರೀಡಾಂಗಣದಲ್ಲಿ ಪದವಿ ವಿದ್ಯಾರ್ಥಿಗಳಿಗಾಗಿ ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟ್ ಆಯೋಜಿರುವ ಬಿ.ಜಿ.ಎಸ್ ಕ್ರೀಡೋತ್ಸವ ವನ್ನೂ ಉದ್ಘಾಟಿಸಿದರು.

ಆದಿಚುಂಚನಗಿರಿ ಮಠದಲ್ಲಿ ಒಂಬತ್ತು ದಿನ ನಡೆಯುವ ಜಾತ್ರೆಯ ಮೊದಲನೇ ದಿನದ ಅಂಗವಾಗಿ ಶುಕ್ರವಾರ ಬೆಳಿಗ್ಗೆಯಿಂದಲೇ ಗಂಗಾಧರೇಶ್ವರ ಸ್ವಾಮಿ, ಶ್ರೀಕಾಲ ಭೈರವೇಶ್ವರ ಸ್ವಾಮಿ ದೇವಾಲಯ ಮತ್ತು ಬಾಲಗಂಗಾಧರನಾಥ ಸ್ವಾಮೀಜಿ ಅವರ ಗದ್ದುಗೆ ಸೇರಿದಂತೆ ಕ್ಷೇತ್ರದ ಎಲ್ಲಾ ದೇವಾಲಯಗಳಲ್ಲಿ ಪೂಜೆ ನಡೆಯಿತು.

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಧರ್ಮಧ್ವಜಾರೋಹಣ ಮತ್ತು ನಾಂದಿ ಪೂಜೆ ಮೂಲಕ ಜಾತ್ರಾ ಮಹೋತ್ಸವಕ್ಕೆ ಶುಕ್ರವಾರ ಚಾಲನೆ ನೀಡಿದರು

ಬಳಿಕ ನಡೆದ ಸಭಾ ಕಾರ್ಯಕ್ರಮ ದಲ್ಲಿ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ದೇವಾಲಯ ಗಳನ್ನು ಮತ್ತು ಕ್ಷೇತ್ರದ ರಸ್ತೆಗಳನ್ನು ವಿದ್ಯುತ್ ದೀಪಗಳಿಂದ ಸಿಂಗರಿಸ ಲಾಗಿತ್ತು. ಭಕ್ತರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು.

ಡಿಐಜಿ ಪಿ. ಬೋರಲಿಂಗಯ್ಯ, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ರಾಷ್ಟ್ರೀಯ ವಾಲಿಬಾಲ್ ಪಟು ಕೆ.ಎಂ.ಹನಿ, ರಾಷ್ಟ್ರ ಮಟ್ಟದ ಕಬಡ್ಡಿ ತರಬೇತುದಾರ ಬಿ.ಸಿ. ರಮೇಶ್, ಚೈತನ್ಯನಾಥ ಸ್ವಾಮೀಜಿ ಪಾಲ್ಗೊಂಡಿದ್ದರು.

ನಿಧನ ವಾರ್ತೆ

ಆನಂದೇಗೌಡ

ಬೆಂಗಳೂರು: ನಗರ ಯೋಜನಾ ಇಲಾಖೆಯ ನಿವೃತ್ತ ನಿರ್ದೇಶಕ, ಜಯನಗರದ ನಿವಾಸಿ ಕೆ.ಎಲ್.ಆನಂದೇಗೌಡ (84) ಅವರು ಶುಕ್ರವಾರ ಮಧ್ಯಾಹ್ನ ನಿಧನರಾದರು.

ಮೃತರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಮಂಡ್ಯ ತಾಲ್ಲೂಕಿನ ಕೀಲಾರ ಗ್ರಾಮದ ಆನಂದೇಗೌಡ ಅವರು ಕರ್ನಾಟಕ ಲೋಕಾಯುಕ್ತದಲ್ಲೂ ನಿರ್ದೇಶಕರಾಗಿ ಕೆಲಸ ಮಾಡಿದ್ದರು.

ಬಾಂಬ್ ಸ್ಫೋಟ ಕಾರ್ಮಿಕ ಸಾವು

ನಾರಾಯಣಪುರ (ಪಿಟಿಐ): ಛತ್ತೀಸಗಢದ ನಾರಾಯಣಪುರ ಜಿಲ್ಲೆ ಯಲ್ಲಿರುವ ಕಬ್ಬಿಣದ ಅದಿರಿನ ಗಣಿಯಲ್ಲಿ ನಕ್ಸಲರು ಇಟ್ಟಿದ್ದ ಕಚ್ಚಾಬಾಂಬ್ ಸ್ಫೋಟಗೊಂಡು, ಕಾರ್ಮಿಕರೊಬ್ಬರು ಶುಕ್ರವಾರ ಮೃತಪಟ್ಟಿದ್ದಾರೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ • ಬೇಡಿಕೆ ಈಡೇರಿಸಲು ಆಗ್ರಹ

‘ಅಂಗನವಾಡಿಗಳಿಗೆ ಸೌಕರ್ಯ ಕಲ್ಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಲಿ ಹುದ್ದೆಗಳಿಗೆ ಮೂರು ತಿಂಗಳ ಒಳಗಾಗಿ ನೇಮಕಾತಿ ಮಾಡುವುದು, ಅಂಗನವಾಡಿ ಕೇಂದ್ರಗಳಿಗೆ ಮೂಲ ಸೌಕರ್ಯ ಕಲ್ಪಿಸುವುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು.

2018ರಿಂದ ಕೇಂದ್ರ ಸರ್ಕಾರವು ಯಾವುದೇ ಗೌರವಧನ ಹೆಚ್ಚಳ ಮಾಡಿಲ್ಲ. ತಕ್ಷಣವೇ ಗೌರವ ಧನವನ್ನು ₹26 ಸಾವಿರಕ್ಕೆ ಹೆಚ್ಚಿಸಬೇಕು. ಗುಜರಾತ್ ಹೈಕೋರ್ಟ್ ತೀರ್ಪಿನಂತೆ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ವರ್ಗ ‘3’ ಹಾಗೂ ‘4’ ಎಂದು ಪರಿಗಣಿಸಿ ಕೆಲಸವನ್ನು ಕಾಯಂ ಮಾಡಬೇಕು. ನಿವೃತ್ತರಿಗೆ ಇಡುಗಂಟು ನೀಡಬೇಕು ಎಂದು ಪ್ರತಿಭಟನ ಕಾರರು ಆಗ್ರಹಿಸಿದರು.

ಶಿಕ್ಷಣ ಇಲಾಖೆ ಮತ್ತು ಶಾಲಾ ಅಭಿವೃದ್ಧಿ ಸಮಿತಿ(ಎಸ್‌ಡಿಎಂಸಿ) ಪ್ರಾರಂಭ ಮಾಡಿರುವ ಎಲ್.ಕೆ.ಜಿ, ಯು.ಕೆ.ಜಿ ಸ್ಥಗಿತಗೊಳಿಸಬೇಕು. ಎಲ್ಲ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆ ಗೇರಿಸಿ ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್.ಕೆ.ಜಿ ಹಾಗೂ ಯು.ಕೆ.ಜಿ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಐಸಿಡಿಎಸ್ ಯೋಜನೆಗೆ ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸಬೇಕು. ಅಂಗನವಾಡಿ ಕಾರ್ಯಕರ್ತೆಯರನ್ನು ಚುನಾವಣೆ ಕೆಲಸದಿಂದ ಮುಕ್ತಿಗೊಳಿಸಬೇಕು. ಸಾಮೂಹಿಕ ಆರೋಗ್ಯ ವಿಮೆ ಜಾರಿಗೆ ತರಬೇಕು ಎಂದೂ ಆಗ್ರಹಿಸಿದರು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಸದಸ್ಯರು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಮನವಿ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಅಂಗನವಾಡಿ ಕೇಂದ್ರಗಳಿಗೆ ಕೊಡುವ ಪೂರಕ ಪೌಷ್ಟಿಕ ಆಹಾರಕ್ಕೆ ಜಿಎಸ್‌ಟಿ ಹಾಕಬಾರದು. ಘಟಕ ವೆಚ್ಚ ಹೆಚ್ಚಳ ಮಾಡಿ ಹಿಂದಿನಂತೆ ಜಿಲ್ಲಾಧಿಕಾರಿ ಗಳ ಅಧ್ಯಕ್ಷತೆಯಲ್ಲಿ ಮೆನು ಅಂತಿಮ ಮಾಡುವ ವ್ಯವಸ್ಥೆ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಅಂಗನವಾಡಿ ಕೇಂದ್ರದ ಚಟುವಟಿಕೆಗಳನ್ನು ಮೊಬೈಲ್‌ನಲ್ಲಿ ದಾಖಲೆ ನಿರ್ವಹಣೆ ಮಾಡಿದರೆ ಪುಸ್ತಕದಲ್ಲಿ ಬರೆಯುವುದನ್ನು ನಿಲ್ಲಿಸಬೇಕು. ಇಲಾಖೆ ನಡೆಸುವ ತಿಂಗಳ ಸಭೆಗಳಲ್ಲಿ ಅಂಗನವಾಡಿ ನೌಕರರಿಗೆ ಕುರ್ಚಿ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು.

ಸಂಘದ ಅಧ್ಯಕ್ಷೆ ವರಲಕ್ಷ್ಮಿ, ಖಜಾಂಚಿ ಜಿ.ಕಮಲಾ, ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದಾ ಸೇರಿದಂತೆ ಹಲವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

‘ಮುಂದಿನ ದಿನಗಳಲ್ಲಿ ಗೌರವಧನ ಮತ್ತಷ್ಟು ಏರಿಕೆ’

‘ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರಕ್ಕೆ ಸಹಾನುಭೂತಿ ಇದೆ. ವೈಯಕ್ತಿಕವಾಗಿ ನಾನು ಎಂದಿಗೂ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಪರ ನಿಲ್ಲುತ್ತೇನೆ’ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ ತಿಳಿಸಿದರು.

ಪ್ರತಿಭಟನಕಾರರ ಮನವಿ ಸ್ವೀಕರಿಸಿ ಮಾತ ನಾಡಿದ ಅವರು, ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಗೌರವಧನವನ್ನು ಬಜೆಟ್ ನಲ್ಲಿ ಹೆಚ್ಚಿಸಲಾಗಿದೆ. ಮುಂದಿನ ದಿನಗಳಲ್ಲಿ ಮತ್ತೆ ಗೌರವಧನ ಏರಿಕೆಯಾಗುವ ವಿಶ್ವಾಸವಿದೆ ಎಂದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನವಾದ ಶನಿವಾರ ಸಾಮೂಹಿಕವಾಗಿ ಗ್ರ್ಯಾಚುಯಿಟಿ ವಿತರಿಸಲಾಗುವುದು. ಈಗಾಗಲೇ ನಿವೃತ್ತಿಯಾಗಿರುವವರಿಗೆ ಇಡುಗಂಟು ನೀಡುವುದರ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ 17 ಸಾವಿರ ಅಂಗನವಾಡಿ ಕೇಂದ್ರ ಗಳಲ್ಲಿ ಪೂರ್ವಪ್ರಾಥಮಿಕ ತರಗತಿಗಳನ್ನು ಆರಂಭಿ ಸುವ ಯೋಚನೆಯಿದೆ. ಇದರಿಂದ ಅಂಗನವಾಡಿ ಕೇಂದ್ರಗಳ ಉನ್ನತೀಕರಣಕ್ಕೆ ಸಹಾಯವಾಗಲಿದೆ. ಈ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ಪ್ರಚಾರ ಕೈಗೊಳ್ಳಬೇಕು ಎಂದರು.

ವಿದ್ಯುತ್ ಹರಿದು ಮೂವರ ಸಾವು

ಚಿಂತಾಮಣಿ: ತಾಲ್ಲೂಕಿನ ಮುಂತ ಕದಿರೇನಹಳ್ಳಿ ಬಳಿ ಶುಕ್ರವಾರ ಕೃಷಿ ಹೊಂಡದಲ್ಲಿ ವಿದ್ಯುತ್ ಪ್ರವಹಿಸಿ ಮೂವರು ಮೃತಪಟ್ಟಿದ್ದಾರೆ.

ಮುಂತಕದಿರೇನಹಳ್ಳಿ ನಿವಾಸಿ ಗಳಾದ ರಮೇಶ್ (28), ಲೋಕೇಶ್ (32), ಶ್ರೀಕಾಂತ್ (25) ಮೃತರು.

ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತುಟಿ ಸ್ಪರ್ಶಿಸಿದ ಮಾತ್ರಕ್ಕೆ ಪೋಕ್ಸೊ ಅಡಿ ಅಪರಾಧವಲ್ಲ: ದೆಹಲಿ ಹೈಕೋರ್ಟ್

ನವದೆಹಲಿ (ಪಿಟಿಐ): ಲೈಂಗಿಕವಾಗಿ ಪ್ರಚೋದಿಸುವಂತಹ ಕೃತ್ಯ ಎಸಗದಿದ್ದರೆ, ಬಾಲಕಿಯ ತುಟಿಯನ್ನು ಸ್ಪರ್ಶಿಸುವುದು ಅಥವಾ ಅದನ್ನು ಒತ್ತುವುದು, ಆಕೆಯ ಪಕ್ಕದಲ್ಲಿ ಮಲಗುವುದು ಪೋಕ್ಸೊ ಕಾಯ್ದೆಯ ಅಡಿಯಲ್ಲಿ ಹೇಳಿರುವ ‘ತೀವ್ರ ಸ್ವರೂಪದ ಲೈಂಗಿಕ ಹಲ್ಲೆ’ ಆಗುವುದಿಲ್ಲ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಇಂತಹ ಕೃತ್ಯಗಳು ಬಾಲಕಿಯ ಘನತೆಗೆ ಧಕ್ಕೆ ಉಂಟುಮಾಡಬಹುದು. ಆದರೆ, ಸ್ಪಷ್ಟವಾದ ಅಥವಾ ತರ್ಕದ ಆಧಾರದಲ್ಲಿ ಹೇಳಬಹುದಾದ ಲೈಂಗಿಕ ಉದ್ದೇಶವು ಆ ಕೃತ್ಯಗಳಲ್ಲಿ ಇಲ್ಲವಾಗಿತ್ತು ಎಂದಾದರೆ, ಅದು ಕಾಯ್ದೆಯ ಸೆಕ್ಷನ್ 10ರ ಅಡಿಯಲ್ಲಿ ಹೇಳಿರುವ ಅಪರಾಧ ಆಗುವುದಿಲ್ಲ ಎಂದು ನ್ಯಾಯಮೂರ್ತಿ ಸ್ವರ್ಣ ಕಾಂತ ಶರ್ಮ ಅವರು ಹೇಳಿದ್ದಾರೆ.

ಆದರೆ, ಭಾರತೀಯ ದಂಡ ಸಂಹಿತೆಯ ಸೆಕ್ಷನ್ 354ರಲ್ಲಿ ಹೇಳಿರುವ ‘ಮಹಿಳೆಯ ಗೌರವಕ್ಕೆ ಧಕ್ಕೆ ತರುವ ಉದ್ದೇಶದಿಂದ ಹಲ್ಲೆ ಅಥವಾ ಕ್ರಿಮಿನಲ್ ಬಲ ಪ್ರಯೋಗ’ ಆಗಿರುವುದು ಪ್ರಕರಣಕ್ಕೆ ಮೇಲ್ನೋಟಕ್ಕೆ ಕಂಡುಬರುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ.

12 ವರ್ಷ ವಯಸ್ಸಿನ ಬಾಲಕಿಯ ಸಂಬಂಧಿಕ ತನ್ನ ವಿರುದ್ಧ ಐಪಿಸಿಯ ಸೆಕ್ಷನ್ 354 ಹಾಗೂ ಪೋಕ್ಸೊ ಕಾಯ್ದೆಯ ಸೆಕ್ಷನ್ 10ರ ಅಡಿಯಲ್ಲಿ ದೋಷಾರೋಪ ನಿಗದಿ ಮಾಡಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ ಫೆ. 24ರಂದು ನೀಡಿರುವ ಆದೇಶದಲ್ಲಿ ನ್ಯಾಯಮೂರ್ತಿ ಈ ಮಾತು ಹೇಳಿದ್ದಾರೆ.

ಪೋಕ್ಸೊ ಕಾಯ್ದೆಯ ಸೆಕ್ಷನ್ 10ರ ಅಡಿ ನಿಗದಿಯಾಗಿದ್ದ ದೋಷಾರೋಪದಿಂದ ಈತನನ್ನು ಕೋರ್ಟ್ ಮುಕ್ತಗೊಳಿಸಿದೆ. ‘ಐಪಿಸಿಯ ಸೆಕ್ಷನ್ 354ರ ಅಡಿಯಲ್ಲಿ ವಿವರಿಸಿರುವ ಅಪರಾಧ ಕೃತ್ಯವನ್ನು ಹೇಳುವ ಅಗತ್ಯ ಅಂಶಗಳು ಈ ಪ್ರಕರಣದಲ್ಲಿವೆ’ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

‘ಲೈಂಗಿಕ ಕೃತ್ಯವು ನಡೆದಿರುವ ಬಗ್ಗೆ ಬಾಲಕಿಯು ಆರೋಪ ಮಾಡಿಲ್ಲ, ಅಂತಹ ಕೃತ್ಯದ ಬಗ್ಗೆ ಆಕೆಯ ಹೇಳಿಕೆಗಳಲ್ಲಿ ಉಲ್ಲೇಖವಿಲ್ಲ... ಲೈಂಗಿಕ ಪ್ರಚೋದನೆಯ ನಡೆ ಇತ್ತು ಎಂಬ ಲವಲೇಶದ ಸೂಚನೆ ಕೂಡ ಸಂತ್ರಸ್ತೆಯ ಹೇಳಿಕೆಗಳಲ್ಲಿ ಇಲ್ಲದಿರುವಾಗ ಪೋಕ್ಸೊ ಕಾಯ್ದೆಯ ಸೆಕ್ಷನ್ 10ರ ಅಡಿಯಲ್ಲಿ ಅಪರಾಧ ನಡೆದಿದೆ ಎನ್ನಲಾಗದು’ ಎಂದು ಅದು ಹೇಳಿದೆ.

ಮಹಿಳಾ ಸುರಕ್ಷತೆಗೆ ಕ್ಯಾಮೆರಾ ಕಣ್ಣು

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಕಣ್ಗಾವಲು ಕ್ಯಾಮೆರಾ ಮುಂದೆ ನಿಂತು ಮಹಿಳೆಯರು ಕೈಬೀಸಿದರೆ, ಅದು ಅವರಿಗೆ ಸಂಕಷ್ಟದಿಂದ ಪಾರಾಗಲು ನೆರವಾಗಬಹುದು. ದೆಹಲಿ ಪೊಲೀಸರು ಇಂಥದ್ದೊಂದು ವಿನೂತನವಾದ ವ್ಯವಸ್ಥೆಯನ್ನು ಶೀಘ್ರವೇ ಜಾರಿಗೆ ತರಲು ಸಿದ್ಧತೆ ನಡೆಸಿದ್ದಾರೆ.

‘ಸುರಕ್ಷಿತ ನಗರ’ ಹೆಸರಿನ ಈ ಯೋಜನೆಯ ಅಡಿ, ದೃಶ್ಯಗಳನ್ನು ಹೆಚ್ಚು ನಿಖರವಾಗಿ ಸೆರೆಹಿಡಿಯುವ ಕ್ಯಾಮೆರಾಗಳನ್ನು ನಗರದ ಹಲವೆಡೆ ಅಳವಡಿಸಲಾಗುತ್ತದೆ. ಈ ಕ್ಯಾಮೆರಾಗಳು ಸೆರೆಹಿಡಿಯುವ ದೃಶ್ಯಗಳು ನೇರವಾಗಿ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ, ಡಿಸಿಪಿಗಳ ಕಚೇರಿಗಳಲ್ಲಿ ಮತ್ತು ಪೊಲೀಸ್ ಮುಖ್ಯ ಕಚೇರಿಯಲ್ಲಿ ಕಾಣುತ್ತಿರುತ್ತವೆ ಎಂದು ಅಧಿಕಾರಿಯೊಬ್ಬರು ವಿವರಿಸಿದರು.

‘ಇಂಥದ್ದೊಂದು ವ್ಯವಸ್ಥೆ ಜಾರಿಗೊಳ್ಳುತ್ತಿರುವುದು ದೇಶದಲ್ಲಿ ಇದೇ ಮೊದಲು’ ಎಂದು ಅವರು ಹೇಳಿದರು. ಸಂಕಷ್ಟಕ್ಕೆ ಸಿಲುಕಿರುವ ಮಹಿಳೆಯು ಈ ಕ್ಯಾಮೆರಾ ಎದುರು ಕೈಬೀಸಿದರೆ, ಪೊಲೀಸರಿಗೆ ತಕ್ಷಣವೇ ವಿಚಾರ ತಿಳಿಯುತ್ತದೆ.

‘ಮಹಿಳೆಯರನ್ನು ಗುರಿಯಾಗಿಸಿಕೊಂಡ ಯಾವುದೇ ಅಪರಾಧ ಕೃತ್ಯ ದೆಹಲಿಯ ಬೀದಿಗಳಲ್ಲಿ ನಡೆದರೆ, ಪೊಲೀಸರಿಗೆ ತಕ್ಷಣವೇ ಮಾಹಿತಿ ರವಾನೆ ಆಗುತ್ತದೆ. ಪರಿಸ್ಥಿತಿ ಬಿಗಡಾಯಿಸುವ ಮೊದಲೇ ಪೊಲೀಸರು ಮಧ್ಯಪ್ರವೇಶ ಮಾಡಬಹುದು. ಅಪರಾಧ ಕೃತ್ಯಗಳನ್ನು ತಡೆಯುವಲ್ಲಿ ಇದು ಬಹಳ ದೊಡ್ಡ ಹೆಜ್ಜೆ’ ಎಂದರು.

ಬಹುಕೋಟಿ ವೆಚ್ಚದ ಈ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉದ್ಘಾಟಿಸುವ ನಿರೀಕ್ಷೆ ಇದೆ.

ಅಪರಾಧ ಕೃತ್ಯಗಳು ಹೆಚ್ಚಾಗಿ ನಡೆಯುವ ಸ್ಥಳಗಳನ್ನು ಗುರುತಿಸುವಂತೆ ಕೆಳ ಹಂತದ ಪೊಲೀಸ್ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

ಕನ್ನಡದಲ್ಲಿ ದಾಖಲೀಕರಣದ ಕೊರತೆ: ಗೊ.ರು.ಚ

ಪ್ರಜಾವಾಣಿ ವಾರ್ತೆ



ಚನ್ನಬಸಪ್ಪ

ಬೆಂಗಳೂರು: ‘ಕನ್ನಡದಲ್ಲಿ ದಾಖಲೀಕರಣದ ಕೊರತೆ ಇದೆ. ಸೃಜನಶೀಲ ಕೃತಿಗಳಿಗೆ ಸಿಗುತ್ತಿರುವ ಮಹತ್ವವು ಆಕರ ಗ್ರಂಥಗಳಿಗೆ ದೊರಕುತ್ತಿಲ್ಲ’ ಎಂದು ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಬೇಸರ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಸಹಯೋಗದಲ್ಲಿ ಸ್ನೇಹ ಬುಕ್ ಹೌಸ್ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಸಾಪ ಗೌರವ ಕಾರ್ಯದರ್ಶಿಯೂ ಆಗಿರುವ ನೇ.ಭ. ರಾಮಲಿಂಗ ಶೆಟ್ಟಿ ಅವರ ‘ಕನ್ನಡದ ರಥವನ್ನೇರಿದಾರೊ..’ ಮತ್ತು ‘ಗವಾಕ್ಷಿ’ ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

‘86ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷ ರಾಗಿದ್ದ ದೊಡ್ಡರಂಗೇಗೌಡ ಅವರ ವ್ಯಕ್ತಿತ್ವ ಮತ್ತು ವಿಚಾರಧಾರೆಯ ಬಗೆಗೆ ವಿವಿಧ ದಿನಪತ್ರಿಕೆಗಳು ಹಾಗೂ ನಿಯತ ಕಾಲಿಕೆಯಲ್ಲಿ ಪ್ರಕಟವಾಗಿರುವ ಲೇಖನ ಗಳನ್ನು ‘ಕನ್ನಡದ ರಥವನ್ನೇರಿದಾರೊ..’ ಕೃತಿ ಒಳಗೊಂಡಿದೆ. ಇದು ಸಾಹಿತ್ಯ ಸಮ್ಮೇಳನಾಧ್ಯಕ್ಷರಿಗೆ ಸಂಬಂಧಿಸಿದ ಒಂದು ದಾಖಲೀಕರಣ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೊಡ್ಡರಂಗೇಗೌಡ, ‘ಕನ್ನಡವು ವಿಶ್ವಮುಖಿಯಾಗಿ ಬೆಳೆಯುತ್ತಿದೆ. ಅದರ ಸಾಧ್ಯತೆಗಳನ್ನು ಹಿಡಿಯುವ ಕೆಲಸ ಸೂಕ್ತವಾಗಿ ಆಗುತ್ತಿಲ್ಲ. ಕನ್ನಡದ ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡಬೇಕಾದ ಅಗತ್ಯ ಈಗ ಹೆಚ್ಚಾಗಿದೆ’ ಎಂದು ಹೇಳಿದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, ‘ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ನಾಡಿನ ಸಾಂಸ್ಕೃತಿಕ ಚರಿತ್ರೆಯ ಭಾಗಗಳು. ಅವುಗಳು ಪತ್ರಿಕೆ ಗಳಲ್ಲಿ ವರದಿಯಾಗುತ್ತವೆ. ಅಂತಹ ವರದಿಗಳನ್ನು ಜೋಡಿಸಿ, ಪುಸ್ತಕ ರೂಪ ನೀಡಿರುವುದು ಶ್ಲಾಘನೀಯ’ ಎಂದು ಹೇಳಿದರು.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿಶ್ಚಲಾನಂದ ನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಪ್ರಕಾಶಕ ಕೆ.ಬಿ.ಪರಶಿವಪ್ಪ, ಕಸಾಪ ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್‌ಪಾಂಡು ಉಪಸ್ಥಿತರಿದ್ದರು.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562123
ದೂರವಾಣಿ ಸಂಖ್ಯೆ: 080-23718487
ಇ-ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/21/2024-25 ದಿನಾಂಕ: 07-03-2025

ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ನಗರಸಭೆ ನಿಧಿ, ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ಹಾಗೂ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಮತ್ತು ಸಾರ್ವಜನಿಕ ಶೌಚಾಲಯಗಳ ನಿರ್ವಹಣೆಗಾಗಿ ನೊಂದಾಯಿತ ಅರ್ಹ ಏಜೆನ್ಸಿದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇಂಡೆಂಟ್ ಸಂಖ್ಯೆ: **INDENT37064, INDENT37065, INDENT37063, INDENT 36328/CALL-2, INDENT35922/CALL-2, SE4860** ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: **21.03.2025 ಸಂಜೆ 4.30 ಗಂಟೆಯವರೆಗೆ,** ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **24.03.2025 ಸಂಜೆ 5.00 ವರೆಗೆ,** ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **25.03.2025 ಸಂಜೆ 5.15 ಗಂಟೆಗೆ,** ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **29.03.2025 ಬೆಳಿಗ್ಗೆ 11.00 ಗಂಟೆಗೆ.**

ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ ಮತ್ತು ಇ-ಹರಾಜು: AUCTION2811, AUCTION2812 ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: **21.03.2025 ಸಂಜೆ 4.30 ಗಂಟೆವರೆಗೆ,** ಇ-ಹರಾಜುವಿನಲ್ಲಿ ಸ್ಪರ್ಧಿಸಲು ಕೊನೆಯ ದಿನಾಂಕ: **24.03.2025 ಸಂಜೆ 4.30 ಗಂಟೆವರೆಗೆ,** ಲೈವ್ ಬಿಡ್ ನಡೆಯುವ ದಿನಾಂಕ: **29.03.2025 ಬೆಳಿಗ್ಗೆ 10.30 ರಿಂದ ಸಂಜೆ 4.30** (ಡೆಲ್ಟಾ ಸಮಯ 5 ನಿಮಿಷಗಳು). ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ / ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಮಾತ್ರ ತಿಳಿಸಲಾಗುವುದು.

ಸಹಿ/- ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/5533/ಸ್ಕ್ಯಾನ್/2024-25

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.:
KRNR-Addtl_LL_SNTGSU_MYS

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಕೃಷ್ಣರಾಜನಗರ: ಮೈಸೂರು - ಹಾಸನ (ಎಂವೈಎಸ್-ಹೆಚ್‌ಎಎಸ್) ಮಾರ್ಗದಲ್ಲಿ ಹೆಚ್ಚುವರಿ ರನ್ನಿಂಗ್ ಲೈನಿನ ವ್ಯವಸ್ಥೆ.	ರೂ. 1,54,05,831.90/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24.03.2025, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ ಗತಿ ಶಕ್ತಿ/ಮೈಸೂರು
PUB/821/AAMO/PRB/SWR/2024-25
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 51/2024, ದಿನಾಂಕ: 19.12.2024 ಗೆ ತಿದ್ದುಪಡಿ-2

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್8246275ಬಿ	ಇ-70 ಬ್ರೇಕ್ ಉಪಕರಣದ ಟೆಸ್ಟಿಂಗ್ ವಾಲ್ವ್‌ಗಳಿಗಾಗಿ ಟೆಸ್ಟ್ ರಿಗ್‌ನ ಪೂರೈಕೆ, ಸ್ಥಾಪನೆ, ಪರಿಶೀಲನೆ ಮತ್ತು ಕಾರ್ಯಾರಂಭಗೊಳಿಸುವಿಕೆ (ಪರಿಮಾಣ: 1 ಸಂ.).

ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ:

ಪ್ರಸ್ತುತವಾಗಿರುವದು	ಪರಿಷ್ಕೃತವಾದದ್ದು
28.02.2025, 10:30 ಗಂಟೆಯವರೆಗೆ	14.04.2025, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/818/AAMO/PRB/SWR/2024-25 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
South Western Railway - SWR | SWRRLY | SWRRLY

icmr INDIAN COUNCIL OF MEDICAL RESEARCH
ICMR Bioethics Unit

DEPARTMENT OF HEALTH RESEARCH,
MIN. OF HEALTH & FAMILY WELFARE, GOVT.OF INDIA
ICMR Complex, 2nd Floor,
Poojanahalli Road, Kannamangala Post,
Bengaluru-562110

Advt. No.02/2024-25/Project Position/IBU
NOTIFICATION FOR WALK-IN-INTERVIEW

Applications are invited for Temporary/Contractual Position of Consultant (Medical/Non-Medical) & Young Professional-II (Technical/Scientific) to be filled up purely on temporary contract basis at ICMR Bioethics Unit, Bengaluru. For details, please visit our websites at **www.icmr.gov.in** and **www.ethics.ncdirindia.org.** Please note that, corrigendum/addendum/further information; if any, in respect of this advertisement will be published on our websites only.

Sd/-
Director General-ICMR

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿ ಪ್ರಾಧಿಕಾರ, ನವದೆಹಲಿ ಇವರಲ್ಲಿನ ಡೆಪ್ಯೂಟಿ ಜನರಲ್ ಮ್ಯಾನೇಜರ್ ಮತ್ತು ಅಸಿಸ್ಟಂಟ್ ಜನರಲ್ ಮ್ಯಾನೇಜರ್ ಹುದ್ದೆಗಳಿಗೆ ನೇಮಕಾತಿ.

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿ ಪ್ರಾಧಿಕಾರ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಇವರು ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 125ರ ಅಡಿಯಲ್ಲಿ ಸ್ಥಾಪನೆಗೊಂಡಿರುವ ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿ ಪ್ರಾಧಿಕಾರ ಎಂಬ ಶಾಸನಬದ್ಧ ಅಂಗಸಂಸ್ಥೆಯಲ್ಲಿ ಡೆಪ್ಯುಟೇಶನ್ ಆಧಾರದ ಮೇರೆಗೆ ಒಂದು (01) ಡೆಪ್ಯೂಟಿ ಜನರಲ್ ಮ್ಯಾನೇಜರ್ (ಲೆವೆಲ್-11) ಮತ್ತು ಒಂದು (01) ಅಸಿಸ್ಟಂಟ್ ಜನರಲ್ ಮ್ಯಾನೇಜರ್ (ಲೆವೆಲ್-10) ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಈ ಹುದ್ದೆಯು ದೆಹಲಿಯಲ್ಲಿ ಸ್ಥಿತಗೊಂಡಿರುತ್ತದೆ.

2. ಇದೊಂದು ಬಹಿರಂಗ ಖಾಲಿಹುದ್ದೆ ಸುತ್ತೋಲೆ ಆಗಿರುತ್ತದೆ. ಪ್ರತಿ ತಿಂಗಳ 30 ರೊಳಗೆ ಸಲ್ಲಿಕೆಯಾಗುವ ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು, ಮುಂದಿನ ತಿಂಗಳಲ್ಲಿ ಲಭ್ಯವಾಗುವ ಖಾಲಿಹುದ್ದೆಗಳಿಗೆ ಸಂಬಂಧಿತ ಸಂದರ್ಶನ/ಆಯ್ಕೆಗೆ ಪರಿಗಣಿಸಲಾಗುತ್ತದೆ. ಸಂಪೂರ್ಣ ಭರ್ತಿ ಮಾಡಿರುವ ನಿರ್ದಿಷ್ಟ ನಮೂನೆಯ ಅರ್ಜಿಯನ್ನು ಕಡ್ಡಾಯವಾಗಿ ಈ ವಿಳಾಸಕ್ಕೆ ಸಲ್ಲಿಸುವುದು - **ಜನರಲ್ ಮ್ಯಾನೇಜರ್, ಐಇಪಿಎಫ್ ಅಥಾರಿಟಿ, ಗ್ರೌಂಡ್ ಫ್ಲೋರ್, ಜೀವನ್ ವಿಹಾರ್ ಬಿಲ್ಡಿಂಗ್, 3, ಪಾರ್ಲಿಮೆಂಟ್ ಸ್ಟ್ರೀಟ್, ನವದೆಹಲಿ-110001.**

3. ಅರ್ಜಿ ನಮೂನೆ, ಅರ್ಹತಾ ಮಾನದಂಡಗಳು, ಅಗತ್ಯ ವಿದ್ಯಾರ್ಹತೆ, ಇನ್ನಿತರೆ ವಿವರಗಳು ಮತ್ತು ಸೇವಾ ಷರತ್ತು ಹಾಗೂ ನಿಬಂಧನೆಗಳಿಗಾಗಿ ದಯವಿಟ್ಟು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ www.mca.gov.in ಅಥವಾ www.iepf.gov.in ವೆಬ್‌ಸೈಟ್ ಪರಿಶೀಲಿಸಿರಿ.

*ಮೇಲೆ ಸೂಚಿಸಲಾಗಿರುವ ಖಾಲಿಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿರುತ್ತದೆ ಮತ್ತು ಇದು ನೇಮಕಾತಿ ಸಮಯದಲ್ಲಿ ಬದಲಾಗಬಹುದಾಗಿರುತ್ತದೆ.

CBC 07110/12/0017/2425

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿ ಪ್ರಾಧಿಕಾರ, ನವದೆಹಲಿ ಇವರಲ್ಲಿನ ಸಾರ್ವಜನಿಕ ಸಂಪರ್ಕ ಅಧಿಕಾರಿ ಮತ್ತು ಸಹಾಯಕ ವ್ಯವಸ್ಥಾಪಕ ಹುದ್ದೆಗಳಿಗೆ ನೇಮಕಾತಿ.

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿ ಪ್ರಾಧಿಕಾರ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಇವರು ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 125ರ ಅಡಿಯಲ್ಲಿ ಸ್ಥಾಪನೆಗೊಂಡಿರುವ ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿ ಪ್ರಾಧಿಕಾರ ಎಂಬ ಶಾಸನಬದ್ಧ ಅಂಗಸಂಸ್ಥೆಯಲ್ಲಿ ಡೆಪ್ಯುಟೇಶನ್ ಆಧಾರದ ಮೇರೆಗೆ ಒಂದು (01) ಸಾರ್ವಜನಿಕ ಸಂಪರ್ಕ ಅಧಿಕಾರಿ (ಲೆವೆಲ್-10) ಮತ್ತು ನಾಲ್ಕು (04) ಸಹಾಯಕ ವ್ಯವಸ್ಥಾಪಕರು (ಲೆವೆಲ್-8) ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಈ ಹುದ್ದೆಯು ದೆಹಲಿಯಲ್ಲಿ ಸ್ಥಿತಗೊಂಡಿರುತ್ತದೆ.

2. ಇದೊಂದು ಬಹಿರಂಗ ಖಾಲಿಹುದ್ದೆ ಸುತ್ತೋಲೆ ಆಗಿರುತ್ತದೆ. ಪ್ರತಿ ತಿಂಗಳ 30 ರೊಳಗೆ ಸಲ್ಲಿಕೆಯಾಗುವ ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು, ಮುಂದಿನ ತಿಂಗಳಲ್ಲಿ ಲಭ್ಯವಾಗುವ ಖಾಲಿಹುದ್ದೆಗಳಿಗೆ ಸಂಬಂಧಿತ ಸಂದರ್ಶನ / ಆಯ್ಕೆಗೆ ಪರಿಗಣಿಸಲಾಗುತ್ತದೆ. ಸಂಪೂರ್ಣ ಭರ್ತಿ ಮಾಡಿರುವ ನಿರ್ದಿಷ್ಟ ನಮೂನೆಯ ಅರ್ಜಿಯನ್ನು ಕಡ್ಡಾಯವಾಗಿ ಈ ವಿಳಾಸಕ್ಕೆ ಸಲ್ಲಿಸುವುದು- **ಜನರಲ್ ಮ್ಯಾನೇಜರ್, ಐಇಪಿಎಫ್ ಅಥಾರಿಟಿ, ಗ್ರೌಂಡ್ ಫ್ಲೋರ್, ಜೀವನ್ ವಿಹಾರ್ ಬಿಲ್ಡಿಂಗ್, 3, ಪಾರ್ಲಿಮೆಂಟ್ ಸ್ಟ್ರೀಟ್, ನವದೆಹಲಿ-110001.**

3. ಅರ್ಜಿ ನಮೂನೆ, ಅರ್ಹತಾ ಮಾನದಂಡಗಳು, ಅಗತ್ಯ ವಿದ್ಯಾರ್ಹತೆ, ಇನ್ನಿತರೆ ವಿವರಗಳು ಮತ್ತು ಸೇವಾ ಷರತ್ತು ಹಾಗೂ ನಿಬಂಧನೆಗಳಿಗಾಗಿ ದಯವಿಟ್ಟು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ **www.mca.gov.in** ಅಥವಾ **www.iepf.gov.in** ವೆಬ್‌ಸೈಟ್ ಪರಿಶೀಲಿಸಿರಿ.

*ಮೇಲೆ ಸೂಚಿಸಲಾಗಿರುವ ಖಾಲಿಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿರುತ್ತದೆ ಮತ್ತು ಇದು ನೇಮಕಾತಿ ಸಮಯದಲ್ಲಿ ಬದಲಾಗಬಹುದಾಗಿರುತ್ತದೆ.

CBC 07110/12/0015/2425

ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ
(ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಭಾರತ ಸರ್ಕಾರ)
ಪ್ರಾದೇಶಿಕ ಕಛೇರಿ, ರಾಜರಾಜೇಶ್ವರಿನಗರ
ನಂ. 570, ಆರ್.ಆರ್. ರೀಜೆನ್ಸಿ, 26ನೇ ಕ್ರಾಸ್, ಐಡಿಯಲ್ ಹೋಮ್ಸ್ ಬಡಾವಣೆ
ಆರ್.ಆರ್. ನಗರ, ಬೆಂಗಳೂರು - 560 098. ದೂರವಾಣಿ: 080-080-28603108/125,
ಇ-ಮೇಲ್: ro.rrnagar@epfindia.gov.in, ವೆಬ್‌ಸೈಟ್: www.epfindia.gov.in

ಬಿಜಿ/ಎಂಆರ್‌ಡಿ/ಎಡಿಎಂ/ಸಿಟಿ/ಲೀಜ್ ಅಗ್ರೀಮೆಂಟ್/2024-25 ದಿನಾಂಕ: 05.03.2025

ಬಾಡಿಗೆಯ ಆಧಾರದ ಮೇಲೆ ಕಚೇರಿ ಸ್ಥಳ ಬೇಕಾಗಿದೆ

ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ, ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಅಡಿಯಲ್ಲಿ ಒಂದು ಶಾಸನಬದ್ಧ ಸಂಸ್ಥೆಯಾಗಿದ್ದು, ಅದರ ರಾಜರಾಜೇಶ್ವರಿ ನಗರ ಪ್ರಾದೇಶಿಕ ಕಚೇರಿಗಾಗಿ, **ಬೆಂಗಳೂರು ನಗರದ ಬನಶಂಕರಿ 3ನೇ ಹಂತ, ಪದ್ಮನಾಭನಗರ, ರಾಜರಾಜೇಶ್ವರಿ ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ** ಸುಮಾರು 10,495 ಚದರ ಅಡಿಗಳಷ್ಟು ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ಕಚೇರಿ ಸ್ಥಳದ ಅಗತ್ಯವಿರುತ್ತದೆ. **ಆಸಕ್ತ ಸರ್ಕಾರಿ / ಅರೆ ಸರ್ಕಾರಿ / ಸಾರ್ವಜನಿಕ ವಲಯದ ಸ್ವಾಯತ್ತ ಸಂಸ್ಥೆಗಳು ಅಥವಾ ಖಾಸಗಿ ಭೂಮಾಲೀಕರು / ಕಟ್ಟಡ ಮಾಲೀಕರು** ದಿನಾಂಕ **17.03.2025** ರಂದು **ಸಂಜೆ 03:00 ಗಂಟೆಗೆ** ಅಥವಾ ಅದರ ಮೊದಲು ತಮ್ಮ ಪ್ರಸ್ತಾವನೆಗಳನ್ನು ನಿಗದಿತ ನಮೂನೆಯಲ್ಲಿ ಮೇಲಿನ ವಿಳಾಸಕ್ಕೆ ಕಳುಹಿಸಬಹುದು.

ಬಿಡ್‌ಗಳನ್ನು ಸಲ್ಲಿಸಲು ಸಂಬಂಧಿತ ನಿಯಮಗಳು ಮತ್ತು ಷರತ್ತುಗಳು ಮತ್ತು ನಿಗದಿತ ನಮೂನೆಯನ್ನು GEM BID No. GEM/2025/B/6008645 ಪೋರ್ಟಲ್ www.gem.gov.in ಅಥವಾ EPFO ವೆಬ್‌ಸೈಟ್ www.epfindia.gov.in ನಲ್ಲಿ "Miscellaneous" >> "Tenders-Auctions" ಟ್ಯಾಬ್ ಅಡಿಯಲ್ಲಿ ಮಾಡಬಹುದು, ಅಥವಾ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು-I, ಪ್ರಾದೇಶಿಕ ಕಛೇರಿ, ರಾಜರಾಜೇಶ್ವರಿ ನಗರ ದಿಂದ ದಿನಾಂಕ 16.03.2025 ಬೆಳಿಗ್ಗೆ 10:00 ರಿಂದ ಸಂಜೆ 05:00 ರವರೆಗೆ ಎಲ್ಲಾ ಕೆಲಸದ ದಿನಗಳಲ್ಲಿ ಮೇಲೆ ತಿಳಿಸಿದ ವಿಳಾಸದಿಂದ ಪಡೆಯಬಹುದು.

(ರಾಜೇಶ್ ಚಂದ್ರ ಬೊಡ್ಡೇಡ)
ಪ್ರಾದೇಶಿಕ ಪಿ.ಎಫ್. ಆಯುಕ್ತರು-I
ಪ್ರಾದೇಶಿಕ ಕಚೇರಿ, ಆರ್.ಆರ್. ನಗರ

ಪುರಸಭಾ ಕಾರ್ಯಾಲಯ, ಬಿಡದಿ
ಬಿಡದಿ ಮುಖ್ಯ ರಸ್ತೆ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ.
ದೂರವಾಣಿ : 080-2728 2572 ಇ-ಮೇಲ್ : itstaff_ulb_bidadi@yahoo.com
ವೆಬ್‌ಸೈಟ್ : www.bidaditown.mrc.gov.in

ಸಂಖ್ಯೆ : ಪು.ಕಾ.ಬಿ./ಆ.ಶಾ./ಸಿಆರ್/01-ಇ/2023-24 ದಿನಾಂಕ : 07-03-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು 2000 ರಂತೆ **ಬಿಡದಿ ಪುರಸಭೆಯ ಸ್ವಚ್ಛ ಭಾರತ್ ಮಿಷನ್ - 2.0** ಅನುದಾನದಡಿಯಲ್ಲಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಕರೆದಿರುವ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಟೆಂಡರ್ ವಿವರ : 1) ಬಿಡದಿ ಪುರಸಭೆಯ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ 40 Ton Capacity Weigh Bridge and Controlling System ಅಳವಡಿಸುವುದು, Indent No. : DMA/2024-25/IND4493, ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : 20,000/-.

ಸೂಚನೆಗಳು : 1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **13-03-2025 ರ ಸಂಜೆ 5.30 ಗಂಟೆವರೆಗೆ,** 2) ಬಿಡ್ ತೆರೆಯುವ ದಿನಾಂಕ : **15-03-2025 ರ ಬೆಳಿಗ್ಗೆ 11.00 ಗಂಟೆ ನಂತರ,**

ಷರತ್ತುಗಳು : 1) ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಆರೋಗ್ಯ ಶಾಖೆಯಲ್ಲಿ ಸಂಪರ್ಕಿಸಬಹುದು. 2) ಹೆಚ್ಚಿನ ವಿವರಗಳಿಗೆ **https://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/-	ಸಹಿ/-	ಸಹಿ/-	ಸಹಿ/-
ಮುಖ್ಯಾಧಿಕಾರಿಗಳು, ಪುರಸಭೆ, ಬಿಡದಿ.	ಉಪಾಧ್ಯಕ್ಷರು, ಪುರಸಭೆ, ಬಿಡದಿ.	ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಬಿಡದಿ.	ಅಧ್ಯಕ್ಷರು, ಪುರಸಭೆ, ಬಿಡದಿ.

ಡಿಐಪಿಆರ್/ರಾಮನಗರ/635/ಮಣಿಪಾಲ್/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020

ಬೆಂಅಪ್ರಾ/ನಯೋಸ/CLU-326/3252/2024-25 ದಿನಾಂಕ:07/03/2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜನಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೇ ನಂ:	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ:	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಟಿ.ಚಂದ್ರಶೇಖರ್	ಆನೇಕಲ್	ಸರ್ಜಾಪುರ	ದೊಮ್ಮಸಂದ್ರ	136/4,	1-16	ವ್ಯವಸಾಯ ವಲಯ	ವಸತಿ
2					137/2	0-25		

ಷರಾ: ಅರ್ಜಿದಾರರು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಹಾಗೂ ಕಾನೂನು ಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು ‘ವ್ಯವಸಾಯ ವಲಯ’ದಿಂದ ‘ವಸತಿ’ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123.
ಇ-ಮೇಲ್: nelamangala.pa@gmail.com Phone: 9663046622

ಸಂಖ್ಯೆ: ನೆಯೋಪ್ರಾ:CLU:91:2024-25 ದಿನಾಂಕ: 06-03-2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13-02-2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ನೆಲಮಂಗಲ** ಗ್ರಾಮವು “ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ” ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ:01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **“ಕೈಗಾರಿಕೆ”** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ “ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **“ಕೈಗಾರಿಕೆ” ವಲಯದಿಂದ “ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಶ್ರೀಮತಿ ಮಲ್ಲೇಶ್ವರಿ.ಎಸ್. ಕೋಂ ಸಂಪತ್ ಕುಮಾರ	ನೆಲಮಂಗಲ/ ಕಸಬಾ/ ನೆಲಮಂಗಲ	166/3	02-00 ಪೈಕಿ 00-23	ಕೈಗಾರಿಕೆ	ವಸತಿ

ಷರಾ:- ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **“ಕೈಗಾರಿಕೆ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾಪ್ರ/5518/2024-25

ಎಲ್ಇಡಿ ಟಿವಿ
₹5,000ದ ವರೆಗೆ ಎಕ್ಸ್‌ಚೇಂಜ್ ಬೋನಸ್
ರೆಫ್ರಿಜರೇಟರ್
₹10,000ದ ವರೆಗೆ
ಎಕ್ಸ್‌ಚೇಂಜ್ ಬೋನಸ್
ವಾಶಿಂಗ್ ಮಶಿನ್
₹5,000ದ ವರೆಗೆ ಎಕ್ಸ್‌ಚೇಂಜ್ ಬೋನಸ್
ಏರ್ ಕಂಡೀಷನರ್
₹8,000ದ ವರೆಗೆ ಎಕ್ಸ್‌ಚೇಂಜ್ ಬೋನಸ್
ಮೈಕ್ರೋವೇವ್ ಓವನ್
₹2,000ದ ವರೆಗೆ ಎಕ್ಸ್‌ಚೇಂಜ್ ಬೋನಸ್
BUY NOW, PAY LATER
HARSHA EXCHANGE FEST
HARSHA
Happiness. Redefined.
ಹಳತನ್ನು ಬದಲಾಯಿಸಿ, ಹೊಸತನ್ನು ಖರೀದಿಸಿ,
ಪಡೆಯಿರಿ ಅಧಿಕ ಉಳಿತಾಯ
ನಿಮ್ಮ ಹಳೆಯ ಗೃಹೋಪಕರಣಗಳನ್ನು ಹೊಸತರೊಂದಿಗೆ ಬದಲಾಯಿಸಲು ಇದುವೇ ಸರಿಯಾದ ಸಮಯ. ಹರ್ಷಕ್ಕೆ ಬನ್ನಿ,
ಹಳೆಯ ಎಲ್ಇಡಿ ಟಿವಿ, ರೆಫ್ರಿಜರೇಟರ್, ಏರ್ ಕಂಡೀಷನರ್, ವಾಶಿಂಗ್ ಮಶಿನ್, ಮೈಕ್ರೋವೇವ್ ಓವನ್
ಹೊಸತರೊಂದಿಗೆ ವಿನಿಮಯಗೊಳಿಸಿ ಅಧಿಕ ಲಾಭದೊಂದಿಗೆ ಮನೆಗೊಯ್ಯಿರಿ. ಇನ್ನೇಕೆ ತಡ. ಇಂದೇ ಭೇಟಿ ನೀಡಿ.
Conditions apply. All offers on select models and brands only. Models shown are indicative. Offer valid till stocks last. Finance at the sole discretion of the financier. Finance available only within city limits.
ಜವಹರಲಾಲ್ ನೆಹರು ರಸ್ತೆ, ಫೀಲ್ಡ್ ಮಾರ್ಷಲ್ ಜನರಲ್ ಕಾರ್ಯಪ್ಪ ಪಾರ್ಕ್ ಸಮೀಪ, ರಾಜರಾಜೇಶ್ವರಿ ನಗರ, ಬೆಂಗಳೂರು - 560098. ಫೋ.: 080-26983100, 35188342
eHarsha.India
digital_harsha
www.harshaindia.com

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ
"ಮಹಿಳೆಯರ ಮತ್ತು ಹೆಣ್ಣು ಮಕ್ಕಳ ಹಕ್ಕುಗಳು,
ಸಮಾನತೆ ಹಾಗೂ ಸಬಲೀಕರಣಕ್ಕಾಗಿ - ತ್ವರಿತ ಕ್ರಮ"
ದಿನಾಂಕ : 08.03.2025, ಬೆಳಿಗ್ಗೆ 10.00 ಗಂಟೆಗೆ | ಸ್ಥಳ : ರವೀಂದ್ರ ಕಲಾಕ್ಷೇತ್ರ, ಬೆಂಗಳೂರು - 560002
ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಇಲಾಖಾ ಸಮಾರಂಭದಲ್ಲಿ ಭಾಗವಹಿಸಿದ ಸುಸಂದರ್ಭ.
ಕಾರ್ಯಕ್ರಮದ ಉದ್ಘಾಟನೆ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪ್ರದಾನ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ವಿಶೇಷ ಆಹ್ವಾನಿತರು
ಶ್ರೀಮತಿ ನಿರ್ಮಲ ಸೀತಾರಾಮನ್
ಮಾನ್ಯ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಕುಮಾರಿ ಶೋಭಾ ಕರಂದ್ಲಾಜೆ
ಮಾನ್ಯ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಸಚಿವರು, ಭಾರತ ಸರ್ಕಾರ
: ಘನ ಉಪಸ್ಥಿತಿ :
ಅತ್ಯುತ್ತಮ ಗುಂಪು ಮತ್ತು ಒಕ್ಕೂಟಗಳ ಪ್ರಶಸ್ತಿ ಪ್ರದಾನ
ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ
ಶ್ರೀ ಬಸವರಾಜ ಎಸ್. ಹೊರಟ್ಟಿ
ಮಾನ್ಯ ಸಭಾಪತಿಗಳು ಕರ್ನಾಟಕ ವಿಧಾನ ಪರಿಷತ್ತು
ಶ್ರೀ ಯು.ಟಿ. ಖಾದರ್
ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನ ಸಭೆ
ಶ್ರೀಮತಿ ಯಶೋಧರಮ್ಮ ದಾಸಪ್ಪ ಪ್ರಶಸ್ತಿ ಪ್ರದಾನ ಹಾಗೂ ಅಂತರಾಳ ಸಂಚಿಕೆ - 20ರ ಪುಸ್ತಕ ಬಿಡುಗಡೆ
ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳಕರ್
ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು
: ಅಧ್ಯಕ್ಷತೆ :
ಡಾ|| ಉದಯ್ ಬಿ. ಗರುಡಚಾರ್
ಮಾನ್ಯ ಶಾಸಕರು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ
ಗೌರವ ಉಪಸ್ಥಿತಿ
ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಶ್ರೀ ಕೃಷ್ಣ ಭೈರೇಗೌಡ
ಮಾನ್ಯ ಕಂದಾಯ ಸಚಿವರು,
ಶ್ರೀ ಆರ್. ಅಶೋಕ್
ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ವಿಧಾನಸಭೆ
ಶ್ರೀ ಅಶೋಕ್ ಮಹದೇವಪ್ಪ ಪಟ್ಟಣ್
ಮಾನ್ಯ ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನಸಭೆ
ಶ್ರೀ ಬಿ. ಶಿವಣ್ಣ
ಮಾನ್ಯ ಅಧ್ಯಕ್ಷರು, ಬಿ.ಎಂ.ಟಿ.ಸಿ ಹಾಗೂ ಶಾಸಕರು, ಆನೇಕಲ್ ವಿಧಾನಸಭಾ ಕ್ಷೇತ್ರ
ಶ್ರೀ ಎನ್.ಎಚ್. ಕೋನರೆಡ್ಡಿ
ಮಾನ್ಯ ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಹಾಗೂ ಶಾಸಕರು, ನವಲಗುಂದ ವಿಧಾನಸಭಾ ಕ್ಷೇತ್ರ
ಶ್ರೀ ಕೆ.ಜೆ. ಜಾರ್ಜ್
ಮಾನ್ಯ ಇಂಧನ ಸಚಿವರು
ಶ್ರೀ ಬಿ. ಝಡ್. ಜಮೀರ್ ಅಹಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಶ್ರೀ ಛಲವಾದಿ ನಾರಾಯಣಸ್ವಾಮಿ
ಮಾನ್ಯ ವಿರೋಧ ಪಕ್ಷದ ನಾಯಕರು ವಿಧಾನ ಪರಿಷತ್ತು
ಶ್ರೀ ದೊಡ್ಡನಗೌಡ ಹನುಮಗೌಡ ಪಾಟೀಲ
ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಕರ್ನಾಟಕ ವಿಧಾನ ಸಭೆ
ಶ್ರೀ ನಜೀರ್ ಅಹ್ಮದ್
ಮಾನ್ಯ ಶಾಸಕರು, ವಿಧಾನ ಪರಿಷತ್ತು ಹಾಗೂ ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳು
ಶ್ರೀಮತಿ ರೂಪಕಲಾ ಎಂ.
ಮಾನ್ಯ ಅಧ್ಯಕ್ಷರು, ಕರಕುಶಲ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಶಾಸಕರು, ಕೆ.ಜಿ.ಎಫ್, ವಿಧಾನಸಭಾ ಕ್ಷೇತ್ರ
ಶ್ರೀ ದಿನೇಶ್ ಗುಂಡೂರಾವ್
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
ಶ್ರೀ ಸುರೇಶ್ ಬಿ.ಎಸ್. (ಭೈರತಿ)
ಮಾನ್ಯ ನಗರಾಭಿವೃದ್ಧಿ ಸಚಿವರು
ಶ್ರೀ ಸಲೀಂ ಅಹಮದ್
ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಕರ್ನಾಟಕ ವಿಧಾನ ಪರಿಷತ್ತು
ಶ್ರೀ ಎನ್.ಎ. ಹ್ಯಾರೀಸ್
ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ
ಡಾ|| ಕೆ. ಗೋವಿಂದರಾಜ್
ಮಾನ್ಯ ಶಾಸಕರು, ವಿಧಾನ ಪರಿಷತ್ತು ಹಾಗೂ ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳು
ಡಾ|| ನಾಗಲಕ್ಷ್ಮಿ ಚೌಧರಿ
ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು
ಹಾಗೂ ಮಾನ್ಯ ಸಂಸದರು - ಲೋಕಸಭೆ, ಮಾನ್ಯ ಸಂಸದರು - ರಾಜ್ಯಸಭೆ, ಮಾನ್ಯ ಶಾಸಕರು - ವಿಧಾನಸಭೆ, ಮಾನ್ಯ ಶಾಸಕರು - ವಿಧಾನ ಪರಿಷತ್ತು ಪಾಲ್ಗೊಳ್ಳುವರು.
ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ತಮ್ಮೆಲ್ಲರಿಗೂ ಆದರದ ಸ್ವಾಗತ
ನಮ್ಮ ಕರ್ನಾಟಕ; ಗ್ಯಾರಂಟಿ ಕರ್ನಾಟಕ

ರಾಜ್ಯ ಬಜೆಟ್ 2025-26

ತಜ್ಞರ ಅಭಿಪ್ರಾಯ

ಮಹಿಳೆಯರ ಆರ್ಥಿಕ ಸ್ವಾತಂತ್ರ್ಯಕ್ಕೆ ಪೂರಕ

ಸಿದ್ದರಾಮಯ್ಯ ಅವರ ಸರ್ಕಾರ ಎರಡು ವರ್ಷಗಳಿಂದ ಮಹಿಳಾಪರವಾದ ಹಲವು ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಮಹಿಳೆಯರಿಗೆ ಸ್ವಾಭಿಮಾನ, ಸ್ವಾವಲಂಬನೆ ಮತ್ತು ಆತ್ಮವಿಶ್ವಾಸದಿಂದ ಬದುಕುವ ಭರವಸೆಯನ್ನು ನೀಡಿದೆ. ಈಗಾಗಲೇ ಚಾಲ್ತಿಯಲ್ಲಿರುವ ಮಹಿಳಾಪರ ಯೋಜನೆಗಳನ್ನು ಇನ್ನಷ್ಟು ಸದೃಢಗೊಳಿಸುವ ನಿಟ್ಟಿನಲ್ಲಿ ಅವರು ಮಂಡಿಸಿದ ಈ ಬಜೆಟ್, ಹಲವಾರು ಪೂರಕ ಯೋಜನೆಗಳನ್ನು ಪ್ರಸ್ತಾಪಿಸಿದೆ. ಇದನ್ನು ಕರ್ನಾಟಕದ ಮಹಿಳೆಯರಿಗೆ 'ಮಹಿಳಾ ದಿನ'ದ ಕೊಡುಗೆಯೆನ್ನಬಹುದು. ರಾಜ್ಯದಲ್ಲಿ ಸಾಕಷ್ಟು ಟೀಕೆಗೆ ಒಳಗಾಗಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಸಾವನ್ನು ತಡೆಗಟ್ಟುವುದಕ್ಕಾಗಿ, ₹320 ಕೋಟಿ ಮೀಸಲಿಡಲಾಗಿದೆ. 'ಅಕ್ಕಾ ಕೆಫೆ' ಇನ್ನೊಂದು ವಿಶಿಷ್ಟ ಯೋಜನೆ. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕರು ಮತ್ತು ಆಶಾ ಕಾರ್ಯಕರ್ತೆಯರ ಗೌರವಧನವನ್ನು ಹೆಚ್ಚಿಸಿರುವುದು ಮೆಚ್ಚುಗೆಗೆ ಅರ್ಹ.

ಗೃಹ ಲಕ್ಷ್ಮಿ ಯೋಜನೆಗೆ ₹28,608 ಕೋಟಿ ಮೀಸಲಿಡುವ ಮೂಲಕ, ಈ ಯೋಜನೆ ಯಶಸ್ವಿಯಾಗಿ ಮುಂದುವರಿಯಲಿದೆ ಎನ್ನುವ ಭರವಸೆ ಹುಟ್ಟಿಸಿದೆ. ಅಲ್ಪಸಂಖ್ಯಾತ ಮಹಿಳೆಯರಿಗಾಗಿ 16 ಹೊಸ ಮಹಿಳಾ ಕಾಲೇಜುಗಳ ಸ್ಥಾಪನೆಯು, ಈ ಸಮುದಾಯಗಳ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡಲಿದೆ. ಒಟ್ಟಾರೆಯಾಗಿ, ಸರ್ಕಾರ ಜಾರಿಗೆ ತರುತ್ತಿರುವ ಮಹಿಳಾ ಪರ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತಿದೆ ಎನ್ನುವ ಕೆಲವು ವರ್ಗಗಳ ಅಪಸ್ವರದ ನಡುವೆ, ಕರ್ನಾಟಕದಲ್ಲಿ ಸದ್ದಿಲ್ಲದ ಮಹಿಳಾ ಕ್ರಾಂತಿ ಆರಂಭಗೊಂಡಿದೆ. ಇದರಿಂದಾಗಿ, ಹೆಚ್ಚಿನ ಸಂಖ್ಯೆಯ ಮಹಿಳೆಯರು ಉದ್ಯಮಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ, ಉದ್ಯೋಗ ಮಾಡುತ್ತಿದ್ದಾರೆ, ಸ್ವಾವಲಂಬಿಗಳಾಗುತ್ತಿದ್ದಾರೆ, ರಾಜ್ಯದ ಆರ್ಥಿಕತೆಗೆ ಕೊಡುಗೆ ನೀಡುತ್ತಿದ್ದಾರೆ.

ಜ್ಯೋತಿ, ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ, ತುಮಕೂರು ವಿಶ್ವವಿದ್ಯಾಲಯ

ಸುಧಾರಣೆಗೆ ನಿರ್ಣಾಯಕ ಹೆಜ್ಜೆ

ಸಾರ್ವಜನಿಕ ಶಿಕ್ಷಣವನ್ನು ಬಲಪಡಿಸಲು ಬಜೆಟ್‌ನಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಮೌಲಾನಾ ಆಜಾದ್ ಮಾದರಿ ಶಾಲೆಗಳು ಮತ್ತು ಉರ್ದು ಮಾಧ್ಯಮ ಶಾಲೆಗಳನ್ನು ಬಲಪಡಿಸುವ ಪ್ರಯತ್ನಗಳೊಂದಿಗೆ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ವಿಸ್ತರಿಸಿರುವುದು ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಸರ್ಕಾರದ ಸಮಗ್ರ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ.

ಅತಿಥಿ ಶಿಕ್ಷಕರಿಗೆ ಗೌರವಧನ ಹೆಚ್ಚಳ, ಆರಂಭಿಕ ಬಾಲ್ಯ ಶಿಕ್ಷಣ/ಶಾಲಾಪೂರ್ವ ಶಿಕ್ಷಣವನ್ನು ಪ್ರಸ್ತುತ ಶಾಲೆಗಳಲ್ಲಿ ವಿಸ್ತರಣೆ ಮಾಡುವುದು ಮತ್ತು ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರದ ಮೇಲೆ ಮಕ್ಕಳ ಸಾಮರ್ಥ್ಯ ಹೆಚ್ಚಿಸುವ ಕ್ರಮಗಳು ಶಿಕ್ಷಣದ ಗುಣಮಟ್ಟ ಸುಧಾರಿಸುವ ಕಡೆಗೆ ನಿರ್ಣಾಯಕ ಹೆಜ್ಜೆಗಳಾಗಿವೆ. ಜತೆಗೆ, ಕಲ್ಯಾಣ ಕರ್ನಾಟಕದಲ್ಲಿ ದೀರ್ಘಕಾಲದಿಂದ ಬಾಕಿ ಇರುವ ಬೋಧನಾ ಹುದ್ದೆಗಳ ಭರ್ತಿಯು ಸರ್ಕಾರಿ ಶಾಲೆಗಳ ಬಲಪಡಿಸಲು ನೆರವಾಗುತ್ತದೆ.

ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳಾಗಿ ಮತ್ತು ಪ್ರೌಢಶಾಲೆಗಳನ್ನು ಪಿಯು ಕಾಲೇಜುಗಳಾಗಿ ಮೇಲ್ದರ್ಜೆಗೇರಿಸುವುದು ಮಕ್ಕಳ ಪ್ರವೇಶವನ್ನು ಸುಧಾರಿಸುವ ಮತ್ತೊಂದು ಪ್ರಮುಖ ಹೆಜ್ಜೆ. ಉತ್ತರ ಕರ್ನಾಟಕದಲ್ಲಿ ಮತ್ತಷ್ಟು ಶಾಲೆಗಳನ್ನು ಕಾಲೇಜುಗಳಾಗಿ ಮೇಲ್ದರ್ಜೆಗೇರಿಸುವ ಅಗತ್ಯವಿದೆ. ಬಜೆಟ್‌ನ ಈ ಎಲ್ಲಾ ಯೋಜನೆಗಳು ಆಶಾದಾಯಕವಾಗಿದ್ದರೂ, ಅವುಗಳ ಯಶಸ್ಸು ಪರಿಣಾಮಕಾರಿ ಅನುಷ್ಠಾನ ಮತ್ತು ಸುಸ್ಥಿರ ಹೂಡಿಕೆ ಮತ್ತು ಇಲಾಖೆಯ ಅನುಪಾಲನೆಯನ್ನು ಅವಲಂಬಿಸಿದೆ.

ರುದ್ರೇಶ್ ಎಸ್, ಅಜೀಂ ಪ್ರೇಮ್ ಜೀ ಫೌಂಡೇಷನ್ ಕರ್ನಾಟಕ ಮುಖ್ಯಸ್ಥರು

₹45,286 ಕೋಟಿ
ಶಿಕ್ಷಣಕ್ಕೆ ಮೀಸಲಿಟ್ಟ ಅನುದಾನ
(₹44,422 ಕೋಟಿ ಕಳೆದ ವರ್ಷ ಮಾಡಲಾಗಿದ್ದ ಹಂಚಿಕೆ)

₹17,473 ಕೋಟಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಮೀಸಲು (₹15,145 ಕೋಟಿ, ಕಳೆದ ವರ್ಷ ಹಂಚಿಕೆ ಮಾಡಿದ್ದ ಅನುದಾನ)

ಶೋಷಿತರ ಬಹಿಷ್ಕೃತರ ಕಣ್ಣೀರನ್ನು ತೊಡೆದು ಹಾಕು, ಜಾತಿವ್ಯವಸ್ಥೆ ಸಂಕೋಲೆಯನ್ನು ಮುರಿದು ಶಿಕ್ಷಣ ಪಡೆದುಕೋ...

- ಸಾವಿತ್ರಿಬಾಯಿ ಫುಲೆ

ಶೈಕ್ಷಣಿಕ ಪ್ರಗತಿಗೆ ಉದಾರ ನೆರವು

• ಚಂದ್ರಹಾಸ ಹಿರೇಮಳಲಿ

ವಿದ್ಯಾರ್ಥಿಗಳ ಕಲಿಕಾಮಟ್ಟ ಉನ್ನತೀಕರಿಸಲು ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದ್ದು, ಹಲವು ವಸತಿ ಶಾಲೆ, ಕಾಲೇಜುಗಳ ಉನ್ನತೀಕರಣಕ್ಕೂ ಕ್ರಮ ತೆಗೆದುಕೊಳ್ಳಲಾಗಿದೆ

ಸಾಮಾನ್ಯ ವರ್ಗ, ಹಿಂದುಳಿದ, ಅಲ್ಪಸಂಖ್ಯಾತ, ಪರಿಶಿಷ್ಟ ಜಾತಿ ಮತ್ತು ಪಂಗಡ ಸೇರಿದಂತೆ ಎಲ್ಲ ವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉದಾರ ನೆರವು ನೀಡಿರುವ ಸರ್ಕಾರ, ಕಲಿಕೆಗೆ ತಕ್ಕಂತೆ ಭವಿಷ್ಯದ ವೃತ್ತಿ ಆಯ್ಕೆಗೆ ಮಾರ್ಗದರ್ಶನ ಮಾಡಲು 'ನನ್ನ ವೃತ್ತಿ– ನನ್ನ ಆಯ್ಕೆ' ವಿಶೇಷ ಕಾರ್ಯಕ್ರಮ ರೂಪಿಸಿದೆ.

ಶಿಕ್ಷಣ ಪೂರೈಸುವ ವಿದ್ಯಾರ್ಥಿಗಳಿಗೆ ಸೂಕ್ತ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಲು ಕೌಶಲಾಭಿವೃದ್ಧಿ ಇಲಾಖೆಯ ಈ ಯೋಜನೆ ನೆರವಾಗಲಿದ್ದು, ಮೊದಲ ಹಂತದಲ್ಲಿ ಸರ್ಕಾರಿ ಶಾಲಾ– ಕಾಲೇಜುಗಳ 2.30 ಲಕ್ಷ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ದೊರಕಲಿದೆ.

ಶಾಲಾ ಶಿಕ್ಷಣ ಇಲಾಖೆಯಲ್ಲೂ ಶಾಲಾ ಹಂತದಲ್ಲೇ ವೃತ್ತಿಯಾಧಾರಿತ ಕೌಶಲ ತರಬೇತಿ ನೀಡಲು ಯೋಜನೆ ರೂಪಿಸಿದ್ದು, 7,500 ವಿದ್ಯಾರ್ಥಿಗಳಿಗೆಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡಲಿದೆ. ಕೃತಕ ಬುದ್ಧಿಮತ್ತೆ, ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಗಣಿತ, ವಿಜ್ಞಾನ ಕಲಿಕೆಯ ಸಾಮರ್ಥ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.

ವಸತಿ ಶಾಲೆಗಳಿಗೆ ಆದ್ಯತೆ: ವಿವಿಧ ಸಮುದಾಯಗಳ ವಿದ್ಯಾರ್ಥಿಗಳ ಕಲಿಕಾಮಟ್ಟವನ್ನು ಉನ್ನತೀಕರಿಸಲು ಆದ್ಯತೆ ನೀಡಲಾಗಿದ್ದು, ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ 31 ವಸತಿ ಶಾಲೆಗಳನ್ನು ಪಿಯು ಕಾಲೇಜುಗಳಾಗಿ ಉನ್ನತೀಕರಿಸಲಾಗುತ್ತಿದೆ. 61 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ₹1,292 ಕೋಟಿ, ಮೂಲಸೌಕರ್ಯಕ್ಕೆ ₹213 ಕೋಟಿ ನೀಡಲಾಗಿದೆ. 26 ಹೋಬಳಿಗಳಲ್ಲಿ ಪರಿಶಿಷ್ಟರ ಮಕ್ಕಳಿಗಾಗಿಯೇ ವಸತಿಶಾಲೆ ಆರಂಭಿಸಲಾಗುತ್ತಿದೆ.

ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ನಾಲ್ಕು ವಸತಿ ಶಾಲೆ, 78 ಬುಡಕಟ್ಟು ವಸತಿ ಶಾಲೆಗಳಲ್ಲಿ 7ನೇ ತರಗತಿ ಆರಂಭಿಸಲಾಗುತ್ತಿದೆ. ಐದು ವಸತಿ ಶಾಲೆಗಳಲ್ಲಿ ಪದವಿಪೂರ್ವ ಹಂತಕ್ಕೆ ಅವಕಾಶ ಮಾಡಿಕೊಡಲಾಗಿದೆ. ₹500 ಕೋಟಿ ವೆಚ್ಚದಲ್ಲಿ 250 ಮೌಲಾನಾ ಆಜಾದ್ ಶಾಲೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಉರ್ದು ಮಾಧ್ಯಮದ 100 ಶಾಲೆಗಳನ್ನು ₹100 ಕೋಟಿ ವೆಚ್ಚದಲ್ಲಿ ಪಬ್ಲಿಕ್ ಶಾಲೆಗಳಾಗಿ ಉನ್ನತೀಕರಿಸಲಾಗುತ್ತಿದೆ.

ಶಾಲೆಗಳ ಮೂಲಸೌಕರ್ಯಕ್ಕೆ ಉದಾರ ನೆರವು: ಸರ್ಕಾರಿ ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿ, ದುರಸ್ತಿ, ಶೌಚಾಲಯಗಳ ನಿರ್ಮಾಣಕ್ಕೆ ಸರ್ಕಾರ ಸಮರ್ಪಕ ಹಣ ನೀಡುತ್ತಿಲ್ಲ ಎನ್ನುವ ದೂರುಗಳಿಗೆ ಸ್ಪಂದಿಸಲಾಗಿದ್ದು, ₹750 ಕೋಟಿ ನೆರವು ನೀಡಲಾಗಿದೆ. ಪೀಠೋಪಕರಣ ಖರೀದಿಗೆ ₹50 ಕೋಟಿ, ಮಧ್ಯಾಹ್ನದ ಬಿಸಿಯೂಟ ತಯಾರಿಸುವ ಅಡುಗೆ ಮನೆ ಆಧುನೀಕರಣ, ಪಾತ್ರೆ, ಪರಿಕರಗಳ ಖರೀದಿಗೆ ₹46 ಕೋಟಿ ಒದಗಿಸಲಾಗಿದೆ.

ಉನ್ನತ ಶಿಕ್ಷಣಕ್ಕೆ ಸಿಗದ ಆದ್ಯತೆ: ಕಳೆದ ಬಾರಿಯ ಬಜೆಟ್‌ನಂತೆ ಈ ಬಾರಿಯೂ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ದೊರೆತಿಲ್ಲ. ಪ್ರಥಮ ದರ್ಜೆ ಕಾಲೇಜುಗಳ ಬಲವರ್ಧನೆ, ಉತ್ಕೃಷ್ಟ ಕೇಂದ್ರಗಳ ಸ್ಥಾಪನೆ ಹಾಗೂ ಸಂಶೋಧನಾ ಕೇಂದ್ರಗಳ ಸ್ಥಾಪನೆಗೆ ನಾಲ್ಕು ವರ್ಷಗಳ ಕಾಲಮಿತಿ ನಿಗದಿ ಮಾಡಿಕೊಂಡಿದ್ದು, ₹2,500 ಕೋಟಿ ವಿಶ್ವಬ್ಯಾಂಕ್ ನೆರವು ನೆಚ್ಚಿಕೊಳ್ಳಲಾಗಿದೆ.

26 ಮಹಿಳಾ ಕಾಲೇಜುಗಳ ಬಲವರ್ಧನೆಗೆ ₹26 ಕೋಟಿ, ಸರ್ಕಾರಿ ಎಂಜನಿಯರಿಂಗ್, ಪಾಲಿಟೆಕ್ನಿಕ್, ಪದವಿ ಕಾಲೇಜುಗಳ ಮೂಲ ಸೌಕರ್ಯಕ್ಕೆ ₹275 ಕೋಟಿ, ಪೀಠೋಪಕರಣಗಳಿಗೆ ₹10 ಕೋಟಿ ಒದಗಿಸಲಾಗಿದೆ.

ಬೆಂಗಳೂರು ನಗರ ವಿಶ್ವವಿದ್ಯಾಲಯವನ್ನು ಮನಮೋಹನ್ ಸಿಂಗ್ ಬೆಂಗಳೂರು ನಗರ ವಿ.ವಿ ಎಂದು ಮರು ನಾಮಕರಣ ಮಾಡಲಾಗುವುದು

ಗೌರವಧನ ಹೆಚ್ಚಳ

ಪ್ರಾಥಮಿಕ, ಪ್ರೌಢಶಾಲಾ ಅತಿಥಿ ಶಿಕ್ಷಕರು, ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಗೌರವಧನವನ್ನು ₹2,000 ಹೆಚ್ಚಳ ಮಾಡಲಾಗಿದೆ. ಬಿಸಿಯೂಟ ತಯಾರಿಸುವ ಕಾರ್ಯಕರ್ತರಿಗೂ ₹1,000 ಹೆಚ್ಚಿಸಲಾಗಿದೆ. ಆಶಾ ಕಾರ್ಯಕರ್ತೆ ಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಗೌರವಧನವನ್ನು ₹1,000 ಸಹಾಯಕಿಯರಿಗೆ ₹750 ಹೆಚ್ಚಳ ಮಾಡಲಾಗಿದೆ.

ಆಂಗ್ಲ ಭಾಷಾ ಕಲಿಕೆ ವಿಸ್ತಾರ

ಆಂಗ್ಲ ಮಾಧ್ಯಮದ ಖಾಸಗಿ ಶಾಲೆಗಳಿಗೆ ದಶಕಗಳಿಂದಲೂ ಬೇಕಾಬಿಟ್ಟಿ ಅನುಮತಿ ನೀಡುತ್ತಾ ಕನ್ನಡ ಮಾಧ್ಯಮ ಸರ್ಕಾರಿ ಶಾಲೆಗಳನ್ನು ಅವನತಿಯತ್ತ ದೂಡಿದ್ದ ಸರ್ಕಾರ, ಈಗ ಅದೇ ಆಂಗ್ಲ ಮಾಧ್ಯಮದ ಬಿಳಲುಗಳನ್ನು ಬಳಸಿಕೊಂಡು ಮಕ್ಕಳನ್ನು ಸೆಳೆಯುವ ಪ್ರಯತ್ನ ಮುಂದುವರಿಸಿದೆ.

ಪೂರ್ವ ಪ್ರಾಥಮಿಕ ಶಾಲೆಗಳು, ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಅಧಿಕ ಸಂಖ್ಯೆಯಲ್ಲಿ ಸ್ಥಾಪಿಸುವ ಮೂಲಕ ಆಂಗ್ಲ ಮಾಧ್ಯಮ ಶಿಕ್ಷಣವನ್ನು ವಿಸ್ತಾರಗೊಳಿಸುವ ಹಾಗೂ ಖಾಸಗಿ ಶಾಲೆಗಳ ಪೈಪೋಟಿಯ ನಡುವೆ ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದೆ.

ಪೂರ್ವ ಪ್ರಾಥಮಿಕ ಹಂತದಿಂದ ಪದವಿ ಪೂರ್ವ ಶಿಕ್ಷಣದವರೆಗೆ ಮಕ್ಕಳಿಗೆ ಒಂದೇ ಸೂರಿನಡಿ ಶಿಕ್ಷಣ ಒದಗಿಸುವ ಪರಿಕಲ್ಪನೆಯ 500 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ₹2,500 ಕೋಟಿ ನೆರವಿನೊಂದಿಗೆ ಆರಂಭಿಸುತ್ತಿದೆ.

ಸರ್ಕಾರಿ ಶಾಲೆಗಳಲ್ಲಿ ಕಳೆದ ಸಾಲಿನಲ್ಲಿ 2,619 ಪೂರ್ವ ಪ್ರಾಥಮಿಕ ಶಾಲೆಗಳನ್ನು ಆರಂಭಿಸಿದ್ದ ಶಾಲಾ ಶಿಕ್ಷಣ ಇಲಾಖೆ, ಬರುವ ಶೈಕ್ಷಣಿಕ ಸಾಲಿನಲ್ಲಿ ಈ ಸಂಖ್ಯೆಯನ್ನು ಐದು ಸಾವಿರಕ್ಕೆ ಮುಟ್ಟಿಸುತ್ತಿದೆ. ಅದಕ್ಕಾಗಿ ₹70 ಕೋಟಿ ಮೀಸಲಿಡಲಾಗಿದೆ. ಮಕ್ಕಳಲ್ಲಿ ಆಂಗ್ಲಭಾಷಾ ಕೌಶಲ ಬೆಳೆಸಲು ನಾಲ್ಕು ಸಾವಿರ ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ವಿಭಾಗ ಆರಂಭಿಸಲಿದೆ.

ಪ್ರಯೋಗಾಲಯ ಸೌಲಭ್ಯ ವಿಸ್ತರಣೆ: 500 ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಮತ್ತು ಪ್ರಯೋಗಾಲಯ ಸೌಲಭ್ಯ ವಿಸ್ತರಣೆ, ಕಲ್ಯಾಣ ಕರ್ನಾಟದ ಶಾಲೆಗಳಲ್ಲಿ ಖಾಲಿ ಇರುವ 5,276 ಶಿಕ್ಷಕರ ಹುದ್ದೆ ಭರ್ತಿ, 100 ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳ ಉನ್ನತೀಕರಣ ಮಾಡಲಾಗುತ್ತಿದೆ. ಸರ್ಕಾರಿ ಶಾಲಾ ಮಕ್ಕಳ ಸಾಮರ್ಥ್ಯ ವಿಸ್ತರಣೆಯ ಮರುಸಿಂಚನವನ್ನು ರಾಜ್ಯದ ಎಲ್ಲ ಶಾಲೆಗಳಿಗೂ ವಿಸ್ತರಿಸಲಾಗುತ್ತಿದೆ. ಉನ್ನತ ಶಿಕ್ಷಣದಲ್ಲಿ ಯುಯುಸಿಎಂಎಸ್ ತಂತ್ರಜ್ಞಾನ ಉನ್ನತೀಕರಣಕ್ಕಾಗಿ ₹30 ಕೋಟಿ ಮೀಸಲಿಡಲಾಗಿದೆ. ಚಿಂತಾಮಣಿ ತಾಲ್ಲೂಕಿನಲ್ಲಿ ₹150 ಕೋಟಿ ವೆಚ್ಚದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಘಟಕ ಕಾಲೇಜು ಸ್ಥಾಪಿಸಲಾಗುತ್ತಿದೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಬೊಳುವಾರು ಮಹಮದ್ ಕುಂಞಿ ಅವರ 'ಸ್ವಾತಂತ್ರ್ಯದ ಓಟ' ಕಾದಂಬರಿಯನ್ನು ನಾಟಕ ರೂಪದಲ್ಲಿ ರಾಜ್ಯದಾದ್ಯಂತ ಪ್ರದರ್ಶಿಸಲು ₹1 ಕೋಟಿ ನೆರವು

₹2,500 ಕೋಟಿ
500 ಹೊಸ ಕರ್ನಾಟಕ ಪಬ್ಲಿಕ್ ಶಾಲೆ ಪ್ರಾರಂಭಿಸಲು ಮಾಡಲಿರುವ ವೆಚ್ಚ

₹725 ಕೋಟಿ
ಶಾಲೆ-ಕಾಲೇಜುಗಳಲ್ಲಿ ಹೆಚ್ಚುವರಿ ಕೊಠಡಿ, ಶೌಚಾಲಯ ನಿರ್ಮಾಣ, ದುರಸ್ತಿಗೆ ಮೀಸಲಿಟ್ಟ ಹಣ

ಮಹಿಳಾ ಅಭಿವೃದ್ಧಿಗೆ ಸಿಂಹಪಾಲು

ಬಜೆಟ್‌ನಲ್ಲಿ ಮಹಿಳೆಯರ ಕಲ್ಯಾಣ ಕಾರ್ಯಕ್ರಮಗಳಿಗೆ ಸಿಂಹಪಾಲು ದೊರೆತಿದೆ. ಒಟ್ಟಾರೆಯಾಗಿ ₹94,084 ಕೋಟಿ ಮೀಸಲಿಡಲಾಗಿದೆ. ಅದರಲ್ಲಿ ಗೃಹಲಕ್ಷ್ಮಿ ಪಾಲು ₹28,608 ಇದೆ.

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳನ್ನು ಸ್ವಸಹಾಯ ಗುಂಪುಗಳ ಸದಸ್ಯರಾಗಿಸಿ, ಅವರಿಗೆ ಉತ್ತೇಜನ ನೀಡಲು, ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಸ್ವಸಹಾಯ ಗುಂಪುಗಳ ಮಹಿಳೆಯರಿಗೆ ಉಳಿತಾಯ ಮತ್ತು ಉದ್ಯಮಶೀಲತೆ ಹೆಚ್ಚಿಸಲು ರಾಜ್ಯಮಟ್ಟದಲ್ಲಿ ಅಕ್ಕ ಕೋ–ಆಪರೇಟಿವ್ ಸೊಸೈಟಿ ಸ್ಥಾಪಿಸಲಾಗುತ್ತಿದೆ. ಮಹಿಳಾ ಸ್ವ-ಸಹಾಯ ಸಂಘಗಳಿಂದ ಆಯ್ದ 50 ಸ್ಥಳಗಳಲ್ಲಿ ಶಿಶು ಪಾಲನೆಗಾಗಿ ವಾತ್ಸಲ್ಯ ಕೇಂದ್ರಗಳ ಸ್ಥಾಪನೆ, 10 ನಗರಗಳಲ್ಲಿ ಪ್ರಾಯೋಗಿಕವಾಗಿ ಸ್ವಸಹಾಯ ಸಂಘಗಳ ಮೂಲಕ ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಕಚೇರಿ ಆವರಣದಲ್ಲಿ 'ಅಕ್ಕ ಕೆಫೆ' ಸ್ಥಾಪನೆ ಮಾಡಲಾಗುತ್ತದೆ.

ಮೂಲಸೌಕರ್ಯ ಕಲ್ಪಿಸಲು 17,454 ಅಂಗನವಾಡಿ ಕೇಂದ್ರಗಳಿಗೆ ₹175 ಕೋಟಿ ನೀಡಲಾಗಿದೆ. ಮಕ್ಕಳ ಕೇಂದ್ರಿತ ಯೋಜನೆಗಳಿಗಾಗಿ ₹62,033 ಕೋಟಿ ನಿಗದಿ ಮಾಡಲಾಗಿದೆ. ವಿಶೇಷ ಪಾಲನಾ ಯೋಜನೆ ಅಡಿ ಎಚ್‌ಐವಿ ಸೋಂಕಿತ ಮಕ್ಕಳಿಗೆ ನೀಡುವ ಮಾಸಿಕ ಸಹಾಯಧನವನ್ನು ₹2,000ಕ್ಕೆ ಹೆಚ್ಚಿಸಲಾಗಿದೆ. ಬಳ್ಳಾರಿ, ಹುಬ್ಬಳ್ಳಿಯಲ್ಲಿನ ಶ್ರವಣದೋಷದ ಮಕ್ಕಳ ಸರ್ಕಾರಿ ಶಾಲೆಗಳನ್ನು ಪ್ರೌಢಶಾಲಾ ಹಂತಕ್ಕೆ ಉನ್ನತೀಕರಿಸಲಾಗಿದೆ.

ತಾಯಿ ಮರಣ ತಡೆಗೆ ₹320 ಕೋಟಿ: ತಾಯಂದಿರ ಮರಣ ಪ್ರಮಾಣವನ್ನು ಶೂನ್ಯಕ್ಕೆ ಇಳಿಸಲು ಪಣ ತೊಟ್ಟಿರುವ ಸರ್ಕಾರ, ಈ ಕಾರ್ಯವನ್ನು ಅಭಿಯಾನದ ರೂಪದಲ್ಲಿ ಕೈಗೊಳ್ಳಲು ₹320 ಕೋಟಿ ನೆರವು ನೀಡಿದೆ.

ಮರಣ ಪ್ರಮಾಣವನ್ನು ತಜ್ಞರ ಸಮಿತಿಯಿಂದ ಆಡಿಟ್ ಮಾಡಿಸಿ, ಸಮಿತಿ ನೀಡುವ ಶಿಫಾರಸುಗಳ ಆಧಾರದಲ್ಲಿ ಯೋಜನೆಗಳನ್ನು ರೂಪಿಸುವ ಭರವಸೆ ನೀಡಲಾಗಿದೆ.

ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಹೊಂದಲು ನೆರವು ನೀಡಲಾಗಿದ್ದು, ಹೊಸ ಬಡಾವಣೆಗಳಲ್ಲಿನ ನಾಗರಿಕ ಉದ್ದೇಶದ ನಿವೇಶನಗಳನ್ನು (ಸಿ.ಎ) ಶೇ50ರಷ್ಟು ರಿಯಾಯಿತಿ ದರದಲ್ಲಿ ಖರೀದಿಸಲು ₹10 ಕೋಟಿ ಮೀಸಲಿಟ್ಟಿದೆ.

ಗೃಹ ಆರೋಗ್ಯ ವಿಸ್ತರಣೆ

ಕೋಲಾರ ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿರುವ 'ಗೃಹ ಆರೋಗ್ಯ' ಯೋಜನೆಯನ್ನು ₹100 ಕೋಟಿ ವೆಚ್ಚದಲ್ಲಿ ರಾಜ್ಯದಾದ್ಯಂತ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಗಿದೆ.

ಪ್ರಸವ ಪೂರ್ವ ಮತ್ತು ನವಜಾತ ಶಿಶುಗಳಲ್ಲಿನ ಅಪರೂಪದ ಚಯಾಪಚಯ ಕಾಯಿಲೆಗಳ ಪತ್ತೆಗೆ ಕಾರ್ಯಕ್ರಮ ರೂಪಿಸಲಾಗುವುದು. ಮೊದಲ ಹಂತದಲ್ಲಿ ಕಲ್ಯಾಣ ಕರ್ನಾಟಕ ಮತ್ತು ಗಣಿಬಾಧಿತ ಪ್ರದೇಶಗಳಲ್ಲಿ ಪ್ರಾಯೋಗಿಕವಾಗಿ ₹10 ಕೋಟಿ ವೆಚ್ಚದಲ್ಲಿ ಜಾರಿಗೊಳಿಸಲಾಗುತ್ತದೆ.

ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಪ್ರಥಮ ಹಂತದಲ್ಲಿ ಗಣಿಬಾಧಿತ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದ 20 ತಾಲ್ಲೂಕುಗಳಲ್ಲಿ ₹9 ಕೋಟಿ ವೆಚ್ಚದಲ್ಲಿ 14 ವರ್ಷದ ಹೆಣ್ಣು ಮಕ್ಕಳಿಗೆ 'ಎಚ್‌ಪಿವಿ' ಲಸಿಕೆ ನೀಡಲಾಗುತ್ತದೆ.

ಆರೋಗ್ಯ ಕವಚಕ್ಕೆ ಬಲ: ರಾಜ್ಯದಲ್ಲಿ 108 ಆಂಬುಲೆನ್ಸ್ ಸೇವೆಯನ್ನು ಉತ್ತಮಗೊಳಿಸಲು, ಈ ಸೇವೆ ನಿಯಂತ್ರಣ ಮಾಡುವ 'ಕಮಾಂಡ್ ಕಂಟ್ರೋಲ್' ಕೇಂದ್ರವನ್ನು ಆರೋಗ್ಯ ಇಲಾಖೆಯ ಅಧೀನಕ್ಕೆ ಒಳಪಡಿಸುವುದು. ಈ ಮೂಲಕ 'ಆರೋಗ್ಯ ಕವಚ' ಸೇವೆಯನ್ನು ಬಲಪಡಿಸಲಾಗುತ್ತದೆ.

ಸಂಚಾರಿ ಆಹಾರ ಪ್ರಯೋಗಾಲಯಗಳ ಮೂಲಕ ಆಹಾರದ ಗುಣಮಟ್ಟ ಮತ್ತು ಸುರಕ್ಷತೆಯ ವಿಶ್ಲೇಷಣೆ. ಅಸುರಕ್ಷಿತ ಮತ್ತು ಕಳಪೆ ಆಹಾರವನ್ನು ಗುರುತಿಸಿ, ಕಾನೂನಿನ ಅನುಸಾರ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಸುಟ್ಟ ಗಾಯಗಳ ತಡೆಗಟ್ಟುವಿಕೆ ಹಾಗೂ ಸಂತ್ರಸ್ತರ ಚಿಕಿತ್ಸೆಗೆ ಸಂಬಂಧಿಸಿದಂತೆ, ಸುಟ್ಟ ಗಾಯಗಳ ಚಿಕಿತ್ಸಾ ನೀತಿಯನ್ನು ರಾಷ್ಟ್ರದಲ್ಲಿಯೇ ಪ್ರಥಮವಾಗಿ ರಾಜ್ಯದಲ್ಲಿ ಜಾರಿಗೊಳಿಸಲಾಗುತ್ತದೆ. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಗುಣಮಟ್ಟದ ಔಷಧಗಳನ್ನು ವಿತರಿಸಲು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವನ್ನು (ಕೆಎಸ್ಎಂಎಸ್‌ಸಿಎಲ್) ಬಲಪಡಿಸಲಾಗುತ್ತದೆ. ವೈದ್ಯಕೀಯ ಉಪಕರಣಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆಗೆ ತಂತ್ರಾಂಶ ಪರಿಚಯಿಸಲಾಗುತ್ತದೆ.

ಆರೋಗ್ಯ ಕ್ಷೇತ್ರಕ್ಕೆ ಒಟ್ಟು ₹17,473 ಕೋಟಿ (ಶೇ 4 ರಷ್ಟು) ಅನುದಾನ ಹಂಚಿಕೆ ಮಾಡಲಾಗಿದೆ.

₹94,084 ಕೋಟಿ
ಈ ಸಾಲಿನ ಬಜೆಟ್‌ನಲ್ಲಿ ಮಹಿಳಾ ಉದ್ದೇಶಿತ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಒಟ್ಟು ಹಣ

₹62,033 ಕೋಟಿ
ಮಕ್ಕಳ ಉದ್ದೇಶಿತ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಒಟ್ಟು ಮೊತ್ತ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಅನುದಾನ

2025-26	₹34,955 ಕೋಟಿ
2024-25	₹34,406 ಕೋಟಿ

ವೈದ್ಯಕೀಯ ಸಂಸ್ಥೆಗಳ ಬಲವರ್ಧನೆ

ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಬಲವರ್ಧನೆಗೆ ಆದ್ಯತೆ ನೀಡಲಾಗಿದೆ.

ಮೈಸೂರು ಮತ್ತು ಕಲಬುರಗಿ ವೈದ್ಯಕೀಯ ಕಾಲೇಜಿಗೆ ಒಟ್ಟು ₹300 ಕೋಟಿ ಘೋಷಿಸಲಾಗಿದೆ. ರಾಜ್ಯದ 22 ವೈದ್ಯಕೀಯ ಕಾಲೇಜುಗಳಲ್ಲಿ ಲಭ್ಯವಿರುವ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲವನ್ನು ಬಳಕೆ ಮಾಡಿಕೊಂಡು,'ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್' ಪ್ರಾರಂಭಿಸಲಾಗುತ್ತದೆ.

'ನಿಮ್ಹಾನ್ಸ್' ಮಾದರಿ ಸಂಸ್ಥೆಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದ್ದು, ಮೈಸೂರು ಮತ್ತು ಕಲಬುರಗಿ ವೈದ್ಯಕೀಯ ಕಾಲೇಜುಗಳಲ್ಲಿ ತಲಾ ₹100 ಕೋಟಿ ವೆಚ್ಚದಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಲಾಗುತ್ತದೆ. ಈ ವೈದ್ಯಕೀಯ ಕಾಲೇಜುಗಳ ವ್ಯಾಪ್ತಿಯಲ್ಲಿ 'ಎಂಡೋಕ್ರೈನಾಲಜಿ' ಕೇಂದ್ರಗಳನ್ನು ಆರಂಭಿಸಲು ಒಟ್ಟು ₹100 ಕೋಟಿ ಘೋಷಿಸಲಾಗಿದೆ.

ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಅಧೀನದಲ್ಲಿ ₹100 ಕೋಟಿ ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆರಂಭಿಸಲಾಗುತ್ತದೆ. ರಾಯಚೂರಿನ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆವರಣದಲ್ಲಿ ₹50 ಕೋಟಿ ವೆಚ್ಚದಲ್ಲಿ ಕಿದ್ವಾಯಿ ಪೆರಿಫೆರಲ್ ಕ್ಯಾನ್ಸರ್ ಚಿಕಿತ್ಸಾ ಘಟಕ ಸ್ಥಾಪಿಸಲಾಗುತ್ತದೆ. ಬಾದಾಮಿ ತಾಲ್ಲೂಕಿನ ಕುಳಗೇರಿ ಕ್ರಾಸ್ ಹಾಗೂ ಚಿತ್ರದುರ್ಗದಲ್ಲಿ ಸುಸಜ್ಜಿತ ಟ್ರಾಮಾ ಕೇರ್ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಬೆಂಗಳೂರಿನಲ್ಲಿರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಡಿ 500 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗೆ ಕಳೆದ ಡಿಸೆಂಬರ್‌ನಲ್ಲಿ ಶಿಲಾನ್ಯಾಸ ನೆರವೇರಿಸಲಾಗಿತ್ತು. ಈ ಆಸ್ಪತ್ರೆಯನ್ನು ₹297 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸುವುದಾಗಿ ತಿಳಿಸಲಾಗಿದೆ.

ಯಲಬುರ್ಗಾ, ಜೇವರ್ಗಿ ಮತ್ತು ಯಾದಗಿರಿಯಲ್ಲಿ ತಲಾ ₹ 6 ಕೋಟಿ ವೆಚ್ಚದಲ್ಲಿ ಹೊಸದಾಗಿ ನರ್ಸಿಂಗ್ ಕಾಲೇಜುಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಅನುದಾನದಲ್ಲಿ ಆರಂಭಿಸಲಾಗುತ್ತದೆ.

ಪ್ರತಿಕ್ರಿಯೆಗಳು

ವಿನಾಯಿತಿ ಘೋಷಿಸಬೇಕಿತ್ತು

ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳಿಗೆ ಒಳಗಾಗಿರುವ ಮಹಿಳೆಯರ ಚಿಕಿತ್ಸಾ ವೆಚ್ಚದಲ್ಲಿ ಶೇ 50ರಷ್ಟು ವಿನಾಯಿತಿ ಘೋಷಿಸಿದ್ದರೆ ಕೆಳ ಹಾಗೂ ಮಧ್ಯಮ ವರ್ಗದವರಿಗೆ ಅನುಕೂಲವಾಗುತ್ತಿತ್ತು

ದೀಪ್ತಿ ಶೆಟ್ಟಿ, ಮಂಗಳೂರು
ಖಾಸಗಿ ಸಂಸ್ಥೆ ಉದ್ಯೋಗಿ

ಶಿಕ್ಷಣಕ್ಕೆ ಒತ್ತು ಉತ್ತಮ

ಪೂರ್ವ ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೂ ಗುಣಮಟ್ಟ ಹೆಚ್ಚಿಸಲು ಬಜೆಟ್‌ನಲ್ಲಿ ಒತ್ತು ಕೊಟ್ಟಿರುವುದು ಉತ್ತಮ. ತಾಯಿ–ಮಕ್ಕಳ ಮರಣ ಶೂನ್ಯಕ್ಕೆ ಇಳಿಸುವ ಘೋಷಣೆ ವಾಸ್ತವ ರೂಪದಲ್ಲಿ ಜಾರಿಗೆ ಬರಬೇಕು

ರಾಜೇಶ್ವರಿ, ಗೃಹಿಣಿ, ಬೀದರ್

ಜನಸ್ನೇಹಿ ಬಜೆಟ್

ಕೃಷಿ, ಹೈನುಗಾರಿಕೆಗೆ ಉತ್ತೇಜನ, 500 ಕೆಪಿಎಸ್ ಹಾಗೂ 4,000 ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ವಿಭಾಗ ಆರಂಭ ವರದಾನವಾಗಲಿದೆ. 'ಗ್ಯಾರಂಟಿ'ಗಳಿಂದ ಮಹಿಳೆಯರ ಆರ್ಥಿಕಶಕ್ತಿ ಹೆಚ್ಚಲಿದೆ. ಇದು ಜನಸ್ನೇಹಿ ಬಜೆಟ್

ಶೋಭಾ ಎಂ. ಲಿಂಗರಾಜು
ಮಳವಳ್ಳಿ, ಮಂಡ್ಯ ಜಿಲ್ಲೆ



ಕನ್ನಡ ಮಾಧ್ಯಮವಾಗಿರಬೇಕು

ರಾಜ್ಯದ 5,000 ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿ ತೆರೆಯುವುದು ಸ್ವಾಗತಾರ್ಹ. ಅದು ಕನ್ನಡ ಮಾಧ್ಯಮವಾಗಿರಬೇಕು. ಇಲ್ಲವಾದರೆ ಕನ್ನಡದ ಶವಪೆಟ್ಟಿಗೆಗೆ ಮೊಳೆ ಹೊಡೆದಂತಾಗುತ್ತದೆ

ಸ.ರ. ಸುದರ್ಶನ
ಮೈಸೂರು



ರಾಜ್ಯ ಬಜೆಟ್ 2025-26

ತಜ್ಞರ ಅಭಿಪ್ರಾಯ

ಅನುದಾನ ಫಲಾನುಭವಿಗಳಿಗೆ ತಲುಪಲಿ

ಭಾಗ್ಯಗಳ ಭಾರ ಹೆಚ್ಚಾದೀತು ಅನ್ನುವ ಆರ್ಥಿಕ ತಜ್ಞರ ಅನಿಸಿಕೆ ಮಧ್ಯದಲ್ಲೂ, ಕೃಷಿ, ತೋಟಗಾರಿಕೆ, ಸಾವಯುವ ಕೃಷಿ, ಪಶು ಸಂಗೋಪನೆ, ನೀರಾವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಹೆಚ್ಚಿನ ಪ್ರಾಮುಖ್ಯ ಕೊಟ್ಟಿರುವುದು ಗಮನಾರ್ಹ.

ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಿಗೆ ಆಯವ್ಯಯದ ಶೇ 13ರಷ್ಟನ್ನು ಸರ್ಕಾರ ಮೀಸಲಿಟ್ಟಿದೆ. ವಿವಿಧ ಕೃಷಿ ಯೋಜನೆಗಳು, ರೈತರಿಗೆ ಸಬ್ಸಿಡಿ, ವಿಮೆ ಮತ್ತು ಮಾರುಕಟ್ಟೆ ಸಂಪರ್ಕಗಳು ಕೃಷಿಕರಿಗೆ ಅಗತ್ಯ ಬೆಂಬಲ ಒದಗಿಸುವ ನಿರೀಕ್ಷೆ ಇದೆ.

ಕೃಷಿಯನ್ನು ಸಶಕ್ತ, ಸುಸ್ಥಿರ ಮತ್ತು ಲಾಭದಾಯಕವಾಗಿಸಲು ಹಲವು ಯೋಜನೆಗಳಿವೆ. ಸಮಗ್ರ ಕೃಷಿ ಪದ್ಧತಿ ಮಾದರಿ ತಾಕುಗಳು, ನೀರಿನ ಸಮರ್ಥ ಬಳಕೆಗೆ ಹನಿ ಮತ್ತು ತುಂತುರು ನೀರಾವರಿ ಘಟಕಗಳ ಅಳವಡಿಕೆ, ಕೊಯ್ಲೋತ್ತರ ನಷ್ಟವನ್ನು ತಗ್ಗಿಸಿ, ಸಣ್ಣ ರೈತರ ಆದಾಯ ಹೆಚ್ಚಿಸಲು ಕಿರು ಆಹಾರ ಸಂಸ್ಕರಣ ಘಟಕಗಳ ಸ್ಥಾಪನೆಗೆ ಉತ್ತೇಜನ ಪ್ರಶಂಸನೀಯ.

ಇದು ಮಾಹಿತಿ ತಂತ್ರಜ್ಞಾನ ಯುಗ. ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಕೆಗೆ ಆವಿಷ್ಕಾರ ಮತ್ತು ಸಂಶೋಧನೆಗೆ ಉತ್ತೇಜನ ನೀಡಿರುವುದು ಸ್ವಾಗತಾರ್ಹ. ಕೃಷಿ, ಪಶುಸಂಗೋಪನೆ ಕ್ಷೇತ್ರದಲ್ಲಿ ಮಹಿಳೆಯರಿಗೆ ಅನುಕೂಲವಾಗಲು ಹಲವು ಯೋಜನೆಗಳನ್ನು ಪ್ರಸ್ತಾಪಿಸಲಾಗಿದೆ.

ಆದರೆ, ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಗಳ ಲಾಭ ಸಣ್ಣ, ಅತಿ ಸಣ್ಣ ರೈತರನ್ನೂ ಒಳಗೊಂಡು ಉದ್ದೇಶಿತ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳುವುದು ಅಗತ್ಯ.

ಡಾ. ಶ್ವೇತ ಪ್ರಭಾಕರ್, ಸಹಾಯಕ ಪ್ರಾಧ್ಯಾಪಕಿ, ತೋಟಗಾರಿಕಾ ಮಹಾವಿದ್ಯಾಲಯ, ಬೆಂಗಳೂರು

‘ಗೌರವಧನ ಇನ್ನಷ್ಟು ಹೆಚ್ಚಬೇಕಿತ್ತು...’

ಬಜೆಟ್‌ನಲ್ಲಿ ಅಂಗನವಾಡಿಗಳ ನಿವೇಶನ, ಕಟ್ಟಡ ನಿರ್ಮಾಣಕ್ಕೆ ಆದ್ಯತೆ ನೀಡಿರುವುದು ಸ್ವಾಗತಾರ್ಹ. ಈ ವಿಸ್ತೃತ ಯೋಜನೆ ಕೇವಲ ಘೋಷಣೆಯಾಗಿರದೆ, ಅನುಷ್ಠಾನಕ್ಕೆ ಬರಬೇಕು.

ಅಪೌಷ್ಟಿಕತೆ ನಿವಾರಣೆಗೆ ಶಾಲೆಗಳಲ್ಲಿ ಮಕ್ಕಳಿಗೆ ಮೊಟ್ಟೆ ಕೊಡುವುದು ಒಳ್ಳೆಯದು. ಪ್ಯಾಕೆಟ್ ಆಹಾರ ಕೊಡುವ ಕ್ರಮಬದಲಾಗಬೇಕು. ಮಕ್ಕಳಿಗೆ ನೀಡುತ್ತಿರುವ ರಾಗಿ ಹೆಲ್ತ್ ಮಿಕ್ಸ್ ಅನ್ನು ವಾರದಲ್ಲಿ ಐದು ದಿನಕ್ಕೆ ವಿಸ್ತರಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಹೆಲ್ತ್ ಮಿಕ್ಸ್ ಎಲ್ಲಿಂದಲೋ ಪೂರೈಕೆಯಾಗಿ ಮಕ್ಕಳಿಗೆ ನೀಡುವ ಬದಲು, ಸ್ಥಳೀಯವಾಗಿ ರಾಗಿ ಹುಡಿ ಮಾಡುವ ಘಟಕ ಸ್ಥಾಪಿಸಿ, ಸ್ಥಳೀಯ ಮಹಿಳೆಯರೇ ಪೂರೈಸುವ ಹಾಗಾಗಿದ್ದರೆ, ಗ್ರಾಮೀಣ ಉದ್ಯೋಗ ಸೃಷ್ಟಿಗೆ ಉತ್ತೇಜನ ಸಿಗುತ್ತಿತ್ತು. ಆರ್ಥಿಕ ಸ್ವಾವಲಂಬನೆ ಸಾಧ್ಯವಾದರೆ, ಮಹಿಳೆಯರು ಮೈಕ್ರೊ ಫೈನಾನ್ಸ್ ಸಾಲದ ಸುಳಿಗೆ ಸಿಲುಕಲಾರರು. ಸರ್ಕಾರದ ಯೋಚನೆ ಯಾವತ್ತೂ ಸಮಸ್ಯೆಯ ಮೂಲ ಹುಡುಕುವ, ಪರಿಹರಿಸುವ ಕಡೆಗಿದ್ದರೆ ಒಳ್ಳೆಯದು.ಕಲ್ಯಾಣ ಕರ್ನಾಟಕದಲ್ಲಿ ಮಹಿಳೆಯರ ಶಿಕ್ಷಣ, ಆರೋಗ್ಯಕ್ಕೆ ಒತ್ತು ನೀಡಿರುವುದೂ ಸ್ವಾಗತಾರ್ಹ. ಮಹಿಳಾ ಕಲ್ಯಾಣದ ಕಾರ್ಯಕ್ರಮಗಳು ಅನುಷ್ಠಾನಗೊಳ್ಳಬೇಕು. ತಾಯಂದಿರ ಮರಣ ಪ್ರಮಾಣವನ್ನು ತಗ್ಗಿಸಲು ಅಪೌಷ್ಟಿಕತೆ ನಿವಾರಣೆಗೆ ಕಣ್ಣಾಡಿಸಿದ್ದಾರೆ. ಅಂಗನವಾಡಿ ಸಹಾಯಕಿಯರು, ಬಿಸಿಯೂಟ ಕಾರ್ಯಕರ್ತೆಯರು, ಅತಿಥಿ ಶಿಕ್ಷಕರ ಗೌರವಧನ ಹೆಚ್ಚಿಸುವ ನಿರ್ಧಾರ ಘೋಷಿಸಲಾಗಿದೆ. ಆದರೆ, ಮೊತ್ತ ಇನ್ನಷ್ಟು ಹೆಚ್ಚಾಗಬೇಕಿತ್ತು.

ಸ್ವರ್ಣ, ಸುರತ್ಕಲ್

₹26,735 ಕೋಟಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಮೀಸಲಿಟ್ಟ ಅನುದಾನ

₹22,181 ಕೋಟಿ ನೀರಾವರಿಗೆ ಹಂಚಿಕೆ ಮಾಡಲಾಗಿರುವ ಹಣ

₹7,145 ಕೋಟಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಹಂಚಿಕೆಯಾದ ಒಟ್ಟು ಅನುದಾನ



ಕೃಷಿ ಮೊದಲು ಸರ್ವಕ್ಕೆ
ಕೃಷಿಯಿಂ ಪಸರಿಸುವುದು
ಆ ಕೃಷಿಯನುದ್ಯೋಗಿಸುವ
ಜನವನು ಪಾಲಿಸುವುದು
-ಕುಮಾರವ್ಯಾಸ

ಎ.ಐ ಬಳಕೆ, ಡಿಜಿಟಲೀಕರಣ
ಕೃಷಿ, ಗ್ರಾಮ ಚೈತನ್ಯಕ್ಕೆ ಒತ್ತು

ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರವಾಗಿಸುವುದು ಸೇರಿ ಕೃಷಿಕರ ಬದುಕು ಉತ್ತಮ ಪಡಿಸಲು ಹಲವು ಕಾರ್ಯಕ್ರಮ ಪ್ರಸ್ತಾಪಿಸಲಾಗಿದೆ. ಈ ಎಲ್ಲವೂ ಪ್ರಾಮಾಣಿಕವಾಗಿ ಜಾರಿ ಆದಲ್ಲಿ ಗ್ರಾಮೀಣ ಜನರ ಬದುಕು ಹಸಿರಾಗುತ್ತದೆ, ಹಸನಾಗುತ್ತದೆ ಎಂಬುದರಲ್ಲಿ ಶಂಕೆ ಇಲ್ಲ

• ಎಸ್. ರವಿಪ್ರಕಾಶ್

21ನೇ ಶತಮಾನದಲ್ಲಿ ಯುದ್ಧದ ಪರಿಭಾಷೆ ಬದಲಾಗಿರುವಂತೆ ಕೃಷಿಯ ಪರಿಭಾಷೆಯೂ ಬದಲಾಗಿದೆ. ಯಾಂತ್ರೀಕರಣದ ಜತೆ ಡಿಜಿಟಲೀಕರಣ, ಡ್ರೋನ್ ಮತ್ತು ಆರ್ಟಿಫೀಷಿಯಲ್ ಇಂಟೆಲಿಜೆನ್ಸ್ (ಎಐ) ಅನ್ವಯಗೊಳಿಸುವಿಕೆ ಈಗ ಅಗ್ರಸ್ಥಾನ ಪಡೆಯುತ್ತಿವೆ.

ಇಳುವರಿ, ರೋಗ ನಿಯಂತ್ರಣ, ಸೂಕ್ಷ್ಮ ಪೋಷಕಾಂಶ ಒದಗಿಸುವಿಕೆ, ಉತ್ಪಾದಕತೆ ಮತ್ತು ಲಾಭದ ದೃಷ್ಟಿಯಿಂದಲೂ ಡಿಜಿಟಲೀಕರಣ ಮತ್ತು ಎಐ ಬಳಕೆ ಅತ್ಯುಪಯುಕ್ತ. ಆಧುನಿಕ ತಂತ್ರಜ್ಞಾನ ಅಳವಡಿಕೆಗೆ ಈಗ ಕರ್ನಾಟಕ ಸರ್ಕಾರ ಮೈಚಳಿ ಬಿಟ್ಟು ದಿಟ್ಟ ಹೆಜ್ಜೆ ಇಟ್ಟಿದೆ. ಈ ಕ್ರಮಗಳಿಂದ ಕೃಷಿ ಕ್ಷೇತ್ರಕ್ಕೆ ಹೆಚ್ಚು ಪ್ರಯೋಜನ ಆಗುವುದರಲ್ಲಿ ಸಂದೇಹವಿಲ್ಲ.

ಇದಕ್ಕೆ ಪೂರಕವಾಗಿ ರಾಜ್ಯ ಹತ್ತು ಹವಾಮಾನ ವಲಯಗಳಲ್ಲಿ ಸಮಗ್ರ ಕೃಷಿ ಪದ್ಧತಿಯ ಮಾದರಿ ಪ್ರಾತ್ಯಕ್ಷಿಕೆ ತಾಕುಗಳನ್ನು ಅಭಿವೃದ್ಧಿಪಡಿಸಿ, ಆ ಪದ್ಧತಿ ಗಳನ್ನು ಅಳವಡಿಸಿ ಕೊಳ್ಳಲು ರೈತರಿಗೆ ಪ್ರೋತ್ಸಾಹ ನೀಡಲಾಗುವುದು. ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರವಾಗಿಸಲು ಮತ್ತು ರೈತರ ಜೀವನೋ ಪಾಯ ಸುಧಾರಿಸಲು ‘ಸಮಗ್ರ ಮಳೆಯಾಶ್ರಿತ ಕೃಷಿ ನೀತಿ’ಯೊಂದನ್ನು ಅನುಷ್ಠಾನ ಗೊಳಿಸುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಅದರ ವಿವರಗಳು ಏನೆಂಬುದು ಮುಂಬರುವ ದಿನಗಳಲ್ಲಿ ಗೊತ್ತಾಗಬಹುದು. ಲಾಗಾಯ್ತಿನಿಂದಲೂ ನೀರಾವರಿ ಪ್ರದೇಶಗಳಿಗೇ ಹೆಚ್ಚಿನ ಒತ್ತು ಸಿಕ್ಕಿತ್ತು. ಆದರೆ, ಹಲವು ದಶಕಗಳಿಂದ ಮಳೆಯಾಶ್ರಿತ ಕೃಷಿ ಪ್ರದೇಶದ ನಿರ್ಲಕ್ಷ್ಯ ಕಾರಣ, ಈ ಪ್ರದೇಶಗಳಲ್ಲಿ ಉತ್ಪಾದಕತೆ ಕಡಿಮೆಯಾಗುತ್ತಾ ಬಂದಿದ್ದು, ಹಲವು ಕಡೆಗಳಲ್ಲಿ ಕೃಷಿಯನ್ನು ಸಂಪೂರ್ಣ ಕೈಬಿಡಲಾಗಿದೆ. ಹೀಗಾಗಿ ಸಾಕಷ್ಟು ಜಮೀನು ಬೀಳು ಬಿದ್ದಿದೆ. ಹೊಸ ನೀತಿ ಕಾಯಕಲ್ಪ ತುಂಬುವುದೇ ಕಾದು ನೋಡಬೇಕು.

> ‘ಕೃಷಿ, ರೇಷ್ಮೆ ಸೇರಿದಂತೆ ಪರಸ್ಪರ ಪೂರಕವಾಗಿ ದುಡಿಯುವ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಿ ಕೃಷಿಕರ ಆದಾಯ ಹೆಚ್ಚಿಸಲು ಸರ್ಕಾರ ಶ್ರಮಿಸಲಿದೆ’

ಮಳೆಯಾಶ್ರಿತ ಪ್ರದೇಶದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು 1.81 ಲಕ್ಷ ರೈತರಿಗೆ ಹನಿ ಮತ್ತು ತುಂತುರು ನೀರಾವರಿ ಘಟಕ ಅಳವಡಿಕೆಗೆ ₹440 ಕೋಟಿ ಸಹಾಯಧನ ಒದಗಿಸಿದೆ. ತೊಗರಿ ಬೆಳೆಯ ಉತ್ಪಾದನೆ ಯಲ್ಲಿ ರಾಷ್ಟ್ರ ಮಟ್ಟದಲ್ಲೇ ಮುಂಚೂಣಿ ರಾಜ್ಯವನ್ನಾಗಿಸುವ ಗುರಿ ಹೊಂದಲಾಗಿದೆ. ಅಲ್ಲದೇ, ಇತ್ತೀಚಿನ ವರ್ಷಗಳಲ್ಲಿ ನೈಸರ್ಗಿಕ ವೈಪರೀತ್ಯಗಳ ಬದಲಾವಣೆಯಿಂದ ಹವಾಮಾನ ವಲಯವನ್ನು ಮರುವ್ಯಾಖ್ಯಾನಗೊಳಿಸುವ ಉದ್ದೇಶಕ್ಕಾಗಿ ತಜ್ಞರ ಸಮಿತಿ ರಚಿಸುವ ಪ್ರಸ್ತಾಪ ಆಯವ್ಯಯದಲ್ಲಿದೆ.

37 ಲಕ್ಷ ರೈತರಿಗೆ ರಿಯಾಯಿತಿ ಬಡ್ಡಿದರಲ್ಲಿ ₹28,000 ಕೋಟಿ ಸಾಲ ನೀಡಲು ತೀರ್ಮಾನಿಸಲಾಗಿದೆ. ಕಳೆದ ವರ್ಷ 21.78 ಲಕ್ಷ ರೈತರಿಗೆ ₹18,960 ಕೋಟಿ ಸಾಲ ನೀಡಲಾಗಿತ್ತು. ಪುನರ್‌ಧನದ ಮಿತಿಯನ್ನು ನಬಾರ್ಡ್ ಶೇ 58ರಷ್ಟು ತಗ್ಗಿಸಿದ್ದರೂ ಈ ಬಾರಿ ಸಾಲ ನೀಡಿಕೆ ಗುರಿ ಹೆಚ್ಚಿಸಲಾಗಿದೆ. ಅಲ್ಲದೇ, ಆಕಸ್ಮಿಕಗಳಿಂದ ರೈತರ ಹಸು, ಎತ್ತು, ಎಮ್ಮೆ, ಕುರಿ, ಕೋಳಿಗಳು ಸತ್ತು ಹೋದರೆ ನೀಡಲಾಗುವ ಪರಿಹಾರ ಮೊತ್ತವನ್ನೂ ಹೆಚ್ಚಿಸಲಾಗಿದೆ.

ನೀರಾವರಿ ಕ್ಷೇತ್ರದಲ್ಲಿ ಹೊಸ ಯೋಜನೆಗಳನ್ನು ಘೋಷಿಸಿಲ್ಲವಾದರೂ ಚಾಲ್ತಿಯಲ್ಲಿರುವ ಕೃಷ್ಣಾ ಕಣಿವೆ, ಕಾವೇರಿ ಕಣಿವೆ ಮತ್ತು ಇತರ ನದಿ ಕಣಿವೆಗಳ ಹಲವು ಯೋಜನೆಗಳಿಗೆ ಅನುದಾನವನ್ನು ಕಲ್ಪಿಸಲಾಗಿದೆ. ಹೀಗಾಗಿ ಬೃಹತ್ ಮತ್ತು ಸಣ್ಣ ನೀರಾವರಿ ಯೋಜನೆಗಳಡಿ 48 ಪ್ರಮುಖ ನೀರಾವರಿ ಕಾಮಗಾರಿಗಳು ಮುಂದುವರಿಯಲಿವೆ. ಸೌರಶಕ್ತಿ ಬಳಸಿ ಗ್ರಾಮ ಪಂಚಾಯಿತಿಗಳ ವಿದ್ಯುತ್ ಬಿಲ್ಲಿನ ಹೊರೆಯನ್ನು ತಗ್ಗಿಸಲು ಸಾರ್ವಜನಿಕ- ಖಾಸಗಿ ಸಹಭಾಗಿತ್ವದಲ್ಲಿ ಸೋಲಾರ್ ಮೈಕ್ರೊ ಗ್ರಿಡ್ ಸ್ಥಾಪನೆ, ಎಲ್ಲ ಅಗತ್ಯ ದಾಖಲೆಗಳನ್ನು ಹೊಂದಿರುವ ಆಸ್ತಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲು ಇ-ಸ್ವತ್ತು ಅಭಿಯಾನ, ನೀರು ಸರಬರಾಜು ಮೂಲಭೂತ ಸೌಕರ್ಯಗಳ ಸುಸ್ಥಿರ ಮತ್ತು ವೈಜ್ಞಾನಿಕ ನಿರ್ವಹಣೆ ಸಲುವಾಗಿ ಭೌಗೋಳಿಕ ಮಾಹಿತಿ ವ್ಯವಸ್ಥೆ ಆಧಾರಿತ ಮೊಬೈಲ್ ಮತ್ತು ವೆಬ್ ತಂತ್ರಾಂಶದ ಅಭಿವೃದ್ಧಿ ಮತ್ತಿತರ ಪ್ರಸ್ತಾಪ ಗಮನ ಸೆಳೆಯುತ್ತವೆ.

ರೈತರ ಹೊಲಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಕೃಷಿ ಪಥ ಯೋಜನೆ, ಕೃಷಿ ಜಮೀನುಗಳಲ್ಲಿ ಅಂತರ್ಜಲ ಹೆಚ್ಚಳ ಮತ್ತು ಮಣ್ಣಿನ ಸಂರಕ್ಷಣೆ ಹೆಚ್ಚಿಸುವ ಉದ್ದೇಶದಿಂದ ಕೃಷಿ ಕವಚ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 5000 ಹೆಕ್ಟೇರ್‌ಗಳಲ್ಲಿ ಬದು ನಿರ್ಮಾಣ ಮಾಡುವ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಈ ಎಲ್ಲವೂ ಪ್ರಾಮಾಣಿಕವಾಗಿ ಜಾರಿ ಆದಲ್ಲಿ ಗ್ರಾಮೀಣ ಜನರ ಬದುಕೂ ಹಸಿರಾಗಬಲ್ಲದು.

ಬೀದಿಬದಿ ವ್ಯಾಪಾರಿಗಳಿಗೆ ಸಾಲ, ಕಾರ್ಮಿಕರಿಗೆ ಸೌಲಭ್ಯ

ಬೀದಿಬದಿ ವ್ಯಾಪಾರಸ್ಥರಿಗೆ ಸರ್ಕಾರ ನೆರವಿನ ಹಸ್ತ ಚಾಚಿದೆ. ವ್ಯಾಪಾರ ವಿಸ್ತರಿಸಲು ₹1 ಲಕ್ಷದವರೆಗೆ ಸಾಲ ಪಡೆಯುವವರಿಗೆ ಶೇ 8ರಷ್ಟು ಬಡ್ಡಿಯನ್ನು ಸಹಾಯಧನವಾಗಿ ನೀಡಲಿದೆ.

ಪಿ.ಎಂ. ಸ್ವನಿಧಿ ಯೋಜನೆಯಡಿ ಸಾಲದ ಗರಿಷ್ಠ ಮಿತಿಯನ್ನು ತಲುಪಿರುವ ಬೀದಿಬದಿ ವ್ಯಾಪಾರಿಗಳಿಗೆ ಈ ಕೊಡುಗೆಯನ್ನು ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಪ್ರಕಟಿಸಿದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ₹750 ಕೋಟಿ ವೆಚ್ಚದಲ್ಲಿ 6ನೇ ತರಗತಿಯಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗಾಗಿ ವಸತಿ ಶಾಲೆಗಳನ್ನು ನಿರ್ಮಿಸಲು ಮುಂದಾಗಿದೆ. ಶೈಕ್ಷಣಿಕ, ವೈದ್ಯಕೀಯ, ಇತರೆ ಸೌಲಭ್ಯಗಳನ್ನು ವಿಸ್ತರಿಸಿ ಧನಸಹಾಯವನ್ನು ದ್ವಿಗುಣಗೊಳಿಸುವ ಮೂಲಕ ಪ್ರೋತ್ಸಾಹ ನೀಡಿದೆ.

ನೋಂದಾಯಿತ ಕಟ್ಟಡ ಕಾರ್ಮಿಕರು ಸಹಜ ಮರಣ ಹೊಂದಿದಾಗ ನೀಡುತ್ತಿದ್ದ ₹75,000 ನೆರವನ್ನು ₹1.5 ಲಕ್ಷಕ್ಕೆ ಏರಿಸಲಾಗಿದೆ. ಕೆಲಸದ ಸ್ಥಳದಲ್ಲಿ ಮರಣ ಹೊಂದುವ ಕಾರ್ಮಿಕರ ಅವಲಂಬಿತರಿಗೆ ನೀಡಲಾಗುತ್ತಿದ್ದ ಪರಿಹಾರದ ಮೊತ್ತವನ್ನು ₹5 ಲಕ್ಷದಿಂದ ₹8 ಲಕ್ಷಕ್ಕೆ ಹೆಚ್ಚಿಸಿರುವುದು ಸಕಾರಾತ್ಮಕ ಅಂಶ.

‘ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ’ ಯೋಜನೆಯಡಿ ಹೃದ್ರೋಗ ಮತ್ತು ಕ್ಯಾನ್ಸರ್ ಚಿಕಿತ್ಸೆಗಾಗಿ ಹೆಚ್ಚುವರಿಯಾಗಿ ₹5 ಲಕ್ಷ, ಇತರ ಕಾಯಿಲೆಗಳಿಗೆ ಹೆಚ್ಚುವರಿಗೆಯಾಗಿ ₹2 ಲಕ್ಷ ನೀಡಲು ಮುಂದಾಗಿರುವುದು ಕಾರ್ಮಿಕರಿಗೆ ಅನುಕೂಲವಾಗಲಿದೆ.

ವಿಮಾ ಆಸ್ಪತ್ರೆಗಳಿಗೆ ಮೂಲ ಸೌಲಭ್ಯ ಕಲ್ಪಿಸಲು ₹51 ಕೋಟಿ ಇಟ್ಟಿದೆ. ಆಸ್ಪತ್ರೆಗಳ ಶುಚಿತ್ವ, ಪರಿಕರಗಳ ಖರೀದಿ, ತುರ್ತು ವಿಭಾಗಗಳ ನವೀಕರಣ, ಪ್ರಯೋಗಾಲಯಗಳ ಉನ್ನತೀಕರಣಕ್ಕೆ ಸರ್ಕಾರ ಮುಂದಾಗಿರುವುದು ಉತ್ತಮ ನಡೆ.

₹5,200 ಕೋಟಿ
ಈ ಸಾಲಿನಿಂದ ಆರಂಭಿಸಲಾಗುವ ‘ಪ್ರಗತಿ ಪಥ’ ರಸ್ತೆ ಯೋಜನೆಗೆ ಮಾಡಲಾದ ಹಂಚಿಕೆ

₹6,050 ಕೋಟಿ
ಜಲ ಜೀವನ್ ಮಿಷನ್ ಯೋಜನೆಗೆ ಮೀಸಲಿಟ್ಟ ಅನುದಾನ

₹2,000 ಕೋಟಿ
ಸಣ್ಣ ನೀರಾವರಿ ಇಲಾಖೆ ಆರಂಭಿಸಲಿರುವ ಹೊಸ ಕಾಮಗಾರಿಗಳಿಗೆ ಮೀಸಲಿಟ್ಟ ಹಣ

ರೈಲ್ವೆ ಯೋಜನೆಗಳಿಗೆ ₹600 ಕೋಟಿ ಮೂಲಸೌಕರ್ಯ ಕಲ್ಪಿಸಲು ಆದ್ಯತೆ

ಮೂಲಸೌಕರ್ಯ ಕಲ್ಪಿಸುವ ಯೋಜನೆಗಳಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿವಿಧ ರೈಲ್ವೆ ಯೋಜನೆಗಳಿಗೆ ₹600 ಕೋಟಿಯನ್ನು ಮೀಸಲಿಟ್ಟಿರುವುದಾಗಿ ಘೋಷಿಸಿದ್ದಾರೆ.

ವಿವಿಧ ರೈಲ್ವೆ ಯೋಜನೆಗಳ ಜೊತೆಗೆ, ₹219 ಕೋಟಿ ಅಂದಾಜು ವೆಚ್ಚದ ರಾಯಚೂರು ವಿಮಾನ ನಿಲ್ದಾಣದ ಕಾಮಗಾರಿಗಳಿಗೆ ಈವರೆಗೆ ₹53 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ವಿಜಯಪುರ ದಲ್ಲಿ ₹348 ಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿರುವ ವಿಮಾನ ನಿಲ್ದಾಣದ ಕಾರ್ಯಾಚರಣೆ 2025-26ನೇ ಸಾಲಿನಲ್ಲಿ ಆರಂಭವಾಗಲಿದೆ ಎಂದಿದ್ದಾರೆ.

ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಿಸಲು ಭೂಸ್ವಾಧೀನಕ್ಕಾಗಿ ₹319 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಕಾರವಾರದ ನೌಕಾನೆಲೆಯ ವಿಮಾನ ನಿಲ್ದಾಣದ ಭೂಸ್ವಾಧೀನ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಪ್ರಸಕ್ತ ಸಾಲಿನಲ್ಲಿ ಅಗತ್ಯ ಅನುದಾನ ಒದಗಿಸಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ವಾಹನ ದಟ್ಟಣೆಯಿರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಗೇಟ್‌ಗಳ ಬದಲಿಗೆ ರಸ್ತೆ ಮೇಲ್ಸೇತುವೆ/ಕೆಳಸೇತುವೆ ನಿರ್ಮಿಸಲು ಈಗಾಗಲೇ ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ₹50 ಕೋಟಿಯನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ. ಬೈಯಪ್ಪನಹಳ್ಳಿ–ಹೊಸೂರು ಹಾಗೂ ಯಶವಂತಪುರ-ಚನ್ನಸಂದ್ರ ದ್ವಿಪಥೀಕರಣಕ್ಕೆ ₹406 ಕೋಟಿ ಅನುದಾನ ಮೀಸಲಿರಿಸಿದೆ. ಬೆಂಗಳೂರು ಉಪನಗರ ರೈಲ್ವೆ ಯೋಜನೆ ಅನುಷ್ಠಾನಕ್ಕಾಗಿ ₹15,767 ಕೋಟಿ ಅನುದಾನ ತೆಗೆದಿರಿಸಿದೆ.

ಜಲಸಾರಿಗೆ ಅಭಿವೃದ್ಧಿಗಾಗಿ ಮಂಗಳೂರು, ಕಾರವಾರ ದಲ್ಲಿ ಬಂದರು ಅಭಿವೃದ್ಧಿ ಮತ್ತು ಮಂಗಳೂರಿನಲ್ಲಿ ಜಲಸಾರಿಗೆ ಸಂಗ್ರಹಾಲಯ ಮತ್ತು ಅನುಭವ ಕೇಂದ್ರ ಸ್ಥಾಪನೆ ನಿರ್ಧಾರವನ್ನು ಘೋಷಿಸಿದೆ.

ಗ್ರಾಮಾಭಿವೃದ್ಧಿಗೆ ಪ್ರಗತಿ ಪಥ ಕಲ್ಯಾಣ ಪಥ

ಗ್ರಾಮೀಣ ಜನರ ಜೀವನ ಸುಸ್ಥಿರಗೊಳಿಸುವ ಸಂಕಲ್ಪ ತೊಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಕಲ್ಯಾಣ ಪಥ’ ಯೋಜನೆಯಡಿ ₹1,000 ಕೋಟಿ ಮೊತ್ತದ 286 ರಸ್ತೆ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸುವುದಾಗಿ ಘೋಷಿಸಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 38 ವಿಧಾನಸಭಾ ಕ್ಷೇತ್ರಗಳಲ್ಲಿ ‘ಕಲ್ಯಾಣ ಪಥ’ ಜಾರಿಗೊಳ್ಳಲಿದೆ.

ಇದರ ಜೊತೆಗೆ, ರಾಜ್ಯದಾದ್ಯಂತ ಗ್ರಾಮೀಣ ಭಾಗದಲ್ಲಿ ರಸ್ತೆ ಸಂಪರ್ಕ ಜಾಲವನ್ನು ಬಲಪಡಿಸಲು ₹5200 ಕೋಟಿ ಮೊತ್ತದ ‘ಪ್ರಗತಿ ಪಥ’ ಯೋಜನೆ ಪ್ರಕಟಿಸಲಾಗಿದೆ.

‘ಜಲಜೀವನ್ ಮಿಷನ್’ ಯೋಜನೆಗೆ ₹6,050 ಕೋಟಿ ಅನುದಾನ ತೆಗೆದಿರಿಸಲಾಗಿದೆ. ಗ್ರಾಮೀಣ ಭಾಗದಲ್ಲಿ ನೀರು ಸರಬರಾಜು, ಮೂಲ ಸೌಕರ್ಯ ನಿರ್ವಹಣೆಗೆ ಭೌಗೋಳಿಕ ಮಾಹಿತಿ ವ್ಯವಸ್ಥೆ(ಜಿಐಎಸ್) ಆಧಾರಿತ ಮೊಬೈಲ್, ಜಾಲತಾಣ ತಂತ್ರಾಂಶ ಅಭಿವೃದ್ಧಿಪಡಿಸಲಾಗುವುದು ಎಂದೂ ಮುಖ್ಯಮಂತ್ರಿ ಪ್ರಕಟಿಸಿದ್ದಾರೆ. ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆಯಡಿ ಅಂತರ್ಜಲ ಹೆಚ್ಚಳ ಹಾಗೂ ರೈತರ ಜಮೀನುಗಳಲ್ಲಿ ಮಣ್ಣಿನ ಸಂರಕ್ಷಣೆಗೆ ಒತ್ತು ನೀಡುವ ‘ಕೃಷಿ ಕವಚ’ ಕಾರ್ಯಕ್ರಮ ರೂಪಿಸಿದೆ. ಇದರಡಿ 50,000 ಹೆಕ್ಟೇರ್ ಪ್ರದೇಶದಲ್ಲಿ ಬದು ನಿರ್ಮಾಣಕ್ಕೆ ಕ್ರಮಕೈಗೊಳ್ಳುತ್ತಿದೆ. ತ್ಯಾಜ್ಯ ನೀರು ನಿರ್ವಹಣೆಗೆ 500 ಗ್ರಾಮಗಳಲ್ಲಿ ಬೂದು ನೀರು ನಿರ್ವಹಣಾ ಘಟಕಗಳನ್ನು ನಿರ್ಮಿಸುತ್ತಿದೆ.

ಗ್ರಾಮ ಪಂಚಾಯಿತಿಗಳಿಗೆ ವಿದ್ಯುತ್ ಬಿಲ್‌ನ ಹೊರೆ ತಗ್ಗಿಸಲು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸೋಲಾರ್ ಮೈಕ್ರೋ-ಗ್ರಿಡ್‌ಗಳನ್ನು ಸ್ಥಾಪಿಸಲಾಗುತ್ತದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿರುವ ‘ಅರಿವು’ ಕೇಂದ್ರಗಳಲ್ಲಿ ವಿಜ್ಞಾನ, ಕಲೆ, ಸಾಹಿತ್ಯ ಮತ್ತು ವೃತ್ತಿ ಮಾರ್ಗದರ್ಶನ ಕುರಿತಾದ ‘ಚಿಗುರು’ ಕಾರ್ಯಕ್ರಮ, ಮಕ್ಕಳು ಮತ್ತು ಮಹಿಳೆಯರಿಗಾಗಿ ‘ಸಂವಿಧಾನ ಸಾಕ್ಷರತೆ’, ಮಹಿಳೆಯರಿಗಾಗಿ ‘ಡಿಜಿಟಲ್ ಮತ್ತು ಆರ್ಥಿಕ ಸಾಕ್ಷರತೆ’ ಹಾಗೂ ಮಹಿಳಾ ಚುನಾಯಿತ ಪ್ರತಿನಿಧಿಗಳಿಗೆ ‘ಅಧಿಕಾರ-ಸಾಕಾರ’ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಅಭಿವೃದ್ಧಿ ಎಲ್ಲಿ, ಏನು?

ಕೃಷಿ



- 10 ಕೃಷಿ ಹವಾಮಾನ ವಲಯಗಳಲ್ಲಿ ಸಮಗ್ರ ಕೃಷಿ ಪದ್ಧತಿಯ ಮಾದರಿ ಪ್ರಾತ್ಯಕ್ಷಿಕೆ ತಾಕುಗಳ ಅಭಿವೃದ್ಧಿ
- 5000 ಕಿರು ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆ.
- ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸಸ್ಯ ಫೀನೋಟೈಪಿಂಗ್ ಸೌಲಭ್ಯ.
- ವಿಜಯಪುರದ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಕೃಷಿ ಸಂಶೋಧನಾ ಕೇಂದ್ರ ಸ್ಥಾಪನೆ.

ಪಶುಸಂಗೋಪನೆ

- ಅಕಾಲಿಕ ಸಾವು ಸಂದರ್ಭದಲ್ಲಿ ಪರಿಹಾರ ಮೊತ್ತ ಹಸು, ಎಮ್ಮೆ, ಎತ್ತುಗಳಿಗೆ ₹15 ಸಾವಿರ, ಕುರಿ, ಮೇಕೆಗಳಿಗೆ ₹7500, ಕುರಿ, ಮೇಕೆ ಮರಿಗಳಿಗೆ ₹5 ಸಾವಿರಕ್ಕೆ ಹೆಚ್ಚಳ.
- ರಾಜ್ಯದಲ್ಲಿ 50 ನೂತನ ಪಶು ಚಿಕಿತ್ಸಾಲಯಗಳ ಪ್ರಾರಂಭಕ್ಕೆ ಕ್ರಮ.
- 100 ಪಶು ವೈದ್ಯಕೀಯ ಸಂಸ್ಥೆಗಳ ನೂತನ ಕಟ್ಟಡಗಳ ನಿರ್ಮಾಣ

ತೋಟಗಾರಿಕೆ

- ₹95 ಕೋಟಿ ವೆಚ್ಚದಲ್ಲಿ ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆ-2 ಜಾರಿ.
- ಭೌಗೋಳಿಕ ಗುರುತಿಸುವಿಕೆ(ಜಿಐ) ಟ್ಯಾಗ್ ಹೊಂದಿದ ಹಾಗೂ ದೇಸಿ ತೋಟಗಾರಿಕಾ ಬೆಳೆಗಳ ಸಂರಕ್ಷಣೆಗೆ ಬೀಜ ಬ್ಯಾಂಕ್ ಸ್ಥಾಪನೆ.

ರೇಷ್ಮೆ

- ಮಧ್ಯಮ ವರ್ಗದ ರೇಷ್ಮೆ ನೂಲು ಬಿಚ್ಚಾಣಿಕೆ ದಾರರಿಗೆ 120 ಕೊನೆಗಳ ಸ್ವಯಂಚಾಲಿತ ರೀಲಿಂಗ್ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ
- ರಾಮನಗರ, ಶಿಡ್ಲಘಟ್ಟ ಹೈ-ಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆ ಅಭಿವೃದ್ಧಿಗೆ ₹250 ಕೋಟಿ
- ಬೆಳೆಗಳ ಕುರಿತು ನಿಖರ ತೀರ್ಮಾನಕ್ಕಾಗಿ ಡಿಜಿಟಲ್ ಕೃಷಿ ಸೇವೆಗಳ ಕೇಂದ್ರ ಸ್ಥಾಪನೆ



ಸಾಲ ಕಡಿಮೆ ಮಾಡುವ ಅಂದಾಜು

ಪ್ರಣಾಳಿಕೆಯಲ್ಲಿ ಘೋಷಿಸಿದ್ದಂತೆ ಕಾಂಗ್ರೆಸ್ ಪಕ್ಷವು ಕಳೆದ ವರ್ಷವೇ ಗ್ಯಾರಂಟಿಗಳನ್ನು ಜಾರಿ ಮಾಡಿದೆ. ‘ಗ್ಯಾರಂಟಿಗಳ ಜಾರಿಯಿಂದಾಗಿ ಸಾಲದ ಹೊರೆಯು ಹೆಚ್ಚಾಗಲಿದೆ. ಇದರಿಂದ ಸಾರ್ವಜನಿಕರಿಗೆ ಹೊರೆಯಾಗಲಿದೆ’ ಎಂಬುದಾಗಿ ವಿರೋಧ ಪಕ್ಷಗಳು ರಾಜ್ಯ ಸರ್ಕಾರದ ವಿರುದ್ಧ ಪದೇ ಪದೇ ಆರೋಪ ಮಾಡುತ್ತಲೇ ಇದ್ದವು. 2024–25ನೇ ಬಜೆಟ್‌ನಲ್ಲಿ ಪ್ರತಿ ಒಂದು ರೂಪಾಯಿಯಲ್ಲಿ 28 ಪೈಸೆಯನ್ನು ಸಾಲದ ಮೂಲಕ ಸಂಗ್ರಹಿಸಲಾಗಿತ್ತು. ಆದರೆ, ಈ ಬಾರಿಯ ಬಜೆಟ್‌ನಲ್ಲಿ ಸಾಲ ಹೊರೆಯನ್ನು ಕಡಿಮೆ ಮಾಡಿಕೊಳ್ಳುವ ಗುರಿಯನ್ನು ರಾಜ್ಯ ಸರ್ಕಾರ ಹಾಕಿಕೊಂಡಿದೆ. ಈ ಬಾರಿ ಪ್ರತಿ ಒಂದು ರೂಪಾಯಿಯಲ್ಲಿ 27 ಪೈಸೆಯನ್ನು ಸಾಲದ ರೂಪದಲ್ಲಿ ಪಡೆದುಕೊಳ್ಳಲು ನಿರ್ಧರಿಸಿದೆ.

ಪ್ರತಿಕ್ರಿಯೆಗಳು



ಅಭಿವೃದ್ಧಿಗೆ ಪೂರಕ ಬಜೆಟ್

ಇದು ಪರಿಣತ ಬಜೆಟ್. ಅಭಿವೃದ್ಧಿಗೆ ಪೂರಕವಾಗಿದೆ. ಕೃಷಿ, ಶಿಕ್ಷಣ ಕ್ಷೇತ್ರಕ್ಕೆ ಇನ್ನೂ ಹೆಚ್ಚಿನ ಅನುದಾನ ಮೀಸಲಿಡಬೇಕಿತ್ತು. ದಾವಣಗೆರೆ ಜಿಲ್ಲೆಗೆ ಯೋಜನೆಗಳ ನಿರೀಕ್ಷೆ ಇತ್ತು, ಆಗಿಲ್ಲ

ಉದಯಕುಮಾರ್ ನಾವಲಗಿ, ದಾವಣಗೆರೆ

ವ್ಯಾಪಾರಸ್ಥರಿಗೆ ಅನ್ಯಾಯ

ಬೀದಿ ಬದಿ ವ್ಯಾಪಾರಿಗಳಿಗಾಗಿ ಯಾವುದೇ ಯೋಜನೆ ಘೋಷಿಸಿಲ್ಲ. ಕನಿಷ್ಠ ತಳ್ಳುವ ವಾಹನ ವಿತರಿಸಿದ್ದರೆ ಅನುಕೂಲವಾಗುತ್ತಿತ್ತು. ವ್ಯಾಪಾರಸ್ಥರಿಗೆ ಬಹಳ ಅನ್ಯಾಯವಾಗಿದೆ

ಡಿ.ಎಸ್.ರಾಜಶೇಖರ್, ಬೀದಿ ಬದಿ ವ್ಯಾಪಾರಿ, ತುಮಕೂರು

ಸಮಾಧಾನ ತಂದಿದೆ

ಮಲೆನಾಡು ಭಾಗದ ಅಡಿಕೆಗೆ ತಗುಲಿರುವ ರೋಗ ನಿಯಂತ್ರಿಸಲು ₹62 ಕೋಟಿ ಮೀಸಲಿಟ್ಟಿರುವುದು, ತರೀಕೆರೆ ಏತ ನೀರಾವರಿ ಯೋಜನೆಯಡಿ 79 ಕೆರೆ ತುಂಬಿಸುವ ನಿರ್ಧಾರ ಸಮಾಧಾನಕರ. ಪ್ರವಾಸೋದ್ಯಮಕ್ಕೆ ಆದ್ಯತೆ ಸಿಗಬೇಕಿತ್ತು

ಶರಣು, ಅಡಿಕೆ ಬೆಳೆಗಾರ, ಚಿಕ್ಕಮಗಳೂರು

ಮಹಿಳೆಯರಿಗೆ ಆದ್ಯತೆ

ಮಹಿಳೆಯರಿಗೆ ಆದ್ಯತೆ ಸಿಕ್ಕಿದೆ. ಶಿಶು, ತಾಯಂದಿರ ಮರಣಪ್ರಮಾಣ ಶೂನ್ಯಕ್ಕೆ ಇಳಿಸುವುದು, ಆಶಾ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಳ, ಬಾಣಂತಿಯರಿಗೆ ಆರೋಗ್ಯಕ್ಕೆ ಕಿಟ್ ವಿತರಣೆ,ಧನಸಹಾಯ ಘೋಷಿಸಿರುವುದು ಸ್ವಾಗತಾರ್ಹ

ಸುಮಾ ಎಸ್. ಚೋಟಗಲ್, ಗದಗ ಜಿಲ್ಲೆ

ತಲಾ ಆದಾಯ: ರಾಜ್ಯದ್ದೇ ಮೇಲ್ಪಂಕ್ತಿ



ಈ ಹಿಂದಿನ ನಾಲ್ಕು ಆರ್ಥಿಕ ವರ್ಷಗಳಲ್ಲಿ ದೇಶದ ತಲಾದಾಯಕ್ಕಿಂತ ರಾಜ್ಯದ ತಲಾದಾಯ ತುಸು ಹೆಚ್ಚೇ ಇದೆ. ಈ ಮೇಲ್ಪಂಕ್ತಿಯನ್ನು 2024–25ನೇ ಸಾಲಿನಲ್ಲೂ ಕರ್ನಾಟಕವು ಕಾಯ್ದುಕೊಂಡಿದೆ ಎನ್ನುತ್ತವೆ ಆರ್ಥಿಕ ಸಮೀಕ್ಷೆಯ ದತ್ತಾಂಶಗಳು

₹5,736 ಕೋಟಿ
ಕೆಶಿಪ್–4 ಯೋಜನೆ ಅಡಿಯಲ್ಲಿ ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೆರವಿನೊಂದಿಗೆ 875 ಕಿ.ಮೀ. ಉದ್ದದ ರಸ್ತೆಗಳ ಅಭಿವೃದ್ಧಿಗೆ ಅನುದಾನ

₹4,848 ಕೋಟಿ
1,850 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ, 570 ಕಿ.ಮೀ. ಉದ್ದದ ಜಿಲ್ಲಾ ರಸ್ತೆಗಳ ಅಭಿವೃದ್ಧಿಗೆ ಅನುದಾನ

₹1,000 ಕೋಟಿ
ರಾಜ್ಯದಲ್ಲಿ ಶಿಥಿಲಾವಸ್ಥೆಯಲ್ಲಿರುವ 39 ಸೇತುವೆಗಳ ಪುನರ್ ನಿರ್ಮಾಣಕ್ಕೆ ಅನುದಾನ

‘ಗೃಹ ಜ್ಯೋತಿ’ಗೆ ಬಲ, ನವೀಕೃತ ಇಂಧನಕ್ಕೂ ಶಕ್ತಿ

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ‘ಗೃಹ ಜ್ಯೋತಿ’ ಯೋಜನೆಗೆ ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ₹10,100 ಕೋಟಿ ಅನುದಾನ ಒದಗಿಸಲಾಗಿದೆ.

ರಾಜ್ಯದ ಇಂಧನ ಸಾಮರ್ಥ್ಯವನ್ನು 32 ಗಿಗಾವಾಟ್‌ನಿಂದ 60 ಗಿ.ವಾ.ಗೆ ಹೆಚ್ಚಿಸುವ ಗುರಿ ಹೊಂದಿರುವ ಸರ್ಕಾರ ಈ ಸಂಬಂಧ 800 ಮೆಗಾವಾಟ್ ಸಾಮರ್ಥ್ಯದ ಗೋದ್ನಾ ಶಾಖೋತ್ಪನ್ನ ವಿದ್ಯುತ್ ಸ್ಥಾವರವನ್ನು ಟಿಬಿಸಿಬಿ(Tariff based competitive bidding) ಮಾದರಿಯಲ್ಲಿ ಕಾರ್ಯಗತಗೊಳಿಸಲು ನಿರ್ಧರಿಸಿದೆ.

2,000 ಮೆಗಾವಾಟ್ ಸಾಮರ್ಥ್ಯದ ಶರಾವತಿ ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಘಟಕದ ಅನುಷ್ಠಾನಕ್ಕಾಗಿ ವನ್ಯಜೀವಿ ಮತ್ತು ಅರಣ್ಯ ಇಲಾಖೆಯ ಅನುಮತಿ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

ನವೀಕರಿಸಬಹುದಾದ ಮೂಲಗಳಿಂದ ಉತ್ಪಾದನೆಯಾಗುವ ಇಂಧನದ ಶೇಖರಣೆಗಾಗಿ ಕೆಪಿಟಿಸಿಎಲ್ ಮೂಲಕ ಏಳು ಉಪಕೇಂದ್ರಗಳಲ್ಲಿ 1,000 ಮೆಗಾವಾಟ್ ಅವರ್ (MWhr) ಬ್ಯಾಟರಿ ಶಕ್ತಿ ಶೇಖರಣಾ ವ್ಯವಸ್ಥೆಯನ್ನು ₹1,846 ಕೋಟಿ ಅಂದಾಜು ವೆಚ್ಚದಲ್ಲಿ ಸಾರ್ವಜನಿಕ – ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಯಲ್ಲಿ ಸ್ಥಾಪಿಸಲಾಗುತ್ತಿದೆ.

ಕೃಷಿ ಪಂಪ್‌ಸೆಟ್‌ಗಳಿಗೆ ಫೀಡರ್ ಸೌರೀಕರಣ ಕೈಗೊಳ್ಳುವ ಕುಸುಮ್ ‘ಸಿ’ ಯೋಜನೆಯಡಿ ಎರಡನೇ ಹಂತದಲ್ಲಿ 1,192 ಮೆ.ವಾ ಸಾಮರ್ಥ್ಯದ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸರಣ ಜಾಲದ ಬಲವರ್ಧನೆಗಾಗಿ ಪ್ರಸಕ್ತ ಸಾಲಿನಲ್ಲಿ ₹ 8,833 ಕೋಟಿ ವೆಚ್ಚದಲ್ಲಿ 100 ಹೊಸ ಉಪಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.

ಸಮಗ್ರ ಅಭಿವೃದ್ಧಿಗೆ ಗಮನ



ಬಜೆಟ್‌ನಲ್ಲಿ ಉಲ್ಲೇಖಿಸಿದ ಕವಿತೆ

ಇರುವೆಲ್ಲವನು ಎಲ್ಲ ಜನಕೆ
ತೆರವಾಗಿಸುವ
ಸಮಬಗೆಯ ಸಮಸುಖದ
ಸಮದುಃಖದ
ಸಾಮರಸ್ಯದ ಸಾಮಗಾನ
ಲಹರಿಯ ಮೇಲೆ
ತೇಲಿ ಬರಲಿದೆ ನೋಡು, ನಮ್ಮ
ನಾಡು

– ಗೋಪಾಲಕೃಷ್ಣ ಅಡಿಗ

• ಜಯಸಿಂಹ ಆರ್.

ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಯಾವುದೇ ಆರ್ಥಿಕತೆಯ ಪ್ರಧಾನ ಚಾಲಕ ಶಕ್ತಿಗಳು. ಈ ಕ್ಷೇತ್ರಗಳಿಗೆ ಏನೆಲ್ಲಾ ಸಿಗುತ್ತದೆ ಎಂದು ಪ್ರತಿ ಬಜೆಟ್‌ನಲ್ಲೂ ಉದ್ಯಮಿಗಳು, ಉದ್ಯೋಗಾಂಕ್ಷಿಗಳು ಕಾತರದಿಂದ ನೋಡುತ್ತಾರೆ. ಅವರ ಕಾತರವನ್ನು ತೃಪ್ತಿಪಡಿಸುವಂತಹ ಜನಪ್ರಿಯ ಘೋಷಣೆಗಳು ಬಜೆಟ್‌ನಲ್ಲಿ ಇಲ್ಲ. ಆದರೆ, ಈ ಎರಡೂ ಕ್ಷೇತ್ರಗಳಲ್ಲಿ ಸಮತೋಲಿತ ಮತ್ತು ಸಮಗ್ರ ಬೆಳವಣಿಗೆಗೆ ಅನುಕೂಲವಾಗುವಂತಹ ಕ್ರಮಗಳತ್ತ ಬಜೆಟ್‌ನಲ್ಲಿ ಸಿದ್ದರಾಮಯ್ಯ ಗಮನ ಹರಿಸಿದ್ದಾರೆ.

ಕೈಗಾರಿಕಾ ಕ್ಷೇತ್ರಕ್ಕೆ ಗಮನ ಸೆಳೆಯುವಂತಹ ಘೋಷಣೆಗಳು ಇಲ್ಲ. ಬದಲಿಗೆ ಈಗಾಗಲೇ ಘೋಷಣೆಯಾಗಿರುವ ಹೂಡಿಕೆಗಳನ್ನು ಅನುಷ್ಠಾನಕ್ಕೆ ತರುವ ಕ್ರಮದತ್ತ ಗಮನ ನೀಡಲಾಗಿದೆ. ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ನೀಡಿರುವಷ್ಟೇ ಒತ್ತನ್ನು ಗುಡಿ ಮತ್ತು ಸಣ್ಣ ಕೈಗಾರಿಕೆಗಳಿಗೂ ನೀಡಲಾಗಿದೆ. ಐಫೋನ್ ತಯಾರಿಕೆಯ ಸಾಮರ್ಥ್ಯದ ಫಾಕ್ಸ್‌ಕಾನ್‌ಗೆ ನೆರವು ನೀಡುತ್ತಿರುವಂತೆಯೇ, ಬಿದರಿ ಕಲೆ ಮತ್ತು ಶ್ರೀಗಂಧದ ಕುಸರಿಕಲೆಗಳ ಗುಡಿ ಕೈಗಾರಿಕೆಗಳಿಗೂ ಅನುದಾನ ತೆಗೆದಿರಿಸಲಾಗಿದೆ.

ಇವೆಲ್ಲವನ್ನು ಸಾಧ್ಯವಾಗಿಸಲು ಅಗತ್ಯವಿರುವ ಹಣಕಾಸನ್ನು ಸಣ್ಣ ಮೊತ್ತದ ಅನುದಾನಗಳು, ಸರ್ಕಾರಿ–ಖಾಸಗಿ ಸಹಭಾಗಿತ್ವ, ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಗಳ ಮೂಲಕ ಒದಗಿಸಿಕೊಳ್ಳುವ ಯತ್ನ ಮಾಡಲಾಗಿದೆ.

ಬೆಂಗಳೂರಿನಿಂದ ಹೊರಗೆ, ಕ್ಲಸ್ಟರ್ ಮಾದರಿಯಲ್ಲಿ ಕೈಗಾರಿಕಾ ಕ್ಷೇತ್ರಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಕೋಲಾರದ ನರಸಾಪುರ ಕೈಗಾರಿಕಾ ಪ್ರದೇಶ ಮತ್ತು ತುಮಕೂರಿನ ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಮಹಿಳಾ ಕಾರ್ಮಿಕರಿಗಾಗಿ ವಸತಿಗೃಹ ನಿರ್ಮಾಣ, ಚೆನ್ನೈ–ಬೆಂಗಳೂರು ಕೈಗಾರಿಕಾ ಕಾರಿಡಾರ್‌ನ ಭಾಗವಾಗಿ ತಮಕೂರಿನಲ್ಲಿ ಕೈಗಾರಿಕಾ ಕಾರಿಡಾರ್, ವಿಜಯಪುರದಲ್ಲಿ ‘ಪ್ಲಗ್ ಅಂಡ್ ಪ್ಲೇ’ ಮಾದರಿಯ ಕೈಗಾರಿಕಾ ಪ್ರದೇಶ ಅಭಿವೃದ್ಧಿ, ವಿವಿಧ ಜಿಲ್ಲೆ–ತಾಲ್ಲೂಕುಗಳಲ್ಲಿ ಎಂಎಸ್‌ಎಂಇ ಕ್ಲಸ್ಟರ್‌ಗಳ ಸ್ಥಾಪನೆ ಘೋಷಿಸಲಾಗಿದೆ. ಇದರಿಂದ ರಾಜ್ಯದ ಇತರ ಭಾಗಗಳಲ್ಲೂ ಕೈಗಾರಿಕಾ ಕ್ಷೇತ್ರ ಅಭಿವೃದ್ಧಿ ನಿರೀಕ್ಷಿಸಬಹುದು.

ಮೂಲಸೌಕರ್ಯ ಅಭಿವೃದ್ಧಿಯಲ್ಲೂ ದೊಡ್ಡ–ದೊಡ್ಡ ಯೋಜನೆಗಳನ್ನು ಘೋಷಿಸಿಲ್ಲ. ರಾಜ್ಯದ ಮೂರು ದಿಕ್ಕುಗಳಲ್ಲಿ ಇರುವ ವಿಜಯಪುರ, ರಾಯಚೂರು ಮತ್ತು ಮೈಸೂರಿನಲ್ಲಿ ವಿಮಾನ ನಿಲ್ದಾಣಗಳ ಸ್ಥಾಪನೆ ಹಾಗೂ ವಿಸ್ತರಣೆಗೆ ಅನುದಾನ ತೆಗೆದಿರಿಸಲಾಗಿದೆ. ಈ ವಿಮಾನ ನಿಲ್ದಾಣಗಳನ್ನೂ ಒಳಗೊಂಡು ಕೈಗಾರಿಕಾ ಕ್ಲಸ್ಟರ್‌ಗಳ ನಡುವೆ ಸುಗಮ ಸಂಪರ್ಕಕ್ಕೆ ಅನುಕೂಲವಾಗುವಂತಹ ಸಣ್ಣಸಣ್ಣ ರಸ್ತೆ, ರಾಜ್ಯ ಹೆದ್ದಾರಿ ಯೋಜನೆಗಳನ್ನು ಘೋಷಿಸಲಾಗಿದೆ.

ರಾಜ್ಯ ಹೆದ್ದಾರಿ, ರಸ್ತೆ, ಸೇತುವೆಗಳ ನಿರ್ಮಾಣ–ನವೀಕರಣಕ್ಕೆ ಒಟ್ಟು ₹5,850 ಕೋಟಿಯಷ್ಟು ದೊಡ್ಡ ಮೊತ್ತದ ಅನುದಾನವನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಹೀಗೆ ಕೈಗಾರಿಕೆ ಮತ್ತು ಮೂಲಸೌಕರ್ಯವನ್ನು ಪರಸ್ಪರ ಪೂರಕವಾಗಿ ಅಭಿವೃದ್ಧಿಪಡಿಸುವಂತಹ ಜಾಣ್ಮೆಯ ನಡೆ ಇದಾಗಿದೆ. ಅತಿವೃಷ್ಟಿಯಿಂದ ತೀವ್ರ ಹಾನಿಗೆ ಗುರಿಯಾಗಿದ್ದ ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ಈ ಮೂಲಕ ತಕ್ಷಣದ ಅಗತ್ಯ ಮತ್ತು ಅನಿವಾರ್ಯಗಳಿಗೂ ಗಮನ ನೀಡಲಾಗಿದೆ.

ಕೈಗಾರಿಕೆ ಮತ್ತು ಮೂಲಸೌಕರ್ಯ ಯೋಜನೆಗಳಿಂದ ಹೊರಗುಳಿದ ಪ್ರದೇಶಗಳಿಗೆ ಮಾಹಿತಿ ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ‘ಅಭಿವೃದ್ಧಿ ನ್ಯಾಯ’ ಒದಗಿಸಲಾಗಿದೆ. ರಾಜ್ಯದ ಹಿಂದುಳಿದ ಮತ್ತು ಮಹತ್ವಾಕಾಂಕ್ಷಿ ಜಿಲ್ಲೆಗಳಲ್ಲಿ ಜಾಗತಿಕ ತಂತ್ರಜ್ಞಾನ ಕೇಂದ್ರ, ಡೀಪ್ ಟೆಕ್, ನವೋದ್ಯಮ ಪರಿಸರ ವ್ಯವಸ್ಥೆ, ಕ್ಲೌಡ್ ಕಂಪ್ಯೂಟಿಂಗ್, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅನ್ವಯಿಕ ಕೇಂದ್ರ, ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು ಸ್ಥಾಪನೆಗೆ ಸಾವಿರ ಕೋಟಿಗೂ ಹೆಚ್ಚು ಅನುದಾನ ಘೋಷಿಸಲಾಗಿದೆ. ಒಟ್ಟಾರೆ ಕೈಗಾರಿಕೆ, ತಂತ್ರಜ್ಞಾನ, ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲ ಭಾಗಗಳಿಗೂ ಹಂಚಲಾಗಿದೆ. ಈ ಮೂಲಕ ಸಿದ್ದರಾಮಯ್ಯ ಅವರು ತಮ್ಮ ಬಜೆಟ್‌ನಲ್ಲಿ ಸಮಗ್ರ ಅಭಿವೃದ್ಧಿಯ ಮಾದರಿಯನ್ನು ತೋರಿಸಿಕೊಟ್ಟಿದ್ದಾರೆ.

ಅಭಿವೃದ್ಧಿಗೆ ಅನುದಾನ

2024–25ನೇ ಸಾಲಿನ ಬಜೆಟ್‌ನಲ್ಲಿ ಇಂಧನ ಕ್ಷೇತ್ರಕ್ಕೆ (ಶೇ 6), ನಗರಾಭಿವೃದ್ಧಿ ಮತ್ತು ವಸತಿಗೆ (ಶೇ 5) ಮತ್ತು ಲೋಕೋಪಯೋಗಿಗೆ (ಶೇ 3) ನೀಡಿದ್ದಷ್ಟೇ ಪ್ರಮಾಣದ ಅನುದಾನವನ್ನು 2025–26ನೇ ಸಾಲಿನಲ್ಲೂ ಮೀಸಲಿರಿಸಲಾಗಿದೆ. ಬಜೆಟ್ ಗಾತ್ರ ಹೆಚ್ಚಾದ ಪ್ರಮಾಣದಷ್ಟೇ ಈ ಕ್ಷೇತ್ರಗಳಿಗೆ ದೊರೆತ ಅನುದಾನವೂ ಏರಿಕೆಯಾಗಿದೆ.



• ರಾಜ್ಯ ಜಲಸಾರಿಗೆ ಕ್ಷೇತ್ರದ ಅಭಿವೃದ್ಧಿಗಾಗಿ ಜಲಸಾರಿಗೆ ನೀತಿಗೆ ಮಂಜೂರಾತಿ, ಮಂಗಳೂರಿನಲ್ಲಿ ಅಂತರರಾಷ್ಟ್ರೀಯ ಕ್ರೂಸ್, ವಾಟರ್ ಕ್ರೂಸ್, ಕೋಸ್ಟಲ್ ಬರ್ತ್ ಯೋಜನೆ ಅನುಷ್ಠಾನ

• ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಕಿ ಬಂದರು, ಹೊನ್ನಾವರದಲ್ಲಿ ಹಡಗು ನಿರ್ಮಾಣ ಕ್ಷೇತ್ರ ಮತ್ತು ನದಿ ಕ್ರೂಸ್ ಪ್ರವಾಸೋದ್ಯಮಕ್ಕೆ ಯೋಜನೆ ಜಾರಿ

• ಎಸ್‌ಟಿಪಿ ಘಟಕಗಳ ತ್ಯಾಜ್ಯ ಬಳಸಿಕೊಂಡು ಬಯೋಗ್ಯಾಸ್ ಉತ್ಪಾದನೆ ಮಾಡಲು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಯೋಜನೆ ಜಾರಿ

ಕೈಗಾರಿಕೆಗಳಿಗೆ ಸಿಕ್ಕಿದ್ದೇನು...

₹25 ಕೋಟಿ
ಬೆಂಗಳೂರು ವಲಯದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡ ಇ.ವಿ ಕ್ಲಸ್ಟರ್ ನಿರ್ಮಾಣಕ್ಕೆ ಅನುದಾನ

₹6,970 ಕೋಟಿ
ದೇವನಹಳ್ಳಿಯಲ್ಲಿ ಫಾಕ್ಸ್‌ಕಾನ್ ಸಂಸ್ಥೆಯ ಮೊಬೈಲ್ ಫೋನ್‌ಗಳ ಉತ್ಪಾದನಾ ಘಟಕಕ್ಕೆ ಇಎಸ್‌ಡಿಎಂ ನೀತಿಯಡಿ ಪ್ರೋತ್ಸಾಹಧನ. 50 ಸಾವಿರ ಮಂದಿಗೆ ಉದ್ಯೋಗ ಲಭಿಸುವ ನಿರೀಕ್ಷೆಯಿದೆ

₹185 ಕೋಟಿ
ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ (ಎಂಎಸ್‌ಎಂಇ) ಘಟಕಗಳಿಗೆ ನೆರವು

₹1 ಕೋಟಿ
ಬಿದರಿ ಕಲಾಕೃತಿಗಳು, ಶ್ರೀಗಂಧ ಕಲಾಕೃತಿಗಳ ಕಚ್ಚಾ ವಸ್ತುಗಳನ್ನು ರಿಯಾಯಿತಿ ದರದಲ್ಲಿ ನೀಡಲು ಅನುದಾನ

₹20 ಕೋಟಿ
ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ನೆರವು

₹70 ಕೋಟಿ
ಕಬ್ಬು ಕಟಾವು ಯಂತ್ರ ಸ್ಥಾಪಿಸಲು ನೆರವು

ಹೂಡಿಕೆಗೆ ಒತ್ತು, ಉದ್ಯೋಗ ಸೃಷ್ಟಿಸುವ ಕಸರತ್ತು

- ಹೊಸ ಕೈಗಾರಿಕಾ ನೀತಿಯಿಂದ ₹7.50 ಲಕ್ಷ ಕೋಟಿ ಬಂಡವಾಳ ಹೂಡಿಕೆ. 20 ಲಕ್ಷ ಹೊಸ ಉದ್ಯೋಗ ಸೃಷ್ಟಿ
- ಕೋಲಾರದ ಶಿವಾರಪಟ್ಟಣದ ಕೈಗಾರಿಕಾ ಪ್ರದೇಶದಲ್ಲಿ ಪಿಪಿಪಿ ಮಾದರಿಯಲ್ಲಿ ಸುಸ್ಥಿರ ಕೈಗಾರಿಕಾ ಪಾರ್ಕ್ ನಿರ್ಮಾಣ
- ರಾಜ್ಯದಲ್ಲಿ ಸುಸ್ಥಿರ ಅಭಿವೃದ್ಧಿ, ಪ್ರಾದೇಶಿಕ ಅಸಮತೋಲನ ನಿವಾರಿಸಲು ಪ್ರತ್ಯೇಕ ಎಂಎಸ್‌ಎಂಇ ನೀತಿ ಜಾರಿ
- ನೇಕಾರಿಕೆ ಉದ್ದಿಮೆ ಸ್ಥಾಪಿಸಲು ನೇಕಾರರ ಪ್ಯಾಕೇಜ್ –2.0 ಜಾರಿ
- ಜವಳಿ ಹಾಗೂ ಸಿದ್ಧ ಉಡುಪು ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಆಕರ್ಷಣೆ ಹಾಗೂ ಉದ್ಯೋಗ ಸೃಷ್ಟಿಸಲು ನೂತನ ಜವಳಿ ನೀತಿ ಜಾರಿ
- ಕಾರ್ಕಳ, ರಾಣೆಬೆನ್ನೂರು, ರಾಯಚೂರು, ಕಡೂರು ಹಾಗೂ ಚಿಕ್ಕಮಗಳೂರಿನಲ್ಲಿ ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ನಿರ್ಮಾಣ. ಕಲಬುರಗಿಯಲ್ಲಿ ಕೇಂದ್ರ ಸರ್ಕಾರದ ನೆರವಿನಲ್ಲಿ ‘ಪಿ.ಎಂ ಮಿತ್ರ ಜವಳಿ ಪಾರ್ಕ್’ ಸ್ಥಾಪನೆ

ಸುಗಮ ಆಡಳಿತಕ್ಕೆ ‘ಇ–ಆಫೀಸ್’ ಕಡ್ಡಾಯ



ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಮಹಾತ್ಮ ಗಾಂಧಿ ನಗರ ವಿಕಾಸ್ 2.0 ಯೋಜನೆಗೆ ಬಜೆಟ್‌ನಲ್ಲಿ ₹2 ಸಾವಿರ ಕೋಟಿ ಅನುದಾನ ಘೋಷಣೆ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಯುಐಡಿಎಫ್ ಅಡಿ ₹ 600 ಕೋಟಿ ಅನುದಾನ ಒದಗಿಸಲಾಗಿದೆ.

ನಗರೋತ್ಥಾನ 4ನೇ ಹಂತದ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು 2024-26ನೇ ಸಾಲಿಗೆ ₹500 ಕೋಟಿ ಒದಗಿಸಲಾಗುತ್ತದೆ. ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು, ಜಿಲ್ಲಾ ನಗರಾಭಿವೃದ್ಧಿ ಕೋಶಗಳು ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಸೆಂಟರ್ ಫಾರ್ ಇ-ಗವರ್ನೆನ್ಸ್ ಇಲಾಖೆಯ ಸಹಯೋಗದೊಂದಿಗೆ ಕಚೇರಿಯ ಸುಗಮ ಆಡಳಿತಕ್ಕೆ ‘ಇ-ಆಫೀಸ್’ ವ್ಯವಸ್ಥೆ ಕಡ್ಡಾಯಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ರಾಮನಗರ ಮತ್ತು ಉಳ್ಳಾಲಕ್ಕೆ ₹705 ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ನಿರ್ಧರಿಸಲಾಗಿದೆ.

ಅಮೃತ್-2 ಯೋಜನೆಯಡಿ 233 ಕುಡಿಯುವ ನೀರು ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರ ಉದ್ದೇಶಿಸಿದೆ. ಇದರೊಂದಿಗೆ ₹142 ಕೋಟಿ ವೆಚ್ಚದಲ್ಲಿ ಶಿಕಾರಿಪುರ, ಸಾಗರ, ಖಾನಾಪುರ, ಎಂ.ಕೆ ಹುಬ್ಬಳ್ಳಿ, ಕುಡಚಿ, ಬೈಲಹೊಂಗಲ, ಶಹಾಪುರ ಹಾಗೂ ಶ್ರೀರಂಗಪಟ್ಟಣಕ್ಕೆ ಒಳಚರಂಡಿ ಯೋಜನೆ ಜಾರಿಗೊಳಿಸಲಾಗುವುದು ಎಂದು ಘೋಷಿಸಲಾಗಿದೆ. ಬೆಂಗಳೂರು ನಗರದ ಮೂಲಸೌಲಭ್ಯಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಸರ್ಕಾರ ಆದ್ಯತೆ ನೀಡಿದ್ದು, ಈವರೆಗೂ ₹ 3 ಸಾವಿರ ಕೋಟಿ ನೀಡುತ್ತಿದ್ದ ಅನುದಾನವನ್ನು ಈ ಬಾರಿ ₹7 ಸಾವಿರ ಕೋಟಿಗೆ ಹೆಚ್ಚಿಸಿದೆ. ಅಭಿವೃದ್ಧಿ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಗೊಳಿಸಲು ಹೊಸದಾಗಿ ವಿಶೇಷ ಉದ್ದೇಶಿತ ಸಂಸ್ಥೆ ಸ್ಥಾಪಿಸಲು ನಿರ್ಧರಿಸಿದೆ.

ಬೆಂಗಳೂರು ಮಹಾನಗರ ಪಾಲಿಕೆ ಕೈಗೊಂಡಿರುವ ವಿವಿಧ ಸುಧಾರಣಾ ಕ್ರಮಗಳಿಂದ ಆಸ್ತಿ ತೆರಿಗೆ ಸಂಗ್ರಹ ಹೆಚ್ಚಿದೆ. ತಂತ್ರಜ್ಞಾನ ಬಳಸಿ ಆನ್‌ಲೈನ್ ಮೂಲಕ ಇ-ಖಾತಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ. ರಾಜಸ್ವ ಸಂಗ್ರಹ ಹೆಚ್ಚು ಮಾಡುವುದರೊಂದಿಗೆ ನಾಗರಿಕ ಸೇವೆಗಳನ್ನು ಸರಳವಾಗಿ ನೀಡಲಾಗುತ್ತಿದೆ. ಈ ಎಲ್ಲಾ ಸುಧಾರಣಾ ಕ್ರಮಗಳಿಂದ 2024–25ನೇ ಸಾಲಿನಲ್ಲಿ ಈವರೆಗೂ ₹4,556 ಕೋಟಿ ಸಂಗ್ರಹಿಸಲಾಗಿದೆ. ಪಾಲಿಕೆಯ ಜಾಹೀರಾತು ಉಪ–ವಿಧಿಗಳು 2025ರ ಅನುಷ್ಠಾನದಿಂದ ವರ್ಷಕ್ಕೆ ₹750 ಕೋಟಿ ಆದಾಯ ನಿರೀಕ್ಷಿಸಲಾಗಿದೆ.

₹1 ಲಕ್ಷ ಭರಿಸಲಿರುವ ಸರ್ಕಾರ

ಬಹುಮಹಡಿ ವಸತಿ ಯೋಜನೆ

ಮುಖ್ಯಮಂತ್ರಿಗಳ ಒಂದು ಲಕ್ಷ ಮನೆ ಯೋಜನೆಯ 12,153 ಫಲಾನುಭವಿಗಳ ವಂತಿಕೆಯ ಪಾಲಿನಲ್ಲಿ ₹1 ಲಕ್ಷವನ್ನು ರಾಜ್ಯ ಸರ್ಕಾರವೇ ಭರಿಸಲಿದೆ. ಇದಕ್ಕಾಗಿ ಮುಖ್ಯಮಂತ್ರಿ ಬಜೆಟ್‌ನಲ್ಲಿ ₹121 ಕೋಟಿ ಘೋಷಿಸಿದ್ದಾರೆ.

ಕರ್ನಾಟಕ ಗೃಹ ಮಂಡಳಿಯಿಂದ ಆನೇಕಲ್ ತಾಲ್ಲೂಕಿನ ಸೂರ್ಯ ನಗರದ 4ನೇ ಹಂತದ ಯೋಜನೆಯಡಿ 16,410 ನಿವೇಶನಗಳನ್ನು 2025–26ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗುವುದು. 50:50 ಅನುಪಾತದ ಪಾಲುದಾರಿಕೆಯಡಿ ಭೂ ಮಾಲೀಕರ ಪಾಲಿನ ನಿವೇಶನಗಳನ್ನು ನೀಡಿ, ಉಳಿದ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ರಾಜೀವ್ ಗಾಂಧಿ ವಸತಿ ಯೋಜನೆಯಡಿಯ ಆಶ್ರಯ ಮನೆಗಳ (ಎಎಚ್‌ಪಿ) ಫಲಾನುಭವಿಗಳಿಗೆ ಸಾಲದ ಮೇಲಿನ ಬಡ್ಡಿ ಹೊರೆ ಕಡಿಮೆ ಮಾಡಲು ಬಡ್ಡಿ ಸಹಾಯಧನ ಯೋಜನೆ ಜಾರಿಗೊಳಿಸಲಾಗುತ್ತದೆ.

ಅಲ್ಲದೇ, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ವತಿಯಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಫಲಾನುಭವಿಗಳ ವಂತಿಕೆಯನ್ನು ಒಂದು ಲಕ್ಷ ರೂಪಾಯಿಗೆ ಇಳಿಕೆ ಮಾಡಿದೆ. ₹5 ಲಕ್ಷವನ್ನು ಫಲಾನುಭವಿ ಪರವಾಗಿ ಸರ್ಕಾರವೇ ಭರಿಸುತ್ತಿದೆ. ಈಗಾಗಲೇ 86,651 ಮನೆಗಳು ಪೂರ್ಣಗೊಂಡಿವೆ. 2025–26ನೇ ಆರ್ಥಿಕ ವರ್ಷದಲ್ಲೂ ಇದನ್ನು ಮುಂದುವರಿಸಲಾಗುತ್ತದೆ. ಸರ್ಕಾರದ ಭೂಮಿಯನ್ನು ಬಳಸಿ ಖಾಸಗಿ ಸಹಭಾಗಿತ್ವದೊಂದಿಗೆ ವಸತಿ ಘಟಕಗಳನ್ನು ನಿರ್ಮಿಸಿ, ಆರ್ಥಿಕವಾಗಿ ದುರ್ಬಲ ವರ್ಗದ ಜನರಿಗೆ ಹಂಚಿಕೆ ಮಾಡಲು ಯೋಜನೆ ರೂಪಿಸಿರುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ.

ಎಲ್ಲರಿಗೂ ಇರಲಿ ತಂತ್ರಜ್ಞಾನ

ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿಯಲ್ಲಿ ರಾಜ್ಯದೆಲ್ಲೆಡೆಯ ಮಂದಿ ಭಾಗಿಯಾಗುವುದಕ್ಕೆ ಅವಕಾಶ ನೀಡುವ ಹಲವು ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಈ ಸಂಬಂಧ ಈಗಾಗಲೇ ಇದ್ದ ಕಾರ್ಯಕ್ರಮಗಳನ್ನೂ ಮುಂದುವರೆಸಿದ್ದು, ದೊಡ್ಡ ಮೊತ್ತದ ಅನುದಾನವನ್ನು ಒದಗಿಸಲಾಗಿದೆ.

₹200 ಕೋಟಿ
ಉದ್ಯಮಶೀಲತೆ ಉತ್ತೇಜಿಸಲು ಲೀಪ್ (ಎಲ್‌ಇಎಪಿ) ಯೋಜನೆ ಅಡಿಯಲ್ಲಿ 2025–26ಕ್ಕೆ ನೀಡಿರುವ ಅನುದಾನ
- ಐದು ಲಕ್ಷ ಉದ್ಯೋಗ ಸೃಷ್ಟಿ ಗುರಿ. ಮೈಸೂರು, ಮಂಗಳೂರು, ಉಡುಪಿ, ಹುಬ್ಬಳಿ–ಧಾರವಾಡ, ಬೆಳಗಾವಿ ಮತ್ತು ಕಲಬುರಗಿಯಲ್ಲಿ ನವೋದ್ಯಮ ಪರಿಸರ ವ್ಯವಸ್ಥೆ ಅಭಿವೃದ್ಧಿ

₹300 ಕೋಟಿ
ಡೀಪ್ ಟೆಕ್ ಅಭಿವೃದ್ಧಿಗಾಗಿ ತೆಗೆದಿರಿಸಿದ ‘ಫಂಡ್ ಆಫ್ ಫಂಡ್ಸ್’

₹100 ಕೋಟಿ
ಡೀಪ್ ಟೆಕ್ ಅಭಿವೃದ್ಧಿಗಾಗಿ ತೆಗೆದಿರಿಸಲಾದ ಕಾರ್ಪಸ್ ನಿಧಿ

- ಕೋಲಾರ, ರಾಮನಗರ, ಚಿತ್ರದುರ್ಗ, ವಿಜಯನಗರ ಜಿಲ್ಲೆಗಳಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪನೆಗೆ ಈ ಸಾಲಿನಲ್ಲಿ ₹9 ಕೋಟಿ ಮೀಸಲು

₹50 ಕೋಟಿ
ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅನ್ವಯಿಕ ಕೇಂದ್ರ (ಕ್ಯಾಟ್ಸ್) ಸ್ಥಾಪನೆಗೆ ಅನುದಾನ

₹220 ಕೋಟಿ
ಕರ್ನಾಟಕ ಜೈವಿಕ ತಂತ್ರಜ್ಞಾನ ನೀತಿ ಅಡಿ ಎಂಎಸ್‌ಎಂಇಗಳಲ್ಲಿ ಹೂಡಿಕೆಗೆ ಮೀಸಲಿರಿಸಿದ ಪ್ರೋತ್ಸಾಹಧನ

₹99 ಕೋಟಿ
ಸಂವೇದಕಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ ‘ಸೆನ್ಸರ್‌ಟೆಕ್ ಇನೋವೇಶನ್ ಹಬ್’ ಸ್ಥಾಪನೆಗೆ ನಿಧಿ

ಆರ್ಥಿಕ ಪರಿವರ್ತನೆಗೆ ಊರುಗೋಲು

ಉಮಾ ರೆಡ್ಡಿ

ರಾಜ್ಯವೊಂದರ ಪ್ರಗತಿಯು ಮೂಲಸೌಕರ್ಯದ ಅಭಿವೃದ್ಧಿ ಮೇಲೆ ಅವಲಂಬಿತವಾಗಿದೆ. ಸಾರಿಗೆ, ನಗರೀಕರಣ ಮತ್ತು ಕೈಗಾರಿಕೆಯು ಇದರಿಂದ ಹೊರತಲ್ಲ.

ಈ ಬಾರಿಯ ರಾಜ್ಯ ಬಜೆಟ್‌ನಲ್ಲಿ ಮೂಲಸೌಕರ್ಯ ವಿಸ್ತರಣೆ, ಕೈಗಾರಿಕಾ ಅಭಿವೃದ್ಧಿ, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆ ವಲಯ, ಕೌಶಲ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಲಾಗಿದೆ. ಕೈಗಾರಿಕಾ ನೀತಿ 4.0 ಪ್ರಕಟಿಸಲಾಗಿದೆ. ಇದು ಸುಸ್ಥಿರ ತಯಾರಿಕೆಯ ಜೊತೆಗೆ ತಂತ್ರಜ್ಞಾನ ಅಳವಡಿಕೆಗೆ ಸಹಕಾರಿಯಾಗಲಿದ್ದು, ರಾಜ್ಯದ ಆರ್ಥಿಕ ಪರಿವರ್ತನೆಗೆ ಊರುಗೋಲಾಗಿದೆ.

ರಾಜ್ಯದ ಬೆಳವಣಿಗೆಯಲ್ಲಿ ಕೈಗಾರಿಕಾ ವಲಯದ ಪಾತ್ರ ಹಿರಿದು. ಇದಕ್ಕೆ ಪೂರಕವಾಗಿ ಬಜೆಟ್‌ನಲ್ಲಿ 2024–29ರ ಕೈಗಾರಿಕಾ ನೀತಿ ಪ್ರಕಟಿಸಲಾಗಿದೆ. ಈ ನೀತಿಯು ಹೂಡಿಕೆಗೆ ಉತ್ತೇಜನ ನೀಡಲಿದೆ. ₹7.5 ಲಕ್ಷ ಕೋಟಿ ಬಂಡವಾಳ ಹೂಡಿಕೆ ನಿರೀಕ್ಷಿಸಲಾಗಿದೆ. ಜೊತೆಗೆ, ಹೊಸದಾಗಿ 20 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ. ಸರಕು ಸಾಗಣೆ, ದಾಸ್ತಾನು ಮತ್ತು ಸಿನಿಮಾ ವಲಯದ ಪ್ರಗತಿಗೂ ಈ ನೀತಿಯು ಸಹಕಾರಿಯಾಗಲಿದೆ.

15 ಲಕ್ಷ ಯುವಜನರಿಗೆ ಕೌಶಲ ತರಬೇತಿ ನೀಡಲು ನಿರ್ಧರಿಸಿರುವುದು ಉತ್ತಮ ತೀರ್ಮಾನ. ಎಐ, ರೊಬೊಟಿಕ್ಸ್ ಮತ್ತು ಆಟೊಮೇಷನ್‌ನಲ್ಲಿ ತರಬೇತಿ ಜೊತಗೆ ಜಿಟಿಟಿಸಿ ಕೇಂದ್ರಗಳ ಸ್ಥಾಪನೆ ನಿರ್ಧಾರ ಶ್ಲಾಘನೀಯ. ಮಹಿಳಾ ಕೇಂದ್ರಿತ ಕಾರ್ಯಕ್ರಮಗಳಿಗೆ ₹86,423 ಕೋಟಿ ಅನುದಾನ ಮೀಸಲಿಟ್ಟಿರುವುದು ಲಿಂಗ ಸಮಾನತೆಗೆ ನೆರವಾಗಲಿದೆ.

ಲೇಖಕರು: ಎಂ.ಡಿ, ಹೈಟೆಕ್ ಮ್ಯಾಗ್ನೆಟಿಕ್ಸ್ ಅ್ಯಂಡ್ ಎಲೆಕ್ಟ್ರಾನಿಕ್ಸ್ ಕಂಪನಿ, ಬೆಂಗಳೂರು

‘ಬ್ರ್ಯಾಂಡ್ ಬೆಂಗಳೂರಿಗೆ ವೇಗ ನಿರೀಕ್ಷೆ’



ಸವೀನ ತೀರ್ಥಹಳ್ಳಿ

ರಾಜ್ಯದ ಆರ್ಥಿಕತೆಗೆ ಹೆಚ್ಚು ಕೊಡುಗೆ ನೀಡುವ ಬೆಂಗಳೂರು ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ನಗರದ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಲ್ಲಿ ಪ್ರಾರಂಭವಾದ ಕಾಮಗಾರಿಗಳಿಗೆ ಇದರಿಂದ ವೇಗ ಸಿಗುವ ನಿರೀಕ್ಷೆ ಇದೆ. ಸುರಂಗ ಮಾರ್ಗದ ರಸ್ತೆಗೆ ಬಜೆಟ್‌ನಲ್ಲಿ ಸರ್ಕಾರ ಗ್ಯಾರಂಟಿ ನೀಡಿದೆ. ಇತರೆ ಮೂಲಸೌಕರ್ಯ ಯೋಜನೆಗಳಂತೆ ಈ ಯೋಜನೆ ಕುಂಟುತ್ತಾ ಸಾಗದೆ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು.

ಹೊರ ವರ್ತುಲ ರಸ್ತೆಯ ಮೇಲಿನ ಒತ್ತಡ ಕಡಿಮೆ ಮಾಡಲು ಪೆರಿಫೆರಲ್ ರಿಂಗ್ ರಸ್ತೆ ಯೋಜನೆ, ಈಗ ಬೆಂಗಳೂರು ಬಿಸಿನೆಸ್ ಕಾರಿಡಾರ್ ಎಂಬ ಹೆಸರಿನೊಂದಿಗೆ ಮತ್ತೆ ಮುನ್ನೆಲೆಗೆ ಬಂದಿದೆ. ಈ ಯೋಜನೆಗೆ ಸಂಬಂಧಿಸಿದಂತೆ 2007ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಕಾಲಮಿತಿಯೊಳಗೆ ಅನುಷ್ಠಾನಗೊಂಡಿದ್ದರೆ ಇಷ್ಟು ಹೊರೆ ಆಗುತ್ತಿರಲಿಲ್ಲ. ಕೆರೆಗಳೇ ಬೆಂಗಳೂರಿನ ಜೀವಾಳ. ಅವುಗಳನ್ನು ಉಳಿಸಿ, ಪುನರುಜ್ಜೀವನಗೊಳಿಸುವ ನಿಟ್ಟಿನಲ್ಲಿ ಹಸಿರು ಬೆಂಗಳೂರು ಯೋಜನೆಯಡಿ ಮುಂದುವರೆಸಿರುವುದು ಶ್ಲಾಘನೀಯ.

ಭವಿಷ್ಯದಲ್ಲಿ ಬೆಂಗಳೂರಿನ ಮೇಲಿನ ಒತ್ತಡ ಕಡಿಮೆ ಮಾಡಲು ಇತರೆ ಮಹಾನಗರ ಪಾಲಿಕೆಗಳ ಮೂಲಸೌಕರ್ಯ ಅಭಿವೃದ್ಧಿಗೆ ₹2600 ಕೋಟಿ, 3 ಹೊಸ ಮಹಾನಗರ ಪಾಲಿಕೆಗಳು, ಕಟ್ಟಡ ನಕ್ಷೆ ಮಂಜೂರಾತಿಗೆ ಆನ್‌ಲೈನ್ ವ್ಯವಸ್ಥೆ ಪರಿಚಯಿಸುವ ಮೂಲಕ ಬ್ರ್ಯಾಂಡ್ ಬೆಂಗಳೂರು ಜೊತೆಗೆ ಬಿಯಾಂಡ್ ಬೆಂಗಳೂರನ್ನೂ ಸಾಕಾರಗೊಳಿಸಲು ಪ್ರಯತ್ನಿಸಲಾಗಿದೆ.

ಲೇಖಕರು: ಚಾರ್ಟರ್ಡ್ ಎಂಜಿನಿಯರ್, ಬೆಂಗಳೂರು.

ರಾಜ್ಯ ಬಜೆಟ್ 2025-26

₹1,505 ಕೋಟಿ
ಕ್ರೈಸ್ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ಮತ್ತು ಶೈಕ್ಷಣಿಕ ಮೂಲಸೌಕರ್ಯಕ್ಕೆ ಮೀಸಲಿಟ್ಟ ಅನುದಾನ

₹422 ಕೋಟಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬರುವ ನಿಗಮಗಳಿಗೆ ಅನುದಾನ

₹488 ಕೋಟಿ
ಸಮಾಜ ಕಲ್ಯಾಣ ಇಲಾಖೆಯಡಿ ಬರುವ ನಿಗಮಗಳಿಗೆ ಮಾಡಲಾದ ಹಂಚಿಕೆ

₹1,000 ಕೋಟಿ
ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಅಗತ್ಯ ಮೂಲಸೌಕರ್ಯಗಳಿಗೆ ಹಂಚಿಕೆ ಮಾಡಲಾದ ಅನುದಾನ

ಮತ ಬ್ಯಾಂಕ್ ಭದ್ರತೆಗೆ 'ಶೇವಣಿ'

ಕರಾವಳಿ, ಕಲ್ಯಾಣಕ್ಕೆ ನೆರವು

ಕರಾವಳಿ, ಕಲ್ಯಾಣ ಕರ್ನಾಟಕ ಭಾಗಕ್ಕೂ ಬಜೆಟ್‌ನಲ್ಲಿ ವಿಶೇಷ ಅನುದಾನ ಘೋಷಿಸಲಾಗಿದೆ.

- ಕರಾವಳಿ, ಮಲೆನಾಡು ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಹಾಸನ, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಭೂಕುಸಿತ ತಡೆಗೆ ₹200 ಕೋಟಿ
- ಕರಾವಳಿ ಜಿಲ್ಲೆಗಳಲ್ಲಿ ಕಡಲ್ಕೊರೆತ ತಗ್ಗಿಸಲು ₹200 ಕೋಟಿ
- ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಕೊಂಡಿ ರಸ್ತೆ ಅಭಿವೃದ್ಧಿಪಡಿಸಲು (ನಬಾರ್ಡ್ ನೆರವು) ₹60 ಕೋಟಿ
- ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಬಹುಮಹಡಿ ಪಾರ್ಕಿಂಗ್ ಕಟ್ಟಡ
- ಆಳ ಸಮುದ್ರ ಮೀನುಗಾರಿಕೆ ಪ್ರೋತ್ಸಾಹಿಸಲು ಪ್ರಸ್ತುತ ಇರುವ ಮೀನುಗಾರಿಕೆ ದೋಣಿಗಳ ಉದ್ದದ ಮಿತಿ ಸಡಿಲಗೊಳಿಸಲು ಕ್ರಮ
- ಕಲ್ಯಾಣ ಕರ್ನಾಟಕ ಭಾಗದಲ್ಲಿ ₹200 ಕೋಟಿ ವೆಚ್ಚದಲ್ಲಿ ಆಯ್ದ 50 ಶಾಲೆಗಳನ್ನು ಕೆಪಿಎಸ್ ಶಾಲೆಗಳಾಗಿ ಅಭಿವೃದ್ಧಿ
- ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿಯಿರುವ 5,267 ಶಿಕ್ಷಕರ ಹುದ್ದೆಗಳ ಭರ್ತಿ
- ಕಲ್ಯಾಣ ಕರ್ನಾಟಕ ಭಾಗದಲ್ಲಿ ಆರೋಗ್ಯ ಅಭಿವೃದ್ಧಿ ಯೋಜನೆ ಅಡಿ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಹಾಗೂ ಆರೋಗ್ಯ ಸೂಚ್ಯಂಕ ವೃದ್ಧಿಸಲು ₹873 ಕೋಟಿ

ಜೇನುಕುರುಬ, ಇರುಳಿಗ, ಕೊರಗ, ಸೋಲಿಗ, ಯರವ, ಪಣಿಯನ್, ಹಸಲರು, ಗೌಡಲು, ಸಿದ್ದಿ, ಬೆಟ್ಟಕುರುಬ, ಕಾಡುಕುರುಬ, ಕುಡಿಯ ಮತ್ತು ಮಲೆಕುಡಿಯ ಹೀಗೆ 13 ಜನಾಂಗಗಳಿಗೆ ರಾಜ್ಯದ ಸಿವಿಲ್ ಸೇವೆಗಳಲ್ಲಿ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ವಿಶೇಷ ನೇರ ನೇಮಕಾತಿ ಕೈಗೊಳ್ಳುವ ಮಹತ್ವದ ಘೋಷಣೆಯನ್ನು ಸಿದ್ದರಾಮಯ್ಯ ಮಾಡಿದ್ದಾರೆ

ಬಜೆಟ್‌ನಲ್ಲಿ ಉಲ್ಲೇಖಿಸಿದ ಕವಿತೆ

ಹಲವೆನ್ನದ ಹಿರಿಮೆಯೆ,
ಕುಲವೆನ್ನದ ಗರಿಮೆಯೆ
ಸದ್ವಿಕಾಸಶೀಲ ನುಡಿಯ
ಲೋಕಾವೃತ ಸೀಮೆಯೆ
ಈ ವತ್ಸರ ನಿರ್ಮತ್ಸರ
ಮನದುದಾರ ಮಹಿಮೆಯೆ
ಕೆ.ಎಸ್.ನಿಸಾರ್ ಅಹಮದ್

• ರಾಜೇಶ್ ರೈ ಚಟ್ಲ

ತಮ್ಮ ಬೆನ್ನಿಗೆ ನಿಂತಿರುವ ಅಲ್ಪಸಂಖ್ಯಾತ, ದಲಿತ, ಹಿಂದುಳಿದ (ಅಹಿಂದ) ಸಮುದಾಯಗಳನ್ನು ಈ ಬಾರಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅಪ್ಪಿಕೊಂಡಿದ್ದಾರೆ. ಆದರೆ, ಅದಕ್ಕೆ ಕಾರಣವೂ ಇದೆ. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ಇನ್ನೇನು ಹೊಸ್ತಿಲಲ್ಲಿದೆ. ಭರಪೂರ ಘೋಷಣೆಗಳ 'ಶೇವಣಿ' ಇಟ್ಟು ಬಹುದೊಡ್ಡ ಮತ ಬ್ಯಾಂಕ್ ಅನ್ನು ಇನ್ನಷ್ಟು ಭದ್ರಪಡಿಸುವುದು ಅವರ ಉದ್ದೇಶವಿರಬಹುದು.

ದುರ್ಬಲ ವರ್ಗದವರಿಗೆ ಈಗಾಗಲೇ ನೀಡುತ್ತಿರುವ 'ಗ್ಯಾರಂಟಿ'ಗಳ ಜೊತೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಮಹಿಳೆಯರು, ರೈತರು, ಶ್ರಮಿಕರು ಹೀಗೆ ಎಲ್ಲ ವರ್ಗಗಳ ಅಭ್ಯುದಯದ ದೃಷ್ಟಿ ನೆಟ್ಟು ಸಿದ್ದರಾಮಯ್ಯ ಕಾರ್ಯಕ್ರಮಗಳನ್ನು ವಿಸ್ತರಿಸಿದ್ದಾರೆ. ಎಸ್‌ಸಿಎಸ್‌ಪಿ, ಟಿಎಸ್‌ಪಿ ಅಡಿ ಈ ಬಾರಿ ₹ 42,018 ಕೋಟಿ ಅನುದಾನ ಒದಗಿಸಿರುವ ಅವರು ಪರಿಶಿಷ್ಟರ ಕಲ್ಯಾಣ ಪರ ಬದ್ಧತೆಯನ್ನು ಯಥಾಸ್ಥಿತಿ ಮುಂದುವರಿಸಿದ್ದಾರೆ. ಆದರೆ, ಈ ಬಾರಿ ಇನ್ನೊಂದು ಹೆಜ್ಜೆ ಮುಂದೆ ಹೋಗಿರುವ ಅವರು, ಜನಸಂಖ್ಯೆ ಪರಿಗಣಿಸಿ 10 ವರ್ಷಗಳಿಂದ ಮೀಸಲಿಟ್ಟು ವ್ಯಯ ಮಾಡುತ್ತಲೇ ಬಂದಿರುವ ಈ ನಿಧಿಯ ಸದ್ಬಳಕೆ ಬಗ್ಗೆಯೂ ಮೌಲ್ಯಮಾಪನ ಮಾಡಲು ನಿರ್ಧರಿಸಿದ್ದಾರೆ. ಜೊತೆಗೆ, ವಿಧಾನ ಮಂಡಲ ಅಧಿವೇಶನದಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಸಮಸ್ಯೆಗಳ ಬಗ್ಗೆ ವಿಶೇಷ ಚರ್ಚೆ ಮಾಡಲಾಗುವುದು ಎಂದೂ ಅವರು ಘೋಷಿಸಿದ್ದಾರೆ.

ಪರಿಶಿಷ್ಟ ಪಂಗಡ ಸಮುದಾಯದ ಶೈಕ್ಷಣಿಕ ಉದ್ದೇಶಕ್ಕಾಗಿ ಸ್ಥಾಪಿಸಿರುವ ಬುಡಕಟ್ಟು ವಸತಿ ಶಾಲೆಗಳ ಉನ್ನತೀಕರಣ, ಹೊಸ ವಿದ್ಯಾರ್ಥಿ ನಿಲಯಗಳ ಆರಂಭ, ಅರಣ್ಯ ಮತ್ತು ಅರಣ್ಯದ ಅಂಚಿನಲ್ಲಿರುವ ಪರಿಶಿಷ್ಟ ಪಂಗಡದ ಬುಡಕಟ್ಟು ಜನಾಂಗದ ಮೂಲಸೌಕರ್ಯ ಒದಗಿಸಲು ₹ 200 ಕೋಟಿ ಅನುದಾನ ಹಂಚಿಕೆ ಮಾಡಿದ್ದಾರೆ.

ಕೆಟಿಟಿಪಿ ಕಾಯ್ದೆಗೆ ತಿದ್ದುಪಡಿ ತಂದು ಸರ್ಕಾರದ ಕಾಮಗಾರಿಗಳಲ್ಲಿ ಹಾಗೂ ವಿವಿಧ ಇಲಾಖೆ, ನಿಗಮ ಹಾಗೂ ಸಂಸ್ಥೆಗಳಲ್ಲಿ ಖರೀದಿಸುವ ಸರಕು ಮತ್ತು ಸೇವೆಗಳಲ್ಲಿ ಮುಸ್ಲಿಂ ಗುತ್ತಿಗೆದಾರರಿಗೂ (ಪ್ರವರ್ಗ 2ಬಿ) ಶೇ 4 ಮೀಸಲಾತಿ ನೀಡಬೇಕೆಂಬ ಆ ಸಮುದಾಯದ ಸಚಿವರ, ಶಾಸಕರ, ಮುಖಂಡರ ಬೇಡಿಕೆಯನ್ನು ಈ ಬಜೆಟ್‌ನಲ್ಲಿ ಮುಖ್ಯಮಂತ್ರಿ ಈಡೇರಿಸಿದ್ದಾರೆ. ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳ ಪ್ರವರ್ಗ 1 ಮತ್ತು 2ಎ ಗುತ್ತಿಗೆದಾರರಿಗೆ ಈ ಸೌಲಭ್ಯ ಈಗಾಗಲೇ ಲಭ್ಯವಿದೆ.

ವಕ್ಫ್ ಆಸ್ತಿಗಳ ಸಂರಕ್ಷಣೆಗೆ ಅನುದಾನ, ಹಜ್ ಭವನದಲ್ಲಿ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕೇಂದ್ರ ಸ್ಥಾಪನೆ. 2,500 ಅಲ್ಪಸಂಖ್ಯಾತ ವಿದ್ಯಾರ್ಥಿನಿಯರಿಗೆ ಆತ್ಮರಕ್ಷಣೆ ಕಲೆ ಕಲಿಯಲು ಸೌಲಭ್ಯ. ಆರ್ಥಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರ ಸರಳ ವಿವಾಹಕ್ಕೆ ನಗದು ಪ್ರೋತ್ಸಾಹ, ಅಲ್ಪಸಂಖ್ಯಾತ ಕಾಲೊನಿಗಳ ಅಭಿವೃದ್ಧಿ, ಮದರಸಾಗಳಲ್ಲಿ ಕಂಪ್ಯೂಟರ್, ಸ್ಮಾರ್ಟ್ ಬೋರ್ಡ್ ಸೌಲಭ್ಯ, ಅಲ್ಪಸಂಖ್ಯಾತ ಯುವಕ ಯುವತಿಯರ ನವೋದ್ಯಮಕ್ಕೆ ಉತ್ತೇಜನ. ವಕ್ಫ್ ಖಾಲಿ ನಿವೇಶನಗಳಲ್ಲಿ ಮಹಿಳಾ ಕಾಲೇಜು... ಸೇರಿದಂತೆ ಹಲವು ಕೊಡುಗೆಗಳು ಆಯವ್ಯಯದಲ್ಲಿವೆ.

ಕೆಐಎಡಿಬಿ ಕೈಗಾರಿಕಾ ನಿವೇಶನಗಳನ್ನು ಮಂಜೂರು ಮಾಡುವಾಗ ಪ್ರತಿ ಕೈಗಾರಿಕಾ ಪ್ರದೇಶದಲ್ಲಿ ಶೇ 20ರಷ್ಟು ಭೂಮಿಯನ್ನು ಹಿಂದುಳಿದ ವರ್ಗಗಳಿಗೆ (ಪ್ರವರ್ಗ 1, 2ಎ, 2ಬಿ) ಮೀಸಲಿರಿಸುವ ಪ್ರಸ್ತಾಪ ಬಜೆಟ್‌ನಲ್ಲಿದೆ. ಪರಿಶಿಷ್ಟರ ಕಾಲೊನಿಗಳಿಗೆ ಅಗತ್ಯ ಮೂಲಸೌಕರ್ಯ, ಶಾಲೆಗಳ ಉನ್ನತೀಕರಣ, ಹೊಸ ವಸತಿ ಶಾಲೆಗಳು, ಸ್ವಂತ ಕಟ್ಟಡ, ಪೀಠೋಪಕರಣಗಳಿಗೂ ಹಣ ಒದಗಿಸಿದ್ದಾರೆ.

ಆರ್ಥಿಕ ಶಿಸ್ತು ಹಿಮ್ಮೆಟ್ಟಿಸಿ, ಇತಿಹಾಸದಲ್ಲೇ ಅಧಿಕ ಸಾಲ ಹೊಂದಿದ ಸರ್ಕಾರವಾಗಿ ಗುರುತಿಸುವಲ್ಲಿ ಸಿದ್ದರಾಮಯ್ಯ ಪ್ರಮುಖ ಪಾತ್ರವಹಿಸಿದ್ದಾರೆ
ಛಲವಾದಿ ನಾರಾಯಣಸ್ವಾಮಿ
ವಿರೋಧ ಪಕ್ಷದ ನಾಯಕ, ವಿಧಾನಪರಿಷತ್

ಆರ್ಥಿಕ ಸಬಲೀಕರಣ ದತ್ತ ತೆಗೆದುಕೊಂಡು ಹೋಗುವ ಯಾವುದೇ ಕ್ರಮ ಇಲ್ಲ. ಜನರ ಮೇಲೆ ಆರ್ಥಿಕ ಹೊರೆ ಹೊರಿಸುವ ಮತ್ತೊಂದು ಕೆಟ್ಟ ಬಜೆಟ್
ಬಸವರಾಜ ಬೊಮ್ಮಾಯಿ,
ಸಂಸದ

ಮುಖ್ಯಮಂತ್ರಿ ಮಂಡಿಸಿದ ಬಜೆಟ್ ಪಾಕಿಸ್ತಾನದ ಬಜೆಟಾ? ಕರ್ನಾಟಕದ ಬಜೆಟಾ? ಇದು ಸಿದ್ದರಾಮಯ್ಯ ಬಜೆಟ್ ಅಲ್ಲ ಜಮೀರ್ ಅಹ್ಮದ್ ಖಾನ್ ಬಜೆಟ್
ಬಸನಗೌಡ ಪಾಟೀಲ ಯತ್ನಾಳ, ಶಾಸಕ

ಆಕರ್ಷಕ ಘೋಷಣೆ, ಕವಿವಾಣಿಯ ಉಲ್ಲೇಖದಲ್ಲೇ ಬಜೆಟ್ ಪುಸ್ತಕ ತುಂಬಿದ್ದು, ಶಿಕ್ಷಣ, ಆರೋಗ್ಯ, ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಯೋಜನೆಗಳ ಅಭಿವೃದ್ಧಿಗೆ ಕೊಡುಗೆ ಇಲ್ಲ
ವಿ.ಸುನಿಲ್‌ಕುಮಾರ್, ಶಾಸಕ

- ಸಮಾಜ ಕಲ್ಯಾಣ ಇಲಾಖೆಯಡಿ ಬರುವ 34 ವಿದ್ಯಾರ್ಥಿನಿಲಯಗಳಿಗೆ ₹238 ಕೋಟಿ ವೆಚ್ಚದಲ್ಲಿ ಸ್ವಂತ ಕಟ್ಟಡ ನಿರ್ಮಾಣ
- ಅಲ್ಪಸಂಖ್ಯಾತ ಮಹಿಳೆಯರಿಗಾಗಿ 16 ಹೊಸ ಮಹಿಳಾ ಕಾಲೇಜುಗಳ ಸ್ಥಾಪನೆ
- ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಮೂಲಸೌಕರ್ಯಕ್ಕೆ ₹50 ಕೋಟಿ
- ಪರಿಶಿಷ್ಟ ಪಂಗಡದ 20 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಪ್ರಾರಂಭ
- 78 ಬುಡಕಟ್ಟು ವಸತಿ ಶಾಲೆಗಳಲ್ಲಿ 7ನೇ ತರಗತಿ ಪ್ರಾರಂಭ

ಅಲ್ಪಸಂಖ್ಯಾತ ಸಮುದಾಯಗಳ ಕಲ್ಯಾಣ

- ರಾಜ್ಯದ 328 ದೇವಸ್ಥಾನಗಳ ಆಸ್ತಿ ಒತ್ತುವರಿ ತೆರವಿಗೆ ಕ್ರಮ
- ಜೈನ, ಬೌದ್ಧ, ಸಿಖ್ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ₹100 ಕೋಟಿ
- ಕ್ರೈಸ್ತ ಸಮುದಾಯದ ಅಭಿವೃದ್ಧಿಗೆ ₹250 ಕೋಟಿ

ವಕ್ಫ್ ಸಂಸ್ಥೆಗಳ ದುರಸ್ತಿ, ಸಂರಕ್ಷಣೆಗೆ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಮೀಸಲಿಡುವ ಮೂಲಕ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಒತ್ತು ನೀಡಲಾಗಿದೆ.

ಜತೆಗೆ, ದೇವಾಲಯಗಳ ಅರ್ಚಕರ ವಾರ್ಷಿಕ ತಸ್ತೀಕ್ ಮೊತ್ತವನ್ನೂ ಹೆಚ್ಚಿಸುವುದಾಗಿ ಘೋಷಿಸಲಾಗಿದೆ. 328 ದೇವಸ್ಥಾನಗಳ ಆಸ್ತಿ ಉಳಿಸುವುದಾಗಿಯೂ ಬಜೆಟ್‌ನಲ್ಲಿ ಘೋಷಿಸಿರುವ ಮುಖ್ಯಮಂತ್ರಿ, ಜೈನ, ಬೌದ್ಧ, ಸಿಖ್ ಸಮುದಾಯಗಳ ಸಮಗ್ರ ಅಭಿವೃದ್ಧಿಗೂ ಅನುದಾನ ಕಲ್ಪಿಸಿದ್ದಾರೆ.

ವಕ್ಫ್ ಸಂಸ್ಥೆಗಳ ದುರಸ್ತಿ, ಜೀರ್ಣೋದ್ಧಾರ, ಖಬರಸ್ತಾನಗಳಲ್ಲಿ ಮೂಲಸೌಕರ್ಯ ಕಲ್ಪಿಸುವುದು ಹಾಗೂ ಅವುಗಳ ಆಸ್ತಿಗಳ ಸಂರಕ್ಷಣೆಗೆ ₹150 ಕೋಟಿ ಅನುದಾನ ಮೀಸಲಿಡಲಾಗಿದೆ.

ಹಜ್ ಯಾತ್ರಿಕರು, ಅವರ ಸಂಬಂಧಿಕರಿಗೆ ಸೌಲಭ್ಯ ಕಲ್ಪಿಸಲು ಬೆಂಗಳೂರಿನ ಹಜ್ ಭವನದ ಬಳಿಯೇ ಹೆಚ್ಚುವರಿ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ. ಗುರುದ್ವಾರಗಳಿಗೆ ಮೂಲಸೌಕರ್ಯ ಕಲ್ಪಿಸಲು ₹2 ಕೋಟಿ ಅನುದಾನ ಒದಗಿಸಲಾಗುತ್ತಿದೆ.

ಬೆಂಗಳೂರಿನಲ್ಲಿ 'ಬೌದ್ಧ ಅಧ್ಯಯನ ಅಕಾಡೆಮಿ' ಸ್ಥಾಪನೆ, ಮಹಾಬೋಧಿ ಅಧ್ಯಯನ ಕೇಂದ್ರದ ಹಳೆಯ ಗ್ರಂಥಾಲಯವನ್ನು ₹1 ಕೋಟಿ ವೆಚ್ಚದಲ್ಲಿ ಡಿಜಿಟಲೀಕರಣಗೊಳಿಸಲು ಉದ್ದೇಶಿಸಲಾಗಿದೆ. ಜೈನ, ಬೌದ್ಧ, ಸಿಖ್ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ₹100 ಕೋಟಿ ಅನುದಾನ ಘೋಷಿಸಲಾಗಿದೆ. ಕ್ರೈಸ್ತ ಸಮುದಾಯದ ಅಭಿವೃದ್ಧಿಗೂ ₹250 ಕೋಟಿ ಒದಗಿಸಲಾಗಿದೆ.

ಜೈನ ಅರ್ಚಕರು, ಸಿಖ್ ಮುಖ್ಯಗ್ರಂಥಿಗಳು, ಮಸೀದಿಗಳ ಪೇಷ್ ಇಮಾಮ್‌ಗಳಿಗೆ ನೀಡುತ್ತಿರುವ ತಿಂಗಳ ಗೌರವಧನವನ್ನು ₹6 ಸಾವಿರಕ್ಕೆ ಏರಿಸಲಾಗಿದೆ. ಸಿಖ್ ಸಹಾಯಕ ಗ್ರಂಥಿಗಳು, ಮೋಝಿನ್‌ಗಳಿಗೆ ನೀಡುತ್ತಿರುವ ತಿಂಗಳ ಗೌರವಧನವನ್ನು ₹5 ಸಾವಿರಕ್ಕೆ ಏರಿಸಲಾಗಿದೆ. ಕಲಬುರಗಿಯ ಚಿತ್ತಾಪುರ ತಾಲ್ಲೂಕಿನಲ್ಲಿ 'ಸನ್ನತಿ ಅಭಿವೃದ್ಧಿ ಪ್ರಾಧಿಕಾರ' ರಚಿಸುವುದಾಗಿ ಘೋಷಿಸಲಾಗಿದೆ.

ಅಲ್ಪಸಂಖ್ಯಾತ ಸಮುದಾಯದವರಿಗೆ ಸಾಂಸ್ಕೃತಿಕ, ಸಾಮಾಜಿಕ ಚಟುವಟಿಕೆ ನಡೆಸಲು ಹೋಬಳಿ, ತಾಲ್ಲೂಕುಮಟ್ಟದಲ್ಲಿ ₹50 ಲಕ್ಷ ಅನುದಾನ ಒದಗಿಸಲಾಗಿದೆ.

'ಭೂ-ವರಾಹ ಯೋಜನೆ' ಅಡಿಯಲ್ಲಿ ದೇವಾಲಯಗಳ ಸ್ಥಿರಾಸ್ತಿ ದಾಖಲೀಕರಣಕ್ಕೆ ಒತ್ತು ನೀಡುವುದಾಗಿಯೂ ಘೋಷಿಸಲಾಗಿದೆ.

ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯ 25,551 ಧಾರ್ಮಿಕ ಸಂಸ್ಥೆ/ದೇವಾಲಯಗಳ ಅರ್ಚಕರಿಗೆ ಪಾವತಿಸುತ್ತಿರುವ ವಾರ್ಷಿಕ ತಸ್ತೀಕ್ ಮೊತ್ತವನ್ನು ₹60 ಸಾವಿರದಿಂದ ₹72 ಸಾವಿರಕ್ಕೆ ಏರಿಸಲಾಗಿದೆ. 'ಕರ್ನಾಟಕ ದೇವಾಲಯಗಳ ವಸತಿ ಕೋಶ' ಸ್ಥಾಪಿಸಲು ನಿರ್ಧರಿಸಲಾಗಿದೆ. ಚಂದ್ರಗುತ್ತಿ ಅಭಿವೃದ್ಧಿ ಪ್ರಾಧಿಕಾರ ರಚಿಸುವುದಾಗಿಯೂ ಘೋಷಿಸಲಾಗಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪಯೋಜನೆ ಅನುದಾನ ಹೆಚ್ಚಳ

2013ರಲ್ಲಿ ಜಾರಿಗೆ ತರಲಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ (ಎಸ್‌ಸಿಎಸ್‌ಪಿ–ಟಿಎಸ್‌ಪಿ) ಉಪಯೋಜನೆಗೆ ಕಳೆದ ವರ್ಷಕ್ಕಿಂತ **₹2,897** ಕೋಟಿಯಷ್ಟು ಹೆಚ್ಚು ಹಣವನ್ನು ಈ ಬಾರಿ ಮೀಸಲಿಡಲಾಗಿದೆ.

ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನ (ಕೋಟಿ ₹ಗಳಲ್ಲಿ)

2023-24	34,294
2024-25	39,121
2025-26	42,018

ಪರಿಶಿಷ್ಟ ಜಾತಿ ಉಪಯೋಜನೆಗೆ (ಎಸ್‌ಸಿಎಸ್‌ಪಿ) ಮೀಸಲಿಟ್ಟ ಅನುದಾನ

2023-24	24,333
2024-25	27,674
2025-26	29,992

ಪರಿಶಿಷ್ಟ ಪಂಗಡ ಉಪಯೋಜನೆಗೆ ಮೀಸಲಿಟ್ಟ ಅನುದಾನ (ಟಿಎಸ್‌ಪಿ)

2023-24	9,961
2024-25	11,447
2025-26	12,026

ಮೊದಲ ಬಾರಿ ಕುಳಿತು ಬಜೆಟ್ ಓದಿದ ಸಿ.ಎಂ

ಕಾಲು ನೋವಿನ ಕಾರಣದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 16 ವರ್ಷಗಳಲ್ಲಿ ಇದೇ ಮೊದಲ ಬಾರಿ ಕುಳಿತುಕೊಂಡೇ ಬಜೆಟ್ ಭಾಷಣದ ಪ್ರತಿಯನ್ನು ಓದಿದರು. 178 ಪುಟಗಳ ಬಜೆಟ್ ಪ್ರತಿಯನ್ನು 3 ಗಂಟೆ 25 ನಿಮಿಷಗಳಲ್ಲಿ ಓದಿ ಮುಗಿಸಿದರು.

ಶುಕ್ರವಾರ ಬೆಳಿಗ್ಗೆ 10.10ರ ಸುಮಾರಿಗೆ ಸಚಿವರು, ಶಾಸಕರ ಗುಂಪಿನೊಂದಿಗೆ ಮುಖ್ಯಮಂತ್ರಿಯವರು ವಿಧಾನಸಭೆ ಪ್ರವೇಶಿಸಿದರು. ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಅವರು ಬಜೆಟ್ ಭಾಷಣದ ಪ್ರತಿ ಇದ್ದ ಬ್ಯಾಗ್ ಹಿಡಿದು ಜೊತೆಯಲ್ಲೇ ಬಂದರು.

10.16ಕ್ಕೆ ಬಜೆಟ್ ಮಂಡನೆ ಆರಂಭಿಸಿದ ಸಿದ್ದರಾಮಯ್ಯ ಅವರು, ಎರಡು ಪುಟಗಳನ್ನು ಪೂರ್ಣಗೊಳಿಸಿದ ಬಳಿಕ ಕುಳಿತು ಓದಲು ಸಭಾಧ್ಯಕ್ಷ ಯು.ಟಿ. ಖಾದರ್ ಅವರ ಅನುಮತಿ ಕೋರಿದರು. ಸಭಾಧ್ಯಕ್ಷರು ಒಪ್ಪಿಗೆ ಸೂಚಿಸಿದರು. ಬಳಿಕ ಕುರ್ಚಿಯಲ್ಲಿ ಕುಳಿತ ಮುಖ್ಯಮಂತ್ರಿ ಮಧ್ಯಾಹ್ನ 1.41ರವರೆಗೂ ಬಜೆಟ್ ಮಂಡಿಸಿದರು. ಪ್ರಮುಖ ಯೋಜನೆಗಳು, ನಿರ್ಧಾರವನ್ನು ಪ್ರಕಟಿಸಿದಾಗ ಕಾಂಗ್ರೆಸ್ ಸದಸ್ಯರು ಮೇಜು ಕುಟ್ಟಿ ಅಭಿನಂದಿಸಿದರು.

ಸುದೀರ್ಘವಾಗಿ ಬಜೆಟ್ ಓದಿ ಮುಗಿಸುವಾಗ ಮುಖ್ಯಮಂತ್ರಿಯವರು ಬಳಲಿದಂತೆ ಕಂಡರು. ಬಜೆಟ್ ಮಂಡನೆ ಮುಕ್ತಾಯವಾದ ಬಳಿಕ ಸಚಿವರು, ಶಾಸಕರು ಮುಖ್ಯಮಂತ್ರಿಯವರ ಬಳಿ ತೆರಳಿ ಅಭಿನಂದಿಸಿದರು.

ನಿದ್ದೆಗೆ ಜಾರಿದ ಡಿಕೆಶಿ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯವರ ಪಕ್ಕದ ಆಸನದಲ್ಲೇ ಕುಳಿತಿದ್ದರು. ಮಧ್ಯಾಹ್ನ 12.25ರ ಸುಮಾರಿಗೆ ಶಿವಕುಮಾರ್ ಅವರು ನಿದ್ದೆಗೆ ಜಾರಿದರು. ಕೆಲ ಸಮಯದ ಬಳಿಕ ಎಚ್ಚರಗೊಂಡರು.

ಪ್ರತಿಪಕ್ಷಗಳಲ್ಲಿ ಮೌನ

ಬಜೆಟ್ ಮಂಡನೆಯುದ್ದಕ್ಕೂ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಮೌನದಿಂದ ಇದ್ದರು. ಕೊನೆಯಲ್ಲಿ ಕೆಲವು ಸದಸ್ಯರಷ್ಟೇ ಬಜೆಟ್ ವಿರುದ್ಧ ಘೋಷಣೆ ಕೂಗುವ ಯತ್ನ ಮಾಡಿದರು.

ಕುಮಾರವ್ಯಾಸನಿಂದ ವಿಲ್ಸನ್ ಕಟೀಲ್‌ವರೆಗೆ

ಕುವೆಂಪು ಅವರ 'ನಮ್ಮ ಕೈಬುಟ್ಟಿಯಲಿ...' ಎಂಬ ಕವನದ ಸಾಲುಗಳನ್ನು ಉಲ್ಲೇಖಿಸಿ ಬಜೆಟ್ ಮಂಡನೆ ಆರಂಭಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕುಮಾರವ್ಯಾಸ, ಗೋಪಾಲಕೃಷ್ಣ ಅಡಿಗ, ನಿಸಾರ್ ಅಹಮದ್, ವಿಲ್ಸನ್ ಕಟೀಲ್ ಸೇರಿದಂತೆ ಹಲವು ಕವಿಗಳ ಸಾಲುಗಳನ್ನು ಉದ್ಧರಿಸಿದರು.

'ಆನೆಯನೇರಿಕೊಂಡು ಹೋದಿರೇ ನೀವು...' ಎಂಬ ಬಸವಣ್ಣನವರ ವಚನವನ್ನು ಬಜೆಟ್‌ನ ಕೊನೆಯಲ್ಲಿ ಉಲ್ಲೇಖಿಸಿದರು. ಸಾವಿತ್ರಿಬಾಯಿ ಫುಲೆ, ರಾಮಮನೋಹರ ಲೋಹಿಯಾ, ಬಿ.ಆರ್. ಅಂಬೇಡ್ಕರ್ ಅವರ ಸಾಲುಗಳನ್ನೂ ಪ್ರಸ್ತಾಪಿಸಿದರು.

ಜಲ ಸಂಪನ್ಮೂಲ ಇಲಾಖೆಗೆ ಸಂಬಂಧಿಸಿದ ವಿಷಯಗಳನ್ನು ಪ್ರಕಟಿಸುವಾಗ ಉಲ್ಲೇಖಿಸಿರುವ ವಿಲ್ಸನ್ ಕಟೀಲ್ ಅವರ, 'ಹಾ! ಗಂಟಲು ಒಣಗಿದೆ!! ತಕೋ ಈ ಬಂಗಾರದ ಸರಪಳಿ, ಬದಲಾಗಿ ಒಂದು ಗುಟುಕು ನೀರು ಕೊಡು' ಎಂಬ ಕವನದ ಸಾಲುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಸದ್ದು ಮಾಡುತ್ತಿವೆ.

ರಾಜ್ಯದ ಪ್ರಗತಿ ಪಥ

ದೇಶದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಡಿಪಿ) ರಾಜ್ಯವು ಶೇ 8.4ರಷ್ಟು ಕೊಡುಗೆ ನೀಡಿದೆ. ಆ ಮೂಲಕ 2024–25ನೇ ಸಾಲಿನಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರಕ್ಕಿಂತ ಒಂದು ಶೇಕಡಾವಾರು ಅಂಶಗಳಷ್ಟು ಅಧಿಕ ಬೆಳವಣಿಗೆ ದರವನ್ನು ರಾಜ್ಯವು ದಾಖಲಿಸಿದೆ. ಕೃಷಿ ಕ್ಷೇತ್ರದಲ್ಲಿಯೂ ರಾಜ್ಯವು ಉತ್ತಮ ಸಾಧನೆ ತೋರಿದೆ. ದೇಶದ ಕೃಷಿ ಬೆಳವಣಿಗೆ ದರಕ್ಕಿಂತ ಅಧಿಕವಿದೆ. 2023–24ನೇ ಕೃಷಿ ಕ್ಷೇತ್ರದ ಬೆಳವಣಿಗೆ ದರವು ಋಣಾತ್ಮಕವಾಗಿತ್ತು (ಶೇ –4.9). ಆದರೆ, 2024–25ರ ಹೊತ್ತಿಗೆ ಕೃಷಿ ಕ್ಷೇತ್ರದ ಬೆಳವಣಿಗೆ ದರವು ಧನಾತ್ಮಕವಾಗಿದೆ (ಶೇ 4). ಸೇವಾ ವಲಯದಲ್ಲಿಯೂ ರಾಜ್ಯದ ಸಾಧನೆಯು ದೇಶದ ಸಾಧನೆಗಿಂತ ಉತ್ತಮವೇ ಆಗಿದೆ. 2023–24ರಲ್ಲಿ ರಾಜ್ಯದ ಸೇವಾ ವಲಯದ ಬೆಳವಣಿಗೆ ದರಕ್ಕಿಂತ 2024–25ರ ಬೆಳವಣಿಗೆ ದರದ ಏರಿಕೆಯಾಗಿದೆ. ಈ ಕ್ಷೇತ್ರದ ಪ್ರಗತಿಯಲ್ಲೂ ರಾಜ್ಯವು ದೇಶಕ್ಕಿಂತ ಬಹಳ ಮುಂದೆ ಇದೆ. ಆದರೆ, ಕೈಗಾರಿಕಾ ಕ್ಷೇತ್ರದಲ್ಲಿ ರಾಜ್ಯದ ಬೆಳವಣಿಗೆ ದರ ಇಳಿಕೆಯಾಗಿದೆ.

7.4% ರಾಜ್ಯದ ಜಿಡಿಪಿ ಬೆಳವಣಿಗೆ ದರ

6.4% ದೇಶದ ಜಿಡಿಪಿ ಬೆಳವಣಿಗೆ ದರ

(*ಆವರಣದಲ್ಲಿರುವುದು 2023–24ರ ವಿವರ)

	ರಾಜ್ಯ	ದೇಶ
ಕೃಷಿ	4 % (-4.9 %)	3.8 %
ಕೈಗಾರಿಕೆ	5.8% (7.3%)	6.2 %
ಸೇವಾ ವಲಯ	8.9% (7.9 %)	7.2 %

ಕೈಗಾರಿಕೆ ಸ್ಥಾಪನೆಗೆ ಬೇಕಿತ್ತು ಒತ್ತು

ಶರಣಬಸಪ್ಪ ಬಿಳೆಯಲಿ

ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕದ ಜನರ ಕೃಷಿ, ಶಿಕ್ಷಣ ಮತ್ತು ಆರೋಗ್ಯದ ಸೂಚ್ಯಂಕ ಸುಧಾರಣೆಗೆ, ತೊಗರಿಗೆ ಉತ್ತೇಜನ, ವೈದ್ಯಕೀಯ ಸೌಲ, ಮೆಗಾ ಡೇರಿ, ಕೃಷಿ ಕಾಲೇಜುಗಳ ಮಂಜೂರಾತಿ, ಸೇರಿದಂತೆ ಹಲವು ಯೋಜನೆ ಘೋಷಿಸಲಾಗಿದೆ.

ಪ್ರವಾಸೋದ್ಯಮದಲ್ಲಿ ವಿಪುಲ ಅವಕಾಶಗಳಿದ್ದರೂ ಸನ್ನತಿ ಮತ್ತು ಸವದತ್ತಿ ಯಲ್ಲಮ್ಮ ಕ್ಷೇತ್ರದ ಅಭಿವೃದ್ಧಿಗೆ ಮಾತ್ರ ಮಹತ್ವ ನೀಡಲಾಗಿದೆ.

ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕದ ಜಿಲ್ಲೆಗಳು ರಾಜಧಾನಿಗೆ ಶ್ರಮ ಪೂರೈಸುವ ಶಕ್ತಿಕೇಂದ್ರಗಳಾಗಿವೆ. ಇದನ್ನು ಬದಲಾಯಿಸಲು ಉದ್ಯೋಗ ಸೃಷ್ಟಿಸಿ ಮೂಲ ಸೌಕರ್ಯ ಕಲ್ಪಿಸಬೇಕಿತ್ತು. ದಕ್ಷಿಣದ ಜಿಲ್ಲೆಗಳ ಜನರು ಇಲ್ಲಿಗೆ ಬಂದು ದುಡಿಯುವಂತಾಗಲು ಕೈಗಾರಿಕೆಗಳ ಸ್ಥಾಪನೆಗೆ ಒತ್ತು ಕೊಡಬೇಕಿತ್ತು.

ಈ ಭಾಗದ ಅರ್ಥವ್ಯವಸ್ಥೆಗೆ ಹೀರಿಕೊಳ್ಳುವ ಶಕ್ತಿ ಕಡಿಮೆಯಿರುವ ಕಾರಣ ಉದ್ಯೋಗದ ಅವಕಾಶ, ದಶಕಕ್ಕೂ ಹೆಚ್ಚು ಕಾಲ ಬಾಕಿ ಉಳಿದ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಬೇಕಿತ್ತು. ಈಗ ಅನೇಕ ಯೋಜನೆಗಳನ್ನು ಘೋಷಿಸಿದ್ದರೂ ಯಾವುದಕ್ಕೆ ಆದ್ಯತೆ ಸಿಗಬೇಕಿತ್ತೋ ಅದಕ್ಕೆ ಸಿಕ್ಕಿಲ್ಲ.

ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯಿಂದಾಗಿ ಒಂದಿಷ್ಟು ಅಭಿವೃದ್ಧಿಯ ಶಕೆ ಪ್ರಾರಂಭಿಸಿರುವ ಈ ಭಾಗ ನಿರೀಕ್ಷಿಸಿದಷ್ಟು ಪ್ರಗತಿಯಾಗಿಲ್ಲ. ಇದೇ ಕಾರಣದಿಂದ ಸರ್ಕಾರ ಅಭಿವೃದ್ಧಿಯ ಪುನರ್ ವಿಶ್ಲೇಷಣೆಗೆ ಪ್ರೊ.ಗೋವಿಂದರಾವ್ ಸಮಿತಿ ರಚಿಸಿದೆ. ಈ ವರದಿ ಬಳಿಕವಾದರೂ ಸರ್ಕಾರ ಈ ಭಾಗಕ್ಕೆ ಸ್ಥಿರಾಸ್ತಿ, ಬಹುಮುಖಿ ಸೌಲಭ್ಯ ಕಲ್ಪಿಸುವ ಪ್ರಯತ್ನ ಮಾಡಬೇಕಾಗಿದೆ.

ಲೇಖಕರು: ಅರ್ಥಶಾಸ್ತ್ರ ಉಪನ್ಯಾಸಕರು, ಕೊಪ್ಪಳ

ಮುಂಬೈ ಧಾರಣೆ

ಶೇಂಗಾ

07-03-2025

ಜಾವಾ 70/80(ಹೊಸ)	9800-9900
ಜಾವಾ 80/90(ಹೊಸ)	9300-9400
ದಪ್ಪ ಮಧ್ಯಪ್ರದೇಶ(ಹೊಸ)	7700-7800
ದಪ್ಪ ಗುಜರಾತ್(ಹೊಸ)	8000-8100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1430 (1420)
ಒಂದು ವಾರದ ಡೆಲಿವರಿ	1425 (1415)
ಪಾಮ್ ವಾರದ ಡೆಲಿವರಿ	1363 (1358)
ಸೂರ್ಯಕಾಂತಿ ಎಣ್ಣೆ ಕಚ್ಚಾ	1380 (1380)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹85,600 (85,450)

ಬೆಳ್ಳಿ ಕೆ.ಜಿ ₹96,650 (96,450)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಷ್ಯಾ ಮೇಲೆ ದಿಗ್ಬಂಧನ?

ವಾಷಿಂಗ್ಟನ್/ದುಬೈ (ರಾಯಿಟರ್ಸ್/ಎಪಿ): ಉಕ್ರೇನ್ ಜೊತೆ ಶಾಂತಿ ಒಪ್ಪಂದ ಸಾಧ್ಯವಾಗುವವರೆಗೆ ರಷ್ಯಾ ಮೇಲೆ ಆರ್ಥಿಕ ದಿಗ್ಬಂಧನ ಹೇರುವ ಬಗ್ಗೆ ಗಂಭೀರವಾಗಿ ಪರಿಶೀಲನೆ ನಡೆಸುತ್ತಿರುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಹೇಳಿದ್ದಾರೆ.

ದಿಗ್ಬಂಧನಗಳು ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಇರಲಿವೆ, ರಷ್ಯಾದ ಉತ್ಪನ್ನಗಳ ಮೇಲೆ ಸುಂಕ ವಿಧಿಸುವ ರೂಪದಲ್ಲಿಯೂ ಇರಲಿವೆ ಎಂದು ಟ್ರಂಪ್ ಅವರು ಹೇಳಿದ್ದಾರೆ.

ಶಾಂತಿ ಒಪ್ಪಂದವನ್ನು ಉಕ್ರೇನ್ ಒಪ್ಪಿಕೊಳ್ಳುವಂತೆ ಮಾಡುವ ಉದ್ದೇಶದಿಂದ ಟ್ರಂಪ್ ಅವರು, ಆ ದೇಶಕ್ಕೆ ಮಿಲಿಟರಿ ನೆರವು ನೀಡುವುದನ್ನು ತಡೆಹಿಡಿದಿದ್ದಾರೆ. ಅಲ್ಲದೆ, ಉಕ್ರೇನ್ ಜೊತೆ ಗುಪ್ತಚರ ಮಾಹಿತಿ ಹಂಚಿಕೊಳ್ಳುವುದನ್ನೂ ನಿಲ್ಲಿಸಿದ್ದಾರೆ.

ಇರಾನ್ ನಾಯಕರಿಗೆ ಪತ್ರ: ಇರಾನ್‌ನ ಪರಮೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಅವರಿಗೆ ಪತ್ರವೊಂದನ್ನು ಬರೆದಿರುವುದಾಗಿ ಟ್ರಂಪ್ ಹೇಳಿದ್ದಾರೆ.

ಟ್ರಂಪ್ ಅವರು ಅಣ್ವಸ್ತ್ರ ಒಪ್ಪಂದಕ್ಕೆ ಸಂಬಂಧಿಸಿದಂತೆ ಪತ್ರ ಬರೆದಿದ್ದಾರೆ ಎಂದು ಶ್ವೇತಭವನ ಖಚಿತಪಡಿಸಿದೆ. 'ನೀವು ಒಪ್ಪಂದಕ್ಕೆ ಬರುತ್ತೀರಿ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ ಇದನ್ನು ನಾವು ಮಿಲಿಟರಿಯ ಮೂಲಕ ಮಾಡಿಸುವುದಾದರೆ, ಅದು ಭಯಂಕರ ವಾಗಿರುತ್ತದೆ ಎಂದು ನಾನು ಪತ್ರದಲ್ಲಿ ಬರೆದಿದ್ದೇನೆ' ಎಂದು ಟ್ರಂಪ್ ಅವರು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ರಾಜ್ಯದ ಸುಸ್ಥಿರ ಪ್ರಗತಿಗೆ ನೀಲನಕ್ಷೆ: ಎಫ್‌ಕೆಸಿಸಿಐ

ಪ್ರಜಾವಾಣಿ ವಾರ್ತೆ



ಎಂ.ಜಿ. ಬಾಲಕೃಷ್ಣ

ಬೆಂಗಳೂರು: '2025-26ನೇ ಸಾಲಿನ ಬಜೆಟ್ ರಾಜ್ಯದ ಸುಸ್ಥಿರ ಬೆಳವಣಿಗೆಗೆ ಪ್ರಾಯೋಗಿಕ ನೀಲನಕ್ಷೆಯಾಗಿದೆ' ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಹೇಳಿದ್ದಾರೆ.

ಮೆಟ್ರೊ ರೈಲನ್ನು ದೇವನಹಳ್ಳಿವರೆಗೆ ವಿಸ್ತರಿಸುವುದರಿಂದ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಚರಿಸುವ ಪ್ರಯಾಣಿಕರಿಗೆ ಹೆಚ್ಚು ಅನುಕೂಲ ಆಗುತ್ತದೆ ಎಂದು ಹೇಳಿದ್ದಾರೆ.

ಕೈಗಾರಿಕೆ ಮತ್ತು ವ್ಯಾಪಾರ ವಲಯಕ್ಕೆ ಉತ್ತೇಜನ ನೀಡಲು ಹೈಬ್ರಿಡ್ ವಾಹನಗಳಿಗೆ ತೆರಿಗೆ ವಿನಾಯಿತಿ, ವಿದ್ಯುತ್‌ಚಾಲಿತ ವಾಹನಗಳಿಗೆ ಪ್ರೋತ್ಸಾಹ, ಇವಿ ಕ್ಲಸ್ಟರ್ ಸ್ಥಾಪನೆಗೆ ₹25 ಕೋಟಿ ನೀಡಿರುವುದು ಉತ್ತಮ ಬೆಳವಣಿಗೆ. ವಿವಿಧ ಜಿಲ್ಲೆಗಳಿಗೆ ಅನುದಾನ ಹಂಚಿಕೆಯಿಂದ ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಗೆ ಬಜೆಟ್ ಒತ್ತು ನೀಡಿದೆ. ಆದರೂ, ದೊಡ್ಡ ಪ್ರಮಾಣದ ಮೂಲಸೌಕರ್ಯ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ನಿಖರವಾದ ಯೋಜನೆ ಮತ್ತು ಸಮನ್ವಯದ ಅಗತ್ಯವಿದೆ ಎಂದು ಹೇಳಿದ್ದಾರೆ.

ಕರ್ನಾಟಕದ ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸಲು ಪ್ರತ್ಯೇಕ ಎಂಎಸ್‌ಎಂಇ ನೀತಿ ರೂಪಿಸುವ ಕ್ರಮವನ್ನು ಎಫ್‌ಕೆಸಿಸಿಐ ಸ್ವಾಗತಿಸುತ್ತದೆ. ಈ ನೀತಿ ರೂಪಿಸಲು ಸರ್ಕಾರಕ್ಕೆ ಒತ್ತಾಯಿ ಸಲಾಗಿತ್ತು. ಮಹಾಸಂಸ್ಥೆಯ ಮನವಿಗೆ ಸರ್ಕಾರ ಸ್ಪಂದಿಸಿದೆ ಎಂದು ತಿಳಿಸಿದ್ದಾರೆ.

ಸಣ್ಣ ಕೈಗಾರಿಕೆಗಳಿಗೆ ಮತ್ತಷ್ಟು ನೆರವು ಬೇಕು: ಕಾಸಿಯಾ

ಪ್ರಜಾವಾಣಿ ವಾರ್ತೆ

ಎಂ.ಜಿ. ರಾಜಗೋಪಾಲ್

ಬೆಂಗಳೂರು: 'ರಾಜ್ಯ ಆಯವ್ಯಯವು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಸ್ನೇಹಿಯಾಗಿದೆ. ಆದರೆ, ಈ ವಲಯದ ಅಭಿವೃದ್ಧಿಗೆ ಮತ್ತಷ್ಟು ಅನುದಾನ ನೀಡಬೇಕಿತ್ತು' ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಎಂ.ಜಿ. ರಾಜಗೋಪಾಲ್ ಹೇಳಿದ್ದಾರೆ.

'ಖಾಸಗಿ ಕೈಗಾರಿಕಾ ಪ್ರದೇಶದಲ್ಲಿರುವ ಸಣ್ಣ ಕೈಗಾರಿಕೆಗಳು ಕಾರ್ಯ ನಿರ್ವಹಣೆಗೆ ಅಗತ್ಯವಿರುವ ಮೂಲಸೌಕರ್ಯದಿಂದ ವಂಚಿತವಾಗಿವೆ. ಈ ಕೈಗಾರಿಕೆಗಳ ಅಭಿವೃದ್ಧಿ ದೃಷ್ಟಿಯಿಂದ ಕೆಎಸ್‌ಎಸ್‌ಐಡಿಸಿ, ಕೆಐಎಡಿಬಿಗೆ ಅಗತ್ಯ ಮೂಲಸೌಕರ್ಯ ಒದಗಿಸುವ ಕುರಿತು ಬಜೆಟ್‌ನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕಿತ್ತು' ಎಂದು ಪ್ರತಿಕ್ರಿಯಿಸಿದ್ದಾರೆ.

ಬೆಂಗಳೂರು ವಲಯದಲ್ಲಿ ಇವಿ ಕ್ಲಸ್ಟರ್, ಕೋಲಾರದ ಶಿವಾರಪಟ್ಟಣದಲ್ಲಿ ಕೈಗಾರಿಕಾ ಪಾರ್ಕ್, ತುಮಕೂರಿನಲ್ಲಿ ಜಪಾನೀಸ್ ಇಂಡಸ್ಟ್ರಿಯಲ್ ಪಾರ್ಕ್ ಸ್ಥಾಪನೆ ಮತ್ತು ವಿಜಯಪುರ ಜಿಲ್ಲೆಯಲ್ಲಿ ಪ್ಲಗ್ ಆ್ಯಂಡ್ ಪ್ಲೇ ಸೌಕರ್ಯವಿರುವ ಫ್ಲಾಟ್ ಫ್ಯಾಕ್ಟರಿ ಸ್ಥಾಪನೆಗೆ ಕ್ರಮವಹಿಸಿರುವುದು ಉತ್ತಮ ಬೆಳವಣಿಗೆ ಎಂದು ಹೇಳಿದ್ದಾರೆ.

ಎಂಎಸ್‌ಎಂಇಗಳಿಗೆ ಪ್ರತ್ಯೇಕ ಕೈಗಾರಿಕಾ ನೀತಿ ರೂಪಿಸುವುದು ಸ್ವಾಗತಾರ್ಹ. ನೂತನ ಜವಳಿ ನೀತಿ ಘೋಷಣೆಯೂ ಉತ್ತಮ ನಿರ್ಧಾರವಾಗಿದೆ ಎಂದು ತಿಳಿಸಿದ್ದಾರೆ.

ಸೇವಾ ವಲಯ ಪ್ರಗತಿ • ಶೇ 3ರಷ್ಟು ವಿತ್ತೀಯ ಕೊರತೆ • ತೆರಿಗೆ ಆದಾಯ ಏರಿಕೆ

ಕೃಷಿ ಸದೃಢ; ಕೈಗಾರಿಕೆ ಮಸುಕು

ಕರ್ನಾಟಕ ಆರ್ಥಿಕ ಸಮೀಕ್ಷೆ 2024–25

• ಕೆ.ಎಚ್. ಓಬಳೇಶ್

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯದ ಕೃಷಿ ವಲಯವು ಶೇ 4ರಷ್ಟು ಪ್ರಗತಿ ಕಾಣಲಿದೆ ಎಂದು 'ಕರ್ನಾಟಕ ಆರ್ಥಿಕ ಸಮೀಕ್ಷೆ 2024–25'ರ ವರದಿಯು ಅಂದಾಜಿಸಿದೆ.

ವಿಧಾನಸಭೆಯಲ್ಲಿ ಬಜೆಟ್ ಮಂಡನೆಗೂ ಮೊದಲು ಈ ಸಮೀಕ್ಷಾ ವರದಿಯನ್ನು ಮಂಡಿಸಲಾಯಿತು.

2023–24ನೇ ಸಾಲಿನಲ್ಲಿ ತೀವ್ರ ಬರಗಾಲ ಹಾಗೂ ಮಳೆ ಕೊರತೆಯಿಂದಾಗಿ ಕೃಷಿ ಮತ್ತು ಅದರ ಅವಲಂಬಿತ ವಲಯಗಳ ಬೆಳವಣಿಗೆ ದರವು ಶೇ 4.9ರಷ್ಟು ಇಳಿಕೆ ಕಂಡಿತ್ತು. ಈ ಬಾರಿ ಚೇತರಿಕೆಯ ಹಳಿಗೆ ಮರಳಲಿದೆ ಎಂದು ಹೇಳಿದೆ.

ಆದರೆ, ಕಳೆದ ಆರ್ಥಿಕ ವರ್ಷದಲ್ಲಿ ಶೇ 7.3ರಷ್ಟಿದ್ದ ಕೈಗಾರಿಕಾ ವಲಯದ ಬೆಳವಣಿಗೆ ದರವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 5.8ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಲಾಗಿದೆ. ಒಟ್ಟಾರೆ ಬೆಳವಣಿಗೆ ಕುಂಠಿತಗೊಂಡಿದೆ. ಕೋವಿಡ್ ಸಾಂಕ್ರಾಮಿಕದ ವೇಳೆ ದಿಢೀರ್ ಕುಸಿತ ಕಂಡ ಈ ವಲಯದ ಬೆಳವಣಿಗೆಯು ಚೇತರಿಕೆ ಕಾಣುತ್ತಿದೆ. ತಯಾರಿಕಾ ವಲಯದ ಶೇ 6.4ರಷ್ಟು ಬೆಳವಣಿಗೆಯು ಕೈಗಾರಿಕಾ ವಲಯದ ಒಟ್ಟಾರೆ ಪ್ರಗತಿಗೆ ಕೊಡುಗೆ ನೀಡಲಿದೆ ಎಂದು ವಿವರಿಸಿದೆ.

ಸೇವಾ ವಲಯದ ಬೆಳವಣಿಗೆಯು ಏರಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಕಳೆದ ಆರ್ಥಿಕ ವರ್ಷದಲ್ಲಿ ಶೇ 7.9ರಷ್ಟಿದ್ದ ಈ ವಲಯದ ಪ್ರಗತಿಯು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 8.9ರಷ್ಟು ಬೆಳವಣಿಗೆ ಕಾಣಲಿದೆ ಎಂದು ನಿರೀಕ್ಷಿಸಲಾಗಿದೆ.

ಎಸ್‌ಜಿಡಿಪಿ ಶೇ 7.4ರಷ್ಟು ಪ್ರಗತಿ ನಿರೀಕ್ಷೆ

ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಎಸ್‌ಜಿಡಿಪಿ) ಗಾತ್ರವು 2023–24ರಲ್ಲಿ ₹25.57 ಲಕ್ಷ ಕೋಟಿ ಇತ್ತು. 2024–25ರಲ್ಲಿ ₹28.84 ಲಕ್ಷ ಕೋಟಿಗೆ ತಲುಪಲಿದೆ ಎಂದು ನಿರೀಕ್ಷಿಸಲಾಗಿದೆ. ಒಟ್ಟಾರೆ ಶೇ 12.8ರಷ್ಟು ಬೆಳವಣಿಗೆ ದಾಖಲಿಸಲಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಎಸ್‌ಜಿಡಿಪಿಯು ಶೇ 7.4ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಲಾಗಿದೆ. 2023–24ರಲ್ಲಿ ರಾಷ್ಟ್ರೀಯ ಆದಾಯಕ್ಕೆ ರಾಜ್ಯದ ಆದಾಯ ಕೊಡುಗೆಯು ಶೇ 8.6ರಷ್ಟಿತ್ತು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 8.9ಕ್ಕೆ ಹೆಚ್ಚಳವಾಗುವ ನಿರೀಕ್ಷೆಯಿದೆ

ತಲಾ ಆದಾಯ ಹೆಚ್ಚಳ

ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯದ ತಲಾ ಆದಾಯವು ₹3,80,906ಕ್ಕೆ ತಲುಪಲಿದೆ ಎಂದು ಅಂದಾಜಿಸಲಾಗಿದೆ. ದೇಶದ ತಲಾ ಆದಾಯವು ₹2,00,162 ಇದೆ. ಇದಕ್ಕೆ ಹೋಲಿಸಿದರೆ ಶೇ 90ರಷ್ಟು ಹೆಚ್ಚಳವಾಗುವ ನಿರೀಕ್ಷೆಯಿದೆ. 2023–24ರಲ್ಲಿ ಬೆಂಗಳೂರು ನಗರ ಜಿಲ್ಲೆಯ ತಲಾ ಆದಾಯವು ₹7,38,910 ಇದ್ದು, ಪ್ರಥಮ ಸ್ಥಾನದಲ್ಲಿದೆ. ಆ ನಂತರದ ಸ್ಥಾನದಲ್ಲಿ ದಕ್ಷಿಣ ಕನ್ನಡ (₹5,56,059), ಉಡುಪಿ (₹5,33,469), ಚಿಕ್ಕಮಗಳೂರು (₹4,44,472), ಬೆಂಗಳೂರು ಗ್ರಾಮಾಂತರ (₹4,04,138) ಮತ್ತು ಶಿವಮೊಗ್ಗ (₹3,49,177) ಜಿಲ್ಲೆ ಇದೆ.

ಶೇ 41ರಷ್ಟು ಸಾಫ್ಟ್‌ವೇರ್ ರಫ್ತು

ಕರ್ನಾಟಕವು ವ್ಯಾಪಾರಿ ಸ್ನೇಹಿ ವಾತಾವರಣ ಹೊಂದಿದೆ. ರಾಜ್ಯ ಸರ್ಕಾರದ ನೀತಿಗಳು ಇದಕ್ಕೆ ಬುನಾದಿ ಹಾಕಿವೆ. ರಾಜ್ಯವು ರಫ್ತಿನಲ್ಲಿ ಮುಂಚೂಣಿ ಸ್ಥಾನ ಕಾಯ್ದುಕೊಂಡಿದೆ. 2023–24ರಲ್ಲಿ ₹13.78 ಲಕ್ಷ ಕೋಟಿ ಮೌಲ್ಯದ ರಫ್ತು ವಹಿವಾಟು ನಡೆದಿದೆ. ಭಾರತದ ಒಟ್ಟು ರಫ್ತಿನಲ್ಲಿ ರಾಜ್ಯದ ಕೊಡುಗೆ ಶೇ 20.5ರಷ್ಟಿದೆ. ದೇಶದ ಒಟ್ಟು ಸರಕು ರಫ್ತಿನ ಪಾಲು ಶೇ 6.09ರಷ್ಟಿದ್ದರೆ, ಸಾಫ್ಟ್‌ವೇರ್ ಮತ್ತು ಸೇವಾ ರಫ್ತು ಪಾಲು ಶೇ 41ರಷ್ಟಿದೆ.

ಶೇ 3ರಷ್ಟು ವಿತ್ತೀಯ ಕೊರತೆ: ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಎಸ್‌ಜಿಡಿಪಿ) ಶೇ 3ಕ್ಕೆ ತಗ್ಗಿಸಲಾಗಿದೆ. ಇದು ರಾಜ್ಯದ ಆರ್ಥಿಕ ಸ್ಥಿರತೆ ಮತ್ತು ಸಮರ್ಥವಾದ ಸಾರ್ವಜನಿಕ ಸೇವಾ ವಿತರಣೆಯನ್ನು ಖಾತರಿಪಡಿಸುತ್ತದೆ. ವಿತ್ತೀಯ ಶಿಸ್ತು ಕಾಯ್ದುಕೊಳ್ಳುವಲ್ಲಿ ರಾಜ್ಯ ಯಶಸ್ವಿಯಾಗಿದೆ ಎಂದು ವರದಿ ಹೇಳಿದೆ.

ತೆರಿಗೆ ಮತ್ತು ತೆರಿಗೆಯೇತರ ಆದಾಯಗಳ ಸ್ಥಿರ ಬೆಳವಣಿಗೆಯಿಂದ ಇದು ಸಾಧ್ಯವಾಗಿದೆ ಎಂದು ಹೇಳಿದೆ.

2023–24ರಲ್ಲಿ ರಾಜ್ಯದ ಸ್ವಂತ ತೆರಿಗೆ ಆದಾಯವು ₹1,61,494 ಕೋಟಿ ಇತ್ತು. 2024–25ರಲ್ಲಿ ₹1,89,893 ಕೋಟಿ ಆಗಿದೆ. ಒಟ್ಟಾರೆ ಶೇ 17.59ರಷ್ಟು ಏರಿಕೆಯಾಗಿದೆ. ತೆರಿಗೆಯೇತರ ಆದಾಯವು ₹12 ಸಾವಿರ ಕೋಟಿಯಿಂದ ₹13,499 ಕೋಟಿಗೆ ಹೆಚ್ಚಳವಾಗಿದೆ. ಒಟ್ಟಾರೆ ಶೇ 12.50ರಷ್ಟು ಏರಿಕೆಯಾಗಿದೆ.

ವಿಕೇಂದ್ರೀಕರಣ ಸೂಚ್ಯಂಕದಲ್ಲಿ ಅಗ್ರಸ್ಥಾನ

ರಾಜ್ಯದಲ್ಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯ ಬಲವರ್ಧನೆಗೆ ಒತ್ತು ನೀಡಲಾಗಿದೆ. ಪಂಚಾಯತ್‌ರಾಜ್ ವ್ಯವಸ್ಥೆಯ ಒಟ್ಟಾರೆ ವಿಕೇಂದ್ರೀಕರಣ ಸೂಚ್ಯಂಕದಲ್ಲಿ ಇಡೀ ದೇಶದಲ್ಲಿಯೇ ಕರ್ನಾಟಕವು ಅಗ್ರಸ್ಥಾನದಲ್ಲಿದೆ.

ತಾಯಂದಿರು, ಶಿಶು ಮರಣ ಇಳಿಕೆ

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿಯೊಂದಿಗೆ ರಾಜ್ಯವು ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚಿನ ಪ್ರಗತಿ ಸಾಧಿಸಿದೆ. 2015–17ರಲ್ಲಿ ತಾಯಂದಿರ ಮರಣ ಪ್ರಮಾಣವು 97 (ಪ್ರತಿ ಒಂದು ಲಕ್ಷ ಜೀವಂತ ಜನನಕ್ಕೆ) ಇತ್ತು. 2018–19ರಲ್ಲಿ 69ಕ್ಕೆ ಇಳಿಕೆಯಾಗಿದೆ. ಶಿಶು ಮರಣ ಪ್ರಮಾಣವು 2015ರಲ್ಲಿ 28 ಇತ್ತು (ಒಂದು ಸಾವಿರ ಜೀವಂತ ಜನನಕ್ಕೆ). 2020ರಲ್ಲಿ 19ಕ್ಕೆ ಇಳಿದಿದೆ.

2015–16ರಲ್ಲಿ ಶೇ 1.8ರಷ್ಟಿದ್ದ ಒಟ್ಟು ಫಲವತ್ತತೆ ದರವು 2020ರಲ್ಲಿ ಶೇ 1.7ಕ್ಕೆ ಇಳಿಕೆಯಾಗಿದೆ. ಇದು ಉತ್ತಮ ಕುಟುಂಬ ಯೋಜನೆ ಮತ್ತು ತಾಯಿಯ ಆರೋಗ್ಯ ರಕ್ಷಣೆಗೆ ಕಲ್ಪಿಸಿರುವ ಸೌಲಭ್ಯಕ್ಕೆ ಕನ್ನಡಿ ಹಿಡಿದಿದೆ.

ಮಾನವ ಅಭಿವೃದ್ಧಿಯಲ್ಲಿ 11ನೇ ಸ್ಥಾನ

ವಿಶ್ವಸಂಸ್ಥೆಯ 2023–24ರ ಮಾನವ ಅಭಿವೃದ್ಧಿ ಸೂಚ್ಯಂಕದ ಅನ್ವಯ ಭಾರತವು 193 ರಾಷ್ಟ್ರಗಳ ಪೈಕಿ 134ನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವು ಸುಧಾರಿಸಿದೆ. ರಾಜ್ಯಗಳ ಪೈಕಿ 11ನೇ ಸ್ಥಾನದಲ್ಲಿದೆ.

ಕರ್ನಾಟಕದ ಜಿಲ್ಲೆಗಳ ಪೈಕಿ ಬೆಂಗಳೂರು ನಗರ ಜಿಲ್ಲೆಯು ಪ್ರಥಮ ಸ್ಥಾನದಲ್ಲಿದೆ. ಆ ನಂತರದ ಸ್ಥಾನದಲ್ಲಿ ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಯಿದೆ. ಯಾದಗಿರಿ, ಕಲಬುರಗಿ ಮತ್ತು ರಾಯಚೂರು ಜಿಲ್ಲೆ ಕೊನೆಯ ಸ್ಥಾನದಲ್ಲಿವೆ.

ಲಿಂಗ ಅಸಮಾನತೆ

ಲಿಂಗ ಅಸಮಾನತೆ ಸೂಚ್ಯಂಕದಲ್ಲಿ (ಜಿಐಐ) ಧಾರವಾಡ ಜಿಲ್ಲೆಯು ಮೊದಲ ಸ್ಥಾನದಲ್ಲಿದೆ. ಆ ನಂತರದ ಸ್ಥಾನದಲ್ಲಿ ಬೆಂಗಳೂರು ಗ್ರಾಮೀಣ, ಬೆಳಗಾವಿ ಮತ್ತು ತುಮಕೂರು ಜಿಲ್ಲೆ ಇದೆ. ಬೆಂಗಳೂರು ನಗರ ಜಿಲ್ಲೆಯು 7ನೇ ಸ್ಥಾನದಲ್ಲಿದೆ. ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗು ಮತ್ತು ಗದಗ ಜಿಲ್ಲೆಯು ಅತ್ಯಂತ ಕಡಿಮೆ ಜಿಐಐ ಹೊಂದಿವೆ.

ಕೇರಳ ಮತ್ತು ತಮಿಳುನಾಡು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿ ಇವೆ.

ತಗ್ಗಿದ ಮಕ್ಕಳ ದಾಖಲಾತಿ

ರಾಜ್ಯದಲ್ಲಿ 22,917 ಕಿರಿಯ ಪ್ರಾಥಮಿಕ ಶಾಲೆ, 30,104 ಹಿರಿಯ ಪ್ರಾಥಮಿಕ ಶಾಲೆ ಮತ್ತು 17,989 ಪ್ರೌಢಶಾಲೆಗಳಿವೆ. ಪ್ರೌಢಶಾಲೆಗಳ ಪೈಕಿ ಶೇ 26.96ರಷ್ಟು ಮಾತ್ರ ಸರ್ಕಾರದ ನಿರ್ವಹಣೆಯಲ್ಲಿವೆ. ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ ಹೆಚ್ಚಿದೆ. ಖಾಸಗಿ ಶಾಲೆಗಳು ನಗರ ಪ್ರದೇಶದಲ್ಲಿ ಕೇಂದ್ರೀಕೃತವಾಗಿವೆ. ಸರ್ಕಾರಿ ಶಾಲೆಗಳಲ್ಲಿ 1ರಿಂದ 10ನೇ ತರಗತಿವರೆಗೆ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಕುಸಿದಿದೆ. 2010–11ರಲ್ಲಿ 1.29 ಕೋಟಿ ಇದ್ದ ವಿದ್ಯಾರ್ಥಿಗಳ ಸಂಖ್ಯೆಯು 2023–24ರಲ್ಲಿ 1 ಕೋಟಿಗೆ ಇಳಿದಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹477-685

ದ್ವಿತಳಿ (ಬಿ.ವಿ) ₹435-869

ಷೇರುಪೇಟೆ ವಹಿವಾಟು 8



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,544
ಇಂದಿನ ಅಂತ್ಯ	22,552
▲	8
ದಿನದ ಗರಿಷ್ಠ	22,663

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹430

ವಿನಿಮಯ ದರ

$ ಡಾಲರ್	86.95
£ ಪೌಂಡ್	112.39
€ ಯುರೊ	94.36
¥ ಯೆನ್ (100ಕ್ಕೆ)	59

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹189.50
ಆರ್‌ಎಸ್‌ಎಸ್-5	₹183.50
ಗುಡ್ ಲಾಟ್	₹178.50

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹26250
ಎಸಿ	₹15400
ಆರ್‌ಪಿ	₹22500
ಆರ್‌ಸಿ	₹12420

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹2,000-2,800
ಮಧ್ಯಮ	₹1,500-2,000
ಸಣ್ಣ	₹1,000-1,500

ಕಲಾವಿದರ ಮಾಸಾಶನ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಕಷ್ಟದಲ್ಲಿರುವ ಕಲಾವಿದರಿಗೆ ನೀಡಲಾಗುತ್ತಿರುವ ಮಾಸಾಶನವನ್ನು ರಾಜ್ಯ ಸರ್ಕಾರವು ₹ 2,500ಕ್ಕೆ ಹೆಚ್ಚಿಸಿದೆ.

ರಾಜ್ಯದಲ್ಲಿ 12 ಸಾವಿರಕ್ಕೂ ಅಧಿಕ ಕಲಾವಿದರು ತಲಾ ₹2 ಸಾವಿರ ಮಾಸಾಶನ ಪಡೆಯುತ್ತಿದ್ದಾರೆ. ಈ ಮಾಸಾಶನವನ್ನು ₹5 ಸಾವಿರಕ್ಕೆ ಹೆಚ್ಚಿಸಬೇಕೆಂಬ ಬೇಡಿಕೆ ಕಲಾವಿದರ ವಲಯದಲ್ಲಿತ್ತು. ಕಲಾವಿದರ ಒಕ್ಕೂಟವು ಈ ಬಗ್ಗೆ ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಿತ್ತು. ಕಳೆದ ಸೆಪ್ಟೆಂಬರ್‌ನಲ್ಲಿ ನಡೆದ ಕರ್ನಾಟಕ ನಾಟಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಂದಿನ ವರ್ಷದಿಂದ ₹3 ಸಾವಿರಕ್ಕೆ ಹೆಚ್ಚಿಸುವುದಾಗಿ ಭರವಸೆ ನೀಡಿದ್ದರು. ಆದರೆ, ₹500 ಮಾತ್ರ ಹೆಚ್ಚಿಸಲಾಗಿದೆ.

ಬಾದಾಮಿಯಲ್ಲಿ ನಡೆಯುವ 'ಚಾಲುಕ್ಯ ಉತ್ಸವ'ದ ನೃತ್ಯೋತ್ಸವ ಕಾರ್ಯಕ್ರಮ ಆಯೋಜನೆಗೆ ₹2 ಕೋಟಿ ಅನುದಾನ ಘೋಷಿಸಲಾಗಿದೆ. 'ಕನ್ನಡ ಭಾರತಿ' ಪುಸ್ತಕ ಮಾಲಿಕೆಯಡಿ ವಿವಿಧ ಕ್ಷೇತ್ರಗಳ ಸಾಧಕರನ್ನು ಪರಿಚಯಿಸುವ ಪುಸ್ತಕ ಪ್ರಕಟಣೆಗೆ ₹50 ಲಕ್ಷ ಒದಗಿಸಲಾಗಿದೆ.

ದಾವಣಗೆರೆಯ ವೃತ್ತಿರಂಗಭೂಮಿ ರಂಗಾಯಣದಲ್ಲಿ ₹3 ಕೋಟಿ ವೆಚ್ಚದಲ್ಲಿ ಮೂಲಭೂತ ಸೌಕರ್ಯ, ವೃತ್ತಿ ರಂಗಾಯಣ ಸಮುಚ್ಚಯ ಹಾಗೂ ಥಿಯೇಟರ್ ಮ್ಯೂಸಿಯಂ ನಿರ್ಮಾಣ ಮಾಡುವುದಾಗಿ ಘೋಷಿಸಲಾಗಿದೆ. ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ 2,500 ತಾಳೆಗರಿಯ ಹಸ್ತಪ್ರತಿಗಳನ್ನು ₹1 ಕೋಟಿಯಲ್ಲಿ ಡಿಜಿಟಲೀಕರಣಕ್ಕೆ ಯೋಜನೆ ರೂಪಿಸಲಾಗಿದೆ. ಮೈಸೂರು ರಂಗಾಯಣದ ಕಾರ್ಯಚಟುವಟಿಕೆಗಳಿಗೆ ₹2 ಕೋಟಿ ಅನುದಾನ, ಸಂತಕವಿ ಕನಕದಾಸ ಮತ್ತು ತತ್ವ ಪದಕಾರರ ಅಧ್ಯಯನ ಕೇಂದ್ರಕ್ಕೆ ತತ್ವಪದ ಪಾರಿಭಾಷಿಕ ಪದಕೋಶದ ಸಿದ್ಧತೆ ಮತ್ತು ಪ್ರಕಟಣೆ ಕಾರ್ಯಕ್ಕೆ ₹1 ಕೋಟಿ ನೀಡಲಾಗಿದೆ.

- ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಟ್ರಸ್ಟ್‌ನ ಕಾರ್ಯಚಟುವಟಿಕೆ ಕೈಗೊಳ್ಳಲು, ಬೆಂಗಳೂರಿನಲ್ಲಿ ಕಟ್ಟಡ ನಿರ್ಮಾಣಕ್ಕೆ ₹ 1 ಕೋಟಿ ಅನುದಾನ
- ಸೇವಾದಳ ಸಂಸ್ಥಾಪಕ ಹಾಗೂ ಸ್ವಾತಂತ್ರ್ಯ ಸೇನಾನಿ ಎನ್.ಎಸ್. ಹರ್ಡೀಕರ್ ಅವರ ಸ್ಮಾರಕವನ್ನು ಬೆಳಗಾವಿಯ ಘಟಪ್ರಭಾದ ಆರೋಗ್ಯ ಧಾಮದಲ್ಲಿ ನಿರ್ಮಿಸಲು ₹ 2 ಕೋಟಿ ಅನುದಾನ
- ಯುವಜನರು ಸಾಮರಸ್ಯದಿಂದ ಬದುಕಲು ಪ್ರೇರೇಪಿಸಲು ರಾಮ್ ಮನೋಹರ್ ಲೋಹಿಯಾ ಹಾಗೂ ಇತರ ಮಹನೀಯರ ಪುಸ್ತಕಗಳಲ್ಲಿನ ಸೌಹಾರ್ದತೆಯ ಅಂಶಗಳನ್ನು ಕ್ರೋಡೀಕರಿಸಿ, ಕನ್ನಡ ಭಾಷೆಯಲ್ಲಿ ಪ್ರಕಟಣೆ. ಈ ಬಗ್ಗೆ ಕಮ್ಮಟ, ಕಾರ್ಯಾಗಾರ ಆಯೋಜನೆ
- ತತ್ವಪದ ಭಾಷಿಕ ಪದಕೋಶದ ಸಿದ್ಧತೆ ಮತ್ತು ಪ್ರಕಟಣೆ ಕಾರ್ಯಕ್ಕೆ ಸಂತಕವಿ ಕನಕದಾಸ ಮತ್ತು ತತ್ವ ಪದಕಾರರ ಅಧ್ಯಯನ ಕೇಂದ್ರಕ್ಕೆ ₹ 1 ಕೋಟಿ ಅನುದಾನ
- ಶಿಕ್ಷಣ ತಜ್ಞ ಎಚ್. ನರಸಿಂಹಯ್ಯ ಅವರ ಸ್ಮರಣಾರ್ಥ 'ಡಾ.ಎಚ್. ನರಸಿಂಹಯ್ಯ ಪ್ರಾಧಿಕಾರ' ಸ್ಥಾಪನೆ. ಅವರು ವ್ಯಾಸಂಗ ಮಾಡಿರುವ ಗೌರಿಬಿದನೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಉನ್ನತೀಕರಣ

ನಕ್ಸಲ್ ನಿಗ್ರಹ ಪಡೆ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ನಕ್ಸಲರು ಶರಣಾಗುವುದರೊಂದಿಗೆ ರಾಜ್ಯವು ನಕ್ಸಲ್ ಮುಕ್ತವಾಗಿದೆ. ಹಾಗಾಗಿ ನಕ್ಸಲ್ ನಿಗ್ರಹ ಪಡೆಯನ್ನು ವಿಸರ್ಜನೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಶರಣಾಗಿರುವ ನಕ್ಸಲರನ್ನು ಸಮಾಜದ ಮುಖ್ಯವಾಹಿನಿಗೆ ಸೇರ್ಪಡೆಗೊಳಿಸಲು ಹಾಗೂ ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಮೂಲಸೌಕರ್ಯ ಒದಗಿಸಲು ₹10 ಕೋಟಿ ವೆಚ್ಚದ ವಿಶೇಷ ಪ್ಯಾಕೇಜ್ ರೂಪಿಸಲಾಗುತ್ತದೆ ಎಂದು ಪ್ರಕಟಿಸಿದರು.

ರಾಜ್ಯದಲ್ಲಿ ಪ್ರಸ್ತುತ 5 ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಸಕ್ತ ವರ್ಷದಿಂದ ಬಳ್ಳಾರಿ, ದಾವಣಗೆರೆ, ಮೈಸೂರು ಮತ್ತು ಬೆಂಗಳೂರು ಕೇಂದ್ರ ವಲಯಗಳಲ್ಲಿ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳಗಳ ಸ್ಥಾಪನೆಗೆ ಒತ್ತು ನೀಡಲಾಗಿದೆ.

ನಂದಿ ಬೆಟ್ಟದ ಕೂಡುಗುರ್ಕಿ ಮತ್ತು ಕೆಜಿಎಫ್ ಬಳಿ ಎರಡು ಭಾರತೀಯ ಮೀಸಲು ಪೊಲೀಸ್ ಪಡೆಗಳನ್ನು (ಐಆರ್‌ಬಿ) ಸ್ಥಾಪಿಸಲು ಬಜೆಟ್‌ನಲ್ಲಿ ₹80 ಕೋಟಿ ಅನುದಾನ ಒದಗಿಸಲಾಗಿದೆ. ಪೊಲೀಸ್ ವಸತಿ ಗೃಹಗಳ ನಿರ್ಮಾಣಕ್ಕೆ 2025-26ನೇ ಸಾಲಿಗೆ ₹300 ಕೋಟಿ ಹಾಗೂ ಪೊಲೀಸ್ ಸಿಬ್ಬಂದಿಗೆ ಆರೋಗ್ಯ ತಪಾಸಣೆಗೆ ನೀಡುತ್ತಿರುವ ಮೊತ್ತವನ್ನು ₹1 ಸಾವಿರದಿಂದ ₹1,500ಕ್ಕೆ ಹೆಚ್ಚಿಸಲಾಗಿದೆ.

- ಸೈಬರ್ ಅಪರಾಧ ಮತ್ತು ಮಾದಕ ದ್ರವ್ಯ ವಿಭಾಗ ಬಲಪಡಿಸಲು ₹ 5 ಕೋಟಿ ಅನುದಾನ
- ಕಾರಾಗೃಹ ಇಲಾಖೆ ಮೂಲಸೌಕರ್ಯಕ್ಕೆ ₹ 100 ಕೋಟಿ
- ಅಗ್ನಿ ಅನಾಹುತ ತಡೆಗೆ 52–54 ಮೀಟರ್ ಎತ್ತರಕ್ಕೆ ತಲುಪುವ ಏರಿಯಲ್ ಲ್ಯಾಂಡರ್ ಪ್ಲಾಟ್‌ಫಾರಂ ವಾಹನ
- ಮೈಸೂರು ನಗರದಲ್ಲಿ ₹ 3 ಕೋಟಿ ವೆಚ್ಚದಲ್ಲಿ ಹೊಸ ಅಗ್ನಿ ಶಾಮಕ ಠಾಣಾ ಕಟ್ಟಡ ನಿರ್ಮಾಣ

'ಪರಿಶಿಷ್ಟರ ಅಭಿವೃದ್ಧಿಗೆ ಅನುದಾನ ಹೆಚ್ಚಿಸಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಬಜೆಟ್‌ನಲ್ಲಿ ಎಸ್‌ಸಿಎಸ್‌ಪಿಗೆ ₹29,992 ಕೋಟಿ ಹಾಗೂ ಟಿಎಸ್‌ಪಿಗೆ ₹12,026 ಕೋಟಿ ನಿಗದಿಪಡಿಸಲಾಗಿದೆ. ಬಜೆಟ್ ಗಾತ್ರಕ್ಕೆ ಹೋಲಿಸಿದರೆ ಅನುದಾನವನ್ನು ಹೆಚ್ಚಿಸಿಲ್ಲ ಎಂದು ಕರ್ನಾಟಕ ದಲಿತ ಉದ್ದಿಮೆದಾರರ ಸಂಘ ಪ್ರತಿಕ್ರಿಯಿಸಿದೆ.

2014ರಿಂದ 2025ರ ವರೆಗೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯ್ದೆ ಅಡಿ ನೀಡಿರುವ ಒಟ್ಟು ಅನುದಾನ ₹2.95 ಲಕ್ಷ ಕೋಟಿಯಾಗಿದೆ. ಈ ಅವಧಿಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ₹2,255 ಕೋಟಿಯಷ್ಟು ನೀಡಲಾಗಿದೆ ಎಂದು ಹೇಳಿದೆ.

ಸರ್ಕಾರ ನೀಡುತ್ತಿರುವ ನೆರವು ಈ ಸಮುದಾಯಗಳ ಆರ್ಥಿಕ ಸಬಲೀಕರಣಕ್ಕೆ ಪೂರಕವಾಗಿದೆ. ಇದರಿಂದ ಯೋಜನೆಗಳಿಗೆ ಅನುದಾನ ಹೆಚ್ಚಿಸಬೇಕಿತ್ತು. ಎಸ್.ಸಿ, ಎಸ್.ಟಿ ಗುತ್ತಿಗೆದಾರರಿಗೆ ಕಾಮಗಾರಿ ಗುತ್ತಿಗೆ ಮೊತ್ತವನ್ನು ₹1 ಕೋಟಿಯಿಂದ ₹2 ಕೋಟಿಗೆ ಹೆಚ್ಚಿಸಿದೆ. ಆದರೆ, ಟೆಂಡರ್ ಕರೆಯುವಾಗ ಹಲವಾರು ಕಾಮಗಾರಿಗಳನ್ನು ಪ್ಯಾಕೇಜ್ ಮಾಡಿ ಮೀಸಲಾತಿ ತಪ್ಪಿಸುವ ಕ್ರಮಕ್ಕೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದೆ.

ಸಂಕ್ಷಿಪ್ತ ಸುದ್ದಿ

ಪಾಸ್‌ಪೋರ್ಟ್ ಒಪ್ಪಿಸಲು ಲಲಿತ್ ಮೋದಿ ಅರ್ಜಿ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಐಪಿಎಲ್) ಅವ್ಯವಹಾರ ನಡೆಸಿರುವ ಆರೋಪ ಹೊತ್ತಿರುವ ಲಲಿತ್ ಮೋದಿ, ಭಾರತದ ಪಾಸ್‌ಪೋರ್ಟ್ ಅನ್ನು ಒಪ್ಪಿಸಲು ಲಂಡನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಗೆ ಅರ್ಜಿ ಸಲ್ಲಿಸಿದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಶುಕ್ರವಾರ ಈ ವಿಚಾರವನ್ನು ಖಚಿತಪಡಿಸಿದ್ದಾರೆ. 'ಲಲಿತ್ ಮೋದಿ ಅವರು ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಲಾಗುವುದು. ಅವರು ವನುವಾಟು ದೇಶದ ಪೌರತ್ವ ಪಡೆದಿರುವ ಮಾಹಿತಿ ಲಭಿಸಿದೆ. ಆದಾಗ್ಯೂ, ಅವರ ಮೇಲಿನ ಪ್ರಕರಣವನ್ನು ಮುಂದುವರಿಸಲಾಗುವುದು' ಎಂದು ಜೈಸ್ವಾಲ್ ಅವರು ತಿಳಿಸಿದ್ದಾರೆ.

ಐಪಿಎಲ್ ಮುಖ್ಯಸ್ಥರಾಗಿದ್ದ ಅವಧಿಯಲ್ಲಿ ಕೋಟ್ಯಂತರ ರೂಪಾಯಿ ಲಪಟಾಯಿಸಿದ ಆರೋಪವನ್ನು ಎದುರಿಸುತ್ತಿರುವ ಲಲಿತ್ ಮೋದಿ, ಸದ್ಯ ಲಂಡನ್‌ನಲ್ಲಿ ನೆಲಸಿದ್ದಾರೆ ಎಂದು ತಿಳಿದುಬಂದಿದೆ. ಅವರು, 2010ರಲ್ಲಿ ಭಾರತವನ್ನು ತೊರೆದಿದ್ದರು.

100 ರೈಲು ನಿಲ್ದಾಣಕ್ಕೆ ಸ್ವಿಗ್ಗಿ ಆಹಾರ ಪೂರೈಕೆ

ನವದೆಹಲಿ (ಪಿಟಿಐ): ಭಾರತೀಯ ರೈಲ್ವೆ ಅಡುಗೆ ಮತ್ತು ಪ್ರವಾಸೋದ್ಯಮ ನಿಗಮದ (ಐಆರ್‌ಸಿಟಿಸಿ) ಪಾಲುದಾರಿಕೆಯಲ್ಲಿ ಸ್ವಿಗ್ಗಿ ಕಂಪನಿಯು, ದೇಶದ 100 ರೈಲು ನಿಲ್ದಾಣಗಳಿಗೆ ಆಹಾರ ಪೂರೈಕೆ ಮಾಡಲಿದೆ.

ಪ್ರಸ್ತುತ ಈ ಸೇವೆಯ ಮೂಲಕ ದೇಶದ 20 ರಾಜ್ಯಗಳಲ್ಲಿರುವ ನಿಲ್ದಾಣಗಳಿಗೆ ಆಹಾರ ಪೂರೈಕೆ ಸೌಲಭ್ಯ ಕಲ್ಪಿಸಲಿದೆ. ಮುಂಬರುವ ತಿಂಗಳುಗಳಲ್ಲಿ ಈ ಸೇವೆ ಆರಂಭಿಸಲಾಗುವುದು ಎಂದು ಸ್ವಿಗ್ಗಿ ತಿಳಿಸಿದೆ.

ರೈಲು ಪ್ರಯಾಣಿಕರಿಗೆ ಆಹಾರ ಪೂರೈಕೆ ಮಾಡಲು ಕಳೆದ ವರ್ಷದ ಮಾರ್ಚ್‌ನಲ್ಲಿ ಐಆರ್‌ಸಿಟಿಸಿ ಜೊತೆಗೆ ಸ್ವಿಗ್ಗಿ ಒಪ್ಪಂದ ಮಾಡಿಕೊಂಡಿತ್ತು.

ಯೆಮೆನ್ ಬಳಿ ಮುಳುಗಿದ 4 ದೋಣಿ

ಕೈರೊ(ಎಪಿ/ಎಎಫ್‌ಪಿ): ಆಫ್ರಿಕಾದಿಂದ ವಲಸಿಗರನ್ನು ಕರೆದೊಯ್ಯುತ್ತಿದ್ದ ನಾಲ್ಕು ದೋಣಿಗಳು ಯೆಮೆನ್ ಮತ್ತು ದಿಬೌತಿ ಬಳಿಯ ಸಾಗರದಲ್ಲಿ ಮುಳುಗಿದ ಪರಿಣಾಮ, ಕನಿಷ್ಠ ಇಬ್ಬರು ಮೃತಪಟ್ಟು, ಇತರ 186 ಮಂದಿ ನಾಪತ್ತೆಯಾಗಿದ್ದಾರೆ ಎಂದು ವಿಶ್ವಸಂಸ್ಥೆ ತಿಳಿಸಿದೆ. ಎರಡು ದೋಣಿಗಳು ಗುರುವಾರ ರಾತ್ರಿ ಯಮನ್ ಬಳಿ ಸಾಗರದಲ್ಲಿ ಮುಳುಗಿದವು. ದೋಣಿಯ ಇಬ್ಬರು ಸಿಬ್ಬಂದಿಯನ್ನು ರಕ್ಷಿಸಲಾಗಿದೆ.

ಚಿನ್ನದ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನದ ದರ ಇಳಿಕೆಯಾಗಿದ್ದರೆ, ಬೆಳ್ಳಿ ಧಾರಣೆ ಏರಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹200 ಕಡಿಮೆಯಾಗಿ, ₹88,900ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹88,500 ಆಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹500 ಹೆಚ್ಚಳವಾಗಿ, ₹99,500 ಆಗಿದೆ.

ಸ್ಥಳೀಯ ಆಭರಣ ತಯಾರಕರು ಮತ್ತು ಚಿಲ್ಲರೆ ಖರೀದಿದಾರರಿಂದ ಹಳದಿ ಲೋಹಕ್ಕೆ ಬೇಡಿಕೆ ಕಡಿಮೆಯಾಗಿದೆ. ಇದರಿಂದ ಚಿನ್ನದ ದರ ಇಳಿದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಏಪ್ರಿಲ್‌ನಲ್ಲಿ ಬೀದರ್– ಬೆಂಗಳೂರು ವಿಮಾನ ಹಾರಾಟ

ಪ್ರಜಾವಾಣಿ ವಾರ್ತೆ

ಬೀದರ್: ಬೀದರ್–ಬೆಂಗಳೂರು ನಡುವೆ ಸ್ಥಗಿತಗೊಂಡಿದ್ದ ನಾಗರಿಕ ವಿಮಾನಯಾನ ಸೇವೆ ಏಪ್ರಿಲ್ 15ರಿಂದ ಪುನಃ ಶುರುವಾಗಲಿದೆ.

ವಿಮಾನ ಹಾರಾಟಕ್ಕೆ 'ಸ್ಟಾರ್ ಏರ್' ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಪ್ರತಿದಿನ ಬೆಳಿಗ್ಗೆ 7.45ಕ್ಕೆ ಬೆಂಗಳೂರಿನಿಂದ ಹೊರಡುವ ವಿಮಾನ ಬೆಳಿಗ್ಗೆ 9ಕ್ಕೆ ಬೀದರ್ ತಲುಪಲಿದೆ.

ಅದೇ ದಿನ ಬೆಳಿಗ್ಗೆ 9.30ಕ್ಕೆ ಬೀದರ್‌ನಿಂದ ಹೊರಟು ಬೆಳಿಗ್ಗೆ 10.45ಕ್ಕೆ ಬೆಂಗಳೂರು ತಲುಪಲಿದೆ. ಈಗಾಗಲೇ 'ಸ್ಟಾರ್ ಏರ್' ಆನ್‌ಲೈನ್‌ನಲ್ಲಿ ವಿಮಾನದ ಟಿಕೆಟ್ ಬುಕಿಂಗ್ ಕೂಡ ಆರಂಭಗೊಂಡಿದೆ. 2023ರ ಡಿಸೆಂಬರ್ 26ರಂದು ಬೀದರ್–ಬೆಂಗಳೂರು ವಿಮಾನ ಸಂಚಾರ ಸ್ಥಗಿತಗೊಂಡಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

ಪ್ರವಾಸ

Travel Agencies

ಮಹಿಳಾ ದಿನಾಚರಣೆ ವಿಶೇಷ ರಿಯಾಯಿತಿ 11 ದಿನಗಳು ಸಿಂಗಪೂರ್ ಮಲೇಶಿಯಾ ಥೈಲ್ಯಾಂಡ್, 6 ದಿನಗಳು ಬಾಲಿ 10 ದಿನಗಳು ಕಾಂಬೋಡಿಯಾ & ವಿಯೆಟ್ನಾಂ, 12 ದಿನಗಳು ಲಂಡನ್ ಸ್ಕಾಟ್ಲ್ಯಾಂಡ್ ಐರ್ಲ್ಯಾಂಡ್ ವೇಲ್ಸ್. ಭಟ್ ಟ್ರಾವೆಲ್ಸ್: 9844037295

Travel

20.3.2025 ರಿಂದ 9 ದಿನಗಳು ಅಂಡಮಾನ್ ಪ್ರವಾಸ ಹಡಗು ಮತ್ತು ವಿಮಾನದಲ್ಲಿ, ಜುಲೈ 1 ರಿಂದ 12 ದಿನಗಳು ಅಮರನಾಥ್, ವೈಷ್ಣೋದೇವಿ ಅಮೃತಸರ, ಶ್ರೀನಗರ. ಶ್ರೀಗಂಗಾ ಟೂರಿಸ್ಟ್. 9480253807

ವ್ಯಾಪಾರ

Business Offers

Distributors

MEN'S CLOTHING brand is looking for Distributors in Karnataka. Candidates to be fluent in English, Hindi, Kannada. Experience required. Call/WhatsApp +91 7840962967

ಭವಿಷ್ಯ

Astrology

★ಓಂ ದುರ್ಗಾಂಜನಂ★ ಇಚ್ಛಾಸಿದ್ಧಿ ಶಕ್ತಿಪೀಠ,ಭಾರತದ ಪ್ರಖ್ಯಾತ ಲಕ್ಷಾಂತರ ಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀದೇವಾನಂದ ಮಹಾರಾಜ,ನಿಮ್ಮೆಲ್ಲಾ ಸಂಕಷ್ಟಗಳಿಗೆ ಪರಿಹಾರ, ಬೆಂಗಳೂರು.9845005009

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ @50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 7795158424 9900428036

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು



ವೆಂಕಟರಾಮಯ್ಯ
ನಿವೃತ್ತ ಪೊಲೀಸ್
ಜನನ: 1925 ಮರಣ: 08–03–2000
ನಮ್ಮ ಇಂದಿನ ಜೀವನವು ನಿಮ್ಮ ಆದರ್ಶ ಮಾರ್ಗದಲ್ಲಿ ಸಾಗುತ್ತಿದ್ದು ಇಂದಿಗೂ ನಮ್ಮ ಜೀವನದ ಪ್ರತಿಯೊಂದು ಹಂತದಲ್ಲೂ ಸ್ಫೂರ್ತಿದಾಯಕವಾಗಿ ನಮ್ಮ ಬಾಳಿಗೆ ನಂದಾದೀಪವಾಗಿ ಪ್ರಜ್ವಲಿಸುತ್ತಿದ್ದೀರಿ.
ಇಂತಿ ನಿಮ್ಮ ನೆನಪಿನಲ್ಲಿ:
ಟಪಾಲು ಚಿಕ್ಕಣ್ಣನ ವಂಶಸ್ಥರು ಬೆಲಗೂರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು

22ನೇ ವರ್ಷದ ಚಿರಸ್ಮರಣೆ
ಶ್ರೀಮತಿ ಡಿ. ಶಾರದಮ್ಮ
ನಿಧನ: 08.03.2003
ಲೇಟ್ ಶ್ರೀ ಕೆ. ರಾಮಯ್ಯರವರ ಧರ್ಮಪತ್ನಿ
ಮಾಜಿ ನಗರಸಭಾ ಸದಸ್ಯರು, ಬಿ.ಬಿ.ಎಂ.ಪಿ. ಸದ್ದುಗುಂಟೆಪಾಳ್ಯ, ಚಿಕ್ಕಆಡುಗೋಡಿ, ಬೆಂಗಳೂರು.
ಸಂಸ್ಥಾಪಕರು: ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನ, ಚಿಕ್ಕಆಡುಗೋಡಿ, ಬೆಂಗಳೂರು
ನೀವು ನಮ್ಮನ್ನಗಲಿದರೂ ನಿಮ್ಮ ಸರಳತೆ, ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ....
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಮರಿಮಕ್ಕಳು.

ಫೈನಲ್‌ನಲ್ಲಿ ಭಾರತ ತಂಡವು ನಾಲ್ವರು ಸ್ಪಿನ್ನರ್‌ಗಳನ್ನು ಕಣಕ್ಕಿಳಿಸುವ ಸಾಧ್ಯತೆ

ಸ್ಪಿನ್ ಸವಾಲಿಗೆ ಉತ್ತರಿಸುವರೇ ಕೇನ್?

ದುಬೈ(ಪಿಟಿಐ): ಭಾನುವಾರ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯವು ನ್ಯೂಜಿಲೆಂಡ್ ತಂಡದ ಅನುಭವಿ ಬ್ಯಾಟರ್ ಕೇನ್ ವಿಲಿಯಮ್ಸನ್ ಮತ್ತು ಭಾರತದ ಸ್ಪಿನ್ನರ್‌ಗಳ ನಡುವಣ ಹಣಾಹಣಿಯಾಗಲಿದೆ.

25 ವರ್ಷಗಳ ನಂತರ ಐಸಿಸಿ ಏಕದಿನ ಕ್ರಿಕೆಟ್ ಮಾದರಿಯ ಟ್ರೋಫಿ ಜಯಿಸುವ ಛಲದಲ್ಲಿ ಕಿವೀಸ್ ಬಳಗವಿದೆ. ಮಧ್ಯಮ ಕ್ರಮಾಂಕದಲ್ಲಿ ಉತ್ತಮ ಲಯದಲ್ಲಿರುವ ಕೇನ್ ಆಟವೇ ತಂಡಕ್ಕೆ ಪ್ರಮುಖ ಶಕ್ತಿಯಾಗಿದೆ. ಸ್ಪಿನ್ ಎಸೆತಗಳನ್ನು ಎದುರಿಸುವಲ್ಲಿ ಅವರು ಸಮರ್ಥರಾಗಿದ್ದಾರೆ.

2000ನೇ ಇಸವಿಯಲ್ಲಿ ಕೆನ್ಯಾದಲ್ಲಿ ನಡೆದಿದ್ದ ಐಸಿಸಿ ನಾಕೌಟ್ ಟ್ರೋಫಿ (ಈಗ ಚಾಂಪಿಯನ್ಸ್ ಟ್ರೋಫಿ) ಟೂರ್ನಿಯಲ್ಲಿ ನ್ಯೂಜಿಲೆಂಡ್ ಚಾಂಪಿಯನ್ ಆಗಿತ್ತು. ಅದರ ನಂತರ ಐಸಿಸಿ ಟ್ರೋಫಿಯು ತಂಡಕ್ಕೆ ಒಲಿದಿಲ್ಲ.

ಇನ್ನೊಂದೆಡೆ ಭಾರತ ತಂಡವು 2013ರಲ್ಲಿ ಚಾಂಪಿಯನ್ಸ್ ಟ್ರೋಫಿ ಜಯಿಸಿತ್ತು. 2017ರಲ್ಲಿ ರನ್ನರ್ಸ್ ಅಪ್ ಆಗಿತ್ತು. ಇದೀಗ ಮತ್ತೊಮ್ಮೆ ಚಾಂಪಿಯನ್ ಪಟ್ಟದ ಸನಿಹದಲ್ಲಿದೆ. ಫೈನಲ್ ಪಂದ್ಯದಲ್ಲಿ ಇಬ್ಬರು ವೇಗಿಗಳು ಮತ್ತು ನಾಲ್ವರು ಸ್ಪಿನ್ನರ್‌ಗಳನ್ನು ಕಣಕ್ಕಿಳಿಸುವುದು ಬಹುತೇಕ ಖಚಿತವಾಗಿದೆ.

ಗುಂಪು ಹಂತದಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯ ನಡೆದಿದ್ದ ಪಿಚ್‌ನಲ್ಲಿಯೇ ಫೈನಲ್ ಆಯೋಜನೆಗೊಳ್ಳಲಿದೆ. ಈ ಪಿಚ್ ಸ್ಪಿನ್ ಬೌಲಿಂಗ್‌ಗೆ ಹೆಚ್ಚು ನೆರವು ನೀಡುವ ನಿರೀಕ್ಷೆ ಇದೆ. ತಾಂತ್ರಿಕವಾಗಿ ನುರಿತ ಬ್ಯಾಟರ್ ಆಗಿರುವ ಕೇನ್ ವಿಲಿಯಮ್ಸನ್ ಅವರು ಸ್ಪಿನ್ ಎದುರು ಉತ್ತಮವಾಗಿ ಆಡಬಲ್ಲವರು. ಸೆಮಿಫೈನಲ್‌ನಲ್ಲಿ ಅವರು ಶತಕ ಗಳಿಸಿದ್ದರು.

ನ್ಯೂಜಿಲೆಂಡ್ ತಂಡದ ಬ್ಯಾಟರ್ ಕೇನ್ ವಿಲಿಯಮ್ಸನ್ –ಎಎಫ್‌ಪಿ ಚಿತ್ರ

CHAMPIONS ICC TROPHY

ಭಾರತದ ಸ್ಪಿನ್ನರ್‌ಗಳು ಈ ಪಿಚ್‌ನಲ್ಲಿ ಪರಿಣಾಮಕಾರಿಯಾಗಿದ್ದಾರೆ. ಅದರಲ್ಲೂ ವಿಶೇಷವಾಗಿ ವರುಣ್ ಚಕ್ರವರ್ತಿಯನ್ನು ಎದುರಿಸುವುದು ಬಹಳ ಕಠಿಣ. ಕಳೆದ ಪಂದ್ಯದಲ್ಲಿ ವರುಣ್ ಅವರು ಮಿಚೆಲ್ ಸ್ಯಾಂಟನರ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದ ಎಸೆತವು 113 ಕಿ.ಮೀ ವೇಗದ ಸೀಮ್ ಅಪ್ ಆಗಿತ್ತು.

‘ಕೆಲವೊಮ್ಮೆ ಪ್ರವಾಹದ ಎದುರು ಈಜುವ ಸಾಹಸ ಮಾಡಬೇಕಾಗುತ್ತದೆ. ಸ್ಪಿನ್ ದಾಳಿಯನ್ನು ಎದುರಿಸಲು ನಾವು ಎಲ್ಲ ರೀತಿಯಿಂದಲೂ ಸಿದ್ಧರಾಗುತ್ತಿದ್ದೇವೆ’ ಎಂದು ನ್ಯೂಜಿಲೆಂಡ್ ಕೋಚ್ ಗ್ಯಾರಿ ಸ್ಟೆಡ್ ಹೇಳಿದರು.

‘ಕೇನ್ ಅವರು ದೊಡ್ಡ ಪಂದ್ಯಗಳಲ್ಲಿ ತಮ್ಮ ಸಮಚಿತ್ತ ಮತ್ತು ಸಂಯಮದ ಆಟದ ಮೂಲಕ ತಂಡಕ್ಕೆ ನೆರವಾಗಿರುವ ನಿದರ್ಶನಗಳು ಸಾಕಷ್ಟಿವೆ. ಅವರ ಮೇಲೆ ನಮಗೆ ಇಲ್ಲಿ ಸಂಪೂರ್ಣ ಭರವಸೆ ಇದೆ’ ಎಂದೂ ಗ್ಯಾರಿ ಹೇಳಿದರು.

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಸ್ಪಿನ್ನರ್ ರವೀಂದ್ರ ಜಡೇಜ ಅವರು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರೊಂದಿಗೆ ಶುಕ್ರವಾರ ಅಭ್ಯಾಸ ನಡೆಸಲು ತೆರಳಿದರು –ಪಿಟಿಐ ಚಿತ್ರ

‘ರೋಹಿತ್ ದೊಡ್ಡ ಇನಿಂಗ್ಸ್ ಆಡಲಿ’

ನವದೆಹಲಿ, (ಪಿಟಿಐ): ‘ನಾಯಕ ರೋಹಿತ್ ಶರ್ಮಾ ಕೇವಲ 25–30 ರನ್ ಗಳಿಸುವುದಕ್ಕೇ ಸೀಮಿತಗೊಳ್ಳದೇ ದೊಡ್ಡ ಇನಿಂಗ್ಸ್ ಆಡುವತ್ತ ಗಮನ ಹರಿಸಬೇಕು. ಕ್ರೀಸ್‌ನಲ್ಲಿ ಅವರು ಹೆಚ್ಚು ಸಮಯ ಕಳೆದರೆ ಪಂದ್ಯದ ಗತಿ ಬದಲಾಗುತ್ತದೆ’ ಎಂದು ಮಾಜಿ ಆಟಗಾರ ಸುನಿಲ್ ಗಾವಸ್ಕರ್ ಅಭಿಪ್ರಾಯಪಟ್ಟಿದ್ದಾರೆ.

ಏಕದಿನ ಆವೃತ್ತಿಯಲ್ಲಿ ಭಾರತಕ್ಕೆ ಉತ್ತಮ ಆರಂಭ ನೀಡಲು ರೋಹಿತ್ ಆಕ್ರಮಣಕಾರಿಯಾಗಿ ಆಟ ಆಡುತ್ತಾ ಬಂದಿದ್ದಾರೆ. ಆದರೆ ಇದರ ಪರಿಣಾಮ ಬೇಗನೇ ವಿಕೆಟ್ ಕಳೆದುಕೊಳ್ಳುತ್ತಿದ್ದಾರೆ.

ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಗಳಿಸಿದ 41 ರನ್ ಈ ಟೂರ್ನಿಯಲ್ಲಿ ಇದುವರೆಗೆ ಅವರ ಅತಿ ಹೆಚ್ಚಿನ ಮೊತ್ತವಾಗಿದೆ.

ಫೈನಲ್‌ಗೆ ಹೆನ್ರಿ ಲಭ್ಯ: ಕೋಚ್ ಸ್ಟೆಡ್ ವಿಶ್ವಾಸ

ದುಬೈ (ಎಎಫ್‌ಪಿ): ಭುಜದ ನೋವಿಗೆ ಒಳಗಾಗಿರುವ ವೇಗದ ಬೌಲರ್ ಮ್ಯಾಟ್ ಹೆನ್ರಿ ಅವರು ಭಾನುವಾರ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದ ವೇಳೆಗೆ ಸಂಪೂರ್ಣ ಚೇತರಿಸಿಕೊಂಡು ಆಡಲು ಇಳಿಯಲಿದ್ದಾರೆ ಎಂದು ನ್ಯೂಜಿಲೆಂಡ್ ಕೋಚ್ ಗ್ಯಾರಿ ಸ್ಟೆಡ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧ ಲಾಹೋರ್‌ನಲ್ಲಿ ಬುಧವಾರ ನಡೆದ ಸೆಮಿಫೈನಲ್ ಪಂದ್ಯದ ವೇಳೆ ಕ್ಯಾಚ್ ಹಿಡಿಯುವ ಯತ್ನದಲ್ಲಿ ಅವರ ಬಲಭುಜಕ್ಕೆ ನೋವು ಕಾಣಿಸಿಕೊಂಡಿತ್ತು.

‘ಕ್ಯಾಚ್ ಪಡೆಯುವಾಗ ಅವರ ಭುಜ ಮೊದಲು ನೆಲಕ್ಕೊರಗಿದೆ. ಇದರಿಂದ ಅವರಿಗೆ ಅನನುಕೂಲ ವಾಗಿದೆ. ಆದರೆ ಬೌಲಿಂಗ್‌ಗೆ ಮರಳಿದ್ದು ಸಕಾರಾತ್ಮಕ ಅಂಶ’ ಎಂದು ಸ್ಟೆಡ್ ಹೇಳಿದರು.

ಕ್ಲಾಸೆನ್ ಅವರ ಕ್ಯಾಚ್ ಹಿಡಿದ ನಂತರ ಹೆನ್ರಿ ಕ್ರೀಡಾಂಗಣದಿಂದ ನಿರ್ಗಮಿಸಿದ್ದರು. ಆದರೆ ಮರಳಿ ಮತ್ತೆ ಎರಡು ಓವರ್ ಮಾಡಿದ್ದರು.

‘ಸ್ಕ್ಯಾನ್ ಮೊದಲಾದ ಪ್ರಕ್ರಿಯೆ ನಡೆಸಿದ್ದೇವೆ. ಅವರಿಗೆ ಆಡಲು ಸಾಧ್ಯವಾದಷ್ಟು ಅವಕಾಶ ನೀಡುತ್ತೇವೆ’ ಎಂದು ಸ್ಟೆಡ್ ಹೇಳಿದರು.

ಗೆಲುವಿನ ಒತ್ತಡದಲ್ಲಿ ಮಂಧಾನ ಬಳಗ

ಆರ್‌ಸಿಬಿ– ಯು.ಪಿ ವಾರಿಯರ್ಸ್ ಹಣಾಹಣಿ ಇಂದು

ಲಖನೌ (ಪಿಟಿಐ): ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ನಾಕೌಟ್ ದಾರಿಯಿಂದ ಬಹುತೇಕ ಹೊರಬಿದ್ದಿರುವ ಯು.ಪಿ. ವಾರಿಯರ್ಸ್ ತಂಡವು ಶನಿವಾರ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ.

ತವರಿನ ಅಂಗಳದಲ್ಲಿ ನಾಲ್ಕು ಪಂದ್ಯಗಳಲ್ಲಿ ಸೋತಿರುವ ಸ್ಮೃತಿ ಮಂಧಾನ ಬಳಗಕ್ಕೆ ನಾಕೌಟ್ ತಲುಪಲು ಇನ್ನುಳಿದಿರುವ ಎರಡೂ ಪಂದ್ಯಗಳಲ್ಲಿ ಗೆಲುವು ಅನಿವಾರ್ಯವಾಗಿದೆ. ವಡೋದರಾದಲ್ಲಿ ನಡೆದಿದ್ದ ಮೊದಲ ಸುತ್ತಿನ ಎರಡು ಪಂದ್ಯಗಳಲ್ಲಿ ಭರ್ಜರಿ ಜಯ ಸಾಧಿಸಿದ್ದ ಆರ್‌ಸಿಬಿ ನಂತರ ಹಿನ್ನಡೆ ಅನುಭವಿಸಿತ್ತು. ಇದರಿಂದಾಗಿ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ.

ಬೆಂಗಳೂರಿನಲ್ಲಿ ವಾರಿಯರ್ಸ್ ತಂಡದ ವಿರುದ್ಧವೂ ಸ್ಮೃತಿ ಬಳಗ ಪರಾಭವಗೊಂಡಿತ್ತು. ಅದೂ ಸೂಪರ್ ಓವರ್‌ನಲ್ಲಿ. ಆಲ್‌ರೌಂಡರ್ ಸೋಫಿ ಎಕ್ಲೆಸ್ಟೋನ್ ಅವರ ಅಮೋಘ ಆಟದಿಂದಾಗಿ ಅವತ್ತು ವಾರಿಯರ್ಸ್ ಜಯಿಸಿತ್ತು. ಇದೀಗ ಆ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ಸಮಯ ಒದಗಿಬಂದಿದೆ.

ಆದರೆ ನಂತರದ ಪಂದ್ಯಗಳಲ್ಲಿ ಸತತ ಸೋಲುಂಡ ವಾರಿಯರ್ಸ್ ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕಿಳಿದಿದೆ. ಗುರುವಾರ ಮುಂಬೈ ಇಂಡಿಯನ್ಸ್ ವಿರುದ್ಧವೂ ನಿರಾಶೆ ಅನುಭವಿಸಿತ್ತು. ಇದೀಗ ಲೀಗ್ ಹಂತದಲ್ಲಿ ತನ್ನ ಕೊನೆಯ ಪಂದ್ಯವನ್ನು ಯು.ಪಿ. ಆಡಲಿದೆ. ಒಂದೊಮ್ಮೆ ಇದರಲ್ಲಿ ಗೆದ್ದರೂ ನಾಕೌಟ್ ಪ್ರವೇಶ ಸರಾಗವಲ್ಲ. ಆದರೆ ಆರ್‌ಸಿಬಿಯ ಅವಕಾಶ ಮೊಟಕುಗೊಳ್ಳುವ ಆತಂಕವಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಲಖನೌನಲ್ಲಿ ಗುರುವಾರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಆರ್‌ಸಿಬಿ ತಂಡದ ಆಟಗಾರ್ತಿಯರಾದ ಜಾರ್ಜಿಯಾ ವೇರ್‌ಹ್ಯಾಮ್, ಎಲಿಸ್ ಪೆರಿ ಮತ್ತು ಮೇಘನಾ ಸಬಿನೇನಿ ಅವರು ಸಾಂಪ್ರದಾಯಿಕ ಉಡುಗೆಯಲ್ಲಿ ಸಂಭ್ರಮಿಸಿದರು

ಗೆದ್ದು 2ನೇ ಸ್ಥಾನಕ್ಕೇರಿದ ಜೈಂಟ್ಸ್

ಲಖನೌ (ಪಿಟಿಐ): ಹರ್ಲೀನ್ ಡಿಯೋಲ್ (ಅಜೇಯ 70;49ಎಸೆತ, 4x9, 6x1) ಅವರ ಬಿರುಸಿನ ಅರ್ಧ ಶತಕದ ನೆರವಿನಿಂದ ಗುಜರಾತ್ ಜೈಂಟ್ಸ್ ತಂಡ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ವಿರುದ್ಧ ಶುಕ್ರವಾರ 5 ವಿಕೆಟ್‌ಗಳ ಅರ್ಹ ಗೆಲುವು ಸಾಧಿಸಿ ಪಾಯಿಂಟ್ ಪಟ್ಟಿ ಯಲ್ಲಿ ಎರಡನೇ ಸ್ಥಾನಕ್ಕೇರಿತು.
ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 177 ರನ್ ಗಳಿಸಿತು.ಗುಜರಾತ್ ಜೈಂಟ್ಸ್ ತಂಡ 19.3 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 178 ರನ್ ಗಳಿಸಿ ನಾಲ್ಕನೆ ಗೆಲುವು ದಾಖಲಿಸಿತು.

ಡೆಲ್ಲಿ ತಂಡದ ಮೆಗ್ ಲ್ಯಾನಿಂಗ್ (92 ರನ್, 57 ಎ) ಮತ್ತು ಶಫಾಲಿ ವರ್ಮಾ (40; 27ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 83 ರನ್ ಸೇರಿಸಿ ಭದ್ರ ಬುನಾದಿ ಹಾಕಿದ್ದರು. ಗುಜರಾತ್ ತಂಡದ ಮೇಘನಾ ಸಿಂಗ್ 35 ರನ್ನಿಗೆ 3 ವಿಕೆಟ್ ಪಡೆದು ಯಶಸ್ವಿ ಎನಿಸಿದರು.
ಈ ಮೊತ್ತ ಬೆನ್ನತ್ತಿದ ಜೈಂಟ್ಸ್ ತಂಡಕ್ಕೆ ಬೆತ್ ಮೂನಿ (44 ರನ್), ಮತ್ತು ಹರ್ಲೀನ್ ಡಿಯೊಲ್ ಎರಡನೇ ವಿಕೆಟ್‌ಗೆ 85 ರನ್‌ಗಳ ಜೊತೆಯಾಟ ವಾಡಿದರು. ನಾಯಕಿ ಆಶ್ಲೆ ಗಾರ್ಡನರ್ (22), ಬಳಿಕ ದಿಯಾಂದ್ರ ಡಾಟಿನ್ (24) ಕೂಡ ಉಪಯುಕ್ತ ಆಟವಾಡಿದರು. ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 5ಕ್ಕೆ177 (ಮೆಗ್ ಲ್ಯಾನಿಂಗ್ 92, ಶಫಾಲಿ ವರ್ಮಾ 40, ಮೇಘನಾ ಸಿಂಗ್ 35ಕ್ಕೆ3) ಗುಜರಾತ್ ಜೈಂಟ್ಸ್: 19.3 ಓವರ್‌ಗಳಲ್ಲಿ 5ಕ್ಕೆ 178 (ಹರ್ಲೀನ್ ಡಿಯೊಲ್ ಔಟಾಗದೇ 70, ಬೆತ್ ಮೂನಿ 44, ಶಿಖಾ ಪಾಂಡೆ 31ಕ್ಕೆ2,ಜೆಸ್ ಜೊನಾಸೆನ್ 38ಕ್ಕೆ 2). ಪಂದ್ಯದ ಆಟಗಾರ್ತಿ: ಹರ್ಲೀನ್ ಡಿಯೋಲ್

23 ವರ್ಷದೊಳಗಿನವರ ಇರಾನಿ ಕಪ್: ಇತರರ ತಂಡಕ್ಕೆ ಮೆಕ್ನಿಲ್, ಪ್ರಖರ್

ನವದೆಹಲಿ (ಪಿಟಿಐ): ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಟೂರ್ನಿಯ (23 ವರ್ಷದೊಳಗಿನವರ) ವಿಜೇತ ಪಂಜಾಬ್ ತಂಡದ ವಿರುದ್ಧ ಯುವ ಇರಾನಿ ಕಪ್ ಪಂದ್ಯದಲ್ಲಿ ಆಡಲಿರುವ ಭಾರತ ಇತರರ ತಂಡದಲ್ಲಿ ಕರ್ನಾಟಕದ ಇಬ್ಬರು ಸ್ಥಾನ ಪಡೆದಿದ್ದಾರೆ. ಮೊದಲ ಬಾರಿಗೆ ಈ ವಿಭಾಗದಲ್ಲಿ ಹಮ್ಮಿಕೊಂಡಿರುವ ಇರಾನಿ ಟ್ರೋಫಿ ಪಂದ್ಯ ಮೊಹಾಲಿಯಲ್ಲಿ ಇದೇ 9 ರಿಂದ 12ರವರೆಗೆ ನಿಗದಿಯಾಗಿದೆ.

ಐಪಿಎಲ್ ಯುವತಾರೆ ಸಮೀರ್ ರಿಜ್ವಿ ಅವರು ಇತರರ ತಂಡಕ್ಕೆ ನಾಯಕರಾಗಿದ್ದಾರೆ. ಬ್ಯಾಟರ್‌ಗಳಾದ ಮೆಕ್ನಿಲ್ ಎಚ್‌.ವಿ. ಮತ್ತು ಪ್ರಖರ್ ಚತುರ್ವೇದಿ ಇತರರ ತಂಡದಲ್ಲಿ ಸ್ಥಾನ ಪಡೆದ ಕರ್ನಾಟಕದ ಆಟಗಾರರಾಗಿದ್ದಾರೆ. ಋತುವಿನಲ್ಲಿ ಸಾವಿರಕ್ಕೂ ಹೆಚ್ಚು ರನ್ ಗಳಿಸಿದ ಮೆಕ್ನಿಲ್ ತಂಡದ ಉಪನಾಯಕರಾಗಿದ್ದಾರೆ.

ಇರಾನಿ ಕಪ್ ಪಂದ್ಯವನ್ನು ಸಂಪ್ರದಾಯದಂತೆ ರಣಜಿ ಟ್ರೋಫಿ ವಿಜೇತ ತಂಡ ಮತ್ತು ಭಾರತ ಇತರರ ತಂಡದ ನಡುವೆ ಆಡಲಾಗುತ್ತದೆ. ರಣಜಿ ಋತುವಿನಲ್ಲಿ ಇತರ ತಂಡಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಆಟಗಾರರಿಗೆ ಇತರರ ‘ಭಾರತ ಇತರರ ತಂಡ’ದಲ್ಲಿ ಅವಕಾಶ ನೀಡಲಾಗುತ್ತದೆ. ಆದರೆ 23 ವರ್ಷದೊಳಗಿನವರ ವಿಭಾಗದಲ್ಲಿ ಈ ಮಾದರಿಯಲ್ಲಿ ಪಂದ್ಯ ನಡೆಯುತ್ತಿರುವುದು ಇದೇ ಮೊದಲು.

ಏಷ್ಯನ್ ಮಹಿಳಾ ಕಬಡ್ಡಿ: ಫೈನಲ್‌ಗೆ ಭಾರತ ತಂಡ

ಬೆಂಗಳೂರು: ಭಾರತತಂಡಸೆಮಿಫೈನಲ್ ನಲ್ಲಿ 56–18 ಅಂಕಗಳಿಂದ ನೇಪಾಳ ತಂಡವನ್ನು ಸೋಲಿಸಿ, ಇರಾನ್‌ನ ಟೆಹರಾನ್‌ನಲ್ಲಿ ನಡೆಯುತ್ತಿರುವ ಆರನೇ ಏಷ್ಯನ್ ಮಹಿಳಾ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿತು.

ಸೊನಾಲಿ ವಿಷ್ಣು ಶಿಂಗಟೆ ನೇತೃತ್ವದ ಭಾರತ ವನಿತೆಯರ ತಂಡ ಶನಿವಾರ ನಡೆಯುವ ಫೈನಲ್‌ನಲ್ಲಿ ಆತಿಥೇಯ ಇರಾನ್ ತಂಡದ ವಿರುದ್ಧ ಆಡಲಿದೆ. ಇರಾನ್ ಇನ್ನೊಂದು ಸೆಮಿಫೈನಲ್‌ನಲ್ಲಿ 41–18 ರಿಂದ ಬಾಂಗ್ಲಾದೇಶ ತಂಡದ ಸವಾಲನ್ನು ಸುಲಭವಾಗಿ ಬದಿಗೊತ್ತಿತು.

ಚೆಸ್: ಪ್ರಶಸ್ತಿ ಸನಿಹಕ್ಕೆ ಅರವಿಂದ್

ಪ್ರಾಗ್ (ಝೆಕ್ ರಿಪಬ್ಲಿಕ್), (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಅರವಿಂದ್ ಚಿದಂಬರಮ್ ಅವರು ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಎಂಟನೇ ಸುತ್ತಿನ ನಂತರವೂ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ. ಇನ್ನೊಂದು ಸುತ್ತಷ್ಟೇ ಉಳಿದಿದ್ದು ಅವರು ಪ್ರಮುಖ ಅಂತರ ರಾಷ್ಟ್ರೀಯ ಪ್ರಶಸ್ತಿಯ ಸನಿಹದಲ್ಲಿದ್ದಾರೆ.

ಅರವಿಂದ್ ಅವರು ಸ್ಥಳೀಯ ಆಟಗಾರ ಡೇವಿಡ್ ನವಾರ ಜೊತೆ 32 ನಡೆಗಳ ನಂತರ ಡ್ರಾ ಮಾಡಿಕೊಂಡಿದ್ದು ಒಟ್ಟು 5.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ವಿಯೆಟ್ನಾಮಿನ ಕ್ವಾಂಗ್ ಲೀಮ್ ಲಿ (3.5) ಜೊತೆ 36 ನಡೆಗಳಲ್ಲಿ ಮಾಡಿಕೊಂಡಿರುವ ಭಾರತದ ಇನ್ನೊಬ್ಬ ಆಟಗಾರ ಆರ್.ಪ್ರಜ್ಞಾನಂದ (5) ಎರಡನೇ ಸ್ಥಾನದಲ್ಲಿದ್ದಾರೆ.

ಅರವಿಂದ್ ಅವರು ಅಂತಿಮ ಸುತ್ತಿನಲ್ಲಿ ಟರ್ಕಿಯ ಎಡಿಝ್ ಗುರೆಲ್ ಅವರನ್ನು ಎದುರಿಸಲಿದ್ದಾರೆ. ಪ್ರಜ್ಞಾನಂದ ಅವರು ಡಚ್ ಗ್ರ್ಯಾಂಡ್ ಮಾಸ್ಟರ್ ಅನಿಶ್ ಗಿರಿ ಅವರ ಸವಾಲು ಎದುರಿಸಲಿದ್ದಾರೆ.

ಚೀನಾದ ಗ್ರ್ಯಾಂಡ್‌ಮಾಸ್ಟರ್ ವೀ ಯಿ (4.5) ಅವರು ಸ್ಥಳೀಯ ಆಟಗಾರ ಗುಯೆನ್ ಥಾಯ್ ದೈ ವಾನ್ ಅವರನ್ನು ಸೋಲಿಸಿ ಒಂಟಿಯಾಗಿ ಮೂರನೇ ಸ್ಥಾನಕ್ಕೇರಿದರು. ವಿನ್ಸೆಂಟ್ ಕೀಮರ್ (ಜರ್ಮನಿ), ಎಡಿಲ್ ಗುರೇಜ್ ಮತ್ತು ಅನಿಶ್ ಗಿರಿ ಅವರು ತಲಾ ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿ ನಾಲ್ಕನೇ ಸ್ಥಾನ ಹಂಚಿಕೊಂಡಿದ್ದಾರೆ.

ಫೈನಲ್‌ಗೆ ನೈಋತ್ಯ ರೈಲ್ವೆ, ಬೀಗಲ್ಸ್

ಬೆಂಗಳೂರು: ನೈಋತ್ಯ ರೈಲ್ವೆ ಮತ್ತು ಬೀಗಲ್ಸ್ ತಂಡಗಳು ಎಸ್.ಎಂ.ಎನ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ಮಾತೃ ಕಪ್ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿವೆ.ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸೂಪರ್ ಲೀಗ್ ಪಂದ್ಯದಲ್ಲಿ ನೈಋತ್ಯ ರೈಲ್ವೆ ತಂಡ 78–49 ಪಾಯಿಂಟ್ಸ್‌ಗಳಿಂದ ಡಿವೈಇಎಸ್ ಮೈಸೂರು ತಂಡದ ವಿರುದ್ಧ ಗೆಲುವು ಸಾಧಿಸಿತು.. ಇನ್ನೊಂದು ಪಂದ್ಯದಲ್ಲಿ ಬೀಗಲ್ಸ್ ತಂಡ ಎದುರಾಳಿ ಮೌಂಟ್ಸ್ ಕ್ಲಬ್ ತಂಡವನ್ನು76–54 ಪಾಯಿಂಟ್ಸ್‌ಗಳಿಂದ ಸೋಲಿಸಿತು.

ಫುಟ್‌ಬಾಲ್: ಶ್ರೀಗಜಾನನ, ವಿಜಯನಗರ ಎಫ್‌ಸಿ ಪಂದ್ಯ ಡ್ರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಗಜಾನನ ಎಫ್‌ಸಿ ತಂಡ ಅರ್ಬನ್‌ರೈಸ್ ಎ ಡಿವಿಷನ್ ಲೀಗ್ ಚಾಂಪಿಯನ್‌ಶಿಪ್‌ನಲ್ಲಿ ಶುಕ್ರವಾರ 1–1 ಗೋಲಿನಿಂದ ವಿಜಯನಗರ ಎಫ್‌ಸಿ ತಂಡದ ವಿರುದ್ಧ ಡ್ರಾ ಮಾಡಿಕೊಂಡಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಶ್ರೀ ಗಜಾನನ ತಂಡದ ಜೋನ್ಸ್ ಮುತ್ತುರಾಜ್ (36ನೇ ನಿ.) ಗೋಲು ಬಾರಿಸಿದರು.ವಿಜಯನಗರ ಎಫ್‌ಸಿ ತಂಡದ ಎಸ್.ಜಿ. ಆ್ಯಂಥೋಣಿ ಕ್ಲಿಂಟನ್ (55ನೇ ನಿ.) ಗೋಲು ಹೊಡೆದು ಡ್ರಾ ಮಾಡಿದರು.

ಇನ್ನೊಂದು ಪಂದ್ಯದಲ್ಲಿ ಆರ್‌ಡಬ್ಲ್ಯು ಎಫ್‌ಸಿ ಮತ್ತು ಎಫ್‌ಸಿ ಡೆಕ್ಕನ್ ನಡುವಿನ ಪಂದ್ಯ ಗೋಲಿಲ್ಲದೇ ಡ್ರಾನಲ್ಲಿ ಅಂತ್ಯ ಕಂಡಿತು.

ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಇಂದಿರಾನಗರ ಎಫ್‌ಸಿ ತಂಡ 2–0 ಗೋಲುಗಳಿಂದ ಸನ್‌ರೈಸ್ ಎಫ್‌ಸಿ ತಂಡವನ್ನು ಮಣಿಸಿತು. ಎರಡನೇ ಪಂದ್ಯದಲ್ಲಿ ಕ್ವೀನ್ಸ್ ಸ್ಟಾರ್ ಎಫ್‌ಸಿ 5–0 ಗೋಲುಗಳಿಂದ ಎಕ್ಸೆಲ್‌ಸಿಯೊರ್ಸ್ ಎಫ್‌ಸಿ ತಂಡದ ವಿರುದ್ಧ ಗೆದ್ದುಕೊಂಡಿತು.

ಕ್ಷೇತ್ರ ಮರುವಿಂಗಡಣೆ: ಕರ್ನಾಟಕ ಸೇರಿ ಹಲವು ರಾಜ್ಯಗಳಿಗೆ ಪತ್ರ ಬರೆದ ತಮಿಳುನಾಡು ಸಿ.ಎಂ

ಹೋರಾಟಕ್ಕೆ ಕೈಜೋಡಿಸಿ: ಸ್ಟಾಲಿನ್ ಕರೆ

ಚೆನ್ನೈ(ಪಿಟಿಐ): ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಸಂಬಂಧ ಅವಿರತ ಹೋರಾಟಕ್ಕೆ ತಮಿಳುನಾಡು ಜತೆಗೆ ಕೈಜೋಡಿಸುವಂತೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಶುಕ್ರವಾರ ಕರ್ನಾಟಕ, ಕೇರಳ, ತೆಲಂಗಾಣ, ಪಶ್ಚಿಮ ಬಂಗಾಳ, ಪಂಜಾಬ್, ಒಡಿಶಾ ಹಾಗೂ ಇತರ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಮತ್ತು ಪಕ್ಷಗಳ ಮುಖ್ಯಸ್ಥರಿಗೆ ಪತ್ರ ಬರೆದಿದ್ದಾರೆ.

ಕೇಂದ್ರ ಸರ್ಕಾರ ನಡೆಸಲು ಹೊರಟಿರುವ, ಜನಸಂಖ್ಯಾ ಅನುಪಾತ ಆಧರಿಸಿದ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯು ಅನ್ಯಾಯದ ಕಸರತ್ತು. ಇದರ ವಿರುದ್ಧ ರಾಜಿ ಇಲ್ಲದ ಹೋರಾಟ ನಡೆಸಬೇಕಿದೆ. ಇದಕ್ಕಾಗಿ ಜಂಟಿ ಕ್ರಿಯಾ ಸಮಿತಿಯ (ಜೆಎಸಿ) ಭಾಗವಾಗಬೇಕು ಎಂದು ಅವರು ಪತ್ರದಲ್ಲಿ ಮನವಿ ಮಾಡಿದ್ದಾರೆ.

ದಕ್ಷಿಣದಲ್ಲಿ ತಮಿಳುನಾಡು, ಕೇರಳ, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ, ಪಶ್ಚಿಮ ಬಂಗಾಳ ಮತ್ತು ಪೂರ್ವದಲ್ಲಿ ಒಡಿಶಾ, ಉತ್ತರದಲ್ಲಿ ಪಂಜಾಬ್ ಒಳಗೊಂಡ ಪ್ರಸ್ತಾವಿತ ಜೆಎಸಿಗೆ ಸೇರುವಂತೆ ಈ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಆಯಾ ಪಕ್ಷಗಳ ಮುಖಂಡರ ಔಪಚಾರಿಕ ಒಪ್ಪಿಗೆಯನ್ನು ಸ್ಟಾಲಿನ್ ಕೋರಿದ್ದಾರೆ. ಅಲ್ಲದೆ, ಜೆಎಸಿಯಲ್ಲಿ ಸೇವೆ ಸಲ್ಲಿಸ ಬಹುದಾದ ಮತ್ತು ಸಮಗ್ರ ಕಾರ್ಯತಂತ್ರವನ್ನು ಸಂಘಟಿಸಲು ನೆರವಾಗುವ ಒಬ್ಬ ಹಿರಿಯ ಪ್ರತಿನಿಧಿಯನ್ನು ತಮ್ಮ ಪಕ್ಷಗಳಿಂದ ನಾಮನಿರ್ದೇಶನ ಮಾಡಬೇಕೆಂದು ಡಿಎಂಕೆ ಮುಖ್ಯಸ್ಥರೂ ಆದ ಅವರು ಪತ್ರದಲ್ಲಿ ಕೋರಿದ್ದಾರೆ.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹಿಂದಿ ಹೇರಿಕೆ ಒಪ್ಪಿಕೊಳ್ಳುವಂತೆ ಬೆದರಿಕೆ ಹಾಕಿ ರಾಜ್ಯವನ್ನು ಪ್ರಚೋದಿಸುತ್ತಿದ್ದಾರೆ. ಹಿಂದಿ ವಸಾಹತುಶಾಹಿಯನ್ನು ಸಹಿಸುವುದಿಲ್ಲ
ಎಂ.ಕೆ. ಸ್ಟಾಲಿನ್
ತಮಿಳುನಾಡು ಮುಖ್ಯಮಂತ್ರಿ

ಇದೇ 25ರಂದು ಚೆನ್ನೈನಲ್ಲಿ ನಡೆಯಲಿರುವ ಜೆಎಸಿ ಉದ್ಘಾಟನಾ ಸಭೆಯನ್ನು ಪ್ರಸ್ತಾಪಿಸಿರುವ ಅವರು, ‘ನಾವು ಪ್ರತ್ಯೇಕ ರಾಜಕೀಯ ಪಕ್ಷಗಳಾಗಿ ಅಲ್ಲ, ನಮ್ಮ ಜನರ ಭವಿಷ್ಯದ ರಕ್ಷಕರಾಗಿ ಒಟ್ಟಾಗಿ ನಿಲ್ಲೋಣ’ ಎಂದು ಕರೆ ಕೊಟ್ಟಿದ್ದಾರೆ.

‘ಜನಸಂಖ್ಯೆಯ ಆಧಾರದ ಮೇಲೆ ಕ್ಷೇತ್ರ ಮರುವಿಂಗಡಣೆಯ ನಿರ್ಣಯ ಪ್ರಕ್ರಿಯೆಯನ್ನು ಪರಿಗಣಿಸಲಾಗುತ್ತಿದೆ. ಅಲ್ಲದೆ, ಇದಕ್ಕೆ ಎರಡು ಸಂಭಾವ್ಯ ವಿಧಾನಗಳಿವೆ ಎಂದು ವರದಿಗಳು ಹೇಳುತ್ತಿವೆ. ಮೊದಲ ವಿಧಾನ: ಅಸ್ತಿತ್ವದಲ್ಲಿರುವ 543 ಸ್ಥಾನಗಳನ್ನು ರಾಜ್ಯಗಳ ನಡುವೆ ಮರುಹಂಚಿಕೆ ಮಾಡಬಹುದು ಮತ್ತು ಎರಡನೆ ವಿಧಾನ: ಒಟ್ಟು ಸ್ಥಾನಗಳ ಸಂಖ್ಯೆಯನ್ನು 800ಕ್ಕಿಂತಲೂ ಹೆಚ್ಚು ಮಾಡಬಹುದು. ಈ ಎರಡೂ ವಿಧಾನಗಳನ್ನು 2026ರ ಜನಸಂಖ್ಯೆ ಆಧರಿಸಿಯೇ ಮಾಡುವುದಾದರೆ, ಜನಸಂಖ್ಯೆ ನಿಯಂತ್ರಣವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಎಲ್ಲ ರಾಜ್ಯಗಳು ಗಣನೀಯ ಸಂಖ್ಯೆಯಲ್ಲಿ ಲೋಕಸಭಾ ಸ್ಥಾನಗಳನ್ನು ಕಳೆದುಕೊಳ್ಳಲಿವೆ. ಜನಸಂಖ್ಯಾ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿದ್ದಕ್ಕಾಗಿ ಮತ್ತು ರಾಷ್ಟ್ರೀಯ ಅಭಿವೃದ್ಧಿ ಗುರಿಗಳನ್ನು ಸಾಧಿಸಿದ್ದಕ್ಕಾಗಿ ನಾವು ಈ ರೀತಿ ದಂಡ ತೆರಬಾರದು’ ಎಂದು ಹೇಳಿದ್ದಾರೆ.

ಈ ಸಮಸ್ಯೆಯ ಗಂಭೀರತೆಯ ಹೊರತಾಗಿಯೂ ಕೇಂದ್ರ ಸರ್ಕಾರವು ಸ್ಪಷ್ಟನೆ ನೀಡಿಲ್ಲ. ನಮ್ಮ ಕಳವಳಗಳನ್ನು ಪರಿಹರಿಸುವ ಯಾವುದೇ ನಿರ್ದಿಷ್ಟ ಬದ್ಧತೆಯನ್ನು ತೋರಿಲ್ಲ. ಕೇಂದ್ರದ ಪ್ರತಿನಿಧಿಗಳು ಈ ವಿಚಾರದಲ್ಲಿ ತೇಲಿಸಿ ಮಾತುಗಳನ್ನಾಡಿದ್ದಾರೆ. ಅಲ್ಲದೆ, ಯಾವುದೇ ರಾಜ್ಯವು ತನ್ನ ಸ್ಥಾನಗಳನ್ನು ಕಳೆದುಕೊಳ್ಳುವುದಿಲ್ಲ ಎನ್ನುವ ಅವರ ಹೇಳಿಕೆಯು ಹುಸಿ ಭರವಸೆಯಂತಿದೆ ಎಂದು ಸ್ಟಾಲಿನ್ ವಾಗ್ದಾಳಿ ಮಾಡಿದ್ದಾರೆ.

ಭಾಷಾ ವಿಚಾರವಾಗಿ ಸ್ಟಾಲಿನ್ ವಿರುದ್ಧ ಶಾ ವಾಗ್ದಾಳಿ

ರಾಣಿಪೇಟ್ (ತಮಿಳುನಾಡು) (ಪಿಟಿಐ): ತಮಿಳುನಾಡಿನಲ್ಲಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣವನ್ನು ತಮಿಳು ಭಾಷೆಯಲ್ಲಿ ನೀಡುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ಸವಾಲು ಎಸೆದಿದ್ದಾರೆ.



ಭಾಷೆಯ ವಿಚಾರವಾಗಿ, ಅದರಲ್ಲೂ ಮುಖ್ಯವಾಗಿ ಹಿಂದಿ ‘ಹೇರಿಕೆ’ಗೆ ಸ್ಟಾಲಿನ್ ಅವರ ವಿರೋಧದ ವಿಚಾರವಾಗಿ ಅವರ ವಿರುದ್ಧ ವಾಗ್ದಾಳಿ ನಡೆಸಿದ ಶಾ, ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಹಲವು ಬದಲಾವಣೆಗಳನ್ನು ತಂದಿದೆ. ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಸೇರಲು ಬಯಸುವವರು ಈಗ ತಮ್ಮ ಪ್ರಾದೇಶಿಕ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶವಿದೆ ಎಂದರು.

‘ಪರೀಕ್ಷೆಯನ್ನು ತಮಿಳಿನಲ್ಲಿಯೂ ಬರೆಯುವುದನ್ನು ಮೋದಿ ನೇತೃತ್ವದ ಸರ್ಕಾರ ಸಾಧ್ಯವಾಗಿಸಿದೆ’ ಎಂದು ಶಾ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದರು. ‘ಇಲ್ಲಿನ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣವನ್ನು ತಮಿಳಿನಲ್ಲಿಯೂ ಒದಗಿಸಬೇಕು ಎಂದು ನಾನು ತಮಿಳುನಾಡು ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತಿದ್ದೇನೆ’ ಎಂದರು.

ಕೇಂದ್ರವು ರಾಷ್ಟ್ರೀಯ ಶಿಕ್ಷಣ ನೀತಿ ಮೂಲಕ ಹಿಂದಿ ಹೇರಿಕೆಯಲ್ಲಿ ತೊಡಗಿದೆ ಎಂದು ತಮಿಳುನಾಡಿನ ಆಡಳಿತಾರೂಢ ಪಕ್ಷ ಡಿಎಂಕೆ ಆರೋಪಿಸುತ್ತಿದೆ. ಆದರೆ ಇದನ್ನು ಕೇಂದ್ರ ಅಲ್ಲಗಳೆದಿದೆ. ತಮಿಳುನಾಡಿನಲ್ಲಿ ದ್ವಿಭಾಷಾ ಸೂತ್ರವನ್ನು ಮಾತ್ರವೇ ಪಾಲಿಸಲಾಗುವುದು ಎಂದು ರಾಜ್ಯ ಸರ್ಕಾರ ಹೇಳಿದೆ. ಈ ವಿಚಾರವು ವಿವಾದದ ಸ್ವರೂಪ ಪಡೆದಿರುವ ನಡುವೆ ಶಾ ಹೀಗೆ ಹೇಳಿದ್ದಾರೆ.

ತಮಿಳು ಭಾಷೆ, ತಮಿಳು ಸಂಸ್ಕೃತಿ ಮತ್ತು ಪರಂಪರೆಯು ಭಾರತರ ಪರಂಪರೆಯ ಪಾಲಿಗೆ ಬೆಲೆ ಕಟ್ಟಲಾಗದ ರತ್ನವಿದ್ದಂತೆ ಎಂದು ಶಾ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಹೊಗಳಿಕೆಯಲ್ಲಿ ಆಸಕ್ತ; ಸುಂಕ ಏರಿದ್ದರೂ ನಿರ್ಲಿಪ್ತ’

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ‘ಹೊಗಳಿಕೆ’ (ತಾರೀಫ್) ಪಡೆದುಕೊಳ್ಳುವುದರಲ್ಲಿ ಮಾತ್ರ ಆಸಕ್ತರಾಗಿದ್ದಾರೆ; ಸುಂಕ ಏರುತ್ತಿರುವ (ಟ್ಯಾರಿಫ್) ಕುರಿತು ಅವರಿಗೆ ಕಳವಳ ಇಲ್ಲ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಟೀಕಿಸಿದ್ದಾರೆ.

ಜೈರಾಮ್ ರಮೇಶ್

‘ಅಮೆರಿಕದಿಂದ ಎದುರಾಗಿರುವ ಸುಂಕದ ಸಮಸ್ಯೆ ವಿಷಯದಲ್ಲಿ ಪ್ರಧಾನಿಯ 56 ಇಂಚಿನ ಎದೆಗಾರಿಕೆ ಎಲ್ಲಿಹೋಯಿತು’ ಎಂದು ಪ್ರಶ್ನಿಸಿದ್ದಾರೆ.

‘ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸುತ್ತಿರುವ ಪ್ರತಿಸುಂಕದ ಕುರಿತು ಬಜೆಟ್ ಅಧಿವೇಶನದ ಎರಡನೇ ಅವಧಿಯಲ್ಲಿ ಕಾಂಗ್ರೆಸ್ ಪಕ್ಷವು ಸದನದಲ್ಲಿ ಪ್ರಸ್ತಾಪಿಸಲಿದೆ. ಬೆದರಿಕೆ ಎದುರಿಸಲು ಸಾಮೂಹಿಕ ಸಂಕಲ್ಪ ತೆಗೆದುಕೊಳ್ಳಬೇಕು’ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

‘ಭಾರತದ ವಿದೇಶಾಂಗ ಸಚಿವರಾಗಿರುವ ಎಸ್.ಜೈಶಂಕರ್ ಅವರು ಅಮೆರಿಕದ ರಾಯಭಾರಿಯಂತೆ, ಆ ದೇಶದ ವಕ್ತಾರರಂತೆ ಮಾತನಾಡುತ್ತಿದ್ದಾರೆ’ ಎಂದು ಆರೋಪಿಸಿದರು.

‘ಆದಷ್ಟೂ ಸುಂಕ ಏರಿಕೆಯ ಬಗ್ಗೆ ಮಾತನಾಡಿ, ಹೊಗಳಿಕೆಗೆ ಪಾತ್ರವಾಗುವುದನ್ನು ಪ್ರಧಾನಿ ಸ್ವಲ್ಪ ಕಡಿಮೆ ಮಾಡಿಕೊಳ್ಳಲಿ’ ಎಂದು ಅವರು ಸಲಹೆ ನೀಡಿದ್ದಾರೆ.

‘1971ರ ನವೆಂಬರ್‌ನಲ್ಲಿ ಆಗಿನ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರು ಅಮೆರಿಕ ಅಧ್ಯಕ್ಷ ರಿಚರ್ಡ್ ನಿಕ್ಸನ್‌ಗೆ ಹೇಳಿದ್ದ ಮಾತುಗಳನ್ನು ನೆನಪಿಸಿಕೊಳ್ಳಬೇಕು. ನಿಕ್ಸನ್ ಹಾಗೂ ಹೆನ್ರಿ ಕಿಸಿಂಜರ್ ಅವರು ದೇಶದ ಮಾನ ಕಳೆಯಲು ಮುಂದಾದ ವೇಳೆ ಇಂದಿರಾ ಗಾಂಧಿ ಗಟ್ಟಿಯಾಗಿ ನಿಂತಿದ್ದರು. ದೇಶದ ಹಿತಕ್ಕಾಗಿಯೇ ಕೆಲಸ ಮಾಡುವುದಾಗಿ ತಿಳಿಸಿದ್ದರು’ ಎಂದು ಜೈರಾಮ್ ರಮೇಶ್ ನೆನಪಿಸಿಕೊಂಡರು.

ಐಎಫ್‌ಎಸ್ ಅಧಿಕಾರಿ ಆತ್ಮಹತ್ಯೆ

ನವದೆಹಲಿ (ಪಿಟಿಐ): ಭಾರತೀಯ ವಿದೇಶಾಂಗ ಸೇವೆಯ (ಐಎಫ್‌ಎಸ್) ಅಧಿಕಾರಿಯೊಬ್ಬರು ನವದೆಹಲಿಯ ಚಾಣಕ್ಯಪುರಿ ಪ್ರದೇಶದಲ್ಲಿ ಕಟ್ಟಡದ ನಾಲ್ಕನೇ ಮಹಡಿಯಿಂದ ಜಿಗಿದು ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಅಧಿಕಾರಿಯು ವಿದೇಶಾಂಗ ಸಚಿವಾಲಯದ ಓವರ್‌ಸೀಸ್ ಎಂಪ್ಲಾಯ್‌ಮೆಂಟ್ ಮತ್ತು ಪ್ರೊಟೆಕ್ಟೋರೆಟ್ ಜನರಲ್ ಆಫ್ ಎಮಿಗ್ರೆಂಟ್ಸ್‌ನ ನಿರ್ದೇಶಕರಾಗಿದ್ದರು ಎಂದು ಹೇಳಿದರು.

ಮೃತ ಅಧಿಕಾರಿಯನ್ನು ಜಿತೇಂದ್ರ ರಾವತ್ ಎಂದು ಗುರುತಿಸಲಾಗಿದೆ. ಅವರು 35ರಿಂದ 40 ವರ್ಷ ವಯಸ್ಸಿನವರಾಗಿರಬಹುದು. ಸ್ಥಳದಲ್ಲಿ ಮರಣಪತ್ರ ಪತ್ತೆಯಾಗಿಲ್ಲ ಎಂದು ತಿಳಿಸಿದರು.

‘ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿಯು ಖಿನ್ನತೆಗೆ ಚಿಕಿತ್ಸೆ ಪಡೆಯುತ್ತಿದ್ದರು. ಅವರ ತಾಯಿಯೊಂದಿಗೆ ಎಂಇಎ ಸೊಸೈಟಿ ಕಟ್ಟಡದ ಮೊದಲ ಮಹಡಿಯಲ್ಲಿ ವಾಸವಿದ್ದರು’ ಎಂದು ಮೂಲಗಳು ತಿಳಿಸಿವೆ.

ರಾವತ್ ಅವರ ಪತ್ನಿ ಮತ್ತು ಮಕ್ಕಳು ಡೆಹ್ರಾಡೂನ್‌ನಲ್ಲಿ ವಾಸವಾಗಿದ್ದಾರೆ. ಅವರ ಈ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಶಾಸಕ ಅನ್ಸಾರಿಗೆ ಮಧ್ಯಂತರ ಜಾಮೀನು

ನವದೆಹಲಿ (ಪಿಟಿಐ): ಗೂಂಡಾ ಕಾಯ್ದೆಯಡಿಯಲ್ಲಿ ಬಂಧಿತರಾಗಿದ್ದ ಉತ್ತರ ಪ್ರದೇಶದ ಶಾಸಕ ಅಬ್ಬಾಸ್ ಅನ್ಸಾರಿ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಮಧ್ಯಂತರ ಜಾಮೀನು ನೀಡಿದೆ.



ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಎನ್. ಕೋಟೀಶ್ವರ್ ಸಿಂಗ್ ನೇತೃತ್ವದ ನ್ಯಾಯಪೀಠವು, ‘ನ್ಯಾಯಾಲಯದ ಅನುಮತಿ ಇಲ್ಲದೇ, ಉತ್ತರ ಪ್ರದೇಶ ಬಿಟ್ಟು ತೆರಳುವಂತಿಲ್ಲ. ನ್ಯಾಯಾಲಯಕ್ಕೆ ಹಾಜರಾಗುವ ಮುನ್ನಾದಿನ ಪೊಲೀಸ್ ಅಧಿಕಾರಿಗಳಿಗೆ ತಿಳಿಸಬೇಕು. ಲಖನೌ ನಿವಾಸದಲ್ಲಿ ತಂಗುವಂತೆ ತಿಳಿಸಿದ್ದು, ಮವೂ ವಿಧಾನಸಭಾ ಕ್ಷೇತ್ರಕ್ಕೆ ತೆರಳುವ ವೇಳೆ ಅಧಿಕಾರಿಗಳಿಂದ ಅನುಮತಿ ಪಡೆದುಕೊಳ್ಳಬೇಕು’ ಎಂದು ತಿಳಿಸಿದರು.

2024ರ ಸೆಪ್ಟೆಂಬರ್ 6ರಂದು ಗ್ಯಾಂಗ್‌ಸ್ಟರ್ಸ್ ಕಾಯ್ದೆಯಡಿಯಲ್ಲಿ ಅನ್ಸಾರಿ ಅವರನ್ನು ಬಂಧಿಸಲಾಗಿತ್ತು.

ರಾಜಕಾರಣಿಗಳ ನಂಟು

ಎರಡನೇ ಮುಖಪುಟದಿಂದ...

‘ಈ ವಿಚಾರದಲ್ಲಿ ಗೌಪ್ಯತೆ ಕಾಪಾಡಿಕೊಳ್ಳುವಂತೆ ಮನವಿ ಮಾಡಿದ್ದೇನೆ. ಪ್ರಯಾಣದಿಂದ ಸಾಕಷ್ಟು ದಣಿದಿದ್ದು, ಅಧಿಕಾರಿಗಳು ಕರೆದಾಗ ವಿಚಾರಣೆಗೆ ಹಾಜರಾಗುತ್ತೇನೆ’ ಎಂದು ರನ್ಯಾ ನೀಡಿರುವ ಹೇಳಿಕೆಯನ್ನು ತನಿಖಾಧಿಕಾರಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ರನ್ಯಾ ಅವರು ಚಿನ್ನದ ಬಿಸ್ಕತ್‌ಗಳನ್ನು ದುಬೈನಿಂದ ತಂದು ನಗರದಲ್ಲಿ ಎರಡು ಪ್ರತಿಷ್ಠಿತ ಚಿನ್ನದ ಮಳಿಗೆಗಳಿಗೆ ನೀಡುತ್ತಿದ್ದರು ಎನ್ನುವ ಅನುಮಾನದ ಮೇಲೆ ಇಬ್ಬರು ಚಿನ್ನದ ವ್ಯಾಪಾರಿಗಳನ್ನು ಡಿಆರ್‌ಐ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ. ಅವರ ಹೇಳಿಕೆ ದಾಖಲಿಸಿ ಕೊಂಡು ವಾಪಸ್ ಕಳುಹಿಸಿದ್ದಾರೆ. ಮತ್ತೆ ವಿಚಾರಣೆಗೆ ಬರುವಂತೆ ತನಿಖಾಧಿಕಾರಿ ಸೂಚಿಸಿದ್ದಾರೆ ಎಂದು ಗೊತ್ತಾಗಿದೆ.

ದುಬೈನಿಂದ ಚಿನ್ನವನ್ನು ತಂದು ಕೊಡುವಂತೆ ಕೆಲವರು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು ಎಂಬುದಾಗಿ ರನ್ಯಾ ರಾವ್ ಹೇಳಿಕೆ ನೀಡಿದ್ದು ಅದನ್ನು ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಮೂರು ದಿನ ಕಸ್ಟಡಿಗೆ

ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯವು ನಟಿ ರನ್ಯಾ ರಾವ್ ಅವರನ್ನು ಶುಕ್ರವಾರ ಮೂರು ದಿನ ಕಂದಾಯ ಗುಪ್ತಚರ ನಿರ್ದೇಶನಾಲಯದ ಕಸ್ಟಡಿಗೆ ನೀಡಿದೆ.

ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧಿತರಾಗಿರುವ ನಟಿಯನ್ನು ಹೆಚ್ಚಿನ ವಿಚಾರಣೆಗೆ ಕಸ್ಟಡಿಗೆ ನೀಡುವಂತೆ ಡಿಆರ್‌ಐ ಕೋರಿತ್ತು. ಮಾರ್ಚ್ 9 ರಿಂದ 11ರ ವರೆಗೆ ನಟಿಯನ್ನು ಕಸ್ಟಡಿಗೆ ನೀಡಿ ನ್ಯಾಯಮೂರ್ತಿ ವಿಶ್ವನಾಥ್ ಸಿ ಗೌಡರ್ ಆದೇಶಿಸಿದ್ದಾರೆ.

3 ತಿಂಗಳಿನಲ್ಲಿ ವಿಶಿಷ್ಟ ಸಂಖ್ಯೆ: ಆಯೋಗ

ನವದೆಹಲಿ (ಪಿಟಿಐ): ಹಲವು ಮತದಾರರ ಗುರುತಿನ ಚೀಟಿಗಳು ಒಂದೇ ಎಪಿಕ್ ಸಂಖ್ಯೆ ಹೊಂದಿರುವ ಸಮಸ್ಯೆಯನ್ನು ಮೂರು ತಿಂಗಳಿನಲ್ಲಿ ಪರಿಹರಿಸುವುದಾಗಿ ಚುನಾವಣಾ ಆಯೋಗ ಶುಕ್ರವಾರ ತಿಳಿಸಿದೆ.

ಒಂದೇ ಎಪಿಕ್ ಸಂಖ್ಯೆ ಹೊಂದಿರುವ ವಿಚಾರವು ಈಗಾಗಲೇ ಆಯೋಗದ ಗಮನಕ್ಕೆ ಬಂದಿದೆ. ತಾಂತ್ರಿಕ ತಂಡ ಮತ್ತು ರಾಜ್ಯ ಚುನಾವಣಾ ಆಯೋಗದ ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ ನಂತರ, ಸುದೀರ್ಘ ಕಾಲದಿಂದ ಬಾಕಿ ಉಳಿದಿರುವ ಈ ಸಮಸ್ಯೆಯನ್ನು ಮುಂದಿನ ಮೂರು ತಿಂಗಳಲ್ಲಿ ಸರಿಪಡಿಸಲು ಆಯೋಗ ನಿರ್ಧರಿಸಿದೆ. ಒಂದೇ ಎಪಿಕ್ ಸಂಖ್ಯೆ ನೀಡಿರುವ ಮತದಾರರ ಗುರುತಿನ ಚೀಟಿಗಳಿಗೆ ವಿಶಿಷ್ಟ ಸಂಖ್ಯೆಗಳನ್ನು ನೀಡಲಾಗುತ್ತದೆ ಎಂದು ಆಯೋಗವು ಹೇಳಿಕೆಯಲ್ಲಿ ಸ್ಪಷ್ಟಪಡಿಸಿದೆ.

ಇದೇ ಸಂದರ್ಭದಲ್ಲಿ, ಮತದಾರರ ಗುರುತಿನ ಚೀಟಿಯ (ಎಪಿಕ್) ಸಂಖ್ಯೆಗಳು ಏನೇ ಇರಬಹುದು. ಆದರೆ ಮತದಾರರು ತಮಗೆ ನಿಗದಿ ಮಾಡಲಾದ ಮತಗಟ್ಟೆಯಲ್ಲಿ ಮಾತ್ರ ಮತ ಚಲಾಯಿಸಬಹುದು’ ಎಂದು ಆಯೋಗವು ಮತ್ತೆ ಹೇಳಿದೆ.

ಇಸ್ರೇಲ್ ಮಹಿಳೆ ಮೇಲೆ ಅತ್ಯಾಚಾರ; ದೂರು ದಾಖಲು

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಪ್ರವಾಸಿ ತಾಣ ಸಾಣಾಪುರ ಕೆರೆ ಬಳಿ ಜಂಗ್ಲಿಗೆ ತೆರಳುವ ಮಾರ್ಗದಲ್ಲಿ ಗುರುವಾರ ರಾತ್ರಿ ತುಂಗಭದ್ರಾ ಎಡದಂಡೆ ಕಾಲುವೆ ಪಕ್ಕ ಗಿಟಾರ್ ಬಾರಿಸುತ್ತ ಕುಳಿತಿದ್ದ ಐವರು ಪ್ರವಾಸಿಗರ ಪೈಕಿ ಇಬ್ಬರು ಮಹಿಳೆಯರ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದು ಇಲ್ಲಿನ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಸ್ರೇಲ್‌ನ 27 ವರ್ಷದ ಪ್ರವಾಸಿ ಮಹಿಳೆ ಮತ್ತು 29 ವರ್ಷದ ಸ್ಥಳೀಯ ಹೋಮ್ ಸ್ಟೇ ಒಡತಿ ಮೇಲೆ ಅತ್ಯಾಚಾರ ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಇನ್ನುಳಿದ ಮೂವರು ಪ್ರವಾಸಿಗರ ಮೇಲೆ ದುಷ್ಕರ್ಮಿಗಳು ಹಲ್ಲೆ ಮಾಡಿದ್ದಾರೆ. ಅದರಲ್ಲಿ ಒಡಿಶಾದ ಪ್ರವಾಸಿಗನನ್ನು ಕಾಲುವೆಗೆ ಎಸೆಯಲಾಗಿದ್ದು, ಆತನ ಪತ್ತೆಗಾಗಿ ಶೋಧ ಮುಂದುವರಿದಿದೆ. ನಾಲ್ಕು ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚೇತರಿಸಿಕೊಂಡಿದ್ದಾರೆ.

ಆಗಿದ್ದೇನು?: ‘ಇಸ್ರೇಲ್, ಅಮೆರಿಕ, ಮಹಾರಾಷ್ಟ್ರ ಮತ್ತು ಒಡಿಶಾದಿಂದ ನಾಲ್ವರು ಪ್ರವಾಸಿಗರು ಮತ್ತು ಸ್ಥಳೀಯ ಹೋಂ ಸ್ಟೇ ಒಡತಿ ರಾತ್ರಿ ಸಂಗೀತ ಮತ್ತು ನಕ್ಷತ್ರಗಳನ್ನು ವೀಕ್ಷಿಸುತ್ತಾ ಕೆರೆಯ ಸೌಂದರ್ಯ ಆನಂದಿಸುತ್ತಿದ್ದರು. ಆಗ ಬೈಕ್‌ನಲ್ಲಿ ಬಂದ ಮೂವರು ದುಷ್ಕರ್ಮಿಗಳು ಮೊದಲು ತಮ್ಮ ವಾಹನಗಳಿಗೆ ಪೆಟ್ರೋಲ್ ಹಾಕಿಸುವಂತೆ ಹೇಳಿ ಬಳಿಕ ಹಣಕ್ಕೆ ಬೇಡಿಕೆಯಿಟ್ಟರು. ಇದಕ್ಕೆ ನಿರಾಕರಿಸಿದಾಗ ಆರೋಪಿಗಳು ನಿಂದಿಸಿದ್ದರಿಂದ ಜಗಳವಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಇಬ್ಬರ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದು ಸಂತ್ರಸ್ತೆ ದೂರು ನೀಡಿದ್ದಾರೆ. ಮಹಿಳೆಯರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ವರದಿ ಬಂದ ಬಳಿಕ ಮುಂದಿನ ಕ್ರಮ ವಹಿಸಲಾಗುತ್ತದೆ. ಅತ್ಯಾಚಾರ, ಸಾಮೂಹಿಕ ಅತ್ಯಾಚಾರ, ಕೊಲೆಗೆ ಯತ್ನ ಕಾಯ್ದೆಗಳಡಿ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ ತಿಳಿಸಿದ್ದಾರೆ.

ಪ್ರಧಾನಿ ಮೋದಿ ಕ್ಯಾರಿಕೇಚರ್ ತೆಗೆಯಲು ಆದೇಶ

ಚೆನ್ನೈ (ಪಿಟಿಐ): ಅಮೆರಿಕ ಅಧ್ಯಕ್ಷ ಟ್ರಂಪ್ ಭೇಟಿಯ ವೇಳೆ ಪ್ರಧಾನಿ ಮೋದಿ ಅವರನ್ನು ಸರಪಳಿಯಿಂದ ಕಟ್ಟಿಹಾಕಿದ್ದಂತೆ ಬಿಂಬಿಸಿದ್ದ ಕ್ಯಾರಿಕೇಚರ್ ಅನ್ನು ವೆಬ್‌ಸೈಟ್‌ನಿಂದ ತೆಗೆಯುವಂತೆ ‘ಆನಂದ ವಿಕಟನ್’ ಮಾಧ್ಯಮ ಸಂಸ್ಥೆಗೆ ಮದ್ರಾಸ್ ಹೈಕೋರ್ಟ್, ಸೂಚಿಸಿದೆ.

ವೆಬ್‌ಸೈಟ್‌ನಿಂದ ಕ್ಯಾರಿಕೇಚರ್ ತೆಗೆದಿರುವ ಮಾಹಿತಿಯನ್ನು ಸಂಸ್ಥೆಯು ಕೇಂದ್ರ ಸರ್ಕಾರಕ್ಕೂ ನೀಡಬೇಕು. ಈ ಮಾಹಿತಿ ತಲುಪಿದ ಬಳಿಕ ‘ಆನಂದ ವಿಕಟನ್’ ವೆಬ್‌ಸೈಟ್‌ಗೆ ಈಗ ವಿಧಿಸಿರುವ ನಿರ್ಬಂಧವನ್ನು ಹಿಂಪಡೆಯಬಹುದು ಎಂದು ಕೇಂದ್ರ ಮಾಹಿತಿ ಮತ್ತು ಪ್ರಚಾರ ಸಚಿವಾಲಯಕ್ಕೆ ನ್ಯಾಯಮೂರ್ತಿ ಡಿ.ಭರತ ಚಕ್ರವರ್ತಿ ಗುರುವಾರ ಸೂಚಿಸಿದರು.

ವೆಬ್‌ಸೈಟ್‌ಗೆ ನಿರ್ಬಂಧ ಹೇರಿದ್ದ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ 2025 ಫೆ. 25ರ ಆದೇಶವನ್ನು ಆನಂದ ವಿಕಟನ್ ಪ್ರೊಡಕ್ಷನ್ ಪ್ರೈವೇಟ್ ಲಿಮಿಟೆಡ್ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ಹೆಚ್ಚುವರಿ ಸಾಲಿಸಿಟರ್ ಜನರಲ್ ಎ.ಆರ್.ಎಲ್. ಸುಂದರೇಶನ್, ‘ಕೇಂದ್ರ ಸರ್ಕಾರ ರಚಿಸಿದ್ದ ಸಮಿತಿಯು, ವೆಬ್‌ಸೈಟ್‌ನಿಂದ ಉಲ್ಲೇಖಿತ ಕ್ಯಾರಿಕೇಚರ್ ತೆಗೆದರೆ ನಿರ್ಬಂಧ ಹಿಂಪಡೆಯಬಹುದು ಎಂದು ಸಲಹೆ ಮಾಡಿದೆ’ ಎಂಬುದನ್ನು ಕೋರ್ಟ್ ಗಮನಕ್ಕೆ ತಂದರು. ನ್ಯಾಯಮೂರ್ತಿಗಳು, ಮಧ್ಯಂತರ ಆದೇಶ ನೀಡಿ ವಿಚಾರಣೆಯನ್ನು ಮಾರ್ಚ್ 21ಕ್ಕೆ ಮುಂದೂಡಿದರು.

ಹರಿಯಾಣ: ಯುದ್ಧವಿಮಾನ ಪತನ

ಚಂಡೀಗಢ (ಪಿಟಿಐ): ಭಾರತೀಯ ವಾಯುಪಡೆಯ ಯುದ್ಧವಿಮಾನವೊಂದು ಹರಿಯಾಣದ ಪಂಚಕುಲ ಜಿಲ್ಲೆಯಲ್ಲಿ ಶುಕ್ರವಾರ ಪತನಗೊಂಡಿದೆ.

‘ಪೈಲಟ್ ಸುರಕ್ಷಿತವಾಗಿದ್ದಾರೆ. ಅಪಾಯದ ಮುನ್ಸೂಚನೆ ಸಿಕ್ಕ ತಕ್ಷಣ ವಿಮಾನವನ್ನು ವಸತಿ ಪ್ರದೇಶದಿಂದ ದೂರಕ್ಕೆ ಹಾರಿಸಿದ್ದರಿಂದ ಜನರಿಗೆ ಯಾವುದೇ ತೊಂದರೆ ಆಗಿಲ್ಲ’ ಎಂದು ಪೊಲೀಸರು ಹೇಳಿದ್ದಾರೆ. ‘ದೈನಂದಿನ ತರಬೇತಿ ಹಾರಾಟದ ವೇಳೆ ತಾಂತ್ರಿಕ ದೋಷದಿಂದಾಗಿ ಅವಘಡ ಸಂಭವಿಸಿದೆ. ತನಿಖೆಗೆ ಆದೇಶಿಸಲಾಗಿದೆ’ ಎಂದು ಭಾರತೀಯ ವಾಯುಪಡೆ ತಿಳಿಸಿದೆ.

Hero

ಹೋಲಿಕೆಯಿಲ್ಲದ ಚಾಲನೆ ಸಾಟಿಯಿಲ್ಲದ ಕೊಡುಗೆ

VIDA V2 ಎಲೆಕ್ಟ್ರಿಕ್ ಸ್ಕೂಟರ್ ಪ್ರಾರಂಭಿಕ ಬೆಲೆ ₹85000*

₹20,000** ಮೌಲ್ಯದ ಕೊಡುಗೆಗಳು

165 km*** ಪ್ರಮಾಣಿತ ರೇಂಜ್ | 3600+ ಫಾಸ್ಟ್ ಚಾರ್ಜರ್‌ಗಳು | ವ್ಯಾಪಕ ಸರ್ವಿಸ್ ನೆಟ್‌ವರ್ಕ್



*ರಾಜ್ಯ ಸಬ್ಸಿಡಿ ಹೊರತುಪಡಿಸಿ

₹10,000** ಮೌಲ್ಯದ ಸರ್ಕಾರಿ ಸಬ್ಸಿಡಿ ಪಡೆಯಲು ಕೊನೆಯ ಅವಕಾಶ

#MAKEWAY VIDA Powered by Hero

ನಗದು ರಿಯಾಯಿತಿ ರೂ 16,000** | ವಿಸ್ತರಿತ ಬ್ಯಾಟರಿ ವಾರಂಟಿಯಲ್ಲಿ 50% ಕಡಿತ** | 1 ವರ್ಷಗಳವರೆಗೆ ಉಚಿತ ರಸ್ತೆಬದಿಯ ಸಹಾಯ

Visit us in **BANGALORE:** Vittal Mallya Road - VIDA EXPERIENCE CENTRE, 7428411021 | Bommanahalli - VIDA HUB RT KRISHNA AUTO, 7428411021 | Nagarabhavi - SAI BIKES PREMIA, 7428412128 | Singsandra - RT KRISHNA AUTOS PREMIA, 7428411368 | BTM Layout - V3S MOTORS, 080-48247240 | Magadi Road - RT KRISHNA AUTOS, 7428411021 | Banashankari - SAI MOTORS, 7428412219 | Yeshwanthpur - SAI BIKES, 7428411869 | Banaswadi Ring Road - BHAGATH MOTORS, 7428408355 | Electronic City - RT KRISHNA AUTOS, 7428411368 | Rajajinagar - MAX MOTORS, 7428409766 | Magadi Main Road - POORNA MOTORS, 7428409953 | Lalbhag Main Road - PRAKASH MOTORS, 7428410886 | J P Nagar - SAI MOTORS, 7428412219 | Kanakapura Main Road - SAI MOTORS, 7428412219 | K R Puram - BHAGATH MOTORS, 7428408355 R T Nagar - BIMAL MOTORS, 7428409766 | VAAYURATHA MOTORS, 080-48247239 | **HOSKOTE:** Old Madras Road - BHAGATH MOTORS, 7428408355 | **TUMKUR:** Sira Gate - SAI WHEELZ, 7428481172 | BH Road - SAI WHEELZ, 7428481172 | Kunigal - SAI WHEELZ, 7428481172 | Tiptur - SAI WHEELZ, 7428481172 | **CHIKKABALLAPAURA:** BB ROAD - MANJUNATHA BIKES, 9448237043. **Terms & Conditions apply. ***Certified range by Govt. certified agency. Real-world range of 110 km. Certified and Real-world range may vary depending on riding style, road/vehicle conditions, and vehicle models. CIN: L35911DL1984PLC017354

New Seltos Tech is now badass | It's not only badass to look at, but also to look out of. Enjoy the great view offered by the dual pane panoramic sunroof, now at an unbeatable price. Rush to the nearest dealership now!

Badass. Technology. Redefines the segment, yet again

Dual Pane Panoramic Sunroof | Cruise Control | R16 - 40.56 cm (16") Hyper Metallic Alloy Wheels | 20.32 cm (8.0") Touchscreen Navigation | Smart Key with Push Button Start

gives you a mesmerising view. | allows you to maintain a set speed. | are absolute showstoppers. | for an engaging, intuitive display experience. | for the power of convenience at your fingertips.

Host of other Badass Features: Full Digital Cluster with 10.5 cm (4.2") Color TFT MID | 20.32 cm (8.0") Touchscreen with Wireless Android Auto & Apple CarPlay | Steering Mounted Audio Controls, All Door Speakers, Front Tweeters, Bluetooth | USB Type-A Port | Type-C USB Charger (Front x1 and Rear x2) | Front 12V Power Outlet | All Door Power Windows | Illuminated Window Button (All Doors) | Electric Adjustable Outside Rear View Mirror with Turn Signal Indicator | Smart Key with Push Button Start/ Stop | Smart Key Remote Engine Start/ Stop | Motion Sensor in Smart Key | Shark Fin Antenna | Star Map LED DRLs | Sound Mood Lamp | Ambient Lighting

Exchange benefits up to ₹40 000## | Extended Warranty worth up to ₹27 000^ | Accessories up to ₹10 000## | Special benefits up to ₹46 000##

Kia Service Connected · Adaptive · Responsive · Engage | 3 Years Unlimited km Warranty | My Convenience Customise your Maintenance Needs | IoT Based Smart Services# | 24x7 | 3 Years Nationwide RSA**

For more information, contact: **1800 108 5000** | 093195 91407 | www.kia.com | Book Kia Seltos | Look for "Kia India" @

Terms & Conditions Apply. *Ex-showroom price of Seltos G1.5 HTK (O) 6MT. The product & feature images shown in this ad is for representation purpose only. Features and specifications as shown may not be part of standard fitment and may vary. The color shown are subject to availability and may not be available across all variants and may differ slightly from those shown in this ad. Segment is defined as Mid SUV whose length lies between 4 220 - 4 390 mm and width between 1 760 - 1 810 mm. ^Free 2 years extended warranty applicable on Seltos turbo and diesel trims only. #IoT based workshops for live vehicle tracking for digital experience. **RSA coverage across India except Andaman & Nicobar Islands and Lakshadweep. ##Offer applicable only in Bangalore, Hyderabad and Chennai. The specifications and features may vary depending on models/ variants. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims colors, specifications and other details of any model as mentioned in this ad or to discontinue any model without prior notice. For more details visit your local Kia dealership. Kia India Pvt. Ltd. (Formerly known as Kia Motors India Private Limited) urges you to follow traffic rules these are meant to keep you safe on roads.

PPS Kia: Mysore Road, Tel: 6309990010; Tumkur, Tel: 6303622210 **JSP Kia:** Hosur Road, Tel: 9606011244; Bellandur, Tel: 9071077717; Sarjapur, Tel: 9513138856 **Advaith Kia:** Lalbagh Main Road, Tel: 9611006006, 6364871021; Banashankari, Tel: 6364871022; Basaveshwar Nagar, Tel: 6364871024; Magadi Road, Tel: 6364871023 **Naara Kia:** J.P Nagar, Tel: 7406528200; Kanakapura Road, Bangalore, Tel: 9071010099 **VST Kia:** Palace Road: Tel: 9606988123; Yeshwanthpur: Tel: 9606988124 **Taapasi Kia:** Kalyan Nagar, Tel: 8095537777; Kormangala, Tel: 9071177333 **Epitome Kia:** Whitefield, Tel: 9606970216; Yelahanka, Tel: 7406343339; Kolar, Tel: 8951903224; Avalahalli, Tel: 7022317666

Pure Since 1925 ಭೀಮ

Marvellous March

ಮಾರ್ಚ್ 1 ರಿಂದ 31, 2025 ರವರೆಗೆ

ಚಿನ್ನ ಮತ್ತು ಬೆಳ್ಳಿ ಮೇಕಿಂಗ್ ಶುಲ್ಕಗಳ ಮೇಲೆ **70%** ವರೆಗೆ ರಿಯಾಯಿತಿ*

ವಜ್ರ ಪ್ರತಿ ಕ್ಯಾರೆಟ್‌ಗೆ ಫ್ಲಾಟ್ **₹7,000** ರಿಯಾಯಿತಿ + ಪ್ರತಿ ಕ್ಯಾರೆಟ್‌ನೊಂದಿಗೆ 1 ಗ್ರಾಂ ಚಿನ್ನದ ನಾಣ್ಯ ಉಚಿತ*

20 NISSAN MAGNITE SUVs ಗಳನ್ನು ಗೆಲ್ಲಿರಿ

ಲಕ್ಕಿ ಡ್ರಾ ಮೂಲಕ*

ಸ್ಕ್ರ್ಯಾಚ್ ಅಂಡ್ ವಿನ್

ಪ್ರತಿ ಗ್ರಾಂಗೆ **₹150** ವರೆಗೆ ಕ್ಯಾಶ್ ಬ್ಯಾಕ್

ಪ್ರತಿ ಖರೀದಿಯ ಮೇಲೆ*

*ನಿಯಮ ಮತ್ತು ಷರತ್ತುಗಳು ಅನ್ವಯ.

BHIMA

FORMERLY BHIMA GOLD • DIAMONDS • SILVER • PLATINUM

ಬೆಂಗಳೂರು • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ
ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ

BHIMA Helpline **1800-121-9076** (10:00 a.m. to 7:00 p.m.)

ಸ್ಥಳ ತಿಳಿಯಲು, ಸ್ಕ್ಯಾನ್ ಮಾಡಿ